# JNANA - Pure Knowledge

To know that you don't know is the real knowledge

PART III
(Collection of Kannada blog articles from 2006 - 2007)

Krishna Raj P M

Apr 2011

This work is licensed under

Creative Commons Attribution-Noncommercial 2.5 India Licence

You are free

- ➔ to Share: to copy, distribute and transmit the work
- ➔ to Remix: to adapt the work

Under the following conditions:

- ■ Attribution: You must attribute the work in the manner specified by the author or licensor (but not in any way that suggests that they endorse you or your use of the work)
- ■ Noncommercial: You may not use this work for commercial purposes

With the understanding that:

- ■ Waiver: Any of the above conditions can be waived if you get permission from the copyright holder
- ■ Other Rights: In no way are any of the following rights affected by the license
  - Your fair dealing or fair use rights;
  - The author's moral rights;
  - Rights other persons may have either in the work itself or in how the work is used, such as publicity or privacy rights.

Notice: For any reuse or distribution, you must make clear to others the license terms of this work.

# <u>ಭಾಷಾ ಹೋರಾಟ</u>

Friday, April 21, 2006

ಭಾಷಾ ಚಳುವಳಿಗಳ ವಿಷಯಗಳ ಕುರಿತು ನಾವು ಈವರೆಗೆ ತಳೆದ ನಿಲುವುಗಳನ್ನು ಪರೀಕ್ಷಕ ದೃಷ್ಟಿಯಿಂದ ನೋಡುವ ಪ್ರಯತ್ನ ಈ ಸಲದ "ದೇಶ ಕಾಲ" ದಲ್ಲಿ ನಡೆದಿದೆ. ಗಡಿನಾಡು ಎಂದು ನಿಸಿಕೊಂಡ ಕೊಡಗು ಜಿಲ್ಲೆಯಿಂದ ಬಂದ ನಾನು ಈ ವಿಷಯದ ಮೇಲೆ ಸ್ವಲ್ಪ ಬರೆದರೆ ಅಪ್ರಸ್ತುತವಾಗಲಾರದು.

ಕೊಡಗು ಜಿಲ್ಲೆಯಲ್ಲಿ ಭಾಷಾ ವಿಷಯವಾಗಿ ವಿಚಿತ್ರ ಪರಿಸ್ಥಿತಿ ಇದೆ. ಒಂದೆಡೆ ಇದು "ಕೊಡವ" ಎಂಬ ಲಿಪಿ-ರಹಿತ ಭಾಷೆಯ ತವರುಮನೆ. ಆಡಳಿತಾತ್ಮಕವಾಗಿ ಕೊಡಗು ಕರ್ನಾಟಕದ ಭಾಗವಾಗಿರುವುದರಿಂದ ಕನ್ನಡ ಸಹಜವಾಗಿಯೇ ಇಲ್ಲಿ ತನ್ನ ಸ್ಥಾನವನ್ನು ಪಡೆಯುತ್ತಿದೆ. ಆದರೆ ವ್ಯಾಪಾರ ವಹಿವಾಟಿನಲ್ಲಿ ಇಲ್ಲಿ ಮಲೆಯಾಳಿಗಳದೇ ಮೇಲುಗೈಯಾಗಿರುವುದರಿಂದ ಅವರ ಭಾಷೆಯಯೂ ಇಲ್ಲಿ ಪ್ರಾಬಲ್ಯ ಪಡೆದಿದೆ. ಎಲ್ಲಾ ಕಡೆ ಇರುವಂತೆ ಇಲ್ಲೂ ಇಂಗ್ಲಿಷ್ ಭಾಷೆಯ ಬಳಕೆ ಬಹಳವಾಗಿದೆ.

ಇಂತಹ ನಾಡಿನಲ್ಲಿ ಯಾರು ಯಾವ ಭಾಷೆಯ ಉಳಿವಿಗಾಗಿ ಹೋರಾಡಬೇಕು? ಕೊಡವರು ಕೊಡವ ಭಾಷೆಯನ್ನು ಉಳಿಸಬೇಕಾದರೆ ಅವರ "ಹೋರಾಟ" ಯಾರ ವಿರುದ್ಧ? ಕನ್ನಡ, ಮಲೆಯಾಳ, ಇಂಗ್ಲಿಷ್ - ಈ ಮೂವರಲ್ಲಿ ಕೊಡವ ಭಾಷೆಗೆ ಯಾರು ಪ್ರಥಮ ಶತ್ರು? ಗಮನಿಸಿ, ಕೊಡವ ಮತ್ತು ಕನ್ನಡ ಎರಡಕ್ಕೂ ಮಲೆಯಾಳ ಶತ್ರು. ಈ ಮೂವರಿಗೂ ಇಂಗ್ಲಿಷ್ ಸಮಾನ ಅಪಾಯಕಾರಿ ಭಾಷೆ. ಹೀಗೆ ನೋಡುತ್ತಾ ಹೋದರೆ ಒಂದು ಭಾಷೆ ಮತ್ತೆಲ್ಲರಿಗೂ ಶತ್ರುವೆಂಬ ಸರಳೀಕೃತ ಮತ್ತು ಅಪಾಯಕಾರಿ ಸೂತ್ರ ನಮ್ಮೆದುರಿಗೆ ನಿಲ್ಲುತ್ತದೆ.

ಹಾಗಾದರೆ ಭಾಷೆಯ ಉಳಿವಿಗೆ ಹೋರಾಟದ ಅಗತ್ಯವಿಲ್ಲವೇ? ಬಹುಶಃ ಇಲ್ಲ. ಕೊಡಗಿನಲ್ಲಿಯೇ ನೋಡಿ. ಅಲ್ಲಿ ಯಾವುದೇ ಭಾಷಾ ಹೋರಾಟಗಳೋ, ಬೀದಿ ರಂಪಾಟಗಳೋ - ಏನೂ ನಡೆದಿಲ್ಲ. ಆದರೂ ಇಲ್ಲಿ ಎಲ್ಲಾ ಭಾಷೆಗಳೂ ಸೌಹಾರ್ದದಿಂದ ಬಾಳುತ್ತಿವೆ. ಭಾಷೆಯ ವಿಚಾರವಾಗಿ ಹೋರಾಡುವವರಿಗೆ ಕೊಡಗು ಒಂದು ಉತ್ತಮ ಮಾದರಿಯಾಗಬಹುದು.

## <u>ಕತೆಗಾರರಿಗೆ</u>

Saturday, April 22, 2006

"ರವಿ ಕಾಣದ್ದನ್ನು ಕವಿ ಕಂಡ" ಎಂಬ ಹೇಳಿಕೆ ಹಳೆಯದೆಂದು ನನಗೆ ತಿಳಿದಿದೆ. ಆದರೆ "ರವಿ ಕಂಡದ್ದನ್ನು ಕತೆಗಾರ ಕಾಣದಾದನೇ" ಎಂಬ ಸಂಶಯ ನನಗೆ ಬರುತ್ತಿದೆ. ನಾನು ಇಲ್ಲಿ ಕನ್ನಡ ಕತೆಗಾರರ ವಿಷಯವಾಗಿ ಮಾತನಾಡುತ್ತಿದ್ದೇನೆ.

ಕನ್ನಡ ಕಥಾ ಲೋಕ ಇಷ್ಟು ವಿಸ್ತಾರವಾಗಿ ಬೆಳೆದಿದೆ. ಬಹುಶಃ ಈಗೀಗಲಂತೂ ಕವಿಗಳಿಗಿಂತ ಕತೆಗಾರರೇ ಕನ್ನಡದಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದಾರೇನೋ? ಟೀವಿ ಗಳಲ್ಲಿ ದಿನಾ ಬರುವ ಧಾರಾವಾಹಿಗಳನ್ನೂ ಕತೆಗಳೆಂದು ಲೆಕ್ಕ ಹಾಕಿದರೆ (ಸ್ವಲ್ಪ ಮಡಿವಂತಿಕೆ ಬಿಟ್ಟು) ಕನ್ನಡದಲ್ಲೀಗ ಕತೆಗಳ ಸುಗ್ಗಿ.

ಆದರೆ ಪ್ರಸ್ತುತ ಕತೆಗಾರರಿಗೆ ಒಂದು ವಿಷಯ ದೂರವೇ ಉಳಿದಿದೆಯೆಂದು ನನ್ನ ಸ್ವಂತ ಅಭಿಪ್ರಾಯ. ಕನ್ನಡ ಕತೆಗಾರರಿಗೆ ದೂರವಾಗಿಯೇ ಉಳಿದ ವಿಷಯ "ವೃತ್ತಿ ಪರತೆ" (professionalism). ಕನ್ನಡದಲ್ಲಿ ಕತೆ ಬರೆಯುವವರಲ್ಲಿ ಇಂದು ಎಷ್ಟೋ ಇಂಜಿನಿಯರ್ ಗಳಿದ್ದಾರೆ, ಡಾಕ್ಟರ್ ಗಳಿದ್ದಾರೆ. ಆದರೆ ಕನ್ನಡ ಕಥಾಲೋಕದಲ್ಲಿ ಈ ವೃತ್ತಿ ಧರ್ಮಗಳ ಬಗ್ಗೆ ಎಂದೂ ಚರ್ಚೆ ನಡೆದಿಲ್ಲ.

ಹಿಂದೊಮ್ಮೆ ಜಯಂತ ಕಾಯ್ಕಿಣಿ "ಭಾವನಾ" ಪತ್ರಿಕೆಯ ಸಂಪಾದಕರಾಗಿದ್ದಾಗ ದೀಪಾವಳಿಗೋ ಅಥವಾ ಯುಗಾದಿಗೋ ಒಂದು ವಿಶೇಷ ಸಂಚಿಕೆ ಹೊರ ತಂದಿದ್ದರು. ಅದರಲ್ಲಿ ಐ.ಟಿ ಜಗತ್ತಿನ ತಲ್ಲಣಗಳನ್ನು ಕುರಿತು ಕೆಲವು ಕಥೆಗಳನ್ನು ಓದಿದ್ದು ಬಿಟ್ಟರೆ, ಈ ವಿಷಯದ ಕತೆಗಳನ್ನು ನಾನಂತೂ ಬೇರೆಲ್ಲೂ ಓದಿಲ್ಲ.

ಕನ್ನಡ ಕತೆಗಳಲ್ಲಿ ಡಾಕ್ಟರ್ ಪಾತ್ರಗಳು ಅಲ್ಲಲ್ಲಿ ಸಿಗಬಹುದು. ಆದರೆ ವೈದ್ಯಕೀಯ ಕ್ಷೇತ್ರದ ಕುರಿತು ಕತೆಗಳು ಬಂದಿವೆಯೇ? ವಕೀಲನೊಬ್ಬ ತನ್ನ ವೃತ್ತಿ ಜೀವನದಲ್ಲಿ ಎದುರಿಸುವ ತಲ್ಲಣಗಳು ಕನ್ನಡ ಓದುಗರನ್ನು ತಲುಪಿದೆಯೇ? ಲ್ಯಾಬಿನಲ್ಲಿ ಸಂಶೋಧನೆಯಲ್ಲಿ ನಿರತನಾದ ವ್ಯಕ್ತಿಯ ಮನಸ್ಸಿನ ಒಳಪದರಗಳನ್ನು ಕನ್ನಡ ಓದುಗರು ಅರಿತ್ತಿದ್ದಾರೆಯೇ?

ಬಹುಶಃ ಇಲ್ಲ. ಯಾಕೆಂದರೆ ಒಂದು ವೃತ್ತಿಯ ಒಳನೋಟಗಳನ್ನು ಆ ವೃತ್ತಿಯಲ್ಲಿರುವ ವ್ಯಕ್ತಿ ಮಾತ್ರ ನೀಡಲು ಸಾಧ್ಯ. ಮತ್ತು ಕನ್ನಡದ ಮಟ್ಟಿಗೆ ಹೊಸ ಕತೆಗಾರರು ವೃತ್ತಿಪರರಾದರೂ ಅವರ ಕತೆಗಳಲ್ಲಿ ಅವರ ವೃತ್ತಿ ಪ್ರಪಂಚ ತೆರೆದುಕೊಳ್ಳುವುದಿಲ್ಲ. ಅವರ ಹೊರತಾಗಿ ಬೇರೆಯವರಿಗೆ ಅವರ ವೃತ್ತಿಯ ಸೂಕ್ಷ್ಮಗಳು ಅರಿವಾಗುವುದಿಲ್ಲ. ಆದರೆ ನಮ್ಮ ಕತೆಗಾರರಿಗೆ ತಮ್ಮ ವೃತ್ತಿಯಲ್ಲಿನ ಅನುಭವಗಳನ್ನು ಬರೆಯಲು ಮನಸ್ಸಿಲ್ಲ.

ಇಲ್ಲಿ ಸೋಲು ಕನ್ನಡ ಸಾಹಿತ್ಯದ್ದು. ಒಂದು ಸಂಪೂರ್ಣ ಭಾವ ಪ್ರಪಂಚ ಕನ್ನಡ ಓದುಗರ ಪಾಲಿಗೆ ಇಲ್ಲವಾಗಿ ಹೋಗಿದೆ. ನಮ್ಮ ಕತೆಗಾರರು ನಮಗೆ ಇನ್ನಾದರೂ ಈ ನಷ್ಟವನ್ನು ತುಂಬಿಕೊಡಬೇಕೆಂದು ವಿನಂತಿ.

# <u>ಹೊಸ ಸಂಸ್ಕೃತಿಯ ಅಧ್ಯಯನ</u>

Monday, May 22, 2006

ಒಂದು ಹೊಸ ಸಂಸ್ಕೃತಿಯನ್ನು ಅರಿಯುವುದು ಹೇಗೆ? ಈ ಪ್ರಶ್ನೆಯನ್ನು ಬಹುಶಃ ಎಲ್ಲರೂ ಒಂದಲ್ಲಾ ಒಂದು ಹಂತದಲ್ಲಿ ತಮ್ಮನ್ನು ತಾವು ಕೇಳಿಕೊಂಡಿರುತ್ತಾರೆ. ಅದಕ್ಕೆ ತಕ್ಕ ಉಪಾಯವನ್ನೂ ಕಂಡುಕೊಂಡಿರುತ್ತಾರೆ. ಮೂಲತಃ ಸಂಸ್ಕೃತಿ ಅನ್ನುವುದು ಒಂದು ಸಿದ್ದ ಭಾಷ್ಯಕ್ಕೆ ಒಳಪಡುವ ವಿಷಯವಲ್ಲ. ಒಂದು ವರ್ಗದ ಸಂಸ್ಕೃತಿ ಆ ಜನರ ಜೀವಂತಿಕೆಯ ಸಂಕೇತ. ಅದು ಆ ಸಮುದಾಯದ ಒಟ್ಟು ಅಸ್ತಿತ್ವದ ಪ್ರತೀಕ. ಅದು ಅಧ್ಯಯನಕ್ಕೆ ಒಳಪಡುವುದಕ್ಕಿಂತಲೂ ಅನುಭವಕ್ಕೆ ಬಂದರೇ ಹೆಚ್ಚು ಸಾರ್ಥಕ. ಆದರೆ ಒಂದು ಸಂಸ್ಕೃತಿಯ ಹಿನ್ನೆಲೆಯಲ್ಲಿ ಬೆಳೆದವರಿಗೆ ಬೇರೊಂದು ಹೊಸ ಸಂಸ್ಕೃತಿ ಅಷ್ಟಾಗಿ ಒಲಿಯುವುದಿಲ್ಲ.

ನಾವು ಹೊಸ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವ ವಿಧಾನ ವಿಶಿಷ್ಟವಾದುದು. ಸಾಮಾನ್ಯವಾಗಿ ನಾವು ನಮ್ಮ ಅನುಭವದ ಮೂಸೆಯಲ್ಲಿ ಹೊಸ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳುತ್ತೇವೆ. ಸಂಸ್ಕೃತಿಯ ಬಗೆಗಿನ ನಮ್ಮ ಅಧ್ಯಯನ ಬಹುಪಾಲು ಹೋಲಿಕೆಯ ಹಿನ್ನೆಲೆಯಲ್ಲೇ ನಡೆಯುತ್ತದೆ. ಸಂಸ್ಕೃತಿ ಎನ್ನುವುದು ಭಾಷೆ, ಉಡುಗೆ, ಊಟ, ಹಬ್ಬ, ಆಚರಣೆ, ನಂಬಿಕೆ, ದೇವರು - ಹೀಗೆ ಒಂದು ಜನಾಂಗದ ಒಟ್ಟು ಜೀವನ ಶೈಲಿಯನ್ನು ಪ್ರತಿನಿಧಿಸುವುದರಿಂದ ಸಂಸ್ಕೃತಿಯ ಅಧ್ಯಯನ ಸುಲಭವೇನಲ್ಲ.

ಹೊಸ ಸಂಸ್ಕೃತಿಯೊಂದ ಅಧ್ಯಯನಕ್ಕೆ ಒಳ್ಳೆಯ ಆರಂಭಿಕ ಸ್ಥಳ ಭಾಷೆ. ಒಂದು ಭಾಷೆ ಕೇವಲ ಶಬ್ದ ಭಂಡಾರವಾಗಿರದೆ ಆ ಸಂಸ್ಕೃತಿಯ ಪ್ರತಿನಿಧಿಯಾಗಿರುತ್ತದೆ. ನೀವು ಹೊಸ ಭಾಷೆಯೊಂದನ್ನು ಕಲಿತಾಗ ಹೊಸ ಸಂಸ್ಕೃತಿಯೊಂದಕ್ಕೆ ನಿಮ್ಮನ್ನು ನೀವು ತೆರೆದುಕೊಳ್ಳುತ್ತೀರಿ. ಆ ಜನಾಂಗದ ವಿಶಿಷ್ಟತೆ ಅದರ ಭಾಷೆಯಲ್ಲಿ ಅಚ್ಚೊತ್ತಿರುತ್ತದೆ. ಆ ಕಾರಣಕ್ಕಾಗಿಯೇ ನಾವು ಪರ ಭಾಷೆಯೊಂದನ್ನು ತರಬೇತಿ ಪಡೆಯುವುದರ ಮೂಲಕ ಸುಲಲಿತವಾಗಿ ಮಾತನಾಡಲು ಸಾಧ್ಯವಿಲ್ಲ; ಕೃತಕತೆ ಎದ್ದು ಕಾಣುತ್ತಿರುತ್ತದೆ.

ಸಂಸ್ಕೃತಿಯನ್ನು ಅರಿಯಲು ಭಾಷೆಯೊಂದನ್ನು ಸಂಪೂರ್ಣವಾಗಿ ಅರಿಯುವ ಅವಶ್ಯಕತೆಯೇನಿಲ್ಲ. ಅದರಲ್ಲಿನ ವಿಶಿಷ್ಟತೆಯನ್ನು ಗುರುತಿಸುವ ಸಾಮರ್ಥ್ಯವಿದ್ದರೆ ಸಾಕು. ಹಾಗೆ ಒಂದು ಸಂಸ್ಕೃತಿಯನ್ನು ಅರಿಯಲು ನಮಗೆ ಸಹಾಯ ಮಾಡುವ ಭಾಷಾ ಪ್ರಯೋಗವೇ - ಸಂಬೋಧನಾತ್ಮಕ ಪದಗಳು. ಒಂದು ಭಾಷೆಯಲ್ಲಿ ಬೇರೆಯವರನ್ನು ಸಂಬೋಧಿಸಲು ಯಾವ ಪದಗಳನ್ನು ಉಪಯೋಗಿಸುತ್ತಾರೆಂದು ತಿಳಿದುಕೊಂಡರೆ, ಸ್ವಲ್ಪ ಮಟ್ಟಿಗಾದರೂ ಆ ಸಂಸ್ಕೃತಿಯ ಸ್ವರೂಪ ನಮಗೆ ಗೋಚರವಾಗುತ್ತದೆ.

ನಮ್ಮ ಕನ್ನಡವನ್ನೇ ತೆಗೆದುಕೊಳ್ಳಿ - ಎಲ್ಲಾ ಭಾರತೀಯ ಭಾಷೆಗಳಂತೆ ನಮ್ಮಲ್ಲೂ ಪ್ರತಿಯೊಂದು ಸಂಬಂಧಕ್ಕೆ ಒಂದು ಹೆಸರುಂಟು. ಚಿಕ್ಕವರು ದೊಡ್ಡವರನ್ನು ಸಂಬೋಧಿಸಲು ಬೇರೆಯೇ ಮಾತುಗಳುಂಟು. ಸಮ ವಯಸ್ಕರನ್ನು ಮಾತನಾಡಿಸಲು ವಿಶೇಷ ಪದಗಳುಂಟು. ಲಿಂಗ, ವಯಸ್ಸು, ಜಾತಿ, ಅಂತಸ್ತು - ಈ ಎಲ್ಲಾ ಅಂತರಗಳನ್ನು ಒಂದೇ ಶಬ್ದದಲ್ಲಿ ವ್ಯಕ್ತ ಪಡಿಸಬಹುದು. ಒಂದೇ ಮಾತು ವಿವಿಧ ಸಂಬೋಧನೆಗಳ ಪ್ರಯೋಗಕ್ಕೆ ಸಿಕ್ಕಿ ಬೇರೆ ಬೇರೆ ಅರ್ಥವನ್ನು ಧ್ವನಿಸುವುದು ಒಂದು ಆಶ್ಚರ್ಯ.

ಇದರಿಂದ ಒಂದು ಪ್ರಯೋಜನವೂ ಉಂಟು. ಸಂಬಂಧಗಳ ದೂರವನ್ನು ಒಂದೇ ಶಬ್ದದಿಂದ ಕಡಿಮೆ ಮಾಡಬಹುದು. "ಹೇಗಿದ್ದೀರಿ?" ಅನ್ನುತ್ತಿದ್ದ ವ್ಯಕ್ತಿ "ಲೋ ಹೇಗಿದ್ದೀಯ" ಅಂದರೆ ಗೆಳೆತನ ಒಂದು ಮಾರು ಹೆಚ್ಚಾಯಿತೆಂದೇ ಅರ್ಥ. ಒಂದು ಭಾಷೆಯ ಪ್ರಯೋಗದಲ್ಲಿನ ಸೂಕ್ಷ್ಮ ವ್ಯತ್ಯಾಸಗಳನ್ನೂ ಬೇರೆ ಬೇರೆ ತರಹದ ಸಂಬೋಧನಾ ಪದಗಳ ಮೂಲಕ ತಿಳಿಯಬಹುದು. ಕನ್ನಡದಲ್ಲಂತೂ ಈ ವೈವಿಧ್ಯಗಳು ನಮ್ಮ ಸಂಸ್ಕೃತಿಯ ಶ್ರೀಮಂತಿಯನ್ನು ಸಮರ್ಥವಾಗಿ ತೋರ್ಪಡಿಸುತ್ತವೆ.

ಸ್ವಲ್ಪ ಗಮನಿಸಿ - ನಮಗೆ ಕನ್ನಡದ ಬೇರೆ ಬೇರೆ ಪ್ರಬೇಧಗಳು ತಕ್ಷಣ ಹೊಳೆಯುವುದು ಈ ಪದಗಳ ಮೂಲಕವೇ ಅಲ್ಲವೇ? "ಏನ್ ಮಾರಾಯ" ಎಂ□ ಂಗಳೂರು ಕನ್ನಡ, "ಏನ್ಲಾ" ಅಂದರೆ ಮಂಡ್ಯ, "ಏನ್ಪಾ" ಅನ್ನೋದು ಉತ್ತರ ಕನ್ನಡ....ಹೀಗೆ ಸಾಗುತ್ತದೆ ನಮ್ಮ ಕನ್ನಡದ ಭಾಷಾ ವೈಭವ. ನೋಡಿ ಒಂದೇ ಶಬ್ದದಿಂದ ಒಂದು ಪ್ರಾಂತ್ಯದ ಗುರುತು ಹೇಗೆ ಸುಲಭವಾಗಿ ಹಿಡಿಯಬಹುದು. ಎಲ್ಲಾ ಭಾಷೆಗಳೂ ಗ್ರಾಮ್ಯ ಮತ್ತು ಪಟ್ಟಣ ಎಂ□ರಡು ಸಮನಾಂತರ ರೀತಿಯಲ್ಲಿ ಬಳಸಲ್ಪಡುತ್ತದೆ. ಈ ಬೇಧವನ್ನೂ ಸಂಬೋಧನಾತ್ಮಕ ಪದಗಳು ಬಹಳ ಸೊಗಸಾಗಿ ತೋರಿಸಿ ಕೊಡುತ್ತದೆ

ಕೆಲವೊಂದು ಪ್ರಾಂತ್ಯದ ವಿಶಿಷ್ಟ ಪ್ರಯೋಗಗಳು ಬೇರೆಯವರಿಗೆ ವಿಚಿತ್ರವಾಗಿ ಕಾಣಲಿಕ್ಕೂ ಸಾಕು. ಉದಾ ನನಗೆ ಮೈಸೂರಿನ ಜನ ಅಪ್ಪನನ್ನು "ಅಣ್ಣ" ಎಂ□ೂ ಂಬೋಧಿಸುವ ಹಿಂದಿನ ಕಾರಣ ಇಂದಿಗೂ ತಿಳಿದಿಲ್ಲ. ಹಾಗೆ

ಕೆಲವರೂ ಸಿಕ್ಕ ಸಿಕ್ಕವರನ್ನ "ಏನ್ ತಂದೆ" ಅಂತ ಅಪ್ಪನನ್ನಾಗಿಸಿಕೊಳ್ಳುವುದೂ ಅರ್ಥವಾಗುವುದಿಲ್ಲ. ಇನ್ನೂ ಹಲವು ಸಮಚಿತ್ತರು ಎಲ್ಲರಲ್ಲೂ ದೈವತ್ವವನ್ನು ಗುರುತಿಸಿದವರಂತೆ "ಏನ್ ಸಿವಾ!" "ಏನ್ ದೇವ್ರು?" ಅನ್ನುವುದೂ ನನ್ನ ತಲೆ ಕೆಡಿಸಿದೆ.

ಹಾಗೆಯೇ ಒಂದು ಭಾಷೆಯಲ್ಲಿ ನಿರ್ದಿಷ್ಟ ಅರ್ಥ ಹೊಂದಿರುವ ಶಬ್ದ ಇನ್ನೊಂದು ಭಾಷೆಯಲ್ಲಿ ಹೊಸ ಅರ್ಥ ಪಡೆದುಕೊಳ್ಳುವುದೂ ಹೊಸತಲ್ಲ. ಸಂಬೋಧನಾತ್ಮಕ ಪದಗಳೂ ಇವಕ್ಕೆ ಹೊರತಲ್ಲ. ಇಂಗ್ಲಿಷ್ ನಲ್ಲಿ ಗೌರವ ಸೂಚಕ ಪದವಾದ "ಮಿಸ್ಟರ್" ಕನ್ನಡದಲ್ಲಿ ಆ ಸ್ಥಾನ ಪಡೆದಿಲ್ಲ. "ಏನ್ರೀ ಮಿಸ್ಟರ್" ಅನ್ನುವ ಕನ್ನಡ ಪ್ರಯೋಗದಲ್ಲಿ ಇಂಗ್ಲಿಷ್ ಪ್ರಯೋಗದಲ್ಲಿ ಕಾಣಸಿಗುವ ಗೌರವ ಮರೆಯಾಗುತ್ತದೆ. ಬಾಲಿವುಡ್ ನವರಂತೂ "ಅಣ್ಣಾ" ಶಬ್ದವನ್ನು ದಕ್ಷಿಣ ಭಾರತದ ಡಾನ್ ಪಾತ್ರಗಳ ಖಾಯಂ ಹೆಸರಾಗಿಸಿದ್ದಾರೆ.

ನನಗೆ ಎಲ್ಲದ್ದಕ್ಕಿಂತ ಹೆಚ್ಚಾಗಿ ಕಾಡುವುದು ಪೇಟೆಯ ಜನರಲ್ಲಿನ ವಿಚಿತ್ರ ಸಂಬೋಧನಾ ಶೈಲಿ. "ಗುರೂ", "ಸಿಸ್ಯ", "ಬಾಸು", "ಸಿವಾ" - ಇಂತಹ ಪ್ರಯೋಗಗಳ ಮೂಲ ಪಿಹೆಚ್.ಡಿ ಗೆ ಸಾಕಾಗುವಷ್ಟು ವಿಷಯ ಒದಗಿಸಬಲ್ಲದು. ತಮಿಳು ಮತ್ತು ಹಿಂದಿ ಪರಸ್ಪರ ಮುಖ ನೋಡದ ಭಾಷೆ. ಆದರೆ ಹಿಂದಿಯಲ್ಲಿ "ಸಾಲೇ" ಎಂಬುದು ಪ್ರಸಿದ್ಧ ಸಂಬೋಧನಾತ್ಮಕ ಪದ. ಇದಕ್ಕೆ ಸಮಾನಾಂತರವಾಗಿ ತಮಿಳಿನಲ್ಲಿ "ಮಚ್ಚಾ" ಎಂಬ ಪ್ರಯೋಗವಿದೆ. ಆದರೆ ಕನ್ನಡದಲ್ಲಿ "ಬಾವ" ಎಂಬುದು ಅಷ್ಟೇನೂ ಪ್ರಸಿದ್ಧವಾದ ಸಂಬೋಧನಾತ್ಮಕ ಪದವಲ್ಲ.

ಹಾಗಾದರೆ ಹಿಂದಿಗೂ, ತಮಿಳಿಗೂ ಸಾಂಸ್ಕೃತಿಕ ನಂಟಿದೆಯೇ? ಬೇಡ ಸ್ವಾಮಿ - ಇದು ಎಷ್ಟೆಂದರೂ ಕರುಣಾನಿಧಿಯವರ ಕಾಲ. ಹೇಳಿ ಕೇಳಿ ಹಿಂದಿಯನ್ನು ತಮಿಳುನಾಡಿನಿಂದ ಅಟ್ಟಲು ಪಣತೊಟ್ಟವರು ಅವರು. ಅವರಿಗೆ ಈ ವಾದ ಕೇಳಿಸಿಕೊಂಡರೆ ಕಷ್ಟ. ಆದರೆ ಈಗ ಅವರು ಬದಲಾಗಿರಲೂ ಬಹುದು. ಸೋನಿಯಾರ ಕೈ ಹಿಡಿದುಕೊಂಡು ತಾನೇ ಅವರೀಗ ಸಿಂಹಾಸನ ಹಿಡಿದದ್ದು. ಆದರೂ ಅವರು "ಮಹಾತ್ಮ ಗಾಂಧಿ" ಅವರನ್ನೇ "ಉತ್ತಮರ್ ಗಾಂಧಿ" ಮಾಡಿದವರೆಂದು ಓದಿದ್ದೇನೆ (ಎಸ್. ದಿವಾಕರ್). ಆದ್ದರಿಂದ ಈ ವಿಷಯ ಇಲ್ಲಿಗೇ ಬಿಡೋಣ.

ಈ ಸಂಬೋಧನೆಗಳ ವಿಷಯ ಬಂದಾಗ ಪತಿ-ಪತ್ನಿ ಯರ ಮಾತು ಬರದಿದ್ದರೆ ಅಪೂರ್ಣವಾಗುತ್ತದೆ. "ನಮ್ಮೆಜಮಾನ್ರು", "ನಮ್ಮನೆಯಾಕೆ", "ನಮ್ಮ ಶ್ರೀಮತಿ" - ಇತ್ಯಾದಿ ಪದಗಳಲ್ಲಿನ ಬಹುವಚನ ನನ್ನ ಕುತೂಹಲಕ್ಕೆ ಕಾರಣವಾಗಿದೆ. "ನಮ್ಮ... ಶ್ರೀಮತಿ...?" ಅಂದರೆ ಅವಳು ಪಾಂಚಾಲಿಯೇ ಇರಬೇಕು. ಇನ್ನು "ನಮ್ಮ...ಯಜಮಾನರು..." ಅಂತ ಗೋಪೀ ಸ್ತ್ರೀಯರು ಕೃಷ್ಣನನ್ನು ಸಂಬೋಧಿಸುತ್ತಿರಬಹುದು. ಆದರೆ ಇಂದು ಇಂತಹ ಪ್ರಯೋಗಗಳು ಚಾಲನೆಯಲ್ಲಿಲ್ಲ.

ಜನ ದೇವರನ್ನೂ ಬಿಡದೆ ಅವನನ್ನೂ ಚಿತ್ರ-ವಿಚಿತ್ರವಾಗಿ ಸಂಬೋಧಿಸುವ ಅಭ್ಯಾಸ ಇಟ್ಟುಕೊಂಡಿದ್ದಾರೆ. ಹೆಚ್ಚಾಗಿ ಅಪಹಾಸ್ಯ, ಕುಹುಕಗಳೇ ತುಂಬಿಕೊಂಡಿರುವ ಈ ಮಾತುಗಳು ಸಂಸ್ಕೃತದಲ್ಲಿರುವುದರಿಂದ ಅರ್ಥವಾಗದೆ ಮಂತ್ರಗಳೆಂದು ನುಣುಚಿಕೊಳ್ಳುತ್ತವೆ. "ವಕ್ರತುಂಡಾ...ಮಹಾಕಾಯ" ಎಂಬುದು ಸ್ತುತಿಯೋ, ಅಪಹಾಸ್ಯದ ಮಾತೋ ಹೇಳುವುದು ಕಷ್ಟ. ಇನ್ನು ಹೆಣ್ಣು ದೇವರುಗಳ ವರ್ಣನೆಗಳು ಸೆನ್ಸಾರ್ ನವರ ಕೈಗೇನಾದರೂ ಸಿಕ್ಕಿದರೆ ಬಚಾವಾಗಿ ಬರಲು ಹರ ಸಾಹಸ ಪಡಬೇಕಾದೀತು.

ಇಂಗ್ಲಿಷ್ ನಲ್ಲಿ ಅಪರಿಚಿತರನ್ನು ಮತ್ತು ವಿದ್ಯಾರ್ಥಿನಿಯರನ್ನೂ ಮಾತನಾಡಿಸುವುದು ಸುಲಭವೆಂದು ನಾನು ಕಂಡುಕೊಂಡಿದ್ದೇನೆ. ಕನ್ನಡದಲ್ಲಿ ಹುಡುಗಿಯರನ್ನು ಮಾತನಾಡಿಸುವಾಗ "ಏನೇ" ಅನ್ನಲಿಕ್ಕಾಗುವುದಿಲ್ಲ. "ಅಕ್ಕಾ" ಎಂದರೆ ಕಷ್ಟ. "ಅಮ್ಮ" ಅಂದರೆ ಹುಡುಗಿಯರಿಗೆ ತೊಂದರೆ. ಆದರೆ ಇಂಗ್ಲಿಷ್ ನಲ್ಲಿ ಈ ಯಾವ ಕಷ್ಟಗಳೂ ಇಲ್ಲ. ಅಲ್ಲಿ ಸಂಬೋಧನಾ ಪದಗಳ ಬಳಕೆ ಅತೀ ಅಲ್ಪವಿರುವ ಕಾರಣ ಈ ರೀತಿಯ ಸಮಸ್ಯೆಗಳೇ ಉದ್ಭವಿಸುವುದೇ ಇಲ್ಲ.

ಬರೆಯುತ್ತಾ ಹೋದರೆ ಸಂಬೋಧನಾತ್ಮಕ ಪದಗಳ ಬಗ್ಗೆ ಪಿಹೆಚ್.ಡಿ ಪ್ರಬಂಧವನ್ನೇ ಬರೆಯಬಹುದು. ಆದರೆ ಸದ್ಯಕ್ಕಿಷ್ಟು ಸಾಕು ಅಂದುಕೊಂಡಿದ್ದೇನೆ. ಹೊಸ ಸಂಸ್ಕೃತಿಯ ಅಧ್ಯಯನಕ್ಕೆ ಹೊರಟವರಿಗೆ ಈ ಸಂಬೋಧನಾತ್ಮಕ ಪದಗಳು ಪ್ರಯೋಜನಕಾರಿಯಾಗಬಲ್ಲದು ಎಂಬುದಷ್ಟೇ ನಾನು ಹೇಳಬೇಕೆಂದುಕೊಂಡ ಮಾತು.

# ಹೆಸರೇ ಉಸಿರು

Sunday, May 28, 2006

ನಮ್ಮ ನಿಜವಾದ ಅಸ್ತಿತ್ವ ಯಾವುದು? ಉಪನಿಷತ್ತೊಂದರಲ್ಲಿ ಅಸ್ತಿತ್ವದ ಕುರಿತಾದ ಚರ್ಚೆಯಲ್ಲಿ "ಅಲ್ಲ..ಅಲ್ಲ" ಎಂ[illegible] ೕಳುತ್ತಲೇ ಈ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನವಿದೆಯೆಂದು ಕೇಳಿದ್ದೇನೆ. ಮಹಾ ಸಂತ ರಮಣ ಮಹರ್ಷಿಗಳೂ ಕೂಡ "ನಾನ್ ಯಾರ್" ಎಂ[illegible]ಸ್ತಕ ಬರೆದಿದ್ದಾರೆ (ಅವರ ಬೋಧನೆಗಳ ಅಕ್ಷರ ರೂಪವಿದು. ಯಾರೋ ಭಕ್ತರು ಸಂಗ್ರಹಿಸಿರಬಹುದು. ರಮಣರರೇ ಸ್ವಂತವಾಗಿ ಬರೆದು ಅಚ್ಚು ಹಾಕಿಸಿದ್ದಲ್ಲ). ಒಟ್ಟಿನಲ್ಲಿ "ನಾನು ಯಾರು" ಎಂ[illegible] ಮೂಲಭೂತ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನಕ್ಕೆ ಧೀರ್ಘ ಕಾಲದ ಇತಿಹಾಸವಿದೆ. (ಜಾಕೆ ಚಾನ್ ನ ಸಿನೆಮಾ ಒಂದರ ಹೆಸರು who am i ಎಂ[illegible] )

ನನ್ನ ಪ್ರಕಾರ ಒಂದು ವಸ್ತುವಿನ "ಹೆಸರಿಗೂ" ಅದರ ಅಸ್ತಿತ್ವಕ್ಕೂ ಗಹನವಾದ ನಂಟಿದೆ. ಹೆಸರಿಲ್ಲದ ವಸ್ತುವಿದೆಯೇ? ಅಂತಹದೊಂದು ವಸ್ತುವಿದ್ದರೆ ಅದು ನಮಗೆ ಗೊತ್ತಿಲ್ಲದ ವಸ್ತುವೇ ಇರಬೇಕು. ನಮಗೆ ಗೊತ್ತಿದೆ ಅಂತಾದರೆ ನಾವು ಅದನ್ನು ಅದರ ಹೆಸರಿನಿಂದಲೇ ಗುರುತಿಸುತ್ತೇವೆ. ಹಾಗಾಗಿ ಅಸ್ತಿತ್ವಕ್ಕೂ, ಹೆಸರಿಗೂ ನಂಟಿದೆಯೆಂದು ನಾನು ಹೇಳಿದ್ದು. ನಿಮ್ಮಲ್ಲಿ ಹೇಗೋ ಗೊತ್ತಿಲ್ಲ. ಆದರೆ ನಮ್ಮಲ್ಲಿ ಮಗುವಿಗೆ ನಾಮಕರಣದ ಸಮಯದಲ್ಲಿ ಮೂರು ಹೆಸರುಗಳನ್ನು ಇಡುವುದು ವಾಡಿಕೆ. ಇದಕ್ಕೆ ಕಾರಣ ಏನೆಂದು ನನಗಂತೂ ತಿಳಿದಿಲ್ಲ. ಆದರೆ ಈಗೀಗ ಅದನ್ನು ವರದಾನದಂತೆ ಜನ ಉಪಯೋಗಿಸುತ್ತಿದ್ದಾರೆ. ಹೇಗೆಂದರೆ ನಕ್ಷತ್ರ ನಾಮ ಕೆಲವೊಮ್ಮೆ ತೀರಾ ಹಳೆಯದೆಂದು ಅನಿಸಿದರೆ ನಾಮಕರಣದ ಸಮಯದಲ್ಲಿ ಮತ್ತಿನ್ನೆರಡು ಹೆಸರು ಇಟ್ಟು ಬಿಡುತ್ತಾರೆ. ಅದರಲ್ಲಿ ಒಂದು ಮಾತ್ರ ಕೊನೆಯವರೆಗೂ ಉಳಿದುಬಿಡುತ್ತದೆ (ಡರ್ವಿನ್ನನ ಸಿದ್ಧಾಂತಕ್ಕೊಂದು ಉದಾಹರಣೆ)

ಮನುಷ್ಯನಿಗೆ ಎಲ್ಲಾ ತರಹದ ಸ್ವಾತಂತ್ರ್ಯವಿದ್ದರೂ ಈ ಹೆಸರು ಇಟ್ಟುಕ್ಕೊಳ್ಳುವ ಸ್ವಾತಂತ್ರ್ಯ ಮಾತ್ರ ಇರುವುದಿಲ್ಲ. ಈಗ ಬಿಡಿ ಅದೂ ಬಂದುಬಿಟ್ಟಿದೆ. ದಿನಾ ಪತ್ರಿಕೆಯಲ್ಲಿ ತಮ್ಮ ಹೆಸರು ಬದಲಿಸಿಕೊಳ್ಳುವವರ ಪಟ್ಟಿ ನೋಡಿದರೆ ಬಹಳ ಜನರಿಗೆ ತಮ್ಮ ಹೆಸರು ಇಷ್ಟವಾಗುವುದಿಲ್ಲ ಅನಿಸುತ್ತದೆ. ಇಂತಹವರ ಪಾಲಿಗೆ ನಾನೂ ಸೇರಿದ್ದೇನೆ. ಕಟ್ಟಾ ನಿರೀಶ್ವರವಾದಿಯಾದ ನನಗೆ ದೇವರ ಹೆಸರಿಟ್ಟರೆ ಸಿಟ್ಟು ಬರದಿರುತ್ತದೆಯೇ?

ಇಂತಹವರ ಸಾಲಿನಲ್ಲಿ ಕವಿಗಳೂ ಸೇರುತ್ತಾರೇನೋ ಅಂತ ನನಗೆ ಅನಿಸುತ್ತದೆ. ಕವಿಗಳಿಗೆ ಕಾವ್ಯನಾಮವಿರುವುದು ವಾಡಿಕೆ. ಈ ಪದ್ಧತಿ ನನ್ನನ್ನು ಬಹಳವಾಗಿ ಕಾಡಿದೆ. ಯಾರಾದರೂ ತಾವು ಬರೆದದ್ದನ್ನು ತಮ್ಮ ಹೆಸರಿಲ್ಲದೇ ಪ್ರಕಟಿಸಲು ಯಾಕೆ ಪ್ರಯತ್ನಿಸುತ್ತಾರೆ? ಕಾವ್ಯನಾಮವೂ ಕೊನೆಗೆ ಅವರಿಗೇ ಅಂಟಿಕೊಳ್ಳುತ್ತದೆಯಲ್ಲವೇ? ಹಾಗಾಗಿ ಅವರು ತಮ್ಮನ್ನು ಗೌಪ್ಯವಾಗಿ ಇಟ್ಟುಕೊಳ್ಳಬೇಕೆಂದುಕೊಂಡರೆ ಅದು ಸಾಧ್ಯವಾಗುವುದಿಲ್ಲವಲ್ಲ? ಹಾಗಾಗಿ ಕಾವ್ಯನಾಮ ಇಟ್ಟುಕೊಳ್ಳುವುದರ ಗುಟ್ಟಾದರೂ ಏನು? ಬಹುಶಃ ಅದು ತಮ್ಮ ಒರಿಜಿನಲ್ ಹೆಸರಿನ ಮೇಲಿನ ನಿರಾಸಕ್ತಿಯೇ ಇರಬಹುದೇ?

ಕವಿಗಳು ಮತ್ತು ಹಸರಿನ ಬಗ್ಗೆ ನನಗೆ ಇನ್ನೊಂದು ಘಟನೆ ನೆನಪಾಗುತ್ತಿದೆ. ನಾನು ಪಿಯುಸಿಯಲ್ಲಿರುವಾಗ ನನ್ನ ಕನ್ನಡ ಮೇಷ್ಟರು ಕುವೆಂಪು ಅವರ ಕನ್ನಡ ಭಾಷಾ ಜ್ಞಾನವನ್ನು ಗೇಲಿಮಾಡಿದ್ದರು! ಕಾರಣ ಕುವೆಂಪು ತಮ್ಮ ಮಗನಿಗೆ ತಪ್ಪು ಹೆಸರಿಟ್ಟಿದ್ದು! ನಮ್ಮ ಮೇಷ್ಟರ್ ರ ಪ್ರಕಾರ ಪೂರ್ಣಚಂದ್ರನಿಗೆ ಕಾಂತಿ ಇರುತ್ತದೆಯೇ ಹೊರತು ತೇಜಸ್ಸಲ್ಲ. ಹಾಗಾಗಿ ಪೂಚಂತೇ ಎಂ[illegible]ಯೋಗ ತಪ್ಪು !!

ಹುಟ್ಟಿದ ಮಕ್ಕಳಿಗೆ ಹೆಸರು ಹುಡುಕುವ ಕೆಲಸವನ್ನು ಬಹಳ ಹುರುಪಿನಿಂದಲೇ ಹೆತ್ತವರು ಮಾಡುತ್ತಾರೆ. ಆದರೆ different ಆದ ಹೆಸರಿಡಬೇಕೆಂಬ ಅವರ ಪ್ರಯತ್ನ ಯಾವತ್ತೂ ಸಫಲವಾಗದೆ ಅವರೂ ಮತ್ತೆ ಎಲ್ಲರಂತೆ ಸಾಮಾನ್ಯ ಹೆಸರೊಂದನ್ನು ಮಕ್ಕಳಿಗೆ ಇಟ್ಟುಬಿಡುತ್ತಾರೆ. ಆದರೆ ಕೆಲವರು ಮಕ್ಕಳಿಗೆ ಹೆಸರಿಡುವಾಗ ಕೆಲ ನಿಯಮಗಳನ್ನು ಪಾಲಿಸುತ್ತಾರೆ. ಪ್ರಾಸ (ಅದರಲ್ಲೂ ಅಂತ್ಯ ಪ್ರಾಸ ಮತ್ತು ಕೆಲವೊಮ್ಮೆ ಆದಿ ಪ್ರಾಸ) ಸಾಮಾನ್ಯವಾಗಿ ಎಲ್ಲರೂ ಪಾಲಿಸುವ ಸೂತ್ರ.

ಅವಳಿ ಮಕ್ಕಳೇನಾದರು ಹುಟ್ಟಿದವೋ ಹೆತ್ತವರ creativity ಹೊಸ ಮಜಲನ್ನು ಮುಟ್ಟುತ್ತದೆ. "ಸೀತಾ-ಗೀತಾ" ದಂತಹ ಸಿನೆಮಾ ಪ್ರೇರಣೆಯಿಂದ ಪ್ರಾಸಬದ್ಧ ಹೆಸರುಗಳು ಮಕ್ಕಳಿಗೆ ಅಂಟಿಕೊಳ್ಳುತ್ತವೆ. ಈಗಲೂ ನನಗೆ ಒಳ್ಳೆಯ ಹೆಸರು ಕೇಳಿದಕೂಡಲೇ ಬರೆದಿಟ್ಟುಕೊಳ್ಳುವ ಅಭ್ಯಾಸವಿದೆ. (ಕತೆಗಾರನಾಗಬೇಕೆಂದುಕೊಂಡ ನಾನು ಪಾತ್ರಕ್ಕೆ ಒಳ್ಳೆಯ ಹೆಸರು ಬೇಕಾಗಬಹುದೆಂದು ಬೆಳೆಸಿಕೊಂಡ ಅಭ್ಯಾಸ ಇದು. ಆದರೆ ಕತೆ ಬರೆಯುವ ಕಾಲಕ್ಕೆ ಪಾತ್ರಗಳಿಗೆ ಹೆಸರೇ ಇಡುತ್ತಿರಲಿಲ್ಲ.) ನನ್ನ ಪಟ್ಟಿಯಲ್ಲಿ ನನಗೆ ಹಿಡಿಸಿದ ಅವಳಿ(ಜವಳಿ!) ಹಸರುಗಳೆಂದರೆ "ಅಪ್ರಮೇಯ-ಅಮೃತಾಂಶ" , 'ಗ್ರಂಥ-ಲಿಖಿತ", "ಸಿಹಿ-ಕನಸು" (ನಾಗತಿಹಳ್ಳಿ ಅವರ ಮಕ್ಕಳಿಗೂ ಇದೇ ಹೆಸರಿದೆ. ಆದರೆ ಅವರು ಅವಳಿಗಳಲ್ಲ ಅಂತ ನನ್ನ ನೆನಪು)

ಹೆಸರಿಗೂ ಅದೃಷ್ಟಕ್ಕೂ ನಂಟಿದೆಯೆಂದು ನಂಬುವವರ ಸಂಖ್ಯೆಯೇನೂ ಕಮ್ಮಿಯಿಲ್ಲ. ಸಿನೆಮಾಕ್ಕೆ ಸೇರುವಾಗ ಇರಬೇಕಾದ ಅರ್ಹತೆಗಳಲ್ಲಿ ಒಳ್ಳೆಯ ಹೆಸರಿರಬೇಕೆಂಬುದು ಮುತ್ತುರಾಜ ರಾಜಕುಮಾರ ಆದ ಕಾಲದಿಂದಲೂ ನಡೆದುಕೊಂಡು ಬಂದ ಮಾತು. ಇಂದಿಗೂ ವಾರಾಂತ್ಯದಲ್ಲಿ ಜ್ಯೋತಿಷಿಗಳು (ಅಥವಾ ಹಾಗೆಂದುಕೊಂಡವರು) ಟಿವಿಯಲ್ಲಿ ಕಾಣಿಸಿಕೊಂಡು ಹೆಸರನ್ನು ಹೇಗೆ ಬದಲಿಸಿಕೊಂಡರೆ ಅದೃಷ್ಟ ನಿಮ್ಮ ಕಡೆಗೆ ತಿರುಗಿಸಬಹುದೆಂದು ಸಲಹೆ ಕೊಡುತ್ತಾರೆ.

ಮನುಷ್ಯರಿಗೆ ಎಲ್ಲ ಪ್ರಾಣಿ-ಪಕ್ಷಿ ಮತ್ತು ವಸ್ತುಗಳಿಗೂ ಹೆಸರಿಡುವ ಚಟ. ಮನೆ ನಾಯಿಗಳಿಗಂತೂ ಹೆಸರು ಇದ್ದೇ ಇರುತ್ತದೆ. ಆದರೆ ನಾಯಿಗಳಿಗೆ ಇಂಗ್ಲಿಷ್ ಹೆಸರಿಡುವ ಅಭ್ಯಾಸ ಮಾತ್ರ ಹೇಗೆ ಬಂತೋ ತಿಳಿಯದು. ನಮ್ಮ ಹಳ್ಳಿಗಳಲ್ಲೂ ಕೂಡ ನಾಯಿಯನ್ನು ಟಾಮಿ ಎಂ[illegible]ೇ ರೆಯುವುದು ವಾಡಿಕೆ . ಸ್ವಾತಂತ್ರ ಹೋರಾಟದ ಸಮಯದಲ್ಲೇನಾದರೂ ಬ್ರಿಟಿಷರನ್ನು ಬಯ್ದುಕೊಳ್ಳಲಾಗದೇ ಜನ ನಾಯಿಗೆ ಅವರ ಹೆಸರಿಡುವ ಸಾಹಸ ಮಾಡಿದರೋ - ಎಂದು ನಗ ಆಗಾಗ ಅನ್ನಿಸುತ್ತದೆ.

ಜೀವವಿರುವ ಪ್ರಾಣಿ-ಪಕ್ಷಿಗಳಾದರೆ ಬಿಡಿ, ಹೆಸರಿಗೆ ಸ್ಪಂದಿಸುತ್ತವೆ. ಹಾಗಾಗಿ ಅವುಗಳಿಗೆ ಹೆಸರಿಡುವುದಕ್ಕೆ ಒಂದು ಅರ್ಥವಾದರೂ ಇದೆ. ಆದರೆ ಬಾಂಬ್ ಗೂ ಹೆಸರೇ? ಗೊತ್ತಿಲ್ವಾ! ಜಪಾನಿನ ಮೇಲೆ ಹಾಕಿದ ಬಾಂಬ್ ಗೂ ಒಂದು ಹೆಸರಿತ್ತು. ನನ್ನ ಮಾಮ ಒಬ್ಬರು ತಮ್ಮ ಬುಲೆಟ್ ಬೈಕನ್ನು ತುಂಬಾ ಹಚ್ಚಿಕೊಂಡಿದ್ದರು. ಅದನ್ನ "ರಾಜಾ" ಅಂತಾನೇ ಅವರು ಕರೆಯುತ್ತಿದ್ದದ್ದು. ಅದು ಬಿಡಿ ಸ್ವಾಮಿ, ನಮ್ಮ "ಯಾಹೂ" ಇಲ್ವಾ. ಅದರ ರುವಾರಿಗಳಾದ ಫಿ[illegible]ಮೋ ತ್ತು ಯ್ಯಾಂಗ್ ತಮ್ಮ ಕಂಪ್ಯೂಟರ್ ಗೂ ಹೆಸರಿಟ್ಟಿದ್ದರು. (ಅದ್ಯಾವುದೋ ಜಪಾನೀ ಸುಮೋ ಫೈಟರ್ ಗಳ ಹೆಸರು. ಬಹುಶಃ ಇಂದು ಯಾಹೂ ಗೆ ಇಂತಹದೇ ಸರ್ವೀಸ್ ನ ಅಗತ್ಯವಿದೆ- ಗೂಗಲ್ ನ್ನು ಹೊಡೆದುಹಾಕಲು!!)
ಹೆಸರಿನ ಮಹಾಪುರಾಣದಲ್ಲಿ ಊರುಗಳ ಹೆಸರಿನದ್ದೇ ಒಂದು ಕಿರು ಕಾದಂಬರಿಯಾಗಿಬಿಡಬಹುದು. ಹಾಗಾಗಿ ಆ ವಿಷಯದ ಬಗ್ಗೆ ನಾನು ಕೀ ಒತ್ತುವುದಿಲ್ಲ ("ಕೈ ಹಾಕುವುದಿಲ್ಲ" ಪ್ರಯೋಗದ updated version ) ಊರುಗಳ ಹೆಸರೇ ಸಾಕು -ಆ ಪ್ರದೇಶದ ಇತಿಹಾಸ, ಭೌಗೋಳಿಕ ವಿಶೇಷತೆ, ಸಾಂಸ್ಕೃತಿಕತೆ ತಿಳಿಯಲು. ಊರುಗಳ ಹೆಸರನ್ನು ಬದಲಿಸುವ ಪ್ರಯತ್ನವನ್ನು ಗಮನಿಸುವಾಗಲೆಲ್ಲಾ ನಮಗೆ ಜನರು ಹೆಸರಿಗೆ ಕೊಟ್ಟ ಪ್ರಾಮುಖ್ಯತೆಯ ಬಗ್ಗೆ ಆಶ್ಚರ್ಯವಾಗುತ್ತದೆ.

ಹೆಸರಿನ ಮೇಲೆ ಜನಕ್ಕೆಷ್ಟು ಮೋಹ ಅನ್ತೀರಿ? ಮಕ್ಕಳು ತಮ್ಮ "ಹೆಸರುಳಿಸಬೇಕು" ಎಂದು ೆತ್ತವರು ಬಯಸುತ್ತಾರೆ. ಸತ್ತ ಮೇಲೂ ತಮ್ಮ ಹೆಸರನ್ನು ಮರೆಯಬಾರದೆಂದು ಜನ ಏನೇನೆಲ್ಲಾ ಮಾಡಿಲ್ಲ?
ಹೆಸರಿಂದಲೇ ನಮ್ಮ ಅಸ್ತಿತ್ವ. ಹೆಸರೇ ನಮ್ಮ ಉಸಿರು.

# "ಶಬ್ದ ತೀರ" ದ ಬಿಡುಗಡೆ ಕಾರ್ಯಕ್ರಮ - ದಡ್ಡ ಓದುಗನ ವರದಿ

Sunday, June 18, 2006

ಎರಡು ಕಾರಣಗಳಿಂದಾಗಿ ನಾನು ಪುಸ್ತಕ ಬಿಡುಗಡೆ ಸಮಾರಂಭಗಳಿಗೆ ಹೋಗುವುದಿಲ್ಲ. ಒಂದು ನನಗೆ ಪುಸ್ತಕ ಬಿಡುಗಡೆಯ ಆಹ್ವಾನ ಬರುವಷ್ಟರ ಮಟ್ಟಿನ ಸಾಹಿತ್ಯಿಕ (ಸಾಹಿತಿಗಳ!) ಸಂಪರ್ಕ ಇಲ್ಲ. ಎರಡು ನಾನು ಕನ್ನಡ ಪತ್ರಿಕೆಗಳನ್ನು ಓದದ ಕಾರಣ ನನಗೆ ಅಂತಹ ಕಾರ್ಯಕ್ರಮಗಳ ಅರಿವೂ ಆಗುವುದಿಲ್ಲ. ಆದರೆ ನನ್ನಂತಹವನೂ ಇಂತಹ ಸಮಾರಂಭ ನೋಡುವ ವಿಶೇಷ ಕಳೆದ ವರ್ಷ ನಡೆಯಿತು.

ಜಯಂತ ಕಾಯ್ಕಿಣಿ ಅವರ ತೂಫಾನ್ ಮೇಲ್ ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಆಹ್ವಾನ ಅವರ ಮೂಲಕವೇ ಇ-ಮೈಲ್ ನಲ್ಲಿ ಬಂದಾಗ ಹೋಗುವುದೆಂದು ತೀರ್ಮಾನ ಮಾಡಿದೆ. ನನ್ನಂತಹ ಸಾಹಿತ್ಯಕ್ಕೆ ಹತ್ತಿರವಾದ ಆದರೆ ಸಾಹಿತಿಗಳಿಂದ ದೂರವಿರುವ ಸಾಮಾನ್ಯ ವ್ಯಕ್ತಿಗೆ ಅದೊಂದು ದಿವ್ಯ ಅನುಭವ. ಕಿಕ್ಕಿರಿದ ಹಾಲ್ ನಲ್ಲಿ ಕನ್ನಡ ಸಾಹಿತ್ಯ ದಿಗ್ಗಜರೆಲ್ಲರೂ ಮೇಳೈಸಿದ್ದರು. ಲೇಟಾಗಿ ಹೋದ ನನಗೆ ಸೀಟ್ ಸಿಕ್ಕಿರಲಿಲ್ಲ. ಆದರೂ ಖುಷಿ; ಕನ್ನಡ ಪುಸ್ತಕ ಒಂದರ ಬಿಡುಗಡೆಗೆ ಫುಲ್-ಹೌಸ್ ಜನ ತುಂಬಿದ್ದಾರೆಂಬ ಖುಷಿ, ನನ್ನ ಜೊತೆ ನಾಗತಿಹಳ್ಳಿ ಅಂತಹವರೂ ನಿಂತೇ ಕಾರ್ಯಕ್ರಮ ನೋಡುತ್ತಿದ್ದಾರೆಂಬ ಖುಷಿ. ಒಟ್ಟಿನಲ್ಲಿ ಖುಷಿಖುಷಿಯಾಗಿದ್ದ ನನಗೆ ಕಾರ್ಯಕ್ರಮ ಮಾತ್ರ ಖುಷಿ ನೀಡಲಿಲ್ಲ.

ಆರಂಭದಲ್ಲಿಯೇ ನಿರೂಪಕರು (ಬಹುಶಃ ಪ್ರಕಾಶಕರೇ ಇರಬೇಕು) ಈ ಪುಸ್ತಕಕ್ಕೆ ಅವಾರ್ಡ್ ಸಿಗುವುದಿಲ್ಲ ಅಂತ ಪದೇ ಪದೇ ಹೇಳುತ್ತಿದ್ದದ್ದು cheap joke ಅಂತ ನನಗೆ ಅನ್ನಿಸ್ತಾ ಇತ್ತು. ಅಲ್ಲಾ ನಮ್ಮಂತಹಾ ದುಡ್ಡು ಕೊಟ್ಟು ಪುಸ್ತಕ ಕೊಂಡು ಓದುವವರು ಪ್ರಶಸ್ತಿ ಬಂತೂಂತ ಓದುತ್ತೇವಾ? ಅಥವಾ ಜಯಂತ್ ನಂತಹ ಲೇಖಕರು ಪ್ರಶಸ್ತಿ ಬರಲಿ ಅಂತಾನೇ ಬರಿತಾರಾ? ಒಟ್ಟಾರೆ ನಿರೂಪಣೆಯ ಶೈಲಿಯೇ ನನಗೆ ಇಷ್ಟವಾಗಲಿಲ್ಲ.

ಅನಂತಮೂರ್ತಿ, ಅನಂತನಾಗ್ ಮತ್ತು ಮಾಳವಿಕಾ ಅಂದು ಮುಖ್ಯ ಅತಿಥಿಗಳು. ಅನಂತನಾಗ್ ಪುಸ್ತಕದಿಂದ ಓದಿದ್ರು, ಮಾಳವಿಕಾ ನೆಗಾಡಿದ್ರು...ನೆಗಾಡಿದ್ರು...ಮತ್ತೆ ಸ್ವಲ್ಪ ಬಿಡುವು ಮಾಡಿಕೊಂಡು ಓದಿದ್ರು. ಅನಂತಮೂರ್ತಿ ಏನು ಮಾತಾಡಿದ್ರೂಂತ ನನಗೆ ನೆನಪಿಲ್ಲ. ಒಟ್ಟಿನಲ್ಲಿ ಬಹು ನಿರೀಕ್ಷೆಯಿಂದ ಹೋದದಕ್ಕೆ ಬಹಳ ನಿರಾಶೆಯಾಯ್ತು. ಲೇಖಕರ ಜೊತೆಗಿನ ಪರಿಚಯ ಅವರು ಬರೆದ ಅಕ್ಷರಗಳಿಗೇ ಸೀಮಿತವಾಗಿರಲಿ ಅಂತ ಅಂದುಕೊಂಡಿದ್ದವ ಇಂದು ಆ ನಿಯಮ ಮತ್ತೆ ಮುರಿದೆ.

ಮೊನ್ನೆ ಜಯಂತ್ ಅವರಿಂದ ಮತ್ತೆ ಮೈಲ್. ಈ ಬಾರಿ "ಶಬ್ದ ತೀರ" ಪುಸ್ತಕ ಬಿಡುಗಡೆ. ಹೋಗೋದು ಬೇಡ ಅಂತಿದ್ದವನ ಎಳೆದದ್ದು ಪ್ರೊ. ಶ್ರೀರಾಮ್ ಹೆಸರು. ಹ್ಯಾಗೂ ಅವರನ್ನೂ ಕಂಡಹಾಗಾಯಿತೆಂದು ಹೋದೆ. ಕಳೆದ ಬಾರಿಯ ಅನುಭವದಿಂದ ಈ ಬಾರಿ ಬೇಗನೇ ಹೋಗಿ ಖಾಲಿ ಹಾಲ್ ನಲ್ಲಿ ಕೊನೆಕೊನೆ ಕುರ್ಚಿಯಲ್ಲಿ ಕೂತೆ. ಮೆಲ್ಲನೇ ಜನ ಬರಲು ಶುರು ಮಾಡಿದರು.

ಅಪರ್ಣಾ, ಶೈಲಜಾ ಸಂತೋಷ್, ರವೀ, ರಮ್ಯಚೈತ್ರಕಾಲದ ನಾಯಕ, ಲಕ್ಷ್ಮಣ್ ರಾವ್....ಒಬ್ಬೊಬ್ಬರೇ ಬಂದರು. ಆಗ ನನ್ನ ಪಕ್ಕ ಬಂದು ಕೂತವರು ಗಿರೀಶ್ ಕಾಸರವಳ್ಳಿ. ಒಂದು ಕ್ಷಣ ಏನು ಹೇಳಬೇಕೆಂದು ಯೋಚಿಸಿ "ನಾನು...." ಅನ್ನುವಷ್ಟರಲ್ಲಿ ಮುಂದಿನ ಸೀಟಿನಲ್ಲಿ ವಿವೇಕ್ ನೊಂದಿಗೆ ಆಗಮಿಸಿದ ವ್ಯಕ್ತಿ "ಗಿರೀಶ್..ನಾನು ಶ್ರೀರಾಮ್" ಅಂದ ಹಾಗಾಯಿತು. ನೋಡಿದರೆ ನಾನು ನೋಡಿದ (ಅವರ ವೆಬ್ ಸೈಟ್ ನಲ್ಲಿ) ಫೋಟೋಗಿಂತ ಭಿನ್ನವಾಗಿ ನನ್ನೆದುರಿನ ಕುರ್ಚಿಯಲ್ಲಿ ಕೂತಿದ್ದರು ಶ್ರೀರಾಮ್. ಅವರ ಬಳಿ ಮಾತನಾಡಬೇಕನ್ನುವಷ್ಟರಲ್ಲಿ ಕಾರ್ಯಕ್ರಮ ಶುರುವಾಯಿತು. ಶ್ರೀರಾಮ್ ಸ್ಟೇಜಿಗೆ ಹೋದರು.

ಅಷ್ಟರಲ್ಲಿ ಮುಂದಿನ ಸಾಲಿನಲ್ಲಿ ಗಿರೀಶ್ ಕಾರ್ನಾಡ್ ಬಂದು ಕುಳಿತರು. ನನ್ನ ಪಕ್ಕ ಯಾರೋ ಹುಡುಗಿ ಬಂದು ಕುಳಿತಳು. ಚಿಕ್ಕ ಹುಡುಗಿಯೊಬ್ಬಳ (ಅಮೃತಾ ರಾವ್!!) ಅದ್ಭುತ ಗಾಯನದಿಂದ ಕಾರ್ಯಕ್ರಮ ಶುರುವಾಯಿತು. ಮೊದಲಿಗೆ ಶ್ರೀರಾಮ್ ಮಾತಾಡಿದರು. ಲೇಖಕರ, ಪುಸ್ತಕದ ಬಗ್ಗೆ ಅತಿಥಿಗಳು ಮಾತಾಡುವುದಿಲ್ಲ ಎಂ[illegible] ನಗೆ ಬಂದಿದ್ದ ಮೇಲ್ ನಲ್ಲಿ ಜಯಂತ್ ಬರೆದಿದ್ದರೂ ಶ್ರೀರಾಮ್ ಜಯಂತರ ಗುಣಗಾನವನ್ನು ಮಾಡಿದರು. ತಮ್ಮ ಗುಜರಾತಿನ ಮಳೆ ಮತ್ತು ಭೂಕಂಪದ ಅನುಭವಗಳನ್ನೂ ಹೇಳಿದರು. ಭೂಕಂಪವಾದಾಗ ಮತ್ತು ಅದರ ನಂತರದ ದಿನಗಳಲ್ಲಿ ನಡೆದ ಘಟನ್ ಗಳಲ್ಲಿ ಮಾನವೀ ಯಅಂಶಗಳನ್ನು ಬರ್ ಯು ತನಗೆ ಸಾಧ್ಯ ವೇ? ಅಂತ ಪ್ರಶ್ನಿಸಿಕೊಂಡರು. ಇಲ್ಲ, ಇದಕ್ಕೆಲ್ಲ ಜಯಂತನೇ ಸರಿ ಅಂತ ಅವರೇ ಉತ್ತರಿಸಿದರು. nervous ಆಗಿದ್ದೇನೆ ಅದಕ್ಕೇ ಚೀಟಿಯಲ್ಲಿ ಬರೆದುಕೊಂಡು ಬಂದಿದ್ದೇನೆ ಅಂತ ಹೇಳಿದ ಶ್ರೀರಾಮ್ ಚೀಟಿ ನೋಡಿ ಮಾತಾಡಿದ್ದು ನನಗಂತೂ ಕಾಣಲಿಲ್ಲ.

ಮತ್ತೆ ಇಲ್ಲೂ ಆ ವ್ಯಕ್ತಿಯೇ ನಿರೂಪಕ. ಈ ಬಾರಿ ಅವನು ಮಾತಾಡುವಾಗ ಎಡವಟ್ಟನ್ನೂ ಮಾಡುತ್ತಿದ್ದ. ಶ್ರೀರಾಮ್ ಐ.ಐ.ಎ[illegible] ಹ[illegible]ದರಾಬಾದ್‌ನಲ್ಲಿ ಇದ್ದಾರೆಂದು[illegible]ವವರು ಒಮ್ಮೆ ಶುರುಮಾಡಿದರೆ ಬಿಡುವ ಪ್ರಶ್ನೆಯೇ ಇಲ್ಲವೆಂದು ಜೋಕ್ ಮಾಡಿದ (ಶ್ರೀರಾಮ್ ಅವರು ಅವರು ತಾನು ಮಾಜಿ ಸಾಹಿತಿ ಎಂ[illegible]

ಹೇಳಿದ್ದಕ್ಕೆ ಅವನ ಜೋಕು.) seriously ಇನ್ನೊಮ್ಮೆ ಕಾರ್ಯಕ್ರಮ ಮಾಡೋವಾಗ ಇಂತಹವರನ್ನ ನಿರೂಪಕರನ್ನಾಗಿ ಮಾಡಬಾರದೆಂದು ಕನ್ನಡ ಸಾಹಿತ್ಯ ಲೋಕಕ್ಕೆ ನನ್ನ ಮನವಿ.

ನಂತರ ಅರುಂಧತಿ ನಾಗ್ ಮಾತಾಡಿದರು. ನನ್ನ ಮೆಚ್ಚಿನ ಪಾತ್ರ ದ ಬಗ್ಗೆ ಮಾತಾಡುತ್ತಾರೆ ಅಂತ ಮೊದಲೇ ತಿಳಿಸಿಯಾಗಿತ್ತು. ಅರುಂಧತಿ ಅವರು ತಮ್ಮ ನೆನಪಿನ ಬುತ್ತಿ ಬಿಚ್ಚಿಟ್ಟರು. ೧೮ನೇ ವಯಸ್ಸಿನಲ್ಲಿ ತನ್ನ ಬಾಯ್ ಫ್ರೆಂಡ್ ಶಂಕರ್ ನಾಗ್ ನ ತಾಯಿಯಾಗಿ ನಟಿಸಿದ್ದನ್ನ ಮೆಲುಕು ಹಾಕಿದರು. ತಮ್ಮ ಕನ್ನಡತನದ ಮೂಲವನ್ನೂ ಬಿಡಿಸಿ ಹೇಳಿದರು (ಅವರ ತಂದೆಯೋ ಅಜ್ಜನೋ ಚಿಂತಾಮಣಿಯಲ್ಲಿದ್ದರಂತೆ). ಪಾತ್ರದೊಳಗೆ ಸಿಲುಕಿ ಅದರ ಅಂತಃಸತ್ವನ್ನು ತನ್ನೊಳಗೆ ಆಹ್ವಾನಿಸಿಕೊಳ್ಳುವ ನಟರ ಅನುಭವ ಮತ್ತು ಸಂಕಟವನ್ನು ಬಹಳ ಚೆನ್ನಾಗಿ ತೆರೆದಿಟ್ಟರು. ಇಂಗ್ಲಿಷ್ ಮತ್ತು ಕನ್ನಡ ಮಿಶ್ರಿತವಾದ ಅವರ ಮಾತು ಬಹಳ ಕಾಲ ನೆನಪಿನಲ್ಲಿ ಇರುತ್ತದೆ.

ಕಾರ್ಯಕ್ರಮದ ಮತ್ತೊಬ್ಬ ಅತಿಥಿ ಪ್ರಕಾಶ್ ರೈ. ಅವರು ಸಮಯಕ್ಕೆ ಸರಿಯಾಗಿ ಬರದ ಕಾರಣ ಕಾರ್ಯಕ್ರಮನ್ನು ಮುಂದೂಡದೆ ಶುರುಮಾಡಿದ್ದು ನಿಜವಾಗಲೂ ಒಳ್ಳೆಯ ಕ್ರಮ. ಇಷ್ಟೆಲ್ಲಾ ಆಗುತ್ತಿರುವಾಗ ನನ್ನ ಪಕ್ಕ ಕುಳಿತ ಹುಡುಗಿ ಎಲ್ಲರೂ ಹೇಳಿದ್ದನ್ನ ಇಂಗ್ಲಿಷ್ ನಲ್ಲಿ ಬರೆದುಕೊಳ್ಳುತ್ತಿದ್ದಳು. ಅವಳು ಹ್ಯಾಗ್ಯಾಕೆ ಬರಿತಾ ಇದ್ದಳು, ಅದೂ ಕನ್ನಡದಲ್ಲಿ ಕೇಳಿದ್ದನ್ನ ಇಂಗ್ಲಿಷ್ ನಲ್ಲಿ ಅಂತ ನನಗೆ ಅರ್ಥವಾಗಲಿಲ್ಲ. ಅಷ್ಟರಲ್ಲಿ ಸಭೆಯಲ್ಲಿ ಗುಸುಗುಸು. ಪ್ರಕಾಶ್ ರೈಯೇ ಬಂದಿರಬಹುದೆಂದು ನಾನು ಹಿಂದುರಿಗಿ ನೋಡಲಿಲ್ಲ. ಪಕ್ಕದ ಹುಡುಗಿ ನನ್ನನ್ನ who is that ಅಂತ ಕೇಳಿದಾಗ ಬಂದವರು ರೈ ಅಲ್ಲ ಅಂತ ಖಾತರಿಯಾಗಿ ನೋಡಿದರೆ ಪೂರ್ಣಚಂದ್ರ ತೇಜಸ್ವಿಯವರು. he is poornachandra thejasvi ಅಂದೆ. who? ಕೇಳಿತು ಹುಡುಗಿ. ಯಾವಳಿವಳು ಅಂದುಕೊಂಡು kumevu's son ಅಂತ ಉಸುರಿದೆ (ಪಕ್ಕ ಕಾಸರವಳ್ಳಿ ಇದ್ದರಲ್ಲಾ!!) oh! thanks ಅಂತ ತಲೆ ಬಗ್ಗಿಸಿ ಪುನಃ ಬರೆಯಲು ಶುರು ಮಾಡಿತು ಹುಡುಗಿ.

ನಂತರ ಜಯಂತ್ ಮಾತನಾಡಿದರು. ಅವರು ಮಾತಾಡುವುದಿಲ್ಲ, ಕಥೆ ಹೇಳ್ತಾರೆ ಅಂತ ಮೊದಲೇ ಅಂದುಕೊಂಡಿದ್ದೆ. ಹಾಗೇ ಆಯ್ತು. ಆಗುಂಬೆಯಲ್ಲಿ ಸೂರ್ಯಾಸ್ತ ನೋಡಿದ್ದು, ಬಸ್ ಸ್ಟಾಪಿನಲ್ಲಿ ಯಾರೋ ೫೦ ಪೈಸೆಗೆ ದ್ರಾಕ್ಷಿ ಕೇಳಿದ್ದು - ಹೀಗೆ ಕಥೆಗಳದ್ದೇ ಕಾರುಬಾರು. ಜಯಂತ್ ಒಳ್ಳೆ ಮಾತುಗಾರ. ಕೈ ಆಡಿಸಿಕೊಂಡು ತಮಾಷೆಯಾಗಿ ಮಾತಾಡೋ ಕಲೆ ಅವರಿಗೆ ದಕ್ಕಿದೆ. ತೇಜಸ್ವಿ ಅವರು ಬಂದದ್ದು ತನ್ನ ಸಾರ್ಥಕ ಕ್ಷಣ (ಭಕ್ತ ಕುಂಬಾರನಿಗೆ ದೇವರು ಪ್ರತ್ಯಕ್ಷನಾದ ಹಾಗೆ) ಅಂತ ಜಯಂತ್ ಹೇಳಿದಾಗ ಈ dialogue ಜಯಂತ್ ಬಾಯಿಂದಲೇ ಕೇಳಿದ್ದೇನೆ, ಎಲ್ಲಿ ಅಂತ ಯೋಚಿಸುತ್ತಿದ್ದನಿಗೆ ತಕ್ಷಣ ಹೊಳೆಯಿತು. ಕಳೆದ ಬಾರಿ ಅನಂತನಾಗ್ ಬಂದಿದ್ದಾಗಲೂ ಜಯಂತ್ ಇದೇ ಮಾತು ಆಡಿದ್ದರು.

ಅದೇನೆಂದರೆ ಬಹಳ ವರ್ಷಗಳ ಹಿಂದೆ ಜಯಂತ್ ಮುಂಬೈನಲ್ಲಿ ಇರೋವಾಗ ಅನಂತನಾಗ್ ಯಾವುದೋ ಶೂಟಿಂಗ್ ಗೆ ಬಂದಿದ್ದರಂತೆ. ಶೂಟಿಂಗ್ ಸಮಯದಲ್ಲಿ ಜಯಂತ್ ಅಲ್ಲೇ ಇದ್ದರಂತೆ. ಸುತ್ತ ನೋಡುತ್ತಿದ್ದ ಅನಂತನಾಗ್ ಕಣ್ಣಿಗೆ ತಾವು ಬಿದ್ದಿದ್ದೇವೆ ಅಂತ ಅನ್ನಿಸಿದ ತಕ್ಷಣ ಜಯಂತ್ ಗೆ ಸಾರ್ಥಕತೆಯ ಅನುಭವವಾಯಿತಂತೆ. ಅದನ್ನವರು ಅವತ್ತು ಹೇಳಿದ್ದರು. ಇವತ್ತು ತೇಜಸ್ವಿಯವನ್ನು ನೋಡಿದ ಜಯಂತ್ ಗೆ ಮತ್ತೊಂದು ಸಾರ್ಥಕತೆಯ ಅನುಭವ.

ತೇಜಸ್ವಿಯವರ ಆರೋಗ್ಯ ಬಹಳ ಹದಗೆಟ್ಟಿದಂತೆ ಇತ್ತು. ನಾನು ಅವರನ್ನು ನೋಡಿದ್ದು ಇದೇ ಮೊದಲು. ಏನು ಹೇಳಿದರೋ ಒಂದೂ ಕೇಳಿಸಲಿಲ್ಲ, ಕೇಳಿಸಿದ್ದು ಅರ್ಥವಾಗಲಿಲ್ಲ. ಆದರೂ ಜಯಂತ್ ರ ಸೂಕ್ಷ್ಮತೆಯ ಬಗ್ಗೆ ಎಚ್ಚರಿಕೆಯ ಮಾತಾಡಿದರು ಅಂತೇನೋ ಅನ್ನಿಸಿತು.

ಒಟ್ಟಿನಲ್ಲಿ ಸಂಡೇ ಬೆಳಗಿನ ಎಲ್ಲಾ ಕೆಲಸ ಬಿಟ್ಟು ಹೋದದ್ದಕ್ಕೆ ದೊಡ್ಡ ಉಪಕಾರವೇನೂ ಆಗಲಿಲ್ಲ. ಹೋದ ಮುಖ್ಯ ಕಾರಣವಾದ ಶ್ರೀರಾಮ್ ರ ಜೊತೆ ಮಾತುಕತೆ ಸಾಧ್ಯವಾಗಲಿಲ್ಲ. ಪುಸ್ತಕದ ಮೇಲಿನ ೨೦ ರುಪಾಯಿ ಕಡಿತ ಬಸ್ ಪಾಸ್ ನ ದುಡ್ಡಿಗೂ ಸರಿ ಹೊಂದಲಿಲ್ಲ. ಪುಸ್ತಕ ಬೇರೆ ಪಿಂಕ್ ಹೊದಿಕೆ ಹೊಂದಿತ್ತು (ನನಗ್ಯಾಕೋ ಪಿಂಕ್ ಕಂಡರೆ ಭಾರೀ ಅಲರ್ಜಿ).

ಬಸ್ಸಿನಲ್ಲಿ ವಾಪಾಸ್ ಬರುತ್ತಿರುವಾಗ "ಶಬ್ದ ತೀರ" ಪುಸ್ತಕ ಬಿಡಿಸಿ ಓದಲು ಆರಂಭಿಸಿದೆ. ಪುಸ್ತಕ ಬಿಡುಗಡೆಗೆ ಸಮಾರಂಭಕ್ಕೆ ಹೋಗಬಾರದೆನ್ನುವ ನನ್ನ ನಿರ್ಧಾರಕ್ಕೆ ಪುಷ್ಟಿ ಕೊಡುವಂತಹ ಮಾತುಗಳು ಅದೇ ಜಯಂತ್ ನ ಪುಸ್ತಕದಲ್ಲಿ ನನಗೆ ಸಿಕ್ಕಿತು.

(ಶಬ್ದ ತೀರ - ಪುಟ ೫೮)
"ಪುಸ್ತಕ ಬಿಡುಗಡೆ ಅಂತ ಪ್ಯಾಕೇಟು ಬಿಚ್ಚಿ ಕ್ಯಾಮೆರಾ ದಿಕ್ಕಿಗೇ ಪುಸ್ತಕಗಳನ್ನು ಅಶ್ಲೀಲವಾಗಿ ತೋರಿಸುತ್ತಾ ಸ್ಲೇಟು ಹಿಡಿದ ಕೈದಿಗಳಂತೆ ನಿಲ್ಲುವುದೂ ಕೂಡ ಸುದ್ದಿಯ ರೋಗದ ಅವಲಕ್ಷಣಗಳಲ್ಲೊಂದು"

"ಇವಕ್ಕೆಲ್ಲಾ ಕಲಶಪ್ರಾಯವಾದ ಕುರೂಪ ನಿರೂಪಕ..........ಭಾಷಣ ಸಾರಾಂಶಗೂಳಿಸಲು ಹೋಗಿ ತನ್ನ ದಡ್ಡತನ ... (ಪ್ರದರ್ಶಿಸುವ ನಿರ್ವಾಹಕರನ್ನು)....ಹತೋಟಿಯಲ್ಲಿಡಲು ಕಾನೂನು ಏನಾದರೂ ಮಾಡುವುದು ಒಳಿತು"

"ಮಜಾ ಅಂದರೆ,ಈ ಎಲ್ಲಾ ಸಭೆ ಸಮಾರಂಭಗಳನ್ನು ಯಾರ ಹೆಸರಲ್ಲಿ ಇವರೆಲ್ಲಾ ಮಾಡುತ್ತಾರೋ.......(ಅಂತಹ ಜನಸಾಮಾನ್ಯ)..ನಿಜವಾದ ಜಾಣ.....ಯಾಕೆಂದರೆ ಆತ ಆ ಕಡೆ ಮುಖ ಸಹ ಮಾಡುವುದಿಲ್ಲ...."

ಇನ್ನು ಮೇಲಾದರೂ "ಜಾಣ" ನಾಗಬೇಕೆಂದು ನಿರ್ಧರಿಸಿದ್ದೇನೆ.

## ಪೋಗದಿರೆಲೋ ರಂಗಾ

Wednesday, June 21, 2006

[ತಮ್ಮ ಹಾಡಿನಿಂದ ನನ್ನಂತ ನಾಸ್ತಿಕನ ಎದೆಯಲ್ಲೂ ಭಾವವನ್ನು ತುಂಬಿ ಇಂತಹ ಲೇಖನ ಬರೆಯುವಂತೆ ಮಾಡಿದ ಶ್ರೀ ವಿದ್ಯಾಭೂಷಣರ ಸಿರಿಕಂಠಕ್ಕೆ ನನ್ನ ನಮಸ್ಕಾರ]

[ಎಲ್ಲಾ ಚಿತ್ರಗಳನ್ನು ಇಲ್ಲಿಂದ ಕದ್ದಿದ್ದೇನೆ]

ದಾಸರಿಗೆ ಪದ್ಯಗಳ ಮುಖ್ಯ ಉದ್ದೇಶವೇ ಹರಿಭಕ್ತಿ ಪ್ರಸಾರ. ಆದ ಕಾರಣ ಅಲ್ಲಿ ಭಗವಂತನ ನಾನಾ ರೂಪ ವಿಶೇಷಗಳ ಗುಣಗಾನಕ್ಕೇ ಜಾಸ್ತಿ ಒತ್ತು. ಪುರಂದರ ದಾಸರ ಕೃತಿಗಳಲ್ಲಿ ನಾನು ಕೇಳಿದ್ದು ಬಹಳಷ್ಟು ಕೃಷ್ಣನ ಪದ್ಯಗಳೇ. ಅವರು ಬೇರೆ ಅವತಾರಗಳ ಬಗ್ಗೆ ಬರೆದಿರಬಹುದು. ಅದರ ಬಗ್ಗೆ ನನಗೆ ಅಷ್ಟೇನೂ ತಿಳಿದಿಲ್ಲ. ಆದರೆ ಕೃಷ್ಣನ ಪಾತ್ರಸೃಷ್ಠಿಯೇ ಕವಿಗೆ ತನ್ನೆಲ್ಲಾ ಸಾಮರ್ಥ್ಯವನ್ನು ತೋರಿಸಲು ಅನುಮ ಮಾಡಿಕೊಡುತ್ತದೆ.

ರಾಮನ ಪಾತ್ರ ಬಹುವಾಗಿ ಏಕಮುಖಿಯಾದಂತಹದು. ಅವನದು ಯಾವತ್ತೂ ನೈತಿಕವಾಗಿ ಸರಿಯಾದ ವ್ಯಕ್ತಿತ್ವ. ಆದರೆ ಕೃಷ್ಣನದು ಹಾಗಲ್ಲ. ಅವನದು ವರ್ಣರಂಜಿತ ಪಾತ್ರ. ಬಾಲ್ಯ ಕಾಲದ ಚಿತ್ರಣಗಳಂತೂ "ರಮ್ಯಚಿತ್ರ" ಗಳೇ. ರಾಮನ ಬಾಲ್ಯದ ಕತೆ ರಾಮಾಯಣದಲ್ಲಿ ವಿಪುಲವಾಗಿ ಇದೆಯೋ- ನನಗೆ ತಿಳಿಯದು. ಅವನು ಚಂದ್ರ ಬೇಕೆಂದು ಕೇಳಿದ ಕಥೆ ಮಾತ್ರ ನನಗೆ ತಿಳಿದಿದೆ. ಆದರೆ ಕೃಷ್ಣನದು ಹಾಗಲ್ಲ. ಅವನು "ಮಗುಗಳ ಮಾಣಿಕ್ಯ".



ತುಂಟ ಮಕ್ಕಳು ಬೇಡವೆನ್ನುವವರ ಸಂಖ್ಯೆ ಕಡಿಮೆ ಇರಬಹುದೇನೋ. ಪುಟಾಣಿಗಳು ಚೂಟಿಯಾಗಿರದೆ ಬೆಪ್ಪರಂತೆ ಕೂತಿದ್ದರೆ ಏನು ಚಂದ? ಇಂತಹ ತುಂಟು ಪೋರನ ಪಾತ್ರದ ಅತ್ಯುತ್ತಮ ಚಿತ್ರಣ ಕೃಷ್ಣನಲ್ಲಿ ನಮಗೆ ಕಾಣಸಿಗುತ್ತದೆ. ಆದರೆ ಅವನು ಸಾಮಾನ್ಯ ಹುಡುಗನೇ? ಅವನು ಕದ್ದರೂ, ಒದ್ದರೂ, ಬೈದರೂ ಅವನು ದೇವರ ದೇವ. ದಾಸರ ಕಷ್ಟವೇ ಇದು. ಅವರು ಕೃಷ್ಣನ ತಂಟೆಯನ್ನು ಆಡಿಕೊಳ್ಳದೆ "ಬಾಲಲೀಲೆ" ಅಂತ ಬಣ್ಣಿಸಬೇಕು.

ಒಂದು ತರಹದಲ್ಲಿ ಇದೊಂದು ಸವಾಲು. ಕೃಷ್ಣ ಮಾಡಿದ ಕೆಲಸವನ್ನೇ ಇನ್ಯಾರಾದರು ಮಾಡಿದರೆ....ಗೋಪಿಯರ ಕೈಯಿಂದ ಧರ್ಮದೇಟು ಗ್ಯಾರಂಟಿ. ಆದರೆ ಹೇಳಿ ಕೇಳಿ ಪರಮಾತ್ಮನ ಚೇಷ್ಟೆಯನ್ನು ಅಪಮಾನಿಸುವುದುಂಟೇ. ದಾಸರು ಈ ಕೆಲಸನ್ನ ಬಹಳ ಚೆನ್ನಾಗಿ ನಿರ್ವಹಿಸಿದ್ದಾರೆ. ಅವರು ಎಲ್ಲೂ ಕೃಷ್ಣನನ್ನ ಸಾಮಾನ್ಯ ಬಾಲನಂತೆ ಚಿತ್ರಿಸಲು ಹೋಗಲೇ ಇಲ್ಲ. ಎಲ್ಲೆಲ್ಲೂ ಅವನು ಪೂರ್ಣಪ್ರಜ್ಞನೆ.

ಆದರೆ ತಾಯಿಗೆ ಮಗನಾಗಿ ಕೃಷ್ಣನ ಪಾತ್ರ ದಾಸರ ಪದಗಳಲ್ಲಿ ಹೇಗಿದೆ? ಇದು ನಾನು ಇಲ್ಲಿ ತೆಗೆದುಕೊಳ್ಳುತ್ತಿರುವ ಪ್ರಶ್ನೆ. ತಾಯಿ-ಮಗನ ಕುರಿತಾದ ದಾಸರ ಹಾಡುಗಳು ನಾನು ಕೇಳಿದ್ದು ಕಡಿಮೆ. ನಾನು ಕೇಳದ ಪದಗಳು ಇನ್ನೂ

ಸಾಕಷ್ಟಿರಬಹುದು. ಆದ್ದರಿಂದ ನನ್ನ ಇಲ್ಲಿಯ ವಿಚಾರ ವಿಮರ್ಶೆ ಬಹಳ ಸಣ್ಣ ವ್ಯಾಪ್ತಿಯುಳ್ಳದ್ದು ಅಂತ ನನಗೆ ಗೊತ್ತಿದೆ; ನಿಮಗೂ ತಿಳಿದಿರಲಿ!!

ಕೃಷ್ಣ ಭಗವಂತನೆಂದು ಎಲ್ಲರಿಗೂ ತಿಳಿದಿದೆ - ಎಂಬ ರೀತಿಯಲ್ಲೇ ದಾಸರು ಕೃಷ್ಣನ ಬಾಲ್ಯವನ್ನು ಚಿತ್ರಿಸಿದ್ದಾರೆ. ಅವನ ಬಾಲ್ಯದ ಸಾಧನೆಗಳಾದ ಪೂತನೀ ಮೊದಲಾದ ರಕ್ಕಸರ ಸಂಹಾರ, ಗೋವರ್ಧನ ಗಿರಿಯನ್ನು ಎತ್ತಿದ ಕಥೆ, ಕೊನೆಗೆ ಬೆಣ್ಣೆ ಕದಿಯುಮದು ಮತ್ತು ಗೋಪೀಬಾಲೆಯರನ್ನು ಗೋಳುಹೊಯ್ಯುಮದು ಮುಂತಾದುಮಗಳನ್ನು ಬಣ್ಣಿಸುವಾಗ ಅತಿರಮ್ಯ ಚಿತ್ರಾವಳಿಗಳನ್ನು ನಮ್ಮೆದುರು ತೆರೆದಿಡುತ್ತಾರೆ. ಭಗವಂತನ ಗುಣಗಾನವೇ ಮುಖ್ಯವಾದ ದಾಸರಿಗೆ ಇದು ಸಹಜವೇ.



ಯಶೋದೆ ಹಾಡಿರಬಹುದಾದ ಕೆಲಮ ಪದಗಳಲ್ಲಿ (ನನ್ನ ಊಹೆ) ಅವಳಿಗೆ ಕೃಷ್ಣ ತನ್ನ ಮಗ ಅನ್ನುಮದಕ್ಕಿಂತ ಅವನು ದೇವರು ಎಂಬ ಭಾವವೇ ಹೆಚ್ಚಿತ್ತೆಂದು ತೋರುವಂತೆ ದಾಸರು ಚಿತ್ರಿಸಿದ್ದಾರೆ.

"ಪೋಗದಿರೆಲೋ ರಂಗ.....ಬಾಗಿಲಿನಿಂದಾಚೆಗೆ......."

ಎಂಬ ಹಾಡು ತಾಯಿ ಮಗನಿಗೆ ಹೇಳುವ ಮಾತಿನಂತೆ ಅನ್ನಿಸುಮದಿಲ್ಲ. ಯಾಕೆಂದರೆ ಮುಂದೆ ಅದೇ ಪದ್ಯದಲ್ಲಿ

"ಭಾಗವತರು ಕಂಡರೆ ಎತ್ತಿ ಕೊಂಡೊಯ್ಯುವರು...
ಪೋಗದಿರೆಲೋ ರಂಗಾ......"

ಅಂತ ಹೇಳಿರುಮದನ್ನು ಗಮನಿಸಿ. ಇದು ತಾಯಿ ಹೇಳುವ ಮಾತಿಗಿಂತ ಭಕ್ತ ಭಗವಂತನಿಗೆ ಹೇಳುವ ಮಾತೆಂದೇ ಅನ್ನಿಸುತ್ತದೆ. ಮುಂದೆ ನೋಡಿ

"ದೊರಕದ ವಸ್ತುಮ ದೊರಕಿತು ತಮಗೆಂದು
ಹರುಷದಿಂದಲಿ ನಿನ್ನ ಕರೆದೆತ್ತಿ ಕೊಂಬರು
ಪೋಗದಿರೆಲೋ ರಂಗಾ......"

ಎಂಬಂತಹ ಸಾಲುಗಳು ಮೇಲಿನ ಮಾತಿಗೆ ಪುಷ್ಟಿಕೊಡುತ್ತವೆ. ಮಗನನ್ನು ಹುಡುಕುವ ಹಾಡಿನಂತೆ ಕಾಣುವ ಈ ಪದ್ಯವನ್ನು ನೋಡಿ

"ಅಮ್ಮ ನಿಮ್ಮ ಮನೆಗಳಲ್ಲಿ

ನಮ್ಮ ರಂಗನ ಕಂಡಿರೇನಮ್ಮ"

ಆದರೆ ಇದೂ ಕೂಡ ಮುಂದೆ ಅದೇ ಭಕ್ತಿಮಾರ್ಗದ ಜಾಡನ್ನೇ ಹಿಡಿಯುತ್ತದೆ. ಮುಂದೆ ಗಮನಿಸಿ

"ಬ್ರಹ್ಮ ಮೂರುತಿ ನಮ್ಮ ಕೃಷ್ಣನು
ನಿಮ್ಮ ಕೇರಿಯೊಳಿಲ್ಲವೇ
ಕಾಶಿ ಪೀತಾಂಬರ ಕೈಯಲಿ ಕೊಳಲು
ಪೂಸಿದ ಶ್ರೀಗಂಧ ಮೈಯೊಳಗಿರಲು
ಲೇಸಾಗಿ ತುಳಸಿಯ ಮಾಲೆಯ ಧರಿಸಿದ
ವಾಸುದೇವ ಕಾಣಿರೇನ್ಕೆ"

ದಾಸರ ಬಹಳಷ್ಟು ಪದ್ಯಗಳು ಇದೇ ಧಾಟಿಯಲ್ಲಿ ಸಾಗುತ್ತದೆ. "ಪಿಳ್ಳಂಗೋವಿಯ" , "ಕೃಷ್ಣಾ ನೀ ಬೇಗನೇ ಬಾರೂ" ಮುಂತಾದ ಪದ್ಯಗಳು ತಾಯಿ ಮಗನನ್ನು ಕುರಿತಾಗಿ ಹೇಳುವಂತೆ ಶುರುವಾದರೂ ಮತ್ತೆ ಅದೇ ರೂಪ ವರ್ಣನೆಯತ್ತಲೇ ಸಾಗುತ್ತದೆ.



ಆದರೆ ಈ ಸಿದ್ಧ ಮಾದರಿಯನ್ನು ಮೀರಿದ ಕೆಲವು ಪದ್ಯಗಳು ನಮಗೆ ಸಿಗುತ್ತದೆ. ಅಂತಹ ಒಂದು ಪದ್ಯ "ಗುಮ್ಮನ ಕರೆಯದಿರೆ". ಇದೊಂದು ಬಹಳ ಅಪರೂಪದ ಪದ್ಯ (ನನ್ನ ಮಟ್ಟಿಗೆ). ಯಾಕೆಂದರೆ ಇಲ್ಲಿ ಮಾತನಾಡುತ್ತಿರುವವನು ಸ್ವತಃ ಕೃಷ್ಣನೇ. ಆದರೆ ಇಲ್ಲಿ ಅವನು ದೇವರಂತೆ ಮಾತನಾಡುತ್ತಿಲ್ಲ. ಚಿಕ್ಕ ಬಾಲಕನೊಬ್ಬ ತಾಯಿಯ ಬಳಿ ಮಾತಾಡುವಷ್ಟೇ ಸಹಜವಾಗಿ ಈ ಪದ್ಯ ಮೂಡಿಬಂದಿದೆ. ನೋಡಿ

"ಗುಮ್ಮನ ಕರೆಯದಿರೆ
ಅಮ್ಮಾ ನೀನು ಗುಮ್ಮನ ಕರೆಯದಿರೆ"

ಎಲ್ಲಾ ಮಕ್ಕಳು ತಾಯಿಗೆ ಹೇಳುವಂತೆ ಇಲ್ಲಿ ಕೃಷ್ಣ ತಾಯಿಯ ಹತ್ತಿರ ಗೋಗರೆಯುತ್ತಿದ್ದಾನೆ - "ಗುಮ್ಮನ ಕರೆಯದಿರೆ.."

"ಸುಮ್ಮನೆ ಇದ್ದೇನು ಅಮ್ಮಿಯ ಬೇಡೇನು
ಮಮ್ಮು ಉಣ್ಣುತ್ತೇನೆ ಅಮ್ಮ ಅಳುವದಿಲ್ಲ"

ದಾಸರ ಬರವಣಿಗೆಯ ಶ್ರೇಷ್ಠತೆಯ ಪರಮಾವಧಿ ಇದು. ಅಮ್ಮಿ, ಮಮ್ಮು ಮೊದಲಾದ ಮಕ್ಕಳ ಭಾಷೆಯಲ್ಲೇ ಗೀತೆ ಸಾಗುವುದನ್ನು ಗಮನಿಸಿ. ನಿಮಗೆ ಕೃಷ್ಣ ದೇವರಿಗಿಂತ ಹೆಚ್ಚಾಗಿ ಮಗುವಾಗಿಯೇ ಕಾಣಿಸುತ್ತಾನೆ.

"ಹೆಣ್ಣುಗಳಿರುವಲ್ಲಿಗೆ ಪೋಗಿ
ಅವರ ಕಣ್ಣು ಮುಚ್ಚುವದಿಲ್ಲವೆ...
ಚಿಣ್ಣರ ಬಡಿಯೆನು ಅಣ್ಣನ ಬಯ್ಯೆನು
ಬೆಣ್ಣೆಯ ಬೇಡೇನು ಮಣ್ಣು ತಿನ್ನುವದಿಲ್ಲ

ಗುಮ್ಮನ ಕರೆಯದಿರೆ.........."

ಕೃಷ್ಣನ ಆಟಗಳು ಇಲ್ಲಿ ಅಪರಾಧಗಳಾಗಿಯೇ ಬಿಂಬಿತವಾಗಿದೆ. ಅವನು ತಾಯಿಯ ಬಳಿ ತನ್ನ ತಪ್ಪುಗಳನ್ನೆಲ್ಲಾ ಹೇಳಿಕೊಳ್ಳುತ್ತಿದ್ದಾನೆ. ಇಲ್ಲಿ ಯಾವುದೇ ಅತಿಶಯೋಕ್ತಿಗಳಿಲ್ಲ.

ಹಿಂದೆ "ತಾಯಿಗೆ ಬಾಯೊಳು ಜಗವನ್ನೇ ತೋರಿದ" ಕೃಷ್ಣ ಇಲ್ಲಿ ಮಣ್ಣು ತಿನ್ನುವ ಸಾಮಾನ್ಯ ತಂಟೆಕೋರ. ಇನ್ನೂ ಮುಂದೆ ಗಮನಿಸಿ

"ಬಾವಿಗೆ ಪೋಗೆ ಕಣೆ
ಅಮ್ಮ ನಾನು ಹಾವಿನೊಳಾಡೆ ಕಣೆ
ಹಾಲಿನ ಮೊಲೆಯುಂಬ ಕರುಗಳ ಬಿಡೆ ನೋಡೆ
ದೇವರಂತೆ ಒಂದು ಮೂಲೆಲಿ (ಥಾವಲಿ!) ಕೂರುವೆ
ಗುಮ್ಮನ ಕರೆಯದಿರೆ.........."

"ಆಡಿದನೋ ರಂಗಾ...ಅದ್ಭುತದಲಿ ಕಾಳಿಂಗನ ಫಣಿಯಲಿ" ಎಂದು ಹಾಡಿದ ದಾಸರು ಇಲ್ಲಿ ಅದೇ ಕೆಲಸವನ್ನು "ಹಾವಿನಾಟ" ಎಂದು ಬರೆದಿದ್ದಾರೆ. ಏನೋ ತಪ್ಪು ಮಾಡಿದವನಂತೆ ಆ ಕೆಲಸ ಮತ್ತೆ ಮಾಡುವುದಿಲ್ಲವೆಂದೂ ಅವನ ಬಾಯಿಂದಲೇ ಹೇಳಿಸಿದ್ದಾರೆ.

"ಅಗಣಿತ ಗುಣ" "ಸುರಾದಿವಂದ್ಯ" ಮುಂತಾದ ರೀತಿಯಲ್ಲಿ ಹೊಗಳಿಸಿಕೊಂಡ ಕೃಷ್ಣ ಇಲ್ಲಿ ಸುಮ್ಮನೆ ಮೂಲೆಯಲ್ಲಿ ಕೂತು "ದೇವರಂತೆ" ಇರುತ್ತೇನೆ ಎಂದಲ್ಲಿಗೆ ಕೃಷ್ಣ ಸಂಪೂರ್ಣನಾಗಿ ಮಾನವನೇ ಆಗಿಹೋಗುತ್ತಾನೆ.

ಮುಂದಿನದು ಇನ್ನೂ ಸ್ವಾರಸ್ಯಕಾರಿಯಾಗಿದೆ. ಸುಮ್ಮನಿರುತ್ತೇನೆ ಅಂದ ಮಗನನ್ನ ತಾಯಿ ಏನು ಮಾಡಿದಳು -

"ಮಗನ ಮಾತನು ಕೇಳುತ ಗೋಪಿದೇವಿ
ಮುಗುಳು ನಗೆಯ ನಗುತ
ಜಗದೊಡೆಯನ ಶ್ರೀ ಪುರಂದರ ವಿಠಲನ
ಬಿಗಿದಪ್ಪಿಕೊಂಡಳು ಮೋಹದಿಂದಲಾಗ"

ಯಶೋದೆಗೆ ತನ್ನ ಮಗ ದೇವರೆಂದು ಗೊತ್ತಿತ್ತೇ? ನನಗಂತೂ ತಿಳಿಯದು. ಆದರೆ ನನ್ನ ಪ್ರಕಾರ ಇಲ್ಲಿ ಕೃಷ್ಣ ದೇವರೇ? ಅನ್ನುವುದು ಮುಖ್ಯವಲ್ಲ. ಅವಳು ಕೃಷ್ಣನನ್ನು "ಜಗದೊಡೆಯ" ಅನ್ನುವ ಕಾರಣಕ್ಕಾಗಿ "ಮೋಹದಿಂದ ಅಪ್ಪಿಕೊಂಡಿರಲಿಕ್ಕಿಲ್ಲ". ಅದು ಸಹಜ ಮಾತೃಪ್ರೇಮ. ಆ ವಾತ್ಸಲ್ಯಭರಿತ ಪ್ರೇಮದಿಂದಲೇ ಈ ಪದ್ಯ ಕೊನೆಗೊಳ್ಳುತ್ತದೆ.



ಅದ್ಭುತ ಪಾತ್ರವಾದ ಕೃಷ್ಣನನ್ನು ದೇವರ ಸ್ಥಾನದಿಂದ ಇಳಿಸಿ ಸಾಮಾನ್ಯ ಮನುಷ್ಯರ ತರಹ ನಿರೂಪಿಸಿದ ಕಾರಣದಿಂದಲೇ ನನಗೆ ಈ ಪದ್ಯ ಬಹಳ ಇಷ್ಟ. ತಾಯಿ-ಮಗನ ದಿವ್ಯ ಪ್ರೇಮವನ್ನು ವರ್ಣಿಸುವ ಇನ್ನೊಂದು ಸುಂದರ ಪದ್ಯ "ಆಡಿಸಿದಳೆಶೋದೆ". ಇಲ್ಲಿ ಕೃಷ್ಣನನ್ನು ದೇವರೆಂದೇ ದಾಸರು ನಿರೂಪಿಸಿದರೂ ಇದು ಯಾಮದೇ ತಾಯಿ ತನ್ನ ಮಗುವಿಗೆ ಹಾಡಿರಬಹುದಾದ ಪದ್ಯದಂತೆ ನನಗೆ ತೋರುತ್ತದೆ. ತಾಯಿಯ ಪ್ರೇಮಧಾರಯೆಯ ಸೊಬಗನ್ನು ವರ್ಣಿಸುವ ಈ ಪದ್ಯದೊಂದಿಗೆ ನನ್ನ ಇಂದಿನ ಮಾತನ್ನು ನಿಲ್ಲಿಸುತ್ತಿದ್ದೇನೆ.

"ಜಗದ್ದೋದ್ಧಾರನ ಆಡಿಸಿದಳೆಶೋದೆ

ಜಗದ್ದೋದ್ಧಾರನ ಮಗನೆಂದು ತಿಳಿಯುತ
ಸುಗುಣಾಂತರಂಗನ ಆಡಿಸಿದಳೆಶೋದೆ

ನಿಗಮಕೆ ಸಿಲುಕದ ಅಗಣಿತ ಮಹಿಮನ
ಮಗುಗಳ ಮಾಣಿಕ್ಯನ ಆಡಿಸಿದಳೆಶೋದೆ

ಅಣೋರಣೀಯನ ಮಹತೋಮಹೀಮನ
ಅಪ್ರಮೇಯನ ಆಡಿಸಿದಳೆಶೋದೆ

ಪರಮಪುರುಷನ ಪರವಾಸುದೇವನ
ಪುರಂದರ ವಿಠಲನ ಆಡಿಸಿದಳೆಶೋದೆ"

<u>**ಮಳೆಯ ನೆನಪು**</u>

Tuesday, July 04, 2006

ಮಳೆ ಬರ್ತಾನೇ ಇಲ್ವಲ್ಲೋ
ರಾಮಾ.....ರಾಮಾ.....||ಪ||

ಸ್ವಲ್ಪ ಮಳೆಯ ಬೇಗ ಕಳಿಸೋ
ರಾಮಾ.....ರಾಮಾ.....||ಅಪ||

ಅಕ್ಕಾ ಕೇಳೇ ನನ್ನ ಮಾತು
ಹೊಸತೊಂದು ಕೊಡೆಯ ಕೊಂಡೆ
ಮಳೆಯು ಬಾರದೆ ಕೊಡೆಯು ಕೂಡ
ಧೂಳು ಹಿಡಿದು ಕೂತಿತಯ್ಯೋ
ರಾಮಾ......ರಾಮಾ....||ಮಳೆ||

ಕಪ್ಪು ಮೋಡ ಮೇಲೆ ಕಲೆತು
ಮಳೆಯು ಬಂತು ಅನ್ನುವಾಗ
ಜೋರು ಗಾಳಿ ಅಲ್ಲಿ ಬೀಸಿ
ಮೋಡವೆಲ್ಲಾ ಚದುರಿತಯ್ಯೋ
ರಾಮಾ......ರಾಮಾ....||ಮಳೆ||

"ಅಯ್ಯೋ ದುರ್ವಿಧಿಯೇ! ದಾಸರ ಪದವೊಂದನ್ನು ಹೀಗೆ ತಿರುಚಿ ಬರೆಯುವ ಪ್ರಮೇಯ ಬಂತಲ್ಲಾ! ದೇಶವೆಲ್ಲಾ ಮಳೆ..ಮಳೆ..ಎಂ□ ರ್ಷಧಾರೆಯಲ್ಲಿ ಮಿಂದು ಪಾವನರಾಗುತ್ತಿರುವಾಗ ಬೆಂಗಳೂರಿನಲ್ಲಿ ನಾಮ ಮಳೆಯನ್ನು ಕಾಣಲು ಕಣ್ಣಿಗೆ ಎಣ್ಣೆ ಬಿಟ್ಟು ಕಾಯುವ ಪರಿಸ್ಥಿತಿ ಬಂದಿತಲ್ಲಾ. ಥೆ! ಬೆಂಗಳೂರೇ! ನೀನಿಷ್ಟು ಪಾಪಿಯೇ? ನಿನ್ನ ನೆಲವನ್ನು ತಂಪಿಸಲು ವರುಣನಿನ್ನೂ ಬರಲಿಲ್ಲವಲ್ಲಾ. ಮೆಜೆಸ್ಟಿಕ್ ಅಣ್ಣಮ್ಮ, ಸರ್ಕಲ್ ಮಾರಮ್ಮಾ, ಗಲ್ಲಿ ಗಲ್ಲಿಯ ದೇವರುಗಳೇ...ನಿಮಗಿನ್ನೂ ನಮ್ಮ ಮೇಲೆ ದಯೆ ಬಾರದೆ...ಅಕಟಕಟಾ ಬಾಂಬೆಯಲ್ಲಿ ಬಂದ ಮಳೆಯ ಒಂದು ಪಾಲಾದರೂ ನಮ್ಮಲ್ಲಿಗೆ ಬರಬಾರದೇ...ಬೆಂಗಳೂರಮ್ಮಾ....ನೋಡು... ನಿನ್ನ ಮಕ್ಕಳ ಪಾಪಕೂಪಕ್ಕೆ ಹೇಸಿ ಮಳೆರಾಯ ಇನ್ನೂ ಇಲ್ಲಿ ಬರುವ ಮಾತೆತ್ತುತ್ತಿಲ್ಲ....ಹಾ...."

ಟಿವಿಯಲ್ಲಿ ಮಳೆಯ ನರ್ತನ ನೋಡುತ್ತಿರುವ ಯಾವ ಬೆಂಗಳೂರನಿಗೂ ಹೀಗೇ ಅನ್ನಿಸುತ್ತಿರಬಹುದು. ಅದೂ ಕೊಡಗಿನಿಂದ ಬಂದ ನನ್ನಂತವನಿಗೆ

ಮಳೆ ಎಂ□ಣಂ
ನೆನೆಮದೆನ್ನ ಮನಂ
ಕೊಡಗು ದೇಶಮಂ

ಜನ ಕೊಡಗಿಗೆ ಯಾವಗಲೋ ಬಿಸಿಲುಗಾಲದಲ್ಲಿ ಹೋಗುತ್ತಾರೆ. ತಪ್ಪು. ಕೊಡಗನ್ನು ನೋಡಬೇಕಾದರೆ ಈಗ ಹೋಗಿ. ಮಳೆ ನೋಡಲು ಹೋಗಿ. ಅರೆ ಮಳೆಯನ್ನು ಏನು ನೋಡುದೆನ್ನಬೇಡಿ.

ಮಳೆ...ಅದೊಂದು ಧ್ಯಾನ. ಸುಮ್ಮನೆ ಕಣ್ಣುಮುಚ್ಚಿ ಮಳೆಯನ್ನು ನೆನೆಸಿಕೊಳ್ಳಿ. ಮಳೆಗೆ ತನ್ನದೇ ಶಾಂತತೆ ಇದೆ. ಅದಕ್ಕೊಂದು ಲಯವಿದೆ. ಆ ರಭಸದಲ್ಲೂ ಒಂದು ಸಮರಸವಿದೆ. ಸಿಡಿಲಿನಬ್ಬರದ ನಂತರ ಬರುವ ಮಳೆಯಲ್ಲಿ ಶಾಂತತೆಯಿದೆ.

ಮಳೆ...ತಂಪು. ಕಾದ ಮಣ್ಣಿಗೆ ಮಳೆ ತಂಪು ನೀಡುಮದರ ಜೊತೆಗೆ ಮನಸ್ಸಿಗೂ ವಿಶಿಷ್ಟ ತಂಪನೆರೆವ ಗುಣ ಮಳೆಗಿದೆ. ಮಳೆಯನ್ನು ನೋಡುತ್ತಿದ್ದರೆ ಕಣ್ಣಿಗೆ ತಂಪು, ಮಳೆಯ ನೆನಪೇ ಮನಸ್ಸಿಗೆ ತಂಪು.

ಮಳೆಯೆಂದರೆ.....ಕೊಡೆ, ರೈನ್ ಕೋಟ್, ಗಮ್ ಬೂಟ್, ಜರ್ಕಿನ್, ಸ್ವೆಟ್ಟರ್, ಟೊಪ್ಪಿ, ಮಫ□ಲ□ರ್□. ಮಳೆಯೆಂದರೆ ಒಣಗದ ಬಟ್ಟೆಗಳ ವಿಶಿಷ್ಟ ವಾಸನೆ. ಮಳೆಯೆಂದರೆ ಮಲಗಿದ ಸೂರ್ಯ, ಬರೇ ಕತ್ತಲು.

ಮಳೆಯೆಂದರೆ.... ಕೆಂಡದಲ್ಲಿ ಸುಟ್ಟ ಈರುಳ್ಳಿ, ಹಲಸಿನ ಬೀಜ. ಮಳೆಯೆಂದರೆ ಕುಕ್ಕಿನ ಮಾಂಬಳ, ಪೆಲಕ್ಕಾಯಿ ಹಪ್ಪಳ ಮತ್ತು ಉಂಡ್ಲುಗ.

ಮಳೆಯೆಂದರೆ... ಮನೆಯ ಹತ್ತಿರ ತುಂಬಿ ಹರಿಯುವ ಜಲಪಾತ, ಕೆಂಪಾಗುವ ಚಂರಂಡಿ. ಮಳೆಯೆಂದರೆ ಸೋರುವ ಮಾಡು, ಅದರ ಕೆಳಗೆ ಪಾತ್ರೆ.

ಮಳೆಯೆಂದರೆ....ಬಾಲ್ಯ, ವಿರಾಜಪೇಟೆ, ಮನೆ.

ಮಳೆಗಾಲ ಬಂತೆಂದು ಹೊಸ ಕೊಡೆ ಕೊಂಡು ಕಾಯುತ್ತಿದ್ದೇನೆ. ದಿನವೂ ಕಾಲೇಜಿಗೂ ತರುತ್ತಿದ್ದೇನೆ. ಬರದ ಮಳೆಗೆ ಕೊಡೆ ತರುವ ಹುಚ್ಚನೆಂದು ನನ್ನ ಜನ ಗುರುತಿಸುವ ಮುಂಚೆ, ನಮ್ಮೆಲ್ಲರ ಗಂಟಲು ಒಣಗುವ ಮುಂಚೆ, ನನ್ನ ಹೊಸ ಕೊಡೆ ತುಕ್ಕು ಹಿಡಿಯುವ ಮುಂಚೆ, ಮಳೆ ನಮ್ಮ ನೆನಪಾಗಿ ಮಾತ್ರ ಉಳಿಯುವ ಮುಂಚೆ - ನಮ್ಮ ನೆನಪು ಮಾಡಿಕೊಂಡು........ಬಾರಯ್ಯಾ ಮಳೆರಾಯ

# <u>ಥೋಟಾ ಫೋಟೋ</u>

Thursday, July 13, 2006

ಮೊನ್ನೆ exam ಹಾಲ್ ನಲ್ಲಿ hall ticket ಗಳಿಗೆ ಸಹಿ ಮಾಡುತ್ತಿರುವಾಗ ಅವಾಕ್ಕಾಗುವ ಪರಿಸ್ಥಿತಿ ಬಂತು. ಆಗಿದ್ದೇನೆಂದರೆ ಪರಿಚಯದ ಹುಡುಗಿಯೊಬ್ಬಳ hall ticket ನಲ್ಲಿನ ಫೋಟೋ ನನ್ನ ಗಮನ ಸೆಳೆಯಿತು. ನಾನು ತೀರಾ mordern ಅಂತ ತಿಳಿದುಕೊಂಡಿದ್ದ ಹುಡುಗಿ ಫೋಟೋದಲ್ಲಿ ತಲೆಗೆ ಎಣ್ಣೆ ಹಚ್ಚಿ, ನೀಟಾಗಿ ಎರಡು ಜಡೆ ಕಟ್ಟಿ, ಬೊಟ್ಟು ಕೂಡ ಇಟ್ಟುಕೊಂಡಿದ್ದಳು. "ಜನುಮದ ಜೋಡಿ" ಯ ಶಿಲ್ಪ ನಂತಿದ್ದ ಹುಡುಗಿ "ಕಲಾಸಿಪಾಳ್ಯ"ದ ರಕ್ಷಿತ ಆದ ಪರಿಯನ್ನು ಯೋಚಿಸುತ್ತಿರುವಾಗ "old photo sir" ಅಂತು ಹುಡುಗಿ. ಬಹುಶಃ ಅವಳಿಗೆ ನನ್ನ ಕುತೂಹಲ ಅರಿವಾಗಿರಬೇಕು.

ಅರೇ ಇವಳ್ಯಾಕೆ ಹಳೇ ಫೋಟೋವನ್ನೇ ಇಟ್ಟುಕೊಂಡಿದ್ದಾಳೆ? ಹೊಸದನ್ನು ಯಾಕೆ ತೆಗೆಸಬಾರದು ಅಂದುಕೊಳ್ಳುತ್ತಿರುವಾಗು ಫೋಟೋ ಪುರಾಣ ಸ್ವಲ್ಪ ಸ್ವಲ್ಪವೇ ನನ್ನ ತಲೆಗೆ ಹೊಳೆಯತೊಡಗಿತು. ಅದನ್ನೇ ಇಲ್ಲಿ "ಬರಹ"ಕ್ಕೆ ಇಳಿಸುತ್ತಿದ್ದೇನೆ.

ಒಂದು ಕಾಲವಿತ್ತು. ಆಗ ಫೋಟೋ ತೆಗೆಯಲು studio ಗೇ ಹೋಗಬೇಕಿತ್ತು. ಅದೊಂದು ಸಂಭ್ರಮ, ಅದಕ್ಕೊಂದು ಕಾರಣ ಇದ್ದೇ ಇರುತ್ತಿತ್ತು. ಮಗು ಕವುಚಿ ಬಿದ್ದ ನಂತರ ಒಂದು ಫೋಟೋ, ಸರಿಯಾಗಿ ನಿಂತು ನಡೆಯಲು ಕಲಿತ ನಂತರ ಒಂದು, ಹೈಸ್ಕೂಲಿನಲ್ಲಿ ಗೆಳೆಯರ ಜೊತೆಯಲ್ಲಿ ಮತ್ತೊಂದು. ಇಲ್ಲಿಗೆ ಫೋಟೋಗಳ ನಂಟು ಮುಗಿಯಿತು. ಮಧ್ಯೆ ಬಹುಮಾನ ಬಂದಾಗ, ನಾಟಕದಲ್ಲಿ ಪಾತ್ರ ಮಾಡಿದಾಗ ಮಾತ್ರ ಫೋಟೋದ ಭಾಗ್ಯ.

ದಂಡಿಯಾಗಿ ಒಬ್ಬ ಮನುಷ್ಯ ಫೋಟೋ ತೆಗೆಸಿಕೊಳ್ಳುತ್ತಿದ್ದದ್ದು ಅವನ ಮದುವೆಯಲ್ಲಿ ಮಾತ್ರ ಅಂತ ಕಾಣುತ್ತದೆ. ಮತ್ತೆ ಮನೆಯಲ್ಲಿ ಪೂಜೆ, ಉಪನಯನ, ನಾಮಕರಣ ಮುಂತಾದ ಕಾರ್ಯಕ್ರಮಗಳಿಗೆ ಫೋಟೋ ತೆಗೆಯುವ ಪದ್ಧತಿ ತೀರಾ ಇತ್ತೀಚಿನ ಬೆಳವಣಿಗೆ. ಕೇವಲ ಸ್ಟುಡಿಯೋದ "ಕ್ಲಿಕ್ ಮಾಮ" ನಿಗೆ ಸೀಮಿತವಾಗಿದ್ದ ಕ್ಯಾಮೆರಾ ಕಾಳ-ಬೋರ ನಂತವರ ಕೈಗೆ ಬಂದ ಮೇಲೆ ಫೋಟೋ ತೆಗೆಯುವ ನಿಯಮಗಳೇ ಬದಲಾಗಿವೆ.

ತೀರಾ ಇತ್ತೀಚೆಗಂತೂ digital camera ಗಳ ಬಳಕೆಯಿಂದ photo roll ಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಮೊನ್ನೆ ಒಬ್ಬರ ಮನೆಯಲ್ಲಿ ಹೀಗೇ ಅವರ ಮಗನ ಮದುವೆಯ ಫೋಟೋವನ್ನು ಆಲ್ಬಮ್ ನಲ್ಲಿ ಅಲ್ಲ ಟಿವಿಯಲ್ಲಿ ನೋಡಿದೆವು. ಸುಮ್ಮನೆ ಭಾರದ ಆಲ್ಬಮ್ ಯಾಕೆ ಅಂತ ಡಿಜಿಟಲ್ ಫೋಟೋ ತೆಗೆಸಿ ಸಿಡಿ ಮಾಡಿಟ್ಟುಕೊಂಡಿದ್ದರು ಅವರು. ಅದು ಬಿಡಿ ಸತ್ತವರ ಫೋಟೋವನ್ನು (ಕೆಲವು ಸಲ ವೀಡಿಯೋ) ತೆಗೆಯುವುದು ಲೇಟೆಸ್ಟ್ ಸುದ್ದಿ. (ಅನಂತಮೂರ್ತಿ ಅವರೂ ಇದರ ಬಗ್ಗೆ ಬರೆದಿದ್ದಾರೆ)

ಆದರೆ ಇಷ್ಟೆಲ್ಲಾ ಆದರೂ ನಾವು ಸ್ಟುಡಿಯೋಗೆ ಹೋಗುವುದನ್ನು ಬಿಡಲಿಲ್ಲ. ಯಾಕೆ ಅಂತೀರಾ? ಅದೇ ಅದೊಂದು ಫೋಟೋ ಇದೆಯಲ್ಲಾ ನಾವು ತೆಗೆಯಲಾರದಂತದು - passport photo ! ಯಾವುದೇ ಡಿಜಿಟಲ್ ಕ್ಯಾಮೆರಾದ ಕೈಗೂ ಸಿಗದೇ ಇನ್ನೂ "ಕ್ಲಿಕ್ ಮಾಮ" ನ ಕಾರುಬಾರಿನಲ್ಲಿಯೇ ಇರುವ ಇದರ ಮಹಿಮೆ ಏನೆನ್ನಲಿ. ನಮ್ಮ ಎಷ್ಟೇ ಫೋಟೋಗಳು ಆಲ್ಬಮ್ ನಲ್ಲಿದ್ದರೂ ನಮ್ಮ ಎಲ್ಲಾ ಕೆಲಸಕ್ಕೆ ಆಗಿಬರುವುದು ಈ ಅಂಗೈಯಗಲದ ಫೋಟೋವೇ. ಗಮ್ಮತ್ತೆಂದರೆ ನಮ್ಮೆಲ್ಲರನ್ನು ಒಂದು ರೀತಿಯಲ್ಲಿ ಸಮಾನರನ್ನಾಗಿಸುವಲ್ಲಿ ಈ ಥೋಟಾ ಫೋಟೋದ ಪಾತ್ರ ದೊಡ್ಡದು.

ಬೇಕಾದರೆ ಒಂದಿಪ್ಪತ್ತು passport photo ಗಳನ್ನು ಮುಂದಿಟ್ಟುಕೊಂಡು ನೋಡಿ. ನಿಮಗೆ ಅದರಲ್ಲಿ ಶ್ರೀಮಂತ ಯಾರು, ಅವರ ಎತ್ತರ ಎಷ್ಟು - ಒಂದೂ ತಿಳಿಯುವುದಿಲ್ಲ. ಥೋಟಾ ಫೋಟೋದ ಮಹಿಮೆಯೇ ಅದು. ಅದರಲ್ಲಿ ಎಲ್ಲರೂ ಒಂದೆ ರೀತಿ ಕಾಣುತ್ತಾರೆ. ಜಯಂತ್ ಕಾಯ್ಕಿಣಿಗಂತೂ ಥೋಟಾ ಫೋಟೋದಲ್ಲಿ ಎಲ್ಲರೂ ಕಳ್ಳರಂತೆ ಕಾಣುತ್ತಾರಂತೆ (ಅಂಗೈಯಲ್ಲಿ ಮಳೆ)

ಈ ಥೋಟಾ ಫೋಟೋ ಸೇರಿ ಎಲ್ಲಾ ರೀತಿಯ ಫೋಟೋಗಳಿಗೂ ಕನ್ನಡದಲ್ಲಿ "ಭಾವ ಚಿತ್ರ" ಅನ್ನು ವುದು ಸರಿಯಷ್ಟೇ. ಆದರೆ ಥೋಟಾ ಫೋಟೋ ಕ್ಕೆ ಮಾತ್ರ ಈ ಪದ ಸರಿಹೊಂದುವುದಿಲ್ಲ ಎಂ[illegible] ನ್ನ ಭಾವನೆ . ನನಗಂತೂ ಥೋಟಾ ಫೋಟೋದಲ್ಲಿ ಯಾವ "ಭಾವ" ಗಳೂ ಕಾಣುವುದಿಲ್ಲ. ಬಹಳ ಯೋಚಿಸಿದ ಮೇಲೂ ನನಗೆ ಸ್ಟುಡಿಯೋದಲ್ಲಿ ಥೋಟಾ ಫೋಟೋ ತೆಗೆಸುವಾಗ smile please ಅಂತ ಕೇಳಿದ್ದು ನೆನಪಿಗೆ ಬರುತ್ತಿಲ್ಲ. ಬಹುಶಃ ಕೇವಲ ಮುಖ ಮಾತ್ರ ನಮ್ಮನ್ನೇ ಕಕ್ಕರಿಸಿಕೊಂಡು ನೋಡುವ ಥೋಟಾ ಫೋಟೋ ದಲ್ಲಿ ಭಾವನೆಗಳನ್ನು ಹುಡುಕುವುದು ಕಷ್ಟ.

ಅಲ್ಲಾ ಐಶ್ವರ್ಯಾ ರೈ ನಂತವರು ನಮ್ಮ ತರಾನೇ ಫೋಟಾ ಫೋಟೋ ತೆಗೆಸಿಕೊಳ್ಳುತ್ತಾರಾ? ಹಾಗೇನಾದರೂ ಆದರೆ ಅವಳೂ ಫೋಟಾ ಫೋಟೋ ದಲ್ಲಿ ಸುಂದವಾಗೇನೂ ಕಾಣಿಸಲಿಕ್ಕಿಲ್ಲ. ಈ ಲಕ್ಷ ಲಕ್ಷ ತೆಗೆದುಕೊಳ್ಳುವ ಫ್ಯಾಷನ್ "ಕ್ಲಿಕ್ ಮಾಮಂದಿರು" ಫೋಟಾ ಫೋಟೋವನ್ನೂ ತೆಗೆಯುತ್ತಾರಾಂತ? ಐಶ್ವರ್ಯಾನಂತವರು ಅವರ ಬಳಿಯೇ ಫೋಟಾ ಫೋಟೋ ತೆಗೆಸುತ್ತಾಳಾಂತ?

ಇರಲಿ ಅಸಲಿ ವಿಷಯವನ್ನೇ ಮರೆತುಬಿಟ್ಟೆ. ಪರೀಕ್ಷೆ ಬರೆಯುತ್ತಿದ್ದ ಹುಡುಗಿ ತನ್ನ ಹಳೇ ಫೋಟೋವನ್ನೇ ಯಾಕೆ ಇಟ್ಟುಕೊಂಡಿದ್ದಾಳೆ ಅಂತ ತಾನೆ ಈ ಬರಹ ಪ್ರಾರಂಭವಾದದ್ದು? ಅದಕ್ಕೆ ಉತ್ತರ ನಿಮಗೆ ಗೊತ್ತಿಲ್ಲದೇ ಇಲ್ಲ. ಈ ಫೋಟಾ ಫೋಟೋಗಳು ಈಗೀಗ ಬೇರೆ ಬೇರೆ ನಮೂನೆಯಲ್ಲಿ ಬರುತ್ತದೆ. ನಿಮಗೆ ನಾಲ್ಕು ಫೋಟಾ ಫೋಟೋ ಬೇಕಾದರೆ ಅಷ್ಟು ನಿಮಗೆ ಸಿಗುವುದಿಲ್ಲ. ಬೇಕಾದರೆ ೨೦, ೫೦, ೧೦೦ - ಹೀಗೆ ಹೋಲ್ ಸೇಲಾಗಿಯೇ ಫೋಟಾ ಫೋಟೋವನ್ನು ಈಗೀಗ ಮಾರುತ್ತಾರೆ.

ಅಲ್ಲಾ ಇಷ್ಟೊಂದು ಫೋಟೋವನ್ನು ಏನು ಮಾಡುವುದು? ಇದೆ ಅಂತ ಎಲ್ಲರಿಗೂ ಹಂಚಲಿಕ್ಕಂತೂ ಆಗುವುದಿಲ್ಲ. ಹಾಗಾಗಿ ಸೆಕೆಂಡ್ ಪಿಯುಸಿ ಪರೀಕ್ಷೆಗೆ ಅಂತ ತೆಗಿಸಿಕೊಂಡ ಫೋಟೋ ಇಂಜಿನಿಯರಿಂಗ್ ಮುಗಿಯುವವರೆಗೂ ಬರುತ್ತದೆ. ನೀವು ಉದ್ದ ಕೂದಲನ್ನು ಮೊಟಕಿಸಿ, ಅದಕ್ಕೆ ಬಗೆಬಗೆಯ ಕಲರ್ ಹಾಕಿಕೊಂಡರೂ , ಅಮ್ಮ ತೆಂಗಿನೆಣ್ಣೆ ಹಾಕಿ ಕಟ್ಟಿದ ಜಡೆಗಳೆರಡು ನಿಮ್ಮನ್ನು ನೋಡಿ ನಗಾಡುತ್ತಲೇ ಇರುತ್ತದೆ - ಆ ಫೋಟಾ ಫೋಟೋದಲ್ಲಿ.

# <u>ಪರೀಕ್ಷೆ - ಒಂದು "ಸಣ್ಣ" ಕತೆ</u>

Sunday, July 16, 2006

"ಅಬ್ಬಬ್ಬಾ ಈ ಜನಗಳು ಎಲ್ಲೆಲ್ಲಿ ಇಂಜಿನಿಯರಿಂಗ್ ಕಾಲೇಜುಗಳನ್ನು ಕಟ್ಟುತ್ತಾರಪ್ಪಾ" ಅಂತ ಯೋಚಿಸುತ್ತಾ ಆಟೋದ ಮೀಟರನ್ನೇ ನೋಡುತ್ತಿದ್ದೆ. ಅದು ಆಗಲೇ ೪೦ ರೂಪಾಯಿ ತೋರಿಸುತ್ತಿತ್ತು. "ಬಸ್ ಸ್ಟಾಪಿನಿಂದ ಸ್ವಲ್ಪನೇ ದೂರ ಸಾರ್" ಅಂತ ಹಿಂದಿನ ದಿನ ಆ ಕಾಲೇಜಿನ ಆಫೀಸಿನವ ಹೇಳಿದ್ದು ನೆನಪಿಗೆ ಬಂತು. ಆ ಸ್ವಲ್ಪ ದೂರ ೪೦ ರುಪಾಯಿಯಷ್ಟಿರಬಹುದೆಂದು ನನಗೇನು ಕನಸು ಬಿದ್ದಿತ್ತಾ? ಮನೆಯಿಂದ ಹೊರಟು ಆಗಲೇ ೨ ಬಸ್ ಹತ್ತಿ ಇಲ್ಲಿಯತನಕ ತಲುಪಿದ್ದೆ. ಈಗ ಮತ್ತೆ ಅರ್ಧ ಗಂಟೆಯಿಂದ ಆಟೋ ಪ್ರಯಾಣ. ಈ ಕಾಲೇಜಿಗೆ ಹುಡುಗರಾದರೂ ಹೇಗೆ ಬರ್ತಾರಪ್ಪಾ ಅಂತ ಯೋಚಿಸುತ್ತಿರುವಾಗ ಕಾಲೇಜಿನ ಮುಖ್ಯ ದ್ವಾರ ಕಾಣಿಸಿತು.

ಒಳ್ಳೇ ಮಸ್ತಾಗಿಯೇ ಕಾಣಿಸ್ತಾ ಇತ್ತು ಕಟ್ಟಡಗಳು. ಈಗೆಲ್ಲಾ ಕಾಲೇಜುಗಳು ಹಾಗೇನೇ. ಹೊರಗಿನಿಂದ ತುಂಬಾ ಚಿನ್ನಾಗಿರ್ತಾವೆ. ಒಳಗಡೆಯ ಮೇಷ್ಟರುಗಳು, ಅವರಿಗೆ ಸಿಗುವ ಹುಡುಗರೋ ದೇವರಿಗೇ ಪ್ರೀತಿ. ಈ ಕಾಲೇಜೂ ಇತ್ತೀಚೆಗಷ್ಟೇ ಶುರುವಾಗಿತ್ತು. ಎಲ್ಲಾ ಹೊಸ ಕಾಲೇಜುಗಳಲ್ಲಿ ಇರುವಂತೆ ಇಲ್ಲೂ ಹುಡುಗರಿಗೆ ಪರೀಕ್ಷೆಗಳಲ್ಲಿ ಮೇಷ್ಟರುಗಳೇ ಹೇಳಿಕೊಡುತ್ತಾರೆಂಬ ಸುದ್ದಿ ಇತ್ತು. ಪಾಪ ಅವರಾದರೂ ಏನು ಮಾಡಿಯಾರು. ಎಷ್ಟು ಹೇಳಿಕೊಟ್ಟರೂ ಕಲಿಯದ ಹುಡುಗರು, ಹೆಚ್ಚು ಮಂದಿ ಫೇಲಾದರೆ ತಲೆತಿನ್ನುವ ಮ್ಯಾನೇಜಮೆಂಟ್ - ಇವರ ಮಧ್ಯೆ ಮೇಷ್ಟರುಗಳ ಗೋಳು ಕೇಳುವವರೇ ಇಲ್ಲ.

"ಕಂಪ್ಯೂಟರ್ ಡಿಪಾರ್ಟಮೆಂಟ್ ಎಲ್ಲಪ್ಪಾ" ದಾರಿಯಲ್ಲಿ ಸಿಕ್ಕಿದ ಹುಡುಗನೊಬ್ಬನ ಕೇಳಿದಾಗ ಮೂಲೆಯ ಕಟ್ಟಡವೊಂದನ್ನು ತೋರಿಸಿದ. ಇವತ್ತು ನನ್ನನ್ನು ಇಲ್ಲಿ ಲ್ಯಾಬ್ ಪರೀಕ್ಷಕನಾಗಿ ಕಳಿಸಲಾಗಿತ್ತು. "ಸ್ವಲ್ಪ ಹುಷಾರಗಿರೀ, ಆ ಕಾಲೇಜಿಗೆ ಒಳ್ಳೇ ಹೆಸರಿಲ್ಲ" ಅಂತ ಹೆಚ್.ಒ.ಡಿ ನನಗೆ ಹೇಳಿ ಕಳುಹಿಸಿದ್ದರು. ಏನಾದರೂ ಆಗಲಿ ತುಂಬಾ ಸ್ಟ್ರಿಕ್ಟ್ ಆಗಿ ಇರಬೇಕೂಂತ ಯೋಚಿಸುತ್ತಾ ಕಂಪ್ಯೂಟರ್ ಲ್ಯಾಬ್ ನ ಕಡೆಗೆ ಹೆಜ್ಜೆ ಹಾಕಿದೆ.

ಲೇಟಾಗಿದ್ದರಿಂದ ಹುಡುಗರೆಲ್ಲಾ ಹೊರಗೆ ನಿಂತು ಕಾಯುತ್ತಿದ್ದರು. ಸೀದಾ ಲ್ಯಾಬ್ ನೊಳಗೆ ಹೋಗಿ ಗುರುತಿನ ಚೀಟಿ ತೋರಿಸಿ ಹುಡುಗರನೆಲ್ಲಾ ಒಳ ಬಿಡಲು ಹೇಳಿದೆ. "ಸಾರ್ ತುಂಬಾ ದೂರದಿಂದ ಬಂದಿದ್ದೀರಾ..ತಿಂಡಿ ತಿಂದು ಶುರು ಮಾಡಬಹುದಲ್ಲಾ" ಅಂತ ಲ್ಯಾಬ್ ನ ಸಹಾಯಕ ಕೇಳಿದ. ಎಕ್ಸಾಮಿನರ್ ನನ್ನು ತಿಂಡಿಗೆ ಕೂರಿಸಿ ಹುಡುಗರಿಗೆ ಬೇಕಾದ ಪ್ರೋಗ್ರಾಂ ಕೊಡುವುದು ನನಗೆ ತಿಳಿಯದ ವಿಷಯವೇನಲ್ಲ. ಅದಕ್ಕೆ "□□□□, ಹುಡುಗರಿಗೆ ಪ್ರೋಗ್ರಾಂ ಕೊಟ್ಟೇ ತಿಂಡಿ ತಿನ್ನುತ್ತೇನೆ. ಮತ್ತೆ ತಿಂಡಿ ಇಲ್ಲಿಗೇ ತರಿಸಿ" ಅಂದೆ.

ಹುಡುಗರೆಲ್ಲಾ ಪ್ರೋಗ್ರಾಂ ಬರೆಯುತ್ತಿರುವಾಗ ಅಟೆಂಡರ್ ತಿಂಡಿ ತಂದ. ಸಾಮಾನ್ಯವಾಗಿ ಯೂನಿವರ್ಸಿಟಿ ಕೊಡುವ ದುಡ್ಡಲ್ಲಿ ಇಡ್ಲಿ ವಡೆಯಷ್ಟೇ ಬರುತ್ತದೆ. ಆದರೆ ಇಲ್ಲಿ ಎರಡು ಬಗೆಯ ತಿಂಡಿ, ಒಂದು ಸ್ವೀಟು ನೋಡಿ ಇದೂ ಎಕ್ಸಾಮಿನರ್ ನನ್ನು ಪಟಾಯಿಸುವ ತಂತ್ರವಿರಬಹುದೆಂದು ಅಂದುಕೊಂಡೆ. ತಿಂಡಿ ಮುಗಿಸಿ ಕಾಫಿ ಕುಡಿಯುತ್ತಿರುವಾಗ ಯಾರೋ ಲ್ಯಾಬ್ ಗೆ ಬಂದರು. ಬಂದ ಹೆಣ್ಣುಮಗಳನ್ನು ಅಟೆಂಡರ್ ನನ್ನ ಬಳಿ ಕರೆದುಕೊಂಡು ಬಂದ.

"ಸಾರ್ ಇವರು ....ಮ್ಯಾಡಂ ಅಂತ" ಅಟೆಂಡರ್ ಪರಿಚಯ ಮಾಡಿಸಿದ. ಮ್ಯಾಡಂ ಜೊತೆ ಸ್ವಲ್ಪ ಹೊತ್ತು ಮಾತುಕತೆ ನಡೆಯಿತು. ಅದೇ ಹುಡುಗರ ಆಲಸ್ಯ, ಕಮ್ಮಿಯೆನಿಸುತ್ತಿರುವ ಸಂಬಳ ಎಲ್ಲಾ ಮಾತಾಡಿದ ಮೇಲೆ "ಸಾರ್ ಒಂದು ವಿಷಯ ಇತ್ತು" ಅಂದರು ಮ್ಯಾಡಂ. ನನಗೂ ಗೊತ್ತಿತ್ತು ಏನೋ ಇದೆ ಅಂತ. "ಸಾರ್ ಈ ಲ್ಯಾಬ್ ನಾನೇ ಮಾಡಿದ್ದು" ಪೀಠಿಕೆ ಶುರುವಾಯ್ತು. ಮುಂದಿನದು ನಾನೇ ಗೆಸ್ ಮಾಡಲು ಆರಂಭಿಸಿದೆ. ಹುಡುಗರೇನೂ ಅಷ್ಟು ಹುಷಾರಿಲ್ಲ. ಸ್ವಲ್ಪ ನೋಡ್ಕೊಳ್ಳಿ.ಇತ್ಯಾದಿ.

ಆದರೆ ಮ್ಯಾಡಂ ಹೀಗೇನೂ ಹೇಳಲಿಲ್ಲ. ಅವರ ಮಾತು ವಿಚಿತ್ರವಾಗಿತ್ತು. ಸಾಮಾನ್ಯವಾಗಿ ಪಾಸ್ ಮಾಡಲು ಹೇಳುವುದು ವಾಡಿಕೆ. ಆದರೆ ಇಲ್ಲಿ ಫೇಲ್ ಮಾಡಲು ಇನಫ್ಲುಯೆನ್ಸ್ ಮಾಡುತ್ತಿದ್ದರು ಮ್ಯಾಡಂ. "ಸಾರ್ ಮಧ್ಯಾಹ್ನ ಬ್ಯಾಚ್ ನಲ್ಲಿ ಬರ್ತಾಳೆ ಸಾರ್ ಆ ಹುಡುಗಿ. ಹೆಸರು....ಬರೇ ತರ್ಲೆ ಹುಡುಗಿ ಸಾರ್..ಒಂದೇ ಒಂದು ಲ್ಯಾಬ್ ಗೆ ಬಂದಿಲ್ಲ. ಅಟೆಂಡೆನ್ಸ್ ಇರಲೇ ಇಲ್ಲ. ಆದರೂ ಪ್ರಿನ್ಸಿಪಾಲ್ ಗೆ ಅದೇನು ಮೋಡಿ ಮಾಡಿದ್ದಾಳೋ...ಪ್ರತೀ ಸೆಮಿಸ್ಟರ್ ಅಟೆಂಡೆನ್ಸ್ ಕೊಟ್ಟುಬಿಡುತ್ತಾರೆ".

ಅರೇ ಇದೊಳ್ಳೇ ವಿಚಿತ್ರವಾಯಿತಲ್ಲಾ. ವಿನಾ ಕಾರಣ ಫೇಲ್ ಮಾಡೋದು ಹೇಗಪ್ಪಾ ಅಂತ ಯೋಚಿಸಿದೆ. "ನೋಡಿ ಮ್ಯಾಡಂ...ಸುಮ್ಮನೇ ಫೇಲ್ ಮಾಡಲು ಆಗುವುದಿಲ್ಲ. ಅದು ನಿಮಗೂ ಗೊತ್ತು. ಆ ಹುಡುಗಿ ಪ್ರೋಗ್ರಾಂ ಮಾಡದೇ

ಇದ್ದರೆ ಖಂಡಿತ ಫೇಲ್ ಆಗುತ್ತಾಳೆ ಬಿಡಿ" ಅಂತ ಸಮಜಾಯಿಕೆ ನೀಡಿದೆ. "ಸಾರ್ ನಿಮಗೆ ಗೊತ್ತಿಲ್ಲ..ಆ ಹುಡುಗಿ ಎಂಥವರನ್ನೂ ಇಡಿ ಮಾಡಿಬಿಡುತ್ತಾಳೆ . ಅವಳನ್ನು ಪಾಸ್ ಮಾಡಿದರೆ ನಮ್ಮ ಟೀಚಿಂಗ್ ಕುಲಕ್ಕೇ ಅವಮಾನ ಸಾರ್" ಅಂತ ಬಾಂಬ್ ಹಾಕಿದರು. ಇರಲಿ ನೋಡಿಕೊಳ್ಳೋಣ ಅಂದುಕೊಂಡು ಬೇರೆ ವಿಚಾರ ಮಾತಾಡಿದೆವು.

ಆದರೂ ಮ್ಯಾಡಂಗೆ ಸಮಾಧಾನವೇ ಇಲ್ಲ. ಆ ಹುಡುಗಿ ಹೇಗೆ ಕ್ಲಾಸಿಗೆ ತಪ್ಪಿಸಿ ಹುಡುಗರೊಂದಿಗೆ ಸುತ್ತುತ್ತಿರುತ್ತಾಳೆ, ಕೇಳಿದರೆ ಹೇಗೆ ಎದುರು ಉತ್ತರ ನೀಡುತ್ತಾಳೆ ಅಂತ ವಿವರಿಸುತ್ತಲೇ ಹೋದರು. "ಸಾರ್ ಇವತ್ತು ಶನಿವಾರ. ಮಧ್ಯಾಹ್ನ ನಾನು ಇರುವುದಿಲ್ಲ. ಆದರೂ ನೀವು ನನ್ನ ಮಾತು ನೆನಪಲ್ಲಿ ಇಟ್ಟುಕೊಳ್ಳಿ" ಅಂತ ಹೇಳಿ ಹೋದರು. ಏಷ್ಟಾದರೂ ಮಧ್ಯಾಹ್ನದ ಬ್ಯಾಚ್ ಅಲ್ಲವಾ, ನೋಡಿಕೊಂಡರಾಯ್ತು ಅಂತ ಹುಡುಗರೆಡೆಗೆ ಗಮನಹರಿಸಿದೆ.

ಮೊದಲ ಬ್ಯಾಚ್ ಸುಮಾರಾಗಿಯೇ ಸಾಗುತ್ತಿತ್ತು. ಅರ್ಧದಷ್ಟು ಹುಡುಗರಿಗೆ ತಾವು ಮಾಡುತ್ತಿದ್ದ ಪ್ರೋಗ್ರಾಂನ ತಲೆಬುಡವೇ ಗೊತ್ತಿರಲಿಲ್ಲ. ಅಟೆಂಡರ್ ಹುಡುಗರಿಗೆ ಸಹಾಯ ಮಾಡುವ ಸಾಧ್ಯತೆಗಳು ಇದ್ದಿದ್ದರಿಂದ ಅವನನ್ನು ಹುಡುಗರ ಬಳಿ ಹೋಗಲು ಬಿಡಲಲ್ಲ. ಅಂತೂ ಫೇಲ್ ಮಾಡಬೇಕೆಂದರೆ ಇಡೀ ಬ್ಯಾಚನ್ನೇ ಫೇಲ್ ಮಾಡಬಹುದಾಗಿತ್ತು. ಈ ಹುಡುಗರ ಹಣೆಬರಹವೇ ಇಷ್ಟು ಅಂತ ಅಂದುಕೊಂಡು ಅರೆ ಬರೆ ಪ್ರೋಗ್ರಾಂ ಮಾಡಿದವರನ್ನೂ ಪಾಸ್ ಮಾಡಿ ಊಟ ಮಾಡಲು ಹೋದೆ.

ಸರಿ ಮಧ್ಯಾಹ್ನದ ಬ್ಯಾಚ್ ನ ಹುಡುಗರು ಬಂದಿದ್ದರಿಂದ ಲ್ಯಾಬ್ ಶುರು ಮಾಡೆದೆವು. ಬೇಡ ಬೇಡವೆಂದರೂ ಆ ಹುಡುಗಿ ಪ್ರೋಗ್ರಾಂ ನ ಚೀಟಿ ಎತ್ತಲು ಬಂದಾಗ ಹೆಚ್ಚು ಜಾಗ್ರತೆ ವಹಿಸಿದೆ. ಸ್ವಲ್ಪ ಕಷ್ಟವೆನಿಸಿಕೊಂಡ ಪ್ರೋಗ್ರಾಂ ಆಗಿತ್ತು ಅದು. ಯಾಕೋ ಇದ್ದಕಿದ್ದಂತೆ "ಚೇಂಜ್ ಮಾಡಲಾ. ಈ ಪ್ರೋಗ್ರಾಂ ಕಷ್ಟವಿದೆ. ಆದರೆ ೨೦ ಮಾರ್ಕ್ಸ್ ಕಡಿಮೆಯಾಗುತ್ತದೆ" ಅಂದೆ. ಅದರೆ ಹುಡುಗಿ ಗಂಭೀರವಾಗಿ "ಇಲ್ಲಾ ಸಾರ್..ಇದೇ ಪ್ರೋಗ್ರಾಂ ಮಾಡುತ್ತೇನೆ" ಅಂದಳು. ಪರವಾಗಿಲ್ಲ ಹುಡುಗಿ ಅಂದುಕೊಂಡೆ.

ಹುಡುಗಿ ಪ್ರೋಗ್ರಾಂ ಬರೆದು ತಂದು ತೋರಿಸಿದಳು. ಸುಮಾರಿಗೆ ಬರೇ ಮುಖ್ಯ ಭಾಗಗಳನ್ನು ಮಾತ್ರ ನೋಡುವ ನಾನು ಇವಳ ಪ್ರೋಗ್ರಾಂ ಮೇಲಿಂದ ಕೆಳಗಿನವರೆಗೆ ಸೂಕ್ಷ್ಮವಾಗಿ ನೋಡಿದೆ. ಒಂದೂ ತಪ್ಪು ಕಣ್ಣಿಗೆ ಸಿಗಲಿಲ್ಲ. ಛೇ! ಅಂತ ಪುನಃ ಪ್ರೋಗ್ರಾಂನನ್ನು ಮೇಲಿನಿಂದ ಕೆಳಕ್ಕೆ ನೋಡಿದೆ. ಮತ್ತೆ ಮತ್ತೆ ನೋಡಿದರೆ ಅದೇನು ಬದಲಾಗುತ್ತಾ? ತೀರಾ ಸ್ಪಷ್ಟವಾದ ಅಕ್ಷರದಲ್ಲಿ ಬರೆದ ಸರಿಯಾದ ಲಾಜಿಕ್. ಪೇಪರ್ ವಾಪಸ್ ಕೊಡುವಾಗ ಹುಡುಗಿ ನನ್ನ ಪಾಡು ನೋಡಿ ನಗಾಡಿದಳೆಂದು ನನಗೆ ಮಾತ್ರ ಅನ್ನಿಸಿತೋ ಅಥವಾ ನಿಜವಾಗಿ ನಕ್ಕಳೋ ಹೇಳುವುದು ಕಷ್ಟ.

ಇದೇನು ಮ್ಯಾಡಂ ಹೇಳಿದ್ದು ಸುಳ್ಳಾ? ನನಗೆ ಯೋಚನೆಯಾಗತೊಡಗಿತು. ಕೆಲವೊಮ್ಮೆ ಹಾಗೆ ಆಗುತ್ತೆ. ಹುಡುಗರು ನಮಗಿಂತ ಬುದ್ಧಿವಂತರೆಂದು ನಮಗೆ ಗೊತ್ತಾದಾಗ ನಾವು ಎಲ್ಲೋ ಅವರ ವಿರುದ್ಧ ವೈರತ್ವ ಬೆಳೆಸಿಕೊಳ್ಳುತ್ತೇವೆ. ಅವರು ಲ್ಯಾಬ್ ಗೆ ಬರದೇನೇ ಎಲ್ಲಾ ಪ್ರೋಗ್ರಾಂ ಮಾಡಿದಾಗ, ಕ್ಲಾಸಿಗೆ ಬರದೇ ಒಳ್ಳೇ ಮಾರ್ಕ್ಸ್ ತೆಗೆದಾಗ ಸಣ್ಣದಾಗಿ ಹೊಟ್ಟೆಕಿಚ್ಚು ಆಗುವುದು ಸಹಜ. ದಡ್ಡ ಹುಡುಗರನ್ನು ನಿಭಾಯಿಸುವುದು ಒಂದು ರೀತಿಯಲ್ಲಿ ಸುಲಭ ಆದರೆ ಬುದ್ಧಿವಂತರನ್ನು ನಿಭಾಯೊಸುವುದು ಎಲ್ಲರಿಗೂ ಬರುವುದಿಲ್ಲ. ಬಹುಶಃ ಈ ಮೇಡಂ ಕೂಡ ಅಂತಹವರೇ ಇರಬಹುದೆಂದು ಅಂದುಕೊಂಡೆ.

"ಸಾರ್ ಪ್ರೋಗ್ರಾಂ ಆಯ್ತು" ಹುಡುಗಿ ಕೂಗಿದಳು. ಸರಿಯಾಗಿ ಬರೆದ ಪ್ರೋಗ್ರಾಂನ ರಿಸಲ್ಟ್ ನೋಡುವ ಕುತೂಹಲವೇನೂ ನನಗಿರಲಿಲ್ಲ. ಹಾಗಾಗಿ ರಿಸಲ್ಟ್ ನೋಡುವ ಬದಲು ಅವಳೊಬ್ಬಳನ್ನೇ ವೈವಾಗೆ ಕರೆದೆ. ಯಾವುದಕ್ಕೂ ಇರಲಿ ಅಂತ ಕಷ್ಟವೆನಿಸುವಂತಹ ಪ್ರಶ್ನೆಗಳನ್ನೇ ಕೇಳಿದೆ. ಸಮರ್ಪಕವಾದ ಉತ್ತರಗಳೇನೂ ಸಿಗಲಿಲ್ಲ. ಸಿಗುತ್ತದೆಯೆಂದು ನಾನು ಅಂದುಕೊಂಡಿರಲೂ ಇಲ್ಲ. ಯಾಕೆಂದರೆ ಆ ಪ್ರಶ್ನೆಗಳೇ ಹಾಗಿತ್ತು. ಹ್ಯಾಗಿದ್ದರೂ ಪ್ರೋಗ್ರಾಂ ಮಾಡಿದ್ದಾಳೆ. ಪಾಸ್ ಮಾಡುವುದು ಅನಿವಾರ್ಯವೆಂದುಕೊಂಡು ಸುಮ್ಮನೇ "ನೀವು ಬರೆದ ಪ್ರೋಗ್ರಾಂನ ಲಾಜಿಕ್ ಸ್ವಲ್ಪ ಹೇಳಿ" ಅಂತ ಕೇಳಿದೆ.

ಕಾಟಾಚಾರಕ್ಕೆಂದು ಕೇಳಿದ ಪ್ರಶ್ನೆ ಕಥೆಗೆ ಹೊಸ ತಿರುವು ಕೊಟ್ಟಿತು. ಚುರುಕಾಗಿ ಮಾತನಾಡುತ್ತಿದ್ದ ಹುಡುಗಿ ಲಾಜಿಕ್ ನ ಮುಖ್ಯ ಭಾಗವನ್ನು ಮೆತ್ತಗೆ ಹಾರಿಸುತ್ತಾ, ತೀರಾ ಸಾಮಾನ್ಯವಾಗಿ ಉತ್ತರ ನೀಡುತ್ತಿದ್ದಳು. ಜಾಣ ಹುಡುಗಿ ಅಂದುಕೊಂಡು ಮೆಲ್ಲಮೆಲ್ಲನೇ ಸೂಕ್ಷ್ಮವಾಗಿ ಪ್ರಶ್ನಿಸುತ್ತಾ ಹೋದಂತೆ ಹುಡುಗಿಯ ಟೊಳ್ಳುತನ ಬಯಲಾಗತೊಡಗಿತು. ಆ ಪ್ರೋಗ್ರಾಂ ಅವಳು ಬರೆದೇ ಇಲ್ಲವೆಂಬ ನನಗೆ ಸಂಶಯ ಬರತೊಡಗಿತು. ಆದರೆ ಅದನ್ನು ಸಾಧಿಸುವುದು ಹೇಗೆ. ಹುಡುಗಿ ಪ್ರೋಗ್ರಾಂ ಬೇರೆ ಮಾಡಿಯಾಗಿದೆ. ಫೇಲ್ ಮಾಡುವ ಪ್ರಶ್ನೆಯೇ ಇಲ್ಲ.

ಹುಡುಗಿಯನ್ನು ಸ್ವಲ್ಪ ಕಾಯುವಂತೆ ಹೇಳಿ ಯೋಚಿಸತೊಡಗಿದೆ. ಇವಳನ್ನು ಫೇಲ್ ಮಾಡಿದರೆ ನನನ್ನು ಕೇಳುವವಯ್ಯಾರೂ ಇರಲಿಲ್ಲ. ನಮ್ಮಲ್ಲಿ ಲ್ಯಾಬ್ ಪರೀಕ್ಷೆಗಳಿಗೆ ಎಕ್ಸಾಮಿನರ್ ಕೊಟ್ಟ ಮಾರ್ಕ್ಸ್ ಗಳನ್ನು ಯಾರೂ ಬದಲಾಯಿಸಲು ಬರುವುದಿಲ್ಲ. ಆದರೆ ಕಾರಣವಿಲ್ಲದೆ ಫೇಲ್ ಮಾಡುವುದು ನನಗೆ ಬೇಕಾಗಿರಲಿಲ್ಲ. ಮೇಲಾಗಿ ಅವಳು ಪ್ರೋಗ್ರಾಂ ಮಾಡಿದ್ದಳು. ಗೊತ್ತಿಲ್ಲದೇ ಪ್ರೋಗ್ರಾಂ ಬರೆದ್ದಾದರೂ ಹೇಗೆ? ಅವಳು ಪ್ರೋಗ್ರಾಂಗಳನ್ನು ಚೀಟಿಯಲ್ಲಿ ಬರೆದು ತಂದಿರಬೇಕು. ಅದರಿಂದಲೇ ಕಾಪಿ ಹೊಡೆದಿರಬೇಕು - ಅದೇ ಲಾಜಿಕಲ್ ಎಂಬ□ಧರ್ಮರಕ್ಕೆ ಬಂದೆ .

ಆದರೆ ಹೆಣ್ಣು ಹುಡುಗಿಯನ್ನು ಶೋಧಿಸುವ ಹಕ್ಕು ನನಗಿಲ್ಲ. ಏನು ಮಾಡೋಣ. ಕಾಲೇಜಿನಲ್ಲಿ ಯಾರಾದರೂ ಲೇಡಿ ಟೀಚರನ್ನು ಕರೆದು ಚೆಕ್ ಮಾಡಿಸೋಣ ಅಂತ ಯೋಚಿಸಿ ಅಟೆಂಡರ್ ಗೆ ಯಾರನ್ನಾದರೂ ಕರೆದುಕೊಂಡು ಬರಲು ಹೇಳಿದೆ. ವಾಪಸ್ ಬಂದ ಅಟೆಂಡರ್ ಶನಿವಾರ ಮಧ್ಯಾಹ್ನದ ಸಮಯವಾದ ಕಾರಣ ಯಾರೂ ಇಲ್ಲವೆಂದು ಹೇಳಿದ. ಅರೇ ಈಗೇನು ಮಾಡುವುದು. ಅವಳನ್ನು ಪಾಸ್ ಮಾಡಲು ಮನಸ್ಸಿಲ್ಲ. ಆದರೆ ಫೇಲ್ ಮಾಡಲು ಕಾರಣವಿಲ್ಲ. ಅದು ಬೇರೆ ಬೆಳಗ್ಗೆ ಮ್ಯಾಡಂ ಕೂಡ ಹುಡುಗಿಯ ಬಗ್ಗೆ ಕೆಟ್ಟ ರಿಪೋರ್ಟ್ ಕೊಟ್ಟಿದ್ದರು. ಏನು ಮಾಡೋದೆಂದು ಯೋಚಿಸುತ್ತಿದ್ದಾಗ ಒಂದು ಉಪಾಯ ಹೊಳೆಯಿತು.

ಅಟೆಂಡರ್ ನನ್ನು ಕರೆದು ಮೆಲ್ಲಗೇ ಏನೋ ಹೇಳಿದೆ. ಮತ್ತೆ ಅದೇ ಹುಡುಗಿಯನ್ನು ಕರೆದೆ. ಸಾಮಾನ್ಯವಾಗಿ ಒಮ್ಮೆ ವೈವ ಮುಗಿಸಿದ ಮೇಲೆ ಪುನಃ ಕರೆಯುವ ವಾಡಿಕೆಯಿಲ್ಲದ ಕಾರಣ ಎಲ್ಲರಿಗೂ ಆಶ್ಚರ್ಯವಾಗಿತ್ತು. ಆದರೆ ನಾನು ಪುನಃ ಕೆಲವು ಸರಳ ಪ್ರಶ್ನೆಗಳನ್ನು ಕೇಳಿ ಸುಮ್ಮನಾದೆ. ನಂತರ ಒಂದು ಚೀಟಿ ಅವಳಿಗೆ ಕೊಟ್ಟು ಈ ಇನ್ಪುಟ್ ಗೆ ರಿಸಲ್ಟ್ ತೋರಿಸಲು ಹೇಳಿದೆ. ಹೋಗುವಾಗ ಅವಳು ಬರೆದ ಪ್ರೋಗ್ರಾಂ ಅನ್ನು ನನ್ನ ಬಳಿಯೇ ಇಟ್ಟುಕೊಂಡೆ. ಮನಸ್ಸು ನಿರಾಳವಾಯಿತು.

ಲ್ಯಾಬ್ ನ ಸಮಯ ಮುಗಿಯುತ್ತಾ ಬಂತು. ಆದರೂ ಹುಡುಗಿ ರಿಸಲ್ಟ್ ಬಂತು ಅಂತ ಕೂಗಿಕೊಳ್ಳಲಿಲ್ಲ. ನಾನು ಇದನ್ನೇ ಎದುರು ನೋಡುತ್ತಿದ್ದೆ. ಹುಡುಗಿಯ ಹತ್ತಿರ ಹೋಗಿ "ಏನು ಇನ್ನೂ ರಿಸಲ್ಟ್ ಬರಲಿಲ್ಲ" ಅಂದೆ. "ಸಾರ್ ಆಗಲೇ ಬರ್ತಾ ಇತ್ತು. ಈಗ ಏನೋ ಬರ್ತಾ ಇಲ್ಲ." ಗೆಲುವಿನ ಛಾಯೆ ನನ್ನ ಮುಖದಲ್ಲಿ ಎದ್ದು ಕಾಣುತಿತ್ತು "ಪ್ರೋಗ್ರಾಂನ ರಿಸಲ್ಟ್ ತೋರಿಸದಿದ್ದರೆ ನಾನು ಪಾಸ್ ಮಾಡುವುದಿಲ್ಲ. ಸಾರಿ". ಅಂದೆ

ಹುಡುಗಿಯ ಮುಖ ಬಾಡತೊಡಗಿತು. "ಸಾರ್ ಸ್ವಲ್ಪ ಟೈಮ್ ಕೊಡಿ ಸಾರ್" ಹುಡುಗಿಯ ಸ್ವರ ಮೆಲ್ಲವಾಗತೊಡಗಿತು. "ಸಾಧ್ಯವಿಲ್ಲ. ಸಮಯ ಮುಗಿದಿದೆ. ನಾನೇನೂ ಮಾಡಕಾಗೊಲ್ಲ. ಬರುವ ಸಲ ಬಂದು ಲ್ಯಾಬ್ ಪರೀಕ್ಷೆ ತೆಗೊಳ್ಳಿ" ಅಂದೆ. ಹುಡುಗಿಯ ಕಣ್ಣಲ್ಲಿ ನೀರು ಬರತುಡಗಿತು. "ಸಾರ್ ಪ್ಲೀಸ್...ನಾನು ಪ್ರೋಗ್ರಾಂ ಮಾಡಿದ್ದೆ. ಈಗ ಏನೋ ಆಗಿದೆ. ಸಾರ್ ನನ್ನ ಪೇಪರ್ ಕೊಡಿ. ನೋಡಿ ಸರಿಮಾಡುತ್ತೇನೆ" ಅಂತ ರಾಗ ಶುರು ಮಾಡಿದಳು. "ಪ್ರೋಗ್ರಾಂ ಮಾಡಿದ್ದು ನೀನೇ ತಾನೇ...ಈಗ ತಪ್ಪನ್ನು ಸರಿಮಾಡು...ಇಲ್ಲದಿದ್ದರೆ ನೀನು ಫೈಲ್..ಅಷ್ಟೇ". ನನ್ನ ಸ್ವರ ಅಗತ್ಯಕ್ಕಿಂತ ಹೆಚ್ಚು ಜೋರಾಗತೊಡಗಿತು.

ಹುಡುಗಿ ಅಳುತ್ತಲೇ ಇದ್ದಳು. ನಾನು ನಿರ್ವಿಕಾರವಾಗಿ ಅವಳ ಪೇಪರ್ ಮೇಲೆ program not executed ಅಂತ ಬರೆದು ಫೇಲ್ ಮಾಡಿದೆ. ಅಟೆಂಡರ್ ಅವಳನ್ನು ಹೊರಗೆ ಕಳಿಸಲು ಹರಸಾಹಸ ಪಡುತ್ತಿದ್ದ. ಹಾಗೂ ಹೀಗೂ ಹುಡುಗಿ ಅಳುತ್ತಲೇ ಹೊರ ಹೋದಳು. ವಾಪಸ್ ಬಂದವನೇ "ಸರಿಯಾಗಿ ಮಾಡಿದಿರಿ ಸಾರ್. ಅವಳು ಬರೇ ನಾಟಕ ಮಾಡ್ತಾಳೆ. ನೋಡಿ ಸಾರ್ ಹೊರಗೆ ಹೋದ ತಕ್ಷಣ ಹೇಗೆ ಅಳು ನಿಲ್ತು ಅಂತ". ಹೊರಗೆ ನೋಡಿದೆ. ಹುಡುಗಿ ಯಾರ ಹತ್ತಿರವೂ ಮಾತಾಡುತ್ತಿದ್ದಳು. ನನ್ನ ಬಗ್ಗೆಯೇ ಕಂಪ್ಲೇಟ್ ಮಾಡುತ್ತಿದ್ದಾಳೆ ಅಂತ ನನಗೆ ಸಂದೇಹ ಬರುತ್ತಿತ್ತು.

ಆದರೆ ಮನಸ್ಸು ನಿರಾಳವಾಗಿತ್ತು. ಅಟೆಂಡರ್ ಕಡೆಗೆ ತಿರುಗಿ "ಥ್ಯಾಂಕ್ಸ್..ನಿಮ್ಮಿಂದ ಬಹಳ ಉಪಕಾರವಾಯ್ತು" ಅಂದೆ. ಅಟೆಂಡರ್ ನಗುತ್ತಾ - "ಬಿಡಿ ಸಾರ್ ನಾನೇನು ಮಾಡಿದೆ ಬಹಳ. ಏನೋ ಪ್ರೋಗ್ರಾಂ ನಲ್ಲಿ ಮೂರ್ನಾಲ್ಕು ಸಾಲು ಡಿಲೀಟ್ ಮಾಡಲು ಹೇಳಿದಿರಿ. ನಾನು ಮಾಡಿದೆ ಅಷ್ಟೇ!!!"

ನಾನು ಮಾಡಿದ್ದು ತಪ್ಪಾ? ನನಗೇನೋ ಹಾಗನ್ನಿಸಲಿಲ್ಲ. ಅವಳಿಗೆ ಪ್ರೋಗ್ರಾಂ ಗೊತ್ತಿದ್ದರೆ ಡಿಲೀಟ್ ಮಾಡಿದ ಸಾಲುಗಳನ್ನು ಪುನಃ ಬರೆಯುತ್ತಿದ್ದಳು. ಆದರೆ ಅವಳು ಅದನ್ನು ಬರೆಯಲಿಲ್ಲ. ಅವಳು ಬರೆದ ಪೇಪರನ್ನು ನನ್ನ ಬಳಿಯೇ ಇಟ್ಟುಕೊಂಡಿದ್ದೆ. ಅದರಲ್ಲಿ ಪ್ರೋಗ್ರಾಂ ಸರಿಯಾಗಿಯೇ ಇತ್ತು. ಹಾಗಾದರೆ ಆ ಹುಡುಗಿ ಪ್ರೋಗ್ರಾಂ ಅನ್ನು ಕಾಪಿ ಮಾಡಿದ್ದಾಳೆಂದು ನನಗೆ ಖಾತ್ರಿಯಾಯಿತು. ಅವಳನ್ನು ಫೇಲ್ ಮಾಡಲು ನನಗೆ ಯಾವ ಸಂಕಟವೂ ಇರಲಿಲ್ಲ.

ಮಾರ್ಕ್ಸ್ ಹಾಕಿದ ಪೇಪರನ್ನು ಕವರಿನಲ್ಲಿ ಸೀಲ್ ಮಾಡಿ ಹೊರಬರುತ್ತಿರುವಾಗ ಯೋಚಿಸುತ್ತಾ ಬಂದೆ "ಇವತ್ತು ಪರೀಕ್ಷೆ ನಡೆದದ್ದು ಅವಳಿಗಾ..ನನಗಾ? ಅವಳಂತೂ ಫೇಲಾದಳು. ಆದರೆ ನನಗೊಡ್ಡಿದ ಪರೀಕ್ಷೆಯಲ್ಲಿ ನಾನು ಪಾಸಾ.....ಫೇಲಾ"

<u>**ಆಟಿ ಎಂಬೋ ಷಾಡ**</u>

Wednesday, August 02, 2006

"ಆಷಾಡ ಮಾಸ ಬಂದಿತವ್ವ
ಅಣ್ಣ ಬರಲಿಲ್ಲ ಕರೆಯಾಕ್ಕಾ"

ಇಂದಿಗೂ ಆಷಾಡ ಎಂ□ ನ್ನ ಮಟ್ಟಿಗೆ ಈ ಹಾಡು ಮಾತ್ರ . ಯಾಕೆಂದರೆ ಕೊಡವ ಯಾ ತುಳುವ ನಾಡಿನಲ್ಲಿ ಈ ಆಷಾಡ ಪದ್ಧತಿ ಇಲ್ಲ. ಆಷಾಡದಲ್ಲಿ ಹೆಣ್ಣುಮಕ್ಕಳು ಯಾಕೆ ತವರಿಗೆ ಹೋಗುತ್ತಾರೆ? ಈ ಪ್ರಶ್ನೆಗೆ ತೃಪ್ತಿಕರವಾದ ಉತ್ತರ ನನಗೆ ಇನ್ನೂ ಸಿಕ್ಕಿಲ್ಲ. ಆದರೆ ಈ ವಿಚಾರದಲ್ಲಿ ಮಾತಾಡುವುದು ಬಹಳ ಇದೆ ಅಂತ ಅನ್ನಿಸಿದಾಗ ಅದನ್ನು "ಬರಹ" ಕ್ಕಿಳಿಸಲು ಕೂತಿದ್ದೇನೆ.

ಭಾರತದ ಬಹುತೇಕ ಕಡೆಗಳಲ್ಲಿ ಹಬ್ಬಗಳು ವ್ಯವಸಾಯ ಪದ್ಧತಿಗೆ ಬೆಸೆದುಕೊಂಡಿದೆಯಲ್ಲವೇ? ಮಳೆ ಬಂದಾಗ ಕೆಲಸ ಶುರು ಮಾಡುವ ಹಬ್ಬ, ಬಿತ್ತನೆ ಕೆಲಸ ಮುಗಿದಾಗ ಇನ್ನೊಂದು, ಕೊಯ್ಲಿನ ನಂತರ ಮತ್ತೊಂದು - ಹೀಗೆ ಹಬ್ಬ ಅಂದರೆ ಮಣ್ಣಿನ ಮಕ್ಕಳ ಸಂಭ್ರಮ. ಈ ರೀತಿಯ ಹಬ್ಬಗಳು ಪೇಟೆ ಜೀವನದಲ್ಲಿ ಟೊಳ್ಳು ಆಚರಣೆಗಳಾಗಿ ಬಿಡುತ್ತದೆ. ಯಾವ ಹಬ್ಬವಾದರೂ ಅದೇ ಬಾಳೆ ಮನೆ ಮುಂದೆ ಕಟ್ಟಿ, ಸಿಹಿ ತಿಂದು, ಟಿವಿಯಲ್ಲಿ ಹಿಟ್ ಚಿತ್ರಗಳನ್ನು ನೋಡಿದರೆ ಮುಗಿಯಿತು ನಮ್ಮ ಹಬ್ಬ.

ಮಳೆ ಬಂದು ಕೃಷಿ ಕೆಲಸ ಆರಂಭವಾಗುವ ಮುನ್ನ ಭಾರತದ ಸುಮಾರು ಭಾಗಗಳಲ್ಲಿ ಬೇರೆ ಬೇರೆ ರೀತಿಯ ಆಚರಣೆ ನೋಡಬಹುದು. ಒರಿಸ್ಸಾದಲ್ಲಿ ಮಳೆ ಬಂದ ಮೇಲೆ ಮೂರು ದಿನ ಭೂಮಿಗೆ ಹಬ್ಬ. ಮಳೆಬಿದ್ದ ನೆಲ ಫಲವತಿ ಆದ ಹೆಣ್ಣಿಗೆ ಸಮಾನ ಎಂ□ರ್ಥದಲ್ಲಿ ಅಲ್ಲಿ ಹಬ್ಬದ ಸಂಭ್ರಮ ಹಣ್ಣುಮಕ್ಕಳಿಗೆ ಮೀಸಲು . ಈ ಮೂರು ದಿನ ಅವರು ಯಾವ ಕೆಲಸವನ್ನೂ ಮಾಡುವುದಿಲ್ಲ. ನಮ್ಮಲ್ಲಿ ಆಷಾಡದಲ್ಲಿ ಹಣ್ಣುಮಕ್ಕಳನ್ನು ತವರಿಗೆ ಕಳುಹಿಸುವುದು ಇದೇ ಕಾರಣಕ್ಕಾಗಿ ಇರಬಹುದೇ?

ಇಲ್ಲಿ ಆಷಾಡ ಶುರುವಾದ ಸುಮಾರು ಹತ್ತು ದಿನಗಳ ನಂತರ ತುಳುವ ಮತ್ತು ಕೊಡವ ನಾಡಿನಲ್ಲಿ "ಆಟಿ" ಶುರುವಾಗುತ್ತದೆ. ಇಲ್ಲಿ ಆಷಾಡ ಮುಗಿದು ನಾಳೆ ವರಮಹಾಲಕ್ಷ್ಮಿ ಹಬ್ಬ. ಆದರೆ ನಮಗಿನ್ನೂ ಆಟಿ ಮುಗಿದಿಲ್ಲ. ಇಲ್ಲಿನ ಆಷಾಡಕ್ಕೂ ನಮ್ಮ ಆಟಿಗೂ ಸುಮಾರು ಸಾಮ್ಯತೆಗಳುಂಟು. ಈ ಸಮಯದಲ್ಲಿ ಶುಭ ಕಾರ್ಯಗಳ್ಯಾವುದೂ ನಡೆಯುವುದಿಲ್ಲ ಅನ್ನುವುದು ಅದರಲ್ಲಿ ಪ್ರಮುಖವಾದುದು.

ಇದ್ಯಾಕೆ ಹೀಗೆ ಅಂತ ಯಾರಿಗಾದರೂ ಸುಲಭವಾಗಿಯೇ ಅರ್ಥವಾಗುತ್ತದೆ. ಒಂದು ಇದು ಹೆಚ್ಚಾಗಿ ಮಳೆ ಬರುವ ಕಾಲ, ಹಾಗಾಗಿ ಮದುವೆ ಮುಂಜಿ ಮಾಡುವುದು ಕಷ್ಟ. ಎರಡು ಕೃಷಿಕರಿಗೆ ಕೆಲಸದ ಮಧ್ಯೆ ಹಬ್ಬದ "ತೊಂದರೆ" ಬರಬಾರದು. ಹೀಗಾಗಿ ಆಟಿಯಲ್ಲಿ ಮದುವೆ ಛತ್ರಗಳಿಗೆ ರಜೆ. ಮತ್ತೆ ಆಟಿ ಮತ್ತು ಆಷಾಡ ಬೇರೆ ಬೇರೆ ಸಮಯದಲ್ಲಿ ಯಾಕೆ ಬರುತ್ತವೆ ಅನ್ನೋದಕ್ಕೆ ನನ್ನದೊಂದು ಥಿಯರಿ ಇದೆ. ಬಹುಶಃ ಈ "ರಜಾ ಅವಧಿ" ಯನ್ನು ಮಳೆ ಬೀಳುವ ಸಮಯವನ್ನು ನೋಡಿ ನಿರ್ಧರಿಸಿರಬಹುದು.

ಆಟಿ ಎಂ□ ನಗೆ ನೆನಪಾಗುವುದು ಎರಡೇ ವಸ್ತುಗಳು . ಒಂದು "ಆಟಿ ಕಳಿಂಜ"(ಕೆಲಿಂಜ!), ಇನ್ನೊಂದು "ಮದ್ದು ಸೊಪ್ಪು". ಆಟಿಯಲ್ಲಿ ಮನೆಯಿಂದ ಮನೆಗೆ ಬರುವ ವೇಷಧಾರಿಗಳೇ "ಆಟಿ ಕೆಲಿಂಜ" ಗಳು. ಬಹುಶಃ ಆಟಿಯಲ್ಲಿ ಯಕ್ಷಗಾನ ಮುಂತಾದ ಮನೋರಂಜನೆಯ ಮಾಧ್ಯಮಗಳು ಮುಚ್ಚಿದ ಕಾರಣ ಈ ಆಚರಣೆ ಬಂದಿರಬಹುದು. ಈ ಪದ್ಧತಿ ಕೊಡಗಿನಲ್ಲಿ ಇಲ್ಲ. ಕೆಲಿಂಜಗಳು ತುಳುನಾಡಿನ ಆಚರಣೆ.

ಆದರೆ ಈ ಮದ್ದು ಸೊಪ್ಪು ತಿನ್ನುವುದು ಕೊಡಗಿನವರಿಗೇ ಸೀಮಿತ. ತುಳು ನಾಡಿನಲ್ಲೂ ಆಟಿಯಲ್ಲಿ ಮರವೊಂದರ ತೊಗಟೆಯ ಕಷಾಯ ಕುಡಿಯುವ ಆಚರಣೆ ಇದೆ. ಆದರೆ ಕೊಡಗಿನಲ್ಲಿ ಆಟಿಯ ೧೮ನೇ ದಿನ ಮಾತ್ರ ತಿನ್ನುವ ಈ ಸೊಪ್ಪಿಗೆ "ಮದ್ದು ಸೊಪ್ಪು" ಅನ್ವರ್ಥ ನಾಮ. ಆ ಗಿಡದಲ್ಲಿ ಆಟಿಯ ಮೊದಲ ದಿನದಿಂದ ಮದ್ದುಗಳು ಬಂದು ಸೇರಿಕೊಳ್ಳುತ್ತವೆ ಅನ್ನುವ ನಂಬಿಕೆ. ಹೀಗೆ ಆಟಿಯ ೧೮ನೇ ದಿನ ಅದರಲ್ಲಿ ೧೮ ತರಹದ ಮದ್ದುಗಳು ಇರುತ್ತವೆ. ಹಾಗಾಗಿ ಅದನ್ನು ಆ ದಿವಸ ಪಾಯಸ ಮಾಡಿ ತಿನ್ನುವುದು ಕೊಡಗಿನವರ ಪದ್ಧತಿ.

ಆ ಮದ್ದು ಸೊಪ್ಪಿಗೆ ಒಂದು ಸುವಾಸನೆ ಇರುತ್ತದೆ. ಜನರ ನಂಬಿಕೆ ಅಂದರೆ ಆ ಸೊಪ್ಪಿಗೆ ಅಂದು ಮಾತ್ರ ಸುವಾಸನೆ ಬರುತ್ತದೆ. ಪಾಯಸ ಮಾಡುವಾಗ ನೀಲಿ ಬಣ್ಣಕ್ಕೆ ತಿರುಗುವ ಸೊಪ್ಪಿಗೆ ಇನ್ನೊಂದು ಗುಣ ಉಂಟು. ಪಾಯಸ ತಿಂದು

ಮರುದಿನ ಉಚ್ಚೆ ಕೆಂಪು ಬಣ್ಣಕ್ಕೆ ತಿರುಗುತ್ತದೆ. ಕೊಡಗಿಗೆ ಹೊಸದಾಗಿ ಬಂದವರು ಪಾಯಸ ತಿಂದು ಮರುದಿನ ಕೆಂಪು ಉಚ್ಚೆ ಬಂತೆಂದು ಡಾಕ್ಟರ್ ರ ಹತ್ತಿರ ಹೋಗಿದ್ದೂ ಉಂಟು.

ಮೊನ್ನೆ ಕೊಡಗಿನ ಗೆಳೆಯನೊಬ್ಬ ಸಿಕ್ಕಿದ. ಮಾತು ಆಟಿ, ಮದ್ದು ಸೊಪ್ಪು ಕಡೆಗೆ ಹೊರಳಿತು. ತನ್ನ ಮನೆಯ ಹತ್ತಿರ ಮದ್ದು ಸೊಪ್ಪಿನ ಗಿಡ ನೋಡಿದ್ದಾಗಿ ಹೇಳಿದ. ಅರೇ ಬೆಂಗಳೂರಿನಲ್ಲಿ ಮದ್ದು ಸೊಪ್ಪಾ? ನನಗೆ ಆಶ್ಚರ್ಯ. ಆದರೂ ಕೊಡಗಿನಲ್ಲಿ ಬೆಳೆಯುವ ಮದ್ದು ಸೊಪ್ಪೇ ಒರಿಜಿನಲ್ ಅಂತ ನಾವು ತೀರ್ಮಾನಿಸಿದೆವು. ಬೆಂಗಳೂರಿನ ಮದ್ದು ಸೊಪ್ಪು ನೋಡಲು ಅದೇ ತರಹ ಇದ್ದರೂ ಅದರಲ್ಲಿ ಮದ್ದಿನ ಗುಣಗಳ್ಯಾವುವೂ ಇರಲಾರದು ಅಂತ ನಮಗೆ ನಾವೇ ಸಮಾಧಾನ ಪಟ್ಟುಕೊಂಡು ಈ ವರ್ಷ ಸೊಪ್ಪು ಕಳುಹಿಸಲು ಕೊಡಗಿನಲ್ಲಿರುವ ಯಾವ ಗೆಳೆಯನಿಗೆ ಫೋನಾಯಿಸುವುದೆಂದು ಯೋಚಿಸ ತೊಡಗಿದೆವು.

# <u>ನಮಗೊಬ್ಬ ಹೀರೋ</u>

Wednesday, October 25, 2006

ಬರುವಾಗಲೇ ಕಾರ್ ಕೆಟ್ಟು ಹೋಯಿತಾದರಿಂದ ಮೊದಲೇ ಸಿಟ್ಟು ಬಂದಿತ್ತು. ಮತ್ತೆ ಟೇಬಲ್ ಗೆ ಬಂದ ಕೂಡಲೇ important ಅಂತ ಬರೆದಿಟ್ಟ ಚೀಟಿ. ಇದು ಅವನದೇ ಕಿತಾಪತಿ ಇರಬೇಕು. ಈ MBA ಮಾಡಿದವರ ಪಾಡೇ ಇಷ್ಟು ಅಂತ ಕಾಣಿಸ್ತದೆ. ಮೀಟಿಂಗ್ ಮಾಡೋದು ಬಿಟ್ಟರೆ ಬೇರೇದೇನೂ ತಿಳಿಯೊಲ್ಲ ಮುಂಡೇವಕ್ಕೆ. ಮೀಟಿಂಗ್ ಕರೆದು ಉದ್ದುದ್ದ buzzword ಗಳನ್ನು ಬಿಟ್ಟರೆ project ಮುಗಿತದಾ? ಬಾಯಿ ಬಿಟ್ಟರೆ quality, six sigma - ಅವನ ತಲೆ. ನೆಟ್ಟಗೆ ಒಂದು ದಿನ program ಬರೆದಿರಲಿಕ್ಕಿಲ್ಲ. ಇವತ್ತು ಮತ್ತೆ meeting ಕರೆದಿದ್ದಾನೆ, ಮತ್ತೆ ಅದೇ ಗೋಳು. ಈ ಕರ್ಮಕ್ಕೆ ಬೆಳಗ್ಗೆಯೇ important ಅಂತ ಬರೆದ meeting agenda ಚೀಟಿ ಬೇರೆ. ಸಾಕಪ್ಪಾ ಸಾಕು ಅಂತ ಅನ್ನಿಸಿ mailbox ತೆರೆದರೆ ಸಂತೋಷನ mail . ಅವನು ಬೇರೆಯವರ ಹಾಗೆ ಸುಮ್ಮನೆ ಬರೆಯುವವನಲ್ಲ. ಏನೋ ಇದೆಯೆಂದು ನೋಡಿದರೆ ಒಂದೇ ಸಾಲು ಬರೆದಿದ್ದ Stop worrying about Dilip guys, he has joined NID Ahmedabad

ಅರೆ! ಇಷ್ಟು ಸಮಯ ಅವನ ಬಗ್ಗೆ ತಲೆಕೆಡಿಸಿಕೊಂಡ ಮೇಲೆ ಈಗ ಸುಮ್ಮನಿರಿ ಅಂದರೆ ನಾಮ ಏನು ಮಾಡೋಣ? ಇಲ್ಲಿ "ನಾಮ" ಅಂದರೆ ಟಿಮ್ಸ್ ತಿಮ್ಮಯ್ಯ, ಸಂತೋಷ ಮತ್ತು ನಾನು. ನಾವಲ್ಲಾ ಒಟ್ಟಿಗೇ ಓದಿದವರು. ಕೆಲಸಕ್ಕೆ ಸೇರಿ ೫ ವರ್ಷಗಳಾದ್ದರಿಂದ software engineer ಗಳಾಗಿದ್ದವರು team leader ಗಳಾಗಿದ್ದೆಮ. ಅರ್ಥಾತ್ freshers ಗಳನ್ನು ಬಯ್ಯುಮದು, MBA ಮಾಡಿ ರಾತೋರಾತ್ರಿ project manager ಗಳಾದವರನ್ನು ಬೋ-ಸೂ-ಮೊದಲಾಗಿ ಕೊಂಡಾಡುಮದನ್ನೇ ಪ್ರಮುಖವಾಗಿ ಮಾಡುತ್ತಿದ್ದೆಮ. weekend party ಎಂ[illegible] ಭೆಯನ್ನು ಯಥಾಶಕ್ತಿ ನಡೆಸಿಕೊಂಡು ಬಂದಿದ್ದೆಮ. ಮೊದಲೆಲ್ಲಾ ರಾಜು ವಿಸ್ಕಿ, ಉಪ್ಪಿನಕಾಯಿ, ಕ್ರಿಕೆಟ್ಟು, ಮಮತಾ ಕುಲ್ಕರ್ಣಿ ಅಂತಿದ್ದವರು ಈಗೀಗ teacher's , dry masala, F-1, angelina jolie ಅಂತಂದುಕೊಳ್ಳುವವರೆಗೂ ಬದಲಾಗಿದ್ದೆಮ. ಹೀಗಿರುವಾಗ ಒಂದು ದಿನ ಟಿಮ್ಸ್ ಈ ದಿಲೀಪನ ವಿಷಯ ತೆಗೆದಿದ್ದ. ನಿಮಗೆ ದಿಲೀಪ ಯಾರೂಂತ ಗೊತ್ತಿಲ್ಲ ಅಲ್ಲಾ? ಹೇಳ್ತೀನಿ ಕೇಳಿ.

ದಿಲೀಪ ನಮ್ಮ ಬಾಲ್ಯ ಜೀವನದ ಅತಿ ದೊಡ್ಡ ಹೀರೋ. ನಮಗಿಂತ ಎರಡೇ ವರ್ಷ ದೊಡ್ಡವನಾದರೂ ನಾವಲ್ಲಾ ಅವನನ್ನ ತುಂಬಾ ಆದರಿಸುತ್ತಿದ್ದೆಮ. "ದಿಲೀಪ ಏನು ಬೇಕಾದರೂ ಮಾಡಿಯಾನು....." ಅಂತ ಊರವರೆಲ್ಲಾ ಹೇಳುತ್ತಿದ್ದರು. ಹೌದು ಅವ ಏನು ಮಾಡಿಲ್ಲ ಹೇಳಿ. ಪ್ರತಿ ವರ್ಷ ಎಲ್ಲಾ ಬಹುಮಾನ ಅವನಿಗೇ, ಕ್ಲಾಸಿನಲ್ಲಿ ಟೀಚರ್ ಗಳೂ ಅವನ ನೋಟ್ಸಿನಿಂದಲೇ ನಮಗೆಲ್ಲಾ dictate ಮಾಡುತ್ತಿದ್ದರು. Actually ಅವನ ಕ್ಲಾಸಿಗೆ ಹೋಗಲಿಕ್ಕೇ ಟೀಚರುಗಳಿಗೆಲ್ಲಾ ಭಯವಾಗುತ್ತಿತ್ತು - ಅನ್ನೋದು ನಮಗೆಲ್ಲಾ ಒಂದು ದೊಡ್ಡ ಸುದ್ದಿಯಾಗಿತ್ತು. ಅವನು ಭಾಷಣಕ್ಕೆ ನಿಂತರೆ ಮೈಸೂರಿನ ಮಲ್ಲಪ್ಪ ಹೈಸ್ಕೂಲಿನಿಂದ ಬಂದ ಪೀಕೆ ಸಾರ್ ಕೂಡ ತಲೆದೂಗುತ್ತಿದ್ದರು. ಲೈಬ್ರೆರಿಯನ್ ಕೂಡ ಯಾವ ಕಪಾಟಿನಲ್ಲಿ ಯಾವ ಪುಸ್ತಕ ಇದೆ ಅಂತ ದಿಲೀಪನನ್ನೇ ಕೇಳುತ್ತಿದ್ದನಂತೆ. ನಮ್ಮ ಟಿಮ್ಸ್ ನ ಮನೆಯ ಹತ್ತಿರವೇ ದಿಲೀಪನೂ ಇದ್ದಿದ್ದರಿಂದ ನಾವೆಲ್ಲಾ ಅವನ ಸಂಪರ್ಕಕ್ಕೆ ಬಂದಿದ್ದೆಮ ಮತ್ತು ಅವನಿಗಿಂತ ದೊಡ್ಡವನಿಲ್ಲ ಅಂತ ದೃಢವಾಗಿ ನಂಬಿದ್ದೆಮ.

ನಮ್ಮ ಪಾಲಿಗೆ ಅವನೊಬ್ಬ ಪ್ರವಾದಿ. ನಾವೆಲ್ಲಾ ಇನ್ನೂ "ಕಪಿಲ್, ಶ್ರೀಕಾಂತ್" ಅನ್ನುತ್ತಿರುವಾಗ "ಸಚಿನ್ ಅಂತ ಒಬ್ಬ ಬಂದಿದ್ದಾನೆ. ನೋಡಿ ಗವಾಸ್ಕರ್ ನ ರೆಕಾರ್ಡ್ ಉಳಿಯೊಲ್ಲ" ಅಂತ ಅವತ್ತೇ ಅಂದಿದ್ದ. ಸ್ವಾತಂತ್ರ ದಿನಾಚರಣೆಗೆ ಶಾಲೆಯಲ್ಲಿ ನಾಮ ಭಾಷಣ ಮಾಡುತ್ತಿದ್ದ ಕಾಲದಲ್ಲಿ ಇವ ಡೆಲ್ಲಿಯ ತನಕ ಹೋಗಿ ಭಾಷಣ ಮಾಡಿ ಗೆದ್ದು ಬಂದಿದ್ದ. ೯೦ ಮಾರ್ಕ್ಸ್ ಇನ್ನೂ ಬೆಂಗಳೂರು, ಮೈಸೂರಿನವರು ಮಾತ್ರ ತೆಗೆಯುತ್ತಿದ್ದ ಕಾಲದಲ್ಲಿ ನಮ್ಮ ಶಾಲೆಯಲ್ಲಿದ್ದುಕೊಂಡು ೯೩ ಮಾರ್ಕ್ಸ್ ತೆಗೆದಿದ್ದ. ನಮಗೆ ಗೊತ್ತಿದ್ದ ಹಾಗೆ maths ನಲ್ಲಿ ೧೦೦ ಕ್ಕೆ ೧೦೦ ತೆಗೆದ ನಮ್ಮೂರಿನ ಮೊದಲಿಗ ಅವನೇ. ಕೊನೆಗೆ ನಾಮ ಸುರತಿ ಕದ್ದು ಮುಚ್ಚಿ ಓದುತ್ತಿದ್ದರೆ ಅವನು ಜಿ-ಸ್ಪಾಟೋ ಮತ್ತೇನೋ ಧ್ಯಾನಿಸುತ್ತಿದ್ದ. ಕೆಲಸವೆಂದರೆ ಬ್ಯಾಂಕ್ ಕೆಲಸ, ಎಲ್.ಐ.ಸಿ ಕೆಲಸ ಅಂತ ನಾಮ ಅಂದುಕೊಂಡಿದ್ದಾಗ engineering ಅಂದಿದ್ದ. ಒಂದು ಸಲ ಬೆಂಗಳೂರಿನಿಂದ ಚುಕ್ಕಿ ಚುಕ್ಕಿ ಚಿತ್ರವೊಂದನ್ನು ತಂದು ಇದು computer ಮಾಡಿದ್ದು, ನೋಡಿ ಮುಂದೆಲ್ಲಾ ಇದೇ ಅಂದಿದ್ದ. "ದಿಲೀಪ ಏನು ಬೇಕಾದರೂ....." ನಾವೆಲ್ಲಾ ಅಂದುಕೊಳ್ಳುತ್ತಿದ್ದೆಮ.

ನಾವೆಲ್ಲಾ ಪಿಯುಸಿ ಓದುವಾಗ ಮುಂದೆ engineering ಓದುಮದು ಅಂತ ನಿರ್ಧಾರ ಮಾಡಿಕೊಂಡಿದ್ದೆಮ. ಕಾರಣ ದಿಲೀಪ ಆವಾಗಲೇ ಬೆಂಗಳೂರಿನಲ್ಲಿ engineering ಸೇರಿದ್ದ. Computer ಓದ್ರೋ, ಅದೇ ಮುಂದೆ ಎಲ್ಲಾ ಅಂತ

ಊರಿಗೆ ಬಂದಾಗಲೆಲ್ಲಾ ನಮಗೆ ಹೇಳುತ್ತಿದ್ದ. ಯಾವ್ಯಾವ ಕಾಲೇಜು ಹೇಗೆ, ಅದಕೆಷ್ಟು ಸಿಯಿಟಿ ರ್ಯಾಂಕ್ ಬೇಕು? ಎಲ್ಲಕ್ಕೂ ನಮಗೆಲ್ಲಾ ದಿಲೀಪನೇ. ಅವನೇ ನಮ್ಮನ್ನೆಲ್ಲಾ ಬೆಂಗಳೂರಿಗೆ ಬರುವಂತೆ ಮಾಡಿದ್ದ. ಬಂದವರನ್ನ ಬೆಂಗಳೂರು ತೋರಿಸಿದ. Pub, theatre, live shows...ಅಬ್ಬಬ್ಬಾ ನಮ್ಮೆದುರು ಹೊಸ ಲೋಕವನ್ನೇ ತೆರೆದಿಟ್ಟ. ಬೆಂಗಳೂರೆಂದರೆ ಬ್ರಿಗೇಡು, ಎಮ್ .ಜಿ ಅಂತಿದ್ದ ನಮಗೆ ಹೊಸ ಜಾಗ ತೋರಿಸಿದ. ಕುಡಿಸಿದ, ಕುಣಿಸಿದ ಮತ್ತು ಓಡಿಸಿದ ಕೂಡ. ಕಾಲೇಜಿನಲ್ಲೂ ಅವನು ದಂತಕತೆಯೇ ಆಗಿಹೋಗಿದ್ದ.

ಕಾಲೇಜು ಸೇರಿದ ವರ್ಷಾನೇ best programmer contest ಗೆದ್ದನಂತೆ. ಆಮೇಲೆ ಅದರಲೆಲ್ಲಾ ನನಗೆ ಆಸಕ್ತಿ ಇಲ್ಲಾಂತ ಸುಮ್ಮನೇ ಇದ್ದನಂತೆ. ಕೇಳಿಕೇಳಿದವರಿಗೆ program ಬರೆದು ಕೊಡ್ತಿದ್ದವನು ಬರೇ ೬೦-೭೦ ಪರ್ಸೆಂಟ್ ತೆಗೊತ್ತಿದ್ದನಂತೆ. Campus Placement ಟೈಮ್ ನಲ್ಲಿ ಎಲ್ಲರೂaptitude, reasoning ಅಂತ ಓಡಾಡಿಕೊಂಡಿದ್ದರೆ ಇವ ಸಿನೆಮಾ, ಪುಸ್ತಕ ಅಂತ ಆರಾಮಾಗಿದ್ದನಂತೆ. ಕೊನೆಗೆ MNC ಯೊಂದು ಬಂದಾಗ ಆರಾಮದಲ್ಲಿtest ಬರೆದು ತಣ್ಣಗೆ interview ಕೊಟ್ಟು ಯಾರೂ ಆವರಗೆ ಕೇಳದಷ್ಟು ಸಂಬಳ ಪಡೆದು ಬಿಟ್ಟಿದ್ದ. ಅವ ಕೆಲಸಕ್ಕೆ ಸೇರಿದ ಮೇಲೆ ನಮ್ಮ ಸಂಪರ್ಕ ಕಡಿಮೆಯಾಗುತ್ತಾ ಬಂತು. ಆಗ ತಾನೇ ಇ-ಮೈಲ್ ಪ್ರಚಾರಕ್ಕೆ ಬರುತ್ತಿತ್ತು. ನಮಗೆ ದಿಲೀಪ ಒಂದು ಮೈಲ್-ಐಡಿ ಅಷ್ಟೇ ಆಗಿ ಹೋಗತೊಡಗಿದ. ಮತ್ತೆ ನಾವಲ್ಲಾ placement ಆಗುವ ಕಾಲಕ್ಕೆ ಅವ onsiteಗೆಂತ ಯುರೋಪು, ಇಂಗ್ಲೆಂಡು ಅಂತ ಸುತ್ತತೊಡಗಿದ. ಅವ ಎಲ್ಲಿದ್ದರು ಈಗ ನಮಗೆ ಗೊತ್ತಾಗುತ್ತಿರಲಿಲ್ಲ. Electronic Cityಯ ಅವನ ಆಫೀಸಿನಿಂದ ಕಳಿಸಿದರೂ, ಜರ್ಮನಿಯಿಂದ ಕಳಿಸಿದರೂ ಮೈಲ್ ಒಂದೇ ತರ ಕಾಣಿಸ್ತಿತ್ತು.

ನಾವೆಲ್ಲಾ ಕೆಲಸಕ್ಕೆ ಸೇರಿ ಒಂದು ತಿಂಗಳೊಳಗಾಗಿ I am changing my job ಅಂತ ದಿಲೀಪನಿಂದ ಮೈಲ್ ಬಂದಿತ್ತು. ಮತ್ತೆ ಎಲ್ಲಿ ಸೇರಿದ ಅಂತ ಅವ ಹೇಳಲೇ ಇಲ್ಲ. ನಮ್ಮ ಬಳಿ ಅವನ ಆಫೀಸಿನ mail-id ಮಾತ್ರ ಇದ್ದ ಕಾರಣ ನಮಗೂ ಅವನನ್ನ ಪತ್ತೆಹಚ್ಚಲಾಗಲಿಲ್ಲ. ಹೇಳಬೇಕೆಂದರೆ ನಮಗೆ ಈಗ ದಿಲೀಪನ ಅಗತ್ಯ ಇರಲಿಲ್ಲ. ಹಾಗಾಗಿ ನಾವು ಅವನನ್ನ ಹುಡುಕುವ ಗೋಜಿಗೆ ಹೋಗಲಿಲ್ಲ. ಹೇಗಿದ್ದರೂ ನಮಗೆಲ್ಲಾ ಒಳಗೊಂದು ವಿಶ್ವಾಸ ಇದ್ದೇ ಇತ್ತು - "ದಿಲೀಪ ಏನು ಬೇಕಾದರೂ.....".

Fresher ಅನ್ನುವ ಹಣೆಪಟ್ಟಿ ನಮ್ಮೆಲ್ಲರನ್ನೂ ಬಿಡುವಷ್ಟರ ಹೊತ್ತಿಗೆ ನಾವಲ್ಲಾ ಹೊಸ ಜೀವನಕ್ಕೆ ಒಗ್ಗಿ ಹೋಗಿದ್ದೆವು. ಶುಕ್ರವಾರ ಸಿನೆಮಾ, ಶನಿವಾರ ಪಾರ್ಟಿ, ಭಾನುವಾರ ಕ್ರಿಕೆಟ್ - ಹೀಗೆ ನಮ್ಮ ವಾರ ಸಾಗುತ್ತಿತ್ತು. ಮಧ್ಯದಲ್ಲೆಲ್ಲೋ ನಾವೆಲ್ಲಾ ಸ್ವಲ್ಪಕಾಲ ಪರದೇಶಿಗಳೂ ಆಗಿದ್ದು ಬಂದೆವು. ನಮ್ಮನ್ನು ಬಿಟ್ಟರೆ ನಮ್ಮ project team ನಲ್ಲಿರುವವರೆಲ್ಲಾ ಸೋಮಾರಿಗಳೇ ಎಂ[illegible]ೀರ್ಮಾನಕ್ಕೆ ಬಂದಿದ್ದೆವು . ಈ ಮಧ್ಯೆ ಮರೆತ ದಿಲೀಪ ನಮ್ಮ ಜೀವನಕ್ಕೆ ಅಕಸ್ಮಾತಾಗಿ ತಿರುಗಿ ಬಂದಿದ್ದ.

ಆದದಿಷ್ಟು. ಟಿಮ್ಸ್ ನ ಹೊಸ manager ಗೆ ಕೊಡಗಿನವರೆಂದರೆ ಒಂದು ಕೆಟ್ಟ ಆಸಕ್ತಿ. ಎಲ್ಲರ ಹಾಗೆ ಕೊಡಗಿನ ಹುಡುಗಿಯರ ಬಗ್ಗೆ ಅವನು ಕೇಳಿದ್ದಿರಬೇಕು.You are lucky man... ಅಂತ ಟಿಮ್ಸ್ ಹತ್ತಿರ ಜೊಲ್ಲು ಸುರಿಸುತ್ತಿದ್ದ. Show me some of your coorg photos ಅಂದಿದ್ದಕ್ಕೆ ಟಿಮ್ಸ್ ನಮ್ಮ ಹತ್ತಿರ ಬಂದು ಹುಡುಕಿ ಹುಡುಕಿ ಹುಡುಗಿಯರೇ ಇಲ್ಲದ ಫೋಟೋವನ್ನ ತೆಗೆದುಕೊಂಡು ಹೋಗಿದ್ದ. ನೋಡುತ್ತಿದ್ದ ಟಿಮ್ಸ್ ನ ಬಾಸ್ ದಿಲೀಪನ ಫೋಟೋ ಬರುತ್ತಲೇis this psycho your friend? ಅಂತ ದಡಬಡಿಸಿದ್ದನಂತೆ. ಯಾಕೆ, ಏನು ವಿಚಾರಿಸುವಾಗ ತಾನು ಹಿಂದಿನ ಕಂಪೆನಿಯಲ್ಲಿರುವಾಗ ದಿಲೀಪನ manager ಆಗಿದ್ದ ಕತೆ ಹೇಳಿದ. ದಿಲೀಪ ಡ್ರಗ್ಸ್ ಚಟಕ್ಕೆ ಬಿದ್ದು ಕೆಲಸವನ್ನೇ ಮಾಡುತ್ತಿರಲಿಲ್ಲವಂತೆ. ಜರ್ಮನಿಯಲ್ಲಿ clients ಜೊತೆ ಅಸಭ್ಯವಾಗಿ ನಡೆದುಕೊಂಡಿದ್ದನಂತೆ. ಕೊನೆಕೊನೆಗೆ ಕುಡಿದೇ ಕೆಲಸಕ್ಕೆ ಬರುತ್ತಿದ್ದ ಅವನನ್ನು ತೆಗೆದು ಹಾಕಿದರಂತೆ. ಟಿಮ್ಸ್ urgent ಆಗಿ ನಮ್ಮನ್ನೆಲ್ಲಾ ಬರಹೇಳಿ ಈ ವಿಷಯ ತಿಳಿಸಿದಾಗ ನಮಗೆಲ್ಲಾ ಒಂದು ಕ್ಷಣ ಏನೂ ತೋಚದಾಗಿತ್ತು.

ಏನಿದ್ದರೂ ಈ ವಿಷಯದ ಬುಡಕ್ಕೆ ಹೋಗುವುದೆಂದು ತೀರ್ಮಾನಿಸಿದೆವು. ನಮ್ಮ hero ದಿಲೀಪ ಹೀಗೆಲ್ಲಾ ಮಾಡುವುದು ಸಾಧ್ಯವಿಲ್ಲ ಅಂತ ನಮಗೆ ನಾವೇ ಅಂದುಕೊಂಡೆವು. ಈ ಜೊಲ್ಲು ಸುರುಕ manager ನದೇ ಏನೋ ಕಿತಾಪತಿ ಇರಬಹುದೆಂದು ನಾವು ಸಮಾಧಾನ ಪಟ್ಟುಕೊಂಡೆವು. ದಿಲೀಪ ಕೆಲಸದಲ್ಲಿದ್ದ ಕಂಪೆನಿಯಲ್ಲಿ ನಮಗಿರುವ source ಗಳನ್ನು ಬಳಸಿಕೊಂಡು ಸತ್ಯವನ್ನು ಈಚೆ ತರುವುದೆಂದು ನಾವು ನಿರ್ಧರಿಸಿದೆವು. ಬಹುಶಃ ನಮಗೆ ಬೇಕಾದ ಸತ್ಯದ ಹುಡುಕಾಟಕ್ಕೆ ನಾವು ತೊಡಗಿದೆವು.

ಆದರೆ ದಿನಕ್ಕೊಂದರಂತೆ ನಮಗೆ ಬೇರೆ ಬೇರೆ ಕತೆ ಸಿಗುತ್ತಿತ್ತು. ಅವನಿಗೆ ತನ್ನ project team ನಲ್ಲಿದ್ದ ಹುಡುಗಿಯ ಜೊತೆ ಪ್ರೀತಿ ಆಯಿತೆಂದೂ, ಅವಳು ಒಪ್ಪದಿದ್ದಾಗ ಅವನು ಕೆಲಸ ಬಿಟ್ಟನೆಂದೂ ಒಂದು ಥಿಯರಿ ಬಂತು. ಮತ್ತೊಂದು ಕತೆಯ ಪ್ರಕಾರ ಅವನು ಜರ್ಮನಿಯಿಂದ ಬಂದ ಮೇಲೆ slowdown ಶುರುವಾಗಿತ್ತು. ವಿನಾ ಕಾರಣ ಇವನ team ನಿಂದ ಕೆಲವರನ್ನು ತೆಗೆದುಹಾಕಲು ಶುರುಮಾಡಿದಾಗು ಇವನು union ನೋ ಮತ್ತೊಂದೋ ಅಂದುಕೊಂಡು ಓಡಾಡಲು ಶುರು ಮಾಡಿದನಂತೆ. ಒಂದೇ ವಾರದಲ್ಲಿ ಇವನಿಗೆ notice ಜಾರಿಯಾದಾಗ ಇವ ರಾಜೀನಾಮೆ ಬಿಸಾಡಿ ಹೋದನಂತೆ. ಇನ್ನೊಂದು ನಂಬಬಹುದಾದ ಥಿಯರಿಯ ಪ್ರಕಾರ ಅವನಿಗೆ programming ಮೇಲೆ ಜಿಗುಪ್ಸೆ ಶುರುವಾಯಿತಂತೆ. ಕಾಣದ software ಬರೆಯುವುದಕ್ಕಿಂತ ಬೇರೇನಾದರೂ ಮಾಡಬೇಕೆಂದು ಹೇಳುತ್ತಾ paper modelling ಶುರು ಮಾಡಿಕೊಂಡನಂತೆ. ಆಫೀಸಿಗೆ ಬಂದವನೇ internet ನಿಂದ ತರತರದ designs ಗಳನ್ನು ತೆಗೆದುಕೊಂಡು ಪೇಪರ್ ಕತ್ತರಿಸುತ್ತಾ ಕೂರುತ್ತಿದ್ದನಂತೆ. ಮಾಡಿದ model ಗಳನ್ನು ಯಾರಿಗಾದರೂ ಕೊಟ್ಟು ಬಿಡುತ್ತಿದ್ದನಂತೆ. ಒಂದು ದಿನ ಬೆಳಗ್ಗೆ ಬಂದು ಸುಂದರ model ಒಂದನ್ನು ಮಾಡಿಟ್ಟು ಅದರಲ್ಲಿ thank you ಅಂತ ಬರೆದು ಹೋದನಂತೆ. ಮರುದಿನ ಬೆಳಗ್ಗೆ manager ಗೆ ಮೈಲ್ ಮೂಲಕ ರಾಜೀನಾಮೆ ಕಳಿಸಿದನಂತೆ.

"ದಿಲೀಪ.... ಏನು ಬೇಕಾದರೂ....." ನಾವೆಲ್ಲಾ ಪದೇ ಪದೇ ಅಂದುಕೊಳ್ಳುತ್ತಿದ್ದೆವು. ನಮ್ಮ hero ನನ್ನು ಎಲ್ಲರೂ ಸೇರಿ ಬೇಕೆಂದೇ ಹೀಗಳೆಯುತ್ತಿದ್ದಾರೆಂದು ನಮಗೆ ಅನ್ನಿಸುತ್ತಿತ್ತು. ಹೇಗಾದರೂ ಮಾಡಿ ದಿಲೀಪನನ್ನು ಹುಡುಕಿ ಅವನನ್ನು ಮತ್ತೆ ಕಲಸಕ್ಕೆ ಸೇರಿಸಿ ಈ ಜೊಲ್ಲು ಸುರುಕ ಹಂದಿಯಾದಿ ಎಲ್ಲರಿಗೂ ನಮ್ಮ hero ನ capacity ಅರ್ಥೈಸಬೇಕೆಂದು ತೀರ್ಮಾನಿಸಿದೆವು. ಈ ನಡುವೆ ಸಂತೋಷ ಒಂದು ಸಣ್ಣ ಬಾಂಬ್ ಇಟ್ಟ. ದಿಲೀಪ ಕೆಲಸ ಬಿಡುವಾಗ ಅವನಿಗಿದ್ದ experience ಬರೀ ಒಂದೂವರೆ-ಎರಡು ವರ್ಷ ಅಷ್ಟೇ. ಅವ ಕೆಲಸ ಬಿಟ್ಟು ನಾಲ್ಕು ವರ್ಷ ಆಯ್ತು. ಈಗಿನ ಪರಿಸ್ಥಿತಿ ಹೇಗಿದೆ? ದಿಲೀಪ ಈ ನಾಕು ವರ್ಷದಲ್ಲಿ update ಆಗಿದ್ದಾನೋ ಇಲ್ಲವೋ? ನೆನ್ನೆಯ ವಿದ್ಯೆಯೇ ಇಲ್ಲಿ ಇವತ್ತು ನಡೆಯಲ್ಲ. ಈಗ ದಿಲೀಪ ಬಂದರೆ ಹೇಗೆ - ಅಂತೆಲ್ಲಾ ಪಕ್ಕಾ manager ತರಹ ಮಾತಾಡಿದ್ದ. ಆದರೆ ಉಳಿದವರು ನಾವು ಬಿಟ್ಟು ಕೊಡಲು ತಯಾರಿರಲಿಲ್ಲ. ನಮ್ಮ ನಮ್ಮ ಟೀಮ್ ನಲ್ಲಿರುವ ಆ ಸೋಮಾರಿಗಳನ್ನೇ ಉದಾಹರಣೆ ಕೊಟ್ಟು dilip is far better than these guys any day ಅಂತ ಕೂಗಾಡಿದೆವು. ಆದರೆ ಸಂತೋಷ ಯೋಚಿಸದೇ ಮಾತಾಡುವವನಲ್ಲ. ದೊಡ್ಡ ಬಾಂಬೇ ಇಟ್ಟ. ಈಗ ದಿಲೀಪ ಬಂದರೆ ಅವನ experience ಎರಡೇ ವರ್ಷ ಅಂತ ಪರಿಗಣಿಸಲಾಗುತ್ತದೆ. ಅಂದರೆ ಅವನಿನ್ನೂ software engineer ಆಗಿಯೇ ಸೇರಬೇಕು. ಬಹುಶಃ ನಮ್ಮ ಕಂಪೆನಿ ಏನಾದರೂ ಸೇರಿದರೆ ನಾವು ಅವನ senior ಗಳಾಗುತ್ತೇವೆ. ದಿಲೀಪ ನಮ್ಮ ಕೈ ಕೆಳಗೆ ಕೆಲಸ ಮಾಡುವ ದೃಷ್ಯ ನಮಗೆ ಊಹಿಸಿಕೊಳ್ಳಲೂ ಕಷ್ಟವಾಗುತ್ತಿತ್ತು.

ನಿಜ ಹೇಳಬೇಕೆಂದರೆ ಸಂತೋಷನ ಈ ಥಿಯರಿ ಕೇಳಿ ನಮಗೆ ದಿಲೀಪನನ್ನು ಹುಡುಕುವ ಉತ್ಸಾಹ ಹೊರಟು ಹೋಯಿತು. ಒಬ್ಬರಿಗೊಬ್ಬರು ಹೇಳಿಕೊಳ್ಳದಿದ್ದರೂ ದಿಲೀಪ ನಮಗೆ ಸಿಗುವುದೇ ಬೇಡವೆಂದು ನಾವು ಪ್ರಾರ್ಥಿಸುತ್ತಿದ್ದೆವು. ನಾವು ಊಹಿಸಿಕೊಂಡದ್ದು ಸತ್ಯವಾಗಿದ್ದಲ್ಲಿ ಅದನ್ನೆದುರಿಸುವ ಶಕ್ತಿ ನಮಗಿರಲ್ಲಿಲ್ಲ. ದಿಲೀಪ hero ಆಗಿರುವುದು ಅವನಿಗೆ ಬೇಕಿತ್ತೋ ಇಲ್ಲವೋ ನಮಗಂತೂ ಬೇಕಿತ್ತು.

ನೋಡಿ ಕಳೆದ ಎರಡು ವರ್ಷಗಳ ಕತೆ ನಿಮಗೆ ಹೇಳುತ್ತಾ ನನ್ನ ಕೆಲಸ ಮರೆತೇ ಬಿಟ್ಟೆ. ಆ ಗೂಬೆ manager ನನ್ನ ಬೆಂಡೆತ್ತುವುದಕ್ಕೆ ಮೊದಲು ನಾನು ನನ್ನ ಟೀಮ್ ನವರನ್ನು ವಿಚಾರಿಸಿಕೊಳ್ಳಬೇಕಾಗಿದೆ.

i want everyone in my cabin NOW ಅಂತ ಹೊಸದಾಗಿ ಸೇರಿದ ಬಚ್ಚಾನಿಗೆ ಫೋನ್ ಮಾಡಿ ಗದರಿಸಿ ಮತ್ತೆ ಸಂತೋಷನಿಗೆ ಫೋನ್ ಮಾಡಲು ಕೂತೆ. ಯಾಕಂತೆ ದಿಲೀಪ NID ಸೇರಿದ್ದು ಅಂತ ಕೇಳಲು ನಾಲಿಗೆ ತುರಿಸುತ್ತಿತ್ತು. ಮನಸ್ಸು ಯಾಕೋ ನಿಮ್ಮದಿಯಾಗಿತ್ತು. ನಿಜ ಹೇಳಬೇಕೆಂದರೆ ನಮಗೆ ನಮ್ಮ hero ವಾಪಾಸ್ ಸಿಕ್ಕಿದ್ದ ಮತ್ತು ಅವನಿನ್ನೂ hero ಆಗಿಯೇ ಇದ್ದ. ಸಂತೋಷನ ನಂಬರ್ ಹುಡುಕುತ್ತಿರುವಾಗ ನನಗರಿವಿಲ್ಲದಂತೆ ಬಾಯಿಂದ ಬಂತು "ದಿಲೀಪ.... ಏನು..... ಬೇಕಾದರೂ....."

**ವಿಭೂತಿ**

Monday, November 06, 2006

"ನಿಮ್ಮ ಅಜ್ಜನ ಹಾಗೇ ಇದ್ದೀಯ" ಅಜ್ಜಿ ನನ್ನನ್ನು ಕಂಡಾಗಲೆಲ್ಲಾ ಹೇಳುತ್ತಿದ್ದರು. ಅಜ್ಜಿ ಅಂದರೆ ನನ್ನ ಸ್ವಂತ ಅಜ್ಜಿ ಏನಲ್ಲ. ಅವರನ್ನ ನನ್ನ ಅಮ್ಮನೂ ಅಜ್ಜಿ ಅಂತಲೇ ಕರೆಯುತ್ತಿದ್ದರು, ಅದ್ದಕ್ಕೆ ನಾನು ಹಾಗೇ ಕರೆಯುತ್ತಿದ್ದೆ. ನಮ್ಮ ಕುಟುಂಬದವರೊಬ್ಬರ ಮನೆಯ ಮೂಲೆಯ ಕೋಣೆಯಲ್ಲಿರುತ್ತಿದ್ದ ಅಜ್ಜಿಯ ಬಗ್ಗೆ ನನಗೇನೋ ಪ್ರೀತಿ. ಬಹುಶಃ ಅವರು ನನ್ನನ್ನ ನೋಡಿದ ಕೂಡಲೇ ನನ್ನ ಅಜ್ಜನ ಬಗ್ಗೆ ಮಾತಾಡುಮದು ನನಗೆಲ್ಲೋ ಹಿಡಿಸಿರಬೇಕು. ಮತ್ತೆ ಅವರು ಅಜ್ಜ ಅಂತಿದ್ದದ್ದು ನನ್ನ ಅಜ್ಜನನ್ನಲ್ಲ- ನನ್ನ ಅಮ್ಮನ ಅಜ್ಜನನ್ನ- ಅಂದರೆ ನನ್ನ ಮುತ್ತಜ್ಜನನ್ನ.

ನಾನೇನೂ ನನ್ನ ಅಜ್ಜನನ್ನ, ಅಂದರೆ ನನ್ನ ಮುತ್ತಜ್ಜನನ್ನ ನೋಡಿರಲಿಲ್ಲ ಬಿಡಿ. ನನ್ನ ಅಮ್ಮನಿಗೆ ಅವರ ಬಗ್ಗೆ ಸ್ವಲ್ಪ ಗೊತ್ತಿದ್ದರೂ ನನ್ನ ಬಳಿ ಏನೂ ಹೇಳುತ್ತಿರಲಿಲ್ಲ. ನನ್ನ ಪಾಲಿಗೆ ಅಜ್ಜನನ್ನ ಜೀವಂತವಾಗಿ ತಂದು ನಿಲ್ಲಿಸುತ್ತಿದ್ದವಳು ಈ ಅಜ್ಜಿ ಮಾತ್ರ. ಎಷ್ಟೋ ವಯಸ್ಸಾದಂತೆ ಕಾಣುತ್ತಿದ್ದ ಅಜ್ಜಿ ನನ್ನನ್ನು ನೋಡಿದ ಕೂಡಲೇ ಬೇರೆಯ ಕಾಲವೊಂದಕ್ಕೆ ಹೋಗುತ್ತಿದ್ದಳು. ಅವಳು ಅಜ್ಜನನ್ನು ವರ್ಣಿಸುತ್ತಿದ್ದರೆ ನಾನೂ ಅವಳೊಡನೆ ಆ ಕಾಲಕ್ಕೇ ಹೋಗಿಬಿಡುತ್ತಿದ್ದೆ. ಅಲ್ಲಿ ಅಜ್ಜಿ ನನಗೆ ಅಜ್ಜನನ್ನು ತೋರಿಸುತ್ತಿದ್ದಳು. ನಾನು ಕಣ್ಣು ಮುಚ್ಚದೆ ಅವರನ್ನೇ ನೋಡುತ್ತಿದ್ದೆ.

"ಅವರು ಪದ್ಮಾಸನ ಹಾಕಿ ಪೂಜೆ ಮಾಡುತ್ತಿದ್ದರೆ ಶಿವನೇ ಕೂತಂತೆ ಅನ್ನಿಸುತ್ತಿತ್ತು. ಆ ಕಳೆ ನಿಮ್ಮ ಪೈಕಿ ಯಾರಿಗೂ ಬರಲಿಲ್ಲ ನೋಡು - ನಿನ್ನನ್ನ ಬಿಟ್ಟು" ಅಜ್ಜಿ ಹೇಳುತ್ತಿದ್ದರೆ ನನ್ನ ಕಣ್ಣ ಮುಂದೆ ತೇಜಸ್ವಿ ಬ್ರಾಹ್ಮಣನೊಬ್ಬನ ಮುಖ ಹೊಳೆಯುತ್ತಿತ್ತು. ಅಜ್ಜಿಯ ವರ್ಣನೆ ಹೆಚ್ಚಾದಂತೆ ಆ ಮುಖ ಸ್ಪಷ್ಟವಾಗುತ್ತಿತ್ತು. ಮತ್ತೆ ಆ ಮುಖ.....ಅರೇ..... ನನ್ನನ್ನೇ ಹೋಲುತ್ತಿತ್ತು. ಇದೇನು ನಾನೇ ಪದ್ಮಾಸನ ಹಾಕಿ ಕೂತಂತೆ, ಸರಾಗವಾಗಿ ಮಂತ್ರ ಹೇಳಿದಂತೆ, ಸುತ್ತಲೂ ಪರಿಚಿತರಂತೆ ಕಾಣುವ ಜನ, ಗಂಟೆ ಶಬ್ದ, ಹೂವಿನ ಪರಿಮಳ- ನಾನ್ಯಾಮದೋ ಲೋಕಕ್ಕೆ ಹೋಗಿಬಿಡುತ್ತಿದ್ದೆ.

ಪ್ರತಿ ಸಾರಿ ಹೋದಾಗಲೂ ನನಗೆ ಅಜ್ಜನ ಬೇರೆ ಬೇರೆ ರೂಪಗಳು ಸಿಗುತ್ತಿತ್ತು. ವೇದ ಕಲಿಯಲು ಅಜ್ಜ ಮಠಕ್ಕೆ ಹೋದದ್ದು, ಅಲ್ಲಿ ೧೪ ವರ್ಷ ಅಭ್ಯಾಸ ಮಾಡಿದ್ದು, ಕಾಶಿಯಿಂದ ಬಂದ ವಿದ್ವಾಂಸರನ್ನು ಅಜ್ಜ ಸೋಲಿಸಿದ್ದು, ಅದ್ದಕ್ಕೆ ಸಂತೋಷಿಸಿದ ಶ್ರೀಗಳು ಅಜ್ಜನಿಗೆ ಬಿರುದು ಕೊಟ್ಟಿದ್ದು, ಅವರ ಪಾಂಡಿತ್ಯಕ್ಕೆ ತಲೆದೂಗಿ ಊದ್ದನಾಮದವರೂ ಅವರನ್ನು ಪುರೋಹಿತರನ್ನಾಗಿ ಕರೆದ್ದದ್ದು, ಊರಿನ ಸಮಸ್ತರು ಅವರಿಗೆ "ಬ್ರಹ್ಮರ್ಷಿ" ಬಿರುದು ಕೊಟ್ಟದ್ದು - ಈ ಎಲ್ಲಾ ಕತೆಗಳನ್ನು ನನಗೆ ಅಜ್ಜಿಯೇ ಹೇಳಿದ್ದು. ಅವರು ನೂರು ಸಾರಿ ಹೇಳಿದರೂ ನನಗಂತೂ ಬೇಜಾರಾಗುತ್ತಿರಲಿಲ್ಲ. ಮತ್ತೆ ಮತ್ತೆ ನಾನು ಅದನ್ನೇ ಕೇಳಲು ಇಷ್ಟ ಪಡುತ್ತಿದ್ದೆ.

ಮನೆಯಲ್ಲಿಯೂ ಎಲ್ಲೆಲ್ಲೂ ಅಜ್ಜನೇ. ನಾವಿರುವ ಮನೆ ಅಜ್ಜ ಕಟ್ಟಿಸಿದ್ದಂತೆ. ದೇವರ ಮನೆಯಲ್ಲಿದ್ದ ನಾನಾ ರೂಪದ ಶಿವಲಿಂಗಗಳನ್ನೂ ಅವರೇ ಕಾಶಿ, ರಾಮೇಶ್ವರ ಅಂತ ಎಲ್ಲೆಲ್ಲಿಂದಲೋ ತಂದದ್ದಂತೆ. ಉಪನಯನವಾದ ಮೇಲೆ ಅವಕ್ಕೆಲ್ಲಾ ನನ್ನದೇ ಪೂಜೆ. ಅಲ್ಲಿ ಮರದ ಚಿಕ್ಕ ಡಬ್ಬವೊಂದಿತ್ತು. ಅದರಲ್ಲೇನಿತ್ತೂ ನನಗೆ ಗೊತ್ತಿರಲಿಲ್ಲ ಆದರೆ ಅದನ್ನೂ ನಾನು ದಿನವೂ ಪೂಜೆ ಮಾಡುತ್ತಿದ್ದೆ. ನಾವಿರುವ ಮನೆಯಲ್ಲದೇ ನಮಗೆ ಇನ್ನೊಂದು ಮನೆಯೂ ಇತ್ತು. ಊರಿನಿಂದ ಸ್ವಲ್ಪ ದೂರ ಕೆರೆಯ ಪಕ್ಕ ಇದ್ದ ಚಿಕ್ಕ ಮನೆ ನಮಗೆ ಸೇರಿದ್ದೆಂದು ಅಮ್ಮ ನನಗೆ ಹೇಳಿದ್ದಳು. ಯಾರೋ ಅಜ್ಜನಿಗೆ ದಾನ ಕೊಟ್ಟಿದ್ದರಂತೆ ಅದನ್ನ.

ಅಕ್ಕನಿಗೆ ಮದುವೆ ನಿಶ್ಚಯವಾಗಿತ್ತು. ಆ ವೇಳೆಗಾಗಲೇ ಅಜ್ಜಿ ತೀರಿಹೋಗಿ ಬಹಳ ವರ್ಷವಾಗಿತ್ತು. ನಾನಂತೂ ವಿಭೂತಿ ಬಳಿದು, ಪದ್ಮಾಸನ ಹಾಕಿ ಪೂಜೆ ಮಾಡುತ್ತಲೇ ಇದ್ದೆ. ಅಮ್ಮ ಅಂಗಡಿ ಹಾಕಿಕೊಟ್ಟಿದ್ದರೂ ನನಗೆ ತ್ರಿಕಾಲ ಸಂಧ್ಯಾವಂದನೆ, ಏಕಾದಶಿ, ಶ್ರೀಪಾದಂಗಳು - ಇದೇ ಪ್ರಪಂಚ. ಹಾಗಾಗಿ ಅಕ್ಕನ ಮದುವೆ ವಿಚಾರದಲ್ಲಿ ಅಮ್ಮನೇ ಮೇಲುಸ್ತುವಾರಿ ವಹಿಸಿಕೊಂಡು ಓಡಾಡುತ್ತಿದ್ದಳು. ಮದುವೆ ಖರ್ಚಿಗೆ ಬೇಕೂಂತ ಕೆರೆಯ ಬಳಿಯ ಮನೆಯನ್ನ ಮಾರುವ ಮನಸ್ಸು ಮಾಡಿದ ಅಮ್ಮ ನನ್ನನ್ನ ಕರೆದುಕೊಂಡು ವಕೀಲರ ಮನೆಗೆ ಹೋದಳು.

ವಕೀಲರು ನಮಗೆ ಹಳೆಯ ಪರಿಚಯ. ಅವರ ತಂದೆ ನಮ್ಮ ಊರಿನ ಶಾನುಬೋಗರಾಗಿದ್ದರಂತೆ. ಹಾಗಾಗಿ ಅವರಿಗೆ ನಮ್ಮ ಊರಿನ ಮುಕ್ಕಾಲು ಪಾಲು ಕತೆ ಗೊತ್ತಿತ್ತು. ಅಮ್ಮ ಮನೆಯ ವಿಚಾರ ಅವರಲ್ಲಿ ಹೇಳಿದಾಗ ಅವರು ಗಂಭೀರರಾದರು. ಅದನ್ನ ಮಾರಲೇ ಬೇಕಾ ಅಂತ ಪದೇ ಪದೇ ಕೇಳಿದರು. ಅಮ್ಮ ಇರುವ ವಿಷಯ ಹೇಳಿದಳು. ಅಂಗಡಿಯಿಂದ ಬರುವ ಆದಾಯ ಅಷ್ಟರಲ್ಲಿಯೇ ಇದೆ. ಮತ್ತೆ ಅಕ್ಕನಿಗೆ ಬಹಳ ಸಮಯದ ನಂತರ ಒಳ್ಳೆಯ ಸಂಬಂಧ

ಬಂದಿದೆ, ಬಿಟ್ಟರೆ ಕಷ್ಟ. ಅಕ್ಕನ ಮದುವೆಯೊಂದು ಆಗಿ ಹೋದರೆ ಮುಗಿಯಿತು. ಆಮೇಲೆ ಹೇಗೋ ನಡೆಯುತ್ತದೆ. ಯಾರೋ ಅಜ್ಜನಿಗೆ ದಾನ ಕೊಟ್ಟ ಮನೆ. ಹೀಗೆ ಕಷ್ಟ ಕಾಲದಲ್ಲಿ ನೆರವಿಗೆ ಬರುತ್ತಿದೆ.

ಈಗ ಇರುವ ಮನೆಯ ಮೇಲೆ ಸಾಲ ತೆಕ್ಕೊಳ್ಳಿ ಅಂತ ವಕೀಲರು ಸಲಹೆ ಕೊಟ್ಟರು. ಆದರೆ ಅಮ್ಮನಿಗೆ ಅದು ಸರಿಕಾಣಲಿಲ್ಲ. ಎಷ್ಟಿದ್ದರೂ ಊರ ಹೊರಗಿನ ಮನೆ. ಅಲ್ಲಿ ಹೋಗಿ ನಾವಿರುವುದು ಅಷ್ಟರಲ್ಲಿಯೇ ಇದೆ. ಆ ಮನೆಯ ಪಕ್ಕದ ತೋಟದವರು ಮನೆ ತೆಕ್ಕೊಳಲು ತಯಾರಿದ್ದಾರೆ. ಮಾರಿಬಿಡೋಣ, ಅದರಲ್ಲೇನಿದೆ ಅಂತ ಅಮ್ಮ ಪರಿಪರಿಯಾಗಿ ಹೇಳಿದರು. ಆದರೆ ವಕೀಲರು ಯಾಕೋ ಮನಸ್ಸು ಮಾಡುತ್ತಿರಲಿಲ್ಲ. ಈಗ ಮನೆಗೆ ಹೋಗಿ, ಪುನಃ ಯೋಚಿಸಿ. ಮಾರಲೇ ಬೇಕೂಂತ ಅನ್ನಿಸಿದರೆ ಸಾಯಂಕಾಲ ಮತ್ತೆ ಬನ್ನಿ ಅಂತ ವಕೀಲರು ನಮಗೆ ಹೇಳಿ ಕೋರ್ಟಿಗೆ ಹೋದರು.

ಅಮ್ಮ ಅಂತೂ ಮನೆಗೆ ಬಂದು ಒಂದೇ ಸಮನೆ ಅಳ್ಳಿಕೆ ಶುರುಮಾಡಿದಳು. ಮನೆಯನ್ನು ಮಾರದೆ ಬೇರೆ ದಾರಿಯೇ ಇಲ್ಲವೆಂದು ನನಗೆ ಪದೇ ಪದೇ ಹೇಳಿದಳು. ಸರಿ ಸಂಜೆ ಇದೇ ಮಾತನ್ನ ವಕೀಲರಿಗೆ ಹೇಳೋಣವೆಂದು ಅವಳನ್ನ ಸಮಾಧಾನ ಪಡಿಸಿ ನಾನು ಅಂಗಡಿಗೆ ಹೊರಟೆ. ಸಂಜೆಯವರೆಗೆ ಮನಸ್ಸಿನ ತುಂಬಾ ಅಜ್ಜನೇ ತುಂಬಿದ್ದರು. ಯಾರು ಆ ಮನೆಯನ್ನ ಅಜ್ಜನಿಗೆ ದಾನ ಕೊಟ್ಟಿರಬಹುದು? ಯಾಕಾಗಿ ಕೊಟ್ಟಿರಬಹುದು? ಅಮ್ಮನಿಗೂ ಇದೆಲ್ಲಾ ಗೊತ್ತಿರಲ್ಲಿಲ್ಲ ಅಂತ ಕಾಣ್ತದೆ. ಅಜ್ಜಿ ಇರಬೇಕಿತ್ತು ಈಗ- ನನಗೆ ಪದೇ ಪದೇ ಅನ್ನಿಸುತ್ತಿತ್ತು.

ಐದು ಗಂಟೆಯಾಗಿದ್ದೇ ತಡ ಅಂಗಡಿಯನ್ನು ಮಾಣಿಗೆ ವಹಿಸಿ ಮನೆಗೆ ದೌಡಾಯಿಸಿದೆ. ಅಮ್ಮ ಆಗಲೇ ಹೊರಟು ನಿಂತಿದ್ದಳು. ಅಕ್ಕ ಕೂಡ ಈಗ ನಮ್ಮ ಜೊತೆ ಬರುವವಳಿದ್ದಳು. ನಾವೆಲ್ಲಾ ಮನೆ ಮಾರುವುದು ಖಂಡಿತ ಅಂತ ವಕೀಲರಿಗೆ ಹೇಳುವುದೆಂದು ನಿಶ್ಚಯ ಮಾಡಿಕೊಂಡೆವು. ಅಮ್ಮ ನನಗೆ ಮತ್ತು ಅಕ್ಕನಿಗೆ ಮನೆಯ ವಿಚಾರದಲ್ಲಿ ನಮ್ಮದೇನೂ ಅಭ್ಯಂತರವಿಲ್ಲ, ಅಮ್ಮ ಹೇಳಿದ ಹಾಗೆ ಮಾಡಬೇಕೆಂದು ವಕೀಲರಿಗೆ ಹೇಳುವಂತೆ ವಿಶೇಷವಾಗಿ ಹೇಳಿದಳು. ಆಯ್ತು, ಆದರೆ ನೀನು ಅಲ್ಲಿ ಮತ್ತೆ ಅಳ್ಳಿಕ್ಕೆ ಕೂಡದು ಅಂತ ಅಮ್ಮನಿಗೆ ಹೇಳಿದೆ.

ನಾವು ಮೂರೂ ಮಂದಿ ಮನೆಗೆ ಬಂದಿರುವುದು ನೋಡಿ ವಕೀಲರಿಗೆ ನಮ್ಮ ನಿರ್ಧಾರದ ಬಗ್ಗೆ ಗೊತ್ತಾಗಿರಬೇಕು. ಅವರು ನಮಗೆಲ್ಲಾ ಕಾಫಿ ತರಿಸಿ ಮೆಲ್ಲನೆ ಮಾತು ಆರಂಭಿಸಿದರು. ಮೊದಲು ಬೆಳಗ್ಗೆ ಹೇಳಿದ್ದನ್ನೇ ಬೇರೆ ರೀತಿಯಲ್ಲಿ ಹೇಳಿದರು. ನಿಮ್ಮ ಮಗನಿಗಿನ್ನೂ ಮದುವೆಯಾಗಿಲ್ಲ. ನಾಳೆ ಅವನ ಮಕ್ಕಳ ಕಾಲಕ್ಕಾದರೂ ಮನೆಯ ಅವಶ್ಯಕತೆ ಬರಬಹುದು. ಯಾಕೆ ಸುಮ್ಮನೆ ಭೂಮಿಯನ್ನು ಮಾರುತ್ತೀರಿ ಅಂತ ಹೇಳುತ್ತಾ ಹೋದರು. ನನಗಂತೂ ವಕೀಲರು ನಮ್ಮಿಂದ ಏನನ್ನೋ ಮುಚ್ಚಿಡುತ್ತಿದ್ದಾರೆಂದು ಅನ್ನಿಸಲು ಶುರುವಾಯ್ತು. ಬಹುಶಃ ಅಮ್ಮನಿಗೂ ಹಾಗೇ ಅನಿಸಿರಬೇಕು. ಅಮ್ಮ ದೃಡವಾಗಿ ಹೇಳಿದಳು "ಇಲ್ಲ ವಕೀಲರೆ, ಮನೆ ಮಾರುವುದಂತೂ ಖಂಡಿತ. ನೀವು ಏನೋ ವಿಶಯ ನಮ್ಮಿಂದ ಮುಚ್ಚಿಡುತ್ತಿದ್ದೀರಿ. ಮಾರಲು ಏನು ತೊಂದರೆ ಇದೆ ಅಂತ ಸರ್ತ ಹೇಳಿ."

ವಕೀಲರು ಇಕ್ಕಟ್ಟಿಗೆ ಸಿಕ್ಕಿದವರಂತೆ ಕಂಡರು. ಆದರು ಕಾರಣ ಗೊತ್ತಾಗದೇ ನಾವು ಬಿಡುವುದಿಲ್ಲ ಅಂತ ಗೊತ್ತಾದ ಮೇಲೆ ನಮ್ಮ ಮುಂದೆ ಹಳೆಯ ಕತೆಯೊಂದನ್ನು ಬಿಚ್ಚಿಟ್ಟರು. ನಾನು ಅಜ್ಜಿಯ ಬಾಯಿಂದ ಮಾತ್ರ ಕೇಳಿದ ಅಜ್ಜನ ಕತೆಯನ್ನು ಈಗ ಈ ವಕೀಲರು ನಮ್ಮ ಮುಂದಿಡುತ್ತಿದ್ದರು. ಇದು ನನ್ನ ಅಜ್ಜ, ಅಂದರೆ ನನ್ನ ಅಮ್ಮನ ಅಜ್ಜನ ಕಾಲದಲ್ಲಿ ನಡೆದ ಕತೆ -

ಮಠದಲ್ಲಿ ಕಾಶಿಯಿಂದ ಬಂದ ವಿದ್ವಾಂಸರನ್ನು ಸೋಲಿಸಿದ ಬ್ರಾಹ್ಮಣನನ್ನು ಊರಿನವರು ಆದರದಿಂದ ಬರಮಾಡಿಕೊಂಡರು. ಈ ಯುವಕ ವಿಭೂತಿ ಬಳಿದುಕೊಂಡ ಶಿವನಂತೆ ಕಾಣುತ್ತಿದ್ದ ಎಂದು ಊರಿನ ಸಮಸ್ತ ವಿಪ್ರಕುಲದಲ್ಲಿ ಚರ್ಚೆ ನಡೆಯುತ್ತಿತ್ತು. ಊರಿನಲ್ಲಿದ್ದ ಮಠದ ಶಾಖೆಯಲ್ಲಿ ತಂಗಿದ್ದ ಈ ತೇಜಸ್ವಿಯನ್ನು ಆ ಊರಿನ ಪ್ರಮುಖರು ಮನೆಗೆ ಆಹ್ವಾನಿಸಿದರು. ಪ್ರಮುಖರಿಗೆ ಆಗಲೇ ಗುರುಮುಖದಿಂದ ವೇದಾಧ್ಯಯನ ನಡೆದಿತ್ತು. ಅಂತಹ ಉದ್ದನಾಮದ ಪ್ರಮುಖರು ಈ ಯುವಕನನ್ನು ತಮ್ಮ ಮನೆಗೆ ಕರೆಸಿಕೊಂಡದ್ದು ಮಠದಲ್ಲಿ ಎಲ್ಲರಿಗೂ ಒಂದು ಪ್ರತಿಷ್ಠೆಯ ವಿಷಯವಾಗಿತ್ತು.

ಶ್ರೀಮಠದ ಬಗ್ಗೆ ಎಲ್ಲರಿಗೂ ಗೌರವ ಇದ್ದರೂ ಮಠದ ಶಿಷ್ಯರ ಬಗ್ಗೆ ನಾಮದವರಲ್ಲಿ ಒಳ್ಳೆಯ ಅಭಿಪ್ರಾಯವಿರಲಿಲ್ಲ. ವಿಭೂತಿಗಿಂತ ಗಂಧಾಕ್ಷತೆಯೇ ಪ್ರಧಾನವೆಂದು ಜನ ನಂಬಿದ್ದ ಕಾಲವದು. ಈ ಹೊಸ ಬ್ರಹ್ಮಚಾರಿಗೂ ಈ ವಿಷಯ ಗೊತ್ತಿಲ್ಲದೇ ಇರಲಿಲ್ಲ. ಹೇಗಾದರೂ ಮಾಡಿ ಈ ನಾಮದವರಿಗೆ ಬುದ್ಧಿ ಕಲಿಸಬೇಕೆಂದು ಮಠದ ಭಕ್ತರೆಲ್ಲರೂ ಈ ಬ್ರಾಹ್ಮಣನನ್ನು ಕೇಳಿಕೊಂಡರು. ಕಾಲ ಬಂದಾಗ ನೋಡೋಣ ಎಂದುಕೊಂಡು ವರು ಸುಮ್ಮನಿದ್ದರು .

ಪ್ರಮುಖರ ಮನೆಗೆ ದಯಮಾಡಿಸಿದ ವಿಭೂತಿದಾರಿ ಬ್ರಾಹ್ಮಣನ ಮಾತು ಕೇಳಲು ನಾಮದವರೆಲ್ಲಾ ಬಂದು ಸೇರಿದ್ದರು. ಬ್ರಾಹ್ಮಣರು ನೆರೆದವರನ್ನು ಯಾರು ಬೇಕಾದರೂ ಯಾವ ವಿಷಯದ ಮೇಲಾದರೂ ತಮ್ಮನ್ನು ಪ್ರಶ್ನಿಸಬಹುದೆಂದು ತಿಳಿಸಿದರು. ಇದ್ದಕ್ಕೆ ಕಾಯುತ್ತಿದ್ದವರಂತೆ ನಾಮದವರೆಲ್ಲಾ ಒಂದೇ ಸಮನೆ ಪ್ರಶ್ನೆ ಕೇಳಲು ಶುರುಮಾಡಿದರು - ಕಾವ್ಯ, ಶಾಸ್ತ್ರ, ನ್ಯಾಯ, ವೇದಾಂತ..ಮತ್ತಿನ್ನೇನೇನೋ. ಪ್ರಶ್ನೆಗಳ ಸುರಿಮಳೆಗೆ ಬ್ರಾಹ್ಮಣ ಹೆದರಲಿಲ್ಲ. ಉತ್ತರದ ಮೇಲೊಂದುತ್ತರ, ಟಿಪ್ಪಣಿಯ ಮೇಲೊಂದು ಟಿಪ್ಪಣಿ ಹೀಗೆ ಬಹಳ ಹೊತ್ತು ನಡೆಯಿತು. ಕೊನೆಗೆ ಊಟಕ್ಕೆ ಮೊದಲು ಪೂಜೆಯ ಸಮಯವಾಯಿತೆಂದು ಬ್ರಾಹ್ಮಣ ಎದ್ದ.

ಪೂಜಾಕೋಣೆಗೆ ಹೋದವನೇ ತಾನು ತಂದಿದ್ದ ಶಿವಲಿಂಗವನ್ನು ಅಲ್ಲಿಟ್ಟು ಜೋರಾಗಿ ಪಂಚಾಕ್ಷರೀ ಜಪ ಶುರುಮಾಡಿದ. ನೋಡುತ್ತಿದ್ದ ನಾಮದವರೆಲ್ಲಾ ಒಂದು ಕ್ಷಣ ದಂಗಾಗಿ ನಿಂತುಬಿಟ್ಟರು. ಏನು ನಡೆಯುತ್ತಿದೆ ಅಂತ ತಿಳಿಯುವ ಮೊದಲೇ ಗಂಧ-ಚಂದನದಿಂದ ಶೋಭಿಸುತ್ತಿದ್ದ ದೇವರುಗಳೆಲ್ಲಾ ವಿಭೂತಿದಾರಿಗಳಾದರು. ಮನೆಯ ಯಜಮಾನರಂತೂ ಏನೂ ಮಾತನಾಡಲಿಕ್ಕಾಗದೇ ಸುಮ್ಮನೇ ನಿಂತಿದ್ದರು. ಬ್ರಾಹ್ಮಣ ಸಾಂಗವಾಗಿ ಪೂಜೆ ಮುಗಿಸಿ ಎಲ್ಲರಿಗೂ ತೀರ್ಥ ನೀಡಿ ಇನ್ನು ಪ್ರಸಾದ ಸಂತರ್ಪಣೆ ಮಾಡಬಹುದೆಂದು ಪ್ರಮುಖರಿಗೆ ತಿಳಿಸಿದರು.

ಕರೆದ ಬ್ರಾಹ್ಮಣರನ್ನು ಊಟ ಮಾಡಿಸದೇ ಕಳಿಸುವುದು ಸರಿಯಲ್ಲವೆಂದುಕೊಂಡ ಪ್ರಮುಖರು ಬ್ರಾಹ್ಮಣ ಮತ್ತು ಅವರ ಜೊತೆ ಮಠದಿಂದ ಬಂದಿದ್ದ ಸಮಸ್ತರಿಗೆ ಊಟ ಹಾಕಿ ಕಳುಹಿಸಿಕೊಟ್ಟರು. ಮಠಕ್ಕೆ ಹಿಂದಿರುಗಿದ ಬ್ರಾಹ್ಮಣ ಏನೂ ನಡೆದೇ ಇಲ್ಲವೇನೋ ಎಂಬಂತೆ ಧ್ಯಯನಕ್ಕೆ ಕೂತುಕೊಂಡರು . ಆದರೆ ಮಠದ ಇತರೇ ನಿವಾಸಿಗಳು ಈ ಮಹತ್ತರ ಸಮಾಚಾರವನ್ನು ಶ್ರೀಪಾದಂಗಳಿಗೆ ತಿಳಿಸಲು ಮುಖ್ಯಮಠಕ್ಕೆ ತೆರಳುವ ಸಿದ್ಧತೆ ಮಾಡಿಕೊಳ್ಳುತ್ತಿದ್ದರು.

ಸಂಜೆಯ ಪೂಜೆಗೆ ಬ್ರಾಹ್ಮಣರು ಮಡಿ ಉಟ್ಟುಕೊಳ್ಳುತ್ತಿದ್ದಾಗ ದೂರದಲ್ಲಿ ಪ್ರಮುಖರು ನಡೆದು ಬರುತ್ತಿದ್ದುದು ಕಾಣಿಸಿತು. ಕೈಯಲ್ಲಿ ಬೆಳ್ಳಿಯ ಗಿಂಡಿ ಹಿಡಿದುಕೊಂಡಿದ್ದ ಪ್ರಮುಖರ ಹಣೆಯಲ್ಲಿ ಯಾವಾಗಲೂ ಇರುತ್ತಿದ್ದ ನಾಮ ಈಗ ಇರಲಿಲ್ಲ. ಬಂದವರೇ ಬ್ರಾಹ್ಮಣರನ್ನು ಮಾತಾಡಿಸಬೇಕೆಂದು ಆರಿಕೆ ಮಾಡಿಕೊಂಡರು. ಪೂಜೆ ಮುಗಿಸಿ ಬರುತ್ತೇನೆ, ನಂತರ ನಿಧಾನವಾಗಿ ಮಾತಾಡೋಣ ಎಂದು ಬ್ರಾಹ್ಮಣರು ಹೇಳಿದ್ದನ್ನೂ ಲೆಕ್ಕಿಸದೇ ತುಳಸೀ ಕಟ್ಟೆಯ ಹತ್ತಿರ ಬರುವಂತೆ ಅವರನ್ನು ಬಲವಂತ ಮಾಡಿದರು.

ಮಠದ ಮುಂದಿದ್ದ ತುಳಸಿ ಕಟ್ಟೆಯ ಬಳಿಗೆ ಬಂದಾಗ ಬ್ರಾಹ್ಮಣನಿಗೆ ಪ್ರಮುಖರ ಮುಖ ಸ್ಪಷ್ಟವಾಗಿ ಕಂಡಿತು. ಅವರ ಕಣ್ಣಲ್ಲಿ ನೀರು ಸಣ್ಣಗೆ ಹರಿಯುತ್ತಿತ್ತು. ಆದರೂ ಅವರು ದೃಡವಾಗಿ ಬ್ರಾಹ್ಮಣರನ್ನು ಕುರಿತು ಒಂದು ಮಾತು ಹೇಳಿದರು. "ನೀವು ನಮ್ಮಲ್ಲಿ ಪ್ರಸಾದ ಸ್ವೀಕರಿಸಿದ್ದೀರಿ. ಆದರೆ ನಾನು ತಮಗೇನೂ ದಕ್ಷಿಣೆ ಕೊಡಲಿಲ್ಲ. ಆದ್ದರಿಂದ ಈಗ ನಾನು ನಿಮಗೆ ಅದನ್ನು ಕೊಡಲು ಬಂದಿದ್ದೇನೆ. ತಾವು ಇಲ್ಲ ಅನ್ನದೆ ಸ್ವೀಕರಿಸಬೇಕು"

ಬ್ರಾಹ್ಮಣನಿಗೆ ಏನು ನಡೆದಿದೆಯೆಂದು ತಿಳಿದುಹೋಯ್ತು. ತಾವು ದಕ್ಷಿಣೆ ಸ್ವೀಕರಿಸಲು ಸಿದ್ಧವಿರುವುದಾಗಿ ಕೈಯನ್ನು ಮುಂದುಮಾಡಿದರು. ಪ್ರಮುಖರು ತಮ್ಮ ಗೋತ್ರಾದಿಗಳ ಪ್ರವರ ಹೇಳಿ, ತುಳಸಿಯನ್ನು ಸಾಕ್ಷಿಯಾಗಿ ಮಾಡಿಕೊಂಡು ಬಾಹ್ಮಣರಿಗೆ ದಕ್ಷಿಣೆ ಕೊಟ್ಟವರು. ಏನು ದಕ್ಷಿಣೆ...ತಲತಲಾಂತರದಿಂದ ಬಾಳಿಕೊಂಡು ಬಂದ ತಮ್ಮ ಮನೆಯನ್ನೇ ದಕ್ಷಿಣೆಯಾಗಿ ಕೊಟ್ಟರು. ತಂದಿದ್ದ ಬೆಳ್ಳಿಯ ಗಿಂಡಿಯಲ್ಲಿದ್ದ ನೀರನ್ನು ಬ್ರಾಹ್ಮಣನ ಕೈಗೆ ಸುರಿದು, ಅದನ್ನೂ ಅಲ್ಲಿಯೇ ಬಿಟ್ಟು, ಹಿಂದುರುಗಿ ನೋಡದೆ ಹೊರಟೇ ಹೋದರು ಪ್ರಮುಖರು.

ಎಲ್ಲೋ ತಮ್ಮಿಂದ ತಪ್ಪಾಗಿದೆಯೆಂದು ಬ್ರಾಹ್ಮಣನಿಗೆ ಅನ್ನಿಸುತ್ತಿತ್ತು. ತನಗೆ ಮನೆಯನ್ನೇ ಕೊಟ್ಟು ಹೋದ ಪ್ರಮುಖರು ಆ ನಂತರ ಊರಿನವರ ಕಣ್ಣಿಗೆ ಬೀಳಲಿಲ್ಲ. ಅವರ ಇಡೀ ಸಂಸಾರ ಊರಿನಿಂದ ಮಾಯವಾಗಿತ್ತು. ಇದರಿಂದ ಬಹಳವಾಗಿ ನೊಂದುಕೊಂಡ ಬ್ರಾಹ್ಮಣ ಆ ಮನೆಯ ಕಡೆಗೆ ಸುಳಿಯಲೇ ಇಲ್ಲ. ಆ ಮನೆಯನ್ನು ಶ್ರೀಮಠಕ್ಕೇ ಬಿಟ್ಟುಕೊಡುವುದೆಂದು ಸಂಕಲ್ಪಿಸಿ ಶ್ರೀಪಾದಂಗಳ ಬಳಿಗೆ ಹೋದರೆ ಅವರು ಬ್ರಾಹ್ಮಣನಿಗೆ ದಾನವಾಗಿ ಬಂದದ್ದನ್ನು ತಾವು ಮತ್ತೆ ದಾನವಾಗಿ ತೆಗೆದುಕೊಳ್ಳಲು ಸಿದ್ಧರಿಲ್ಲವೆಂದು ಹೇಳಿದರು. ಬ್ರಾಹ್ಮಣನಿಗೆ ಆ ಮನೆಯನ್ನು ನೋಡಿದಾಗಲೆಲ್ಲಾ ಅಪರಾಧ ಭಾವ ಮೂಡುತ್ತಿತ್ತು. ಆದರೆ ಅಲ್ಲಿ ಮನೆಯಲ್ಲಿದ್ದ ದೇವರುಗಳಿಗೆ ಪೂಜೆ ನಿಲ್ಲಬಾರದೆಂದು ಸಂಕಲ್ಪಿಸಿ ಮಠದಲ್ಲಿದ್ದ ವಟುವನ್ನು ಆ ಮನೆಗೆ ಕಳುಹಿಸಿ ಅಲ್ಲಿದ್ದ ದೇವರುಗಳನೆಲ್ಲಾ ತರಿಸಿಕೊಂಡರು. ಅದನ್ನೆಲ್ಲಾ ಒಂದು ಮರದ ಪೆಟ್ಟಿಗೆಯಲ್ಲಿಟ್ಟು ಅದನ್ನು ದೇವರ ಮನೆಯಲ್ಲಿರಿಸಿದರು.

ಮದುವೆ, ಮಕ್ಕಳು, ಪೌರೋಹಿತ್ಯ, ವೇದಪಾಠ ಇವುಗಳಲ್ಲಿ ಮಗ್ನನಾಗಿ ದಿನ ಕಳೆದಂತೆ ಬ್ರಾಹ್ಮಣ ಆ ಮನೆಯ ವಿಷಯ ಮರೆಯತೊಡಗಿದ. ಊರಿನ ಮತ್ತೊಂದು ಬದಿಯಲ್ಲಿ ದೊಡ್ಡ ಮನೆ ಕಟ್ಟಿಸಿ ಅಲ್ಲಿಯೇ ತನ್ನ ಸಂಸಾರ, ಪಾಠ

ಎರಡನ್ನೂ ಮುಂದುವರೆಸಿದ. ಹೋಗುವಾಗ ಆ ಮರದ ಪೆಟ್ಟಿಗೆಯನ್ನು ಮರೆಯಲಿಲ್ಲ. ಹೊಸ ಮನೆಯಲ್ಲಿ ಶಿವಲಿಂಗಗಳ ಜೊತೆಯಲ್ಲಿ ಅವಕ್ಕೂ ಪೂಜೆ ನಡೆಯುತ್ತಿತ್ತು. ಅವನ ಮಕ್ಕಳ ಕಾಲಕ್ಕೆ ಆ ಕೆರೆಯ ಪಕ್ಕದ ಮನೆ ತಮ್ಮದೆಂದು ಬಿಟ್ಟರೆ ಬೇರೆ ಯಾವ ವಿಷಯವೂ ಅವರಿಗೆ ತಿಳಿದಿರಲಿಲ್ಲ. ಯಾವ ಕಾರಣಕ್ಕೂ ಆ ಮನೆಯನ್ನು ಏನೂ ಮಾರುಮದಾಗಲಿ, ಕೆಡುಮದಾಗಲಿ ಮಾಡಬಾರದೆಂದು ತಮ್ಮ ಅಪ್ಪ ಹೇಳಿದ್ದರಿಂದ ಅವರು ಹಾಗೇ ನಡೆದುಕೊಂಡರು.

"ಆ ಮನೆಯೇ ಈಗ ನೀಮ ಮಾರಬೇಕೆಂದುಕೊಂಡಿರುವ ಮನೆ. ನಿಜ ಹೇಳಬೇಕೆಂದರೆ ನಿಮ್ಮ ಅಜ್ಜನಿಗೆ ಆ ಮನೆ ತನ್ನದೆಂಬ ಭಾವನೆ ಯಾವತ್ತಿಗೂ ಇರಲಿಲ್ಲ. ಆ ಪ್ರಮುಖರನ್ನು ಹೇಗಾದರು ಹುಡುಕಿ, ಮನೆಯನ್ನು ಅವರಿಗೇ ಒಪ್ಪಿಸಬೇಕೆಂದು ಅವರು ಬಹಳ ಕಷ್ಟ ಪಟ್ಟರು. ಅದರೆ ಅವರ್ಯಾರೂ ಸಿಕ್ಕಲಿಲ್ಲ. ಆದರೆ ಒಂದಲ್ಲಾ ಒಂದು ದಿನ ಅವರು ಮರಳಿ ಬಂದಾರೆಂಬ ಆಸೆ ಅವರಲ್ಲಿ ಇತ್ತು. ಅದಕ್ಕೇ ತಮ್ಮ ಮಕ್ಕಳಿಗೆ ಆ ಮನೆಯನ್ನು ಮಾರಬಾರದೆಂದು ತಾಕೀತು ಮಾಡಿದ್ದರು. ನಮ್ಮ ತಂದೆ ಶಾನುಭೋಗರಾಗಿದ್ದರಿಂದ ಅವರಿಗೆ ಈ ವಿಷಯ ತಿಳಿದಿತ್ತು. ನಿಮ್ಮ ಅಜ್ಜ ನನ್ನ ಅಪ್ಪನ ಬಳಿ ಹೇಳಿದ್ದರಂತೆ - ನನ್ನ ಕುಟುಂಬದಲ್ಲಿ ಯಾರಿಗೂ ಆ ಮನೆಯನ್ನು ಮಾರಲು ಬಿಡಬೇಡಿ. ಅದು ನಮಗೆ ಸೇರಿದ್ದಲ್ಲ. ಬ್ರಾಹ್ಮಣನೊಬ್ಬ ಕಣ್ಣೀರಿಟ್ಟು ತಮಗೆ ಕೊಟ್ಟ ದಾನ ಯಾವತ್ತೂ ಒಳ್ಳೆಯದಾಗುಮದಿಲ್ಲ ಅಂತ ನಿಮ್ಮ ಅಜ್ಜ ಯಾವಾಗಲೂ ಹೇಳುತ್ತಿದ್ದರಂತೆ"

ವಕೀಲರು ಮಾತು ಮುಗಿಸಿದಾಗ ರಾತ್ರಿಯಾಗಿತ್ತು. ನಮಗೆಲ್ಲಾ ಮುಂದೆ ಮಾತಾಡಲು ನಾಲಿಗೆಯೇ ಹೊರಳುತ್ತಿರಲಿಲ್ಲ. ಮನೆಗೆ ಪುನಃ ಬಂದಾಗ ಇನ್ನೂ ಪೂಜೆ ಆಗಿಲ್ಲವೆಂದು ಅಮ್ಮ ನನಗೆ ಜ್ಞಾಪಿಸಿದರು. ಮಡಿಯುಟ್ಟು ಪೂಜೆಕೋಣೆಗೆ ಹೋದಾಗ ಆ ಮರದ ಪೆಟ್ಟಿಗೆ ಕಣ್ಣಿಗೆ ಬಿತ್ತು. ಯಾಕೋ ನನಗೆ ಪೂಜೆ ಮಾಡುವ ಮನಸ್ಸೇ ಬರಲಿಲ್ಲ. ಅಮ್ಮ ಗಂಜಿಗೆ ಇಡುತ್ತೇನೆಂದು ಹೇಳಿದರೂ ಅಕ್ಕ ಬೇಡವೆಂದಳು. ನಾನು ಆವಾಗಲೇ ಮಂಚದ ಮೇಲೆರಗಿದ್ದೆ. ಕಣ್ಣು ಮುಚ್ಚಿದವನಿಗೆ ಮತ್ತೆ ಮತ್ತೆ ಅಜ್ಜನ ಮುಖವೇ ಕಾಣಿಸುತ್ತಿತ್ತು. ಪದ್ಮಾಸನ ಹಾಕಿ ಕುಳಿತ ಅಜ್ಜ, ಕಣ್ಮುಚ್ಚಿ ಪಂಚಾಕ್ಷರಿ ಜಪಿಸುತ್ತಿದ್ದ ಅಜ್ಜ, ಮುಖ ಸ್ಪಷ್ಟವಾಗಿ ಕಾಣುತ್ತಿದೆ...ಅರೇ ಇದೇನು....ಸದಾ ನನ್ನಂತೇ ಕಾಣುತ್ತಿದ್ದ ಮುಖ....ಈಗ ಬೇರೆ ತರಹ....ಹೌದು ಇದು ನಾನಲ್ಲ....ಮತ್ತೆ..ಮತ್ತೆ...ಇದೇನು.. ಅಜ್ಜನ
ಹಣೆಯಲ್ಲಿ...ವಿಭೂತಿಯೇ ಇಲ್ಲ....

<u>ದಿನೇಶ "ಬಾಜಿಗರ್" ನೋಡಿದ್ದು</u>

Tuesday, November 14, 2006

ಮೇ ೧೯೯೧

ಅದು ನಿಜವಾಗಲೂ ಕಷ್ಟದ ಕಾಲ. ಮೊದಲು ರಾಜೀವ್ ಗಾಂಧಿಯ ಹತ್ಯೆಯಾಗಿತ್ತು. ಅಮ್ಮನ ಹಾಗೆ ಮಗನಿಗೂ ಬರಬಾರದ ಸಾವು ಬಂದಿತ್ತು. ದೇಶದ ಜನರೆಲ್ಲಾ ಟೀವಿಯ ಮುಂದೆ ಕುಳಿತು ದೇಹದ ತುಂಡುಗಳನ್ನೊಳಗೊಂಡ ಚೀಲವನ್ನು ಗಂಧದ ಕೊರಡುಗಳ ಮೇಲೆ ಮಲಗಿಸಿ ಬೆಂಕಿ ಇಡುವುದನ್ನು ನೋಡಿದರು. "ಮಕ್ಕಳನ್ನ ಕರೆದುಕೊಂಡು ಎಲ್ಲಾದರೂ ದೂರ ಹೋಗಿಬಿಡಮ್ಮಾ, ಇಲ್ಲಿದ್ದರೆ ನಿಮಗೂ ಇದೇ ಸ್ಥಿತಿ ಬರುವುದು ಖಂಡಿತ" ಹೆಣ್ಣುಕರುಳುಗಳೆಲ್ಲಾ ಟೀವಿಯಲ್ಲಿ ಕಾಣುತ್ತಿದ್ದ ಬಿಳಿವಿಧವೆಗೆ ಬುದ್ದಿಹೇಳುತ್ತಿದ್ದರು.

ಶಂಕರನಿಗೆ ಸತ್ತವನ ಮೇಲೆ ಕರುಣೆಯೇನೋ ಇತ್ತು. ಅಲ್ಲಾ ದೇಶಕ್ಕಾಗಿ ಸಾಯುವುದೆಂದರೆ ಸಾಮಾನ್ಯವೇ? ಅದೂ ಹೀಗೆ ದೇಶದ ಯಾವುದೋ ಮೂಲೆಯಲ್ಲಿ. ಯಾವುದೋ ದೇಶಕ್ಕೆ ಸಹಾಯ ಮಾಡಲು ಹೋಗಿ ಯಾರೂ ಯೋಚಿಸಲು ಸಾಧ್ಯವಾಗದ ರೀತಿಯಲ್ಲಿ ಸಾಯುವುದೆಂದರೆ? ಛೇ! ಛೇ! ಅನ್ಯಾಯ. ತಾಯಿ ಮತ್ತು ಅಣ್ಣನನ್ನು ಭೀಕರವಾಗಿ ಕಳೆದುಕೊಂಡ ಮನುಷ್ಯ ತಾನೆ ಹೀಗೆ ಸಾಯುತ್ತಾನೆಂದರೆ ಅದು ಅವನ ಕರ್ಮವೇ ಇರಬೇಕು. ದೇಶಕ್ಕಾಗಿ ಏನೆಲ್ಲಾ ಮಾಡಬೇಕೆಂದಿದ್ದನಂತೆ. ಅಮ್ಮನ ಹಾಗೆ ಬುದ್ದಿವಂತನಲ್ಲದಿದ್ದರೂ ಅಣ್ಣನ ಹಾಗೆ ತಿಕ್ಕಲು ಬುದ್ದಿಯವನೂ ಅಲ್ಲವೆಂದು ಅವನು ಕೇಳಿ ಬಲ್ಲ. ಯಾಕೋ ಟೀವಿಯಲ್ಲಿ ಅವನ ಮರಣ ಯಾತ್ರೆ ನೋಡಿದ ಮೇಲೆ ಅವನಿಗೆ ಒಂದು ನಮೂನೆ ಸಂಕಟ.

ಚಡ್ಡಿ ದೋಸ್ತ ಅಂತ ಶಂಕರನಿಗೆ ಇದ್ದದ್ದು ದಿನೇಶ ಮಾತ್ರ. ಆದರೆ ಅವನಿಗೆ ಶಂಕರ ತನ್ನ ಸಂಕಟ ಹೇಳುವಂತಿರಲಿಲ್ಲ. ದಿನೇಶ ಇದನ್ನೆಲ್ಲಾ ಸಹಿಸುವವನಲ್ಲ. "ಏನೋ ಹೆಣ್ಣು ಹುಡುಗಿಯರ ಹಾಗೆ ಅಳ್ತೀಯ" ಅಂತ ತನ್ನನ್ನೇ ಗೇಲಿ ಮಾಡುತ್ತಾನೆಂದು ಶಂಕರನಿಗೆ ಗೊತ್ತಿತ್ತು. ಆದರೂ ಸತ್ತವ ಒಳ್ಳೆಯವ ಎಂ[illegible]ವನಿಗೆ ಪದೇ ಪದೇ ಅನ್ನಿಸುತ್ತಿತ್ತು . ದಿನೇಶನಿಗೂ ಅವನ ಬಗ್ಗೆ ಪಾಪ ಅನ್ನಿಸಬಹುದು. ಅವತ್ತು ತಾನು ಅವನ ಜೊತೆ "ಮೇರಾ ನಾಮ್ ಜೋಕರ್" ಕ್ಯಾಸೆಟ್ ನೋಡುವಾಗ ಅವನೂ ಅತ್ತಿದ್ದ. ಈಗಲೂ ಅವನಿಗೆ ಬೇಜಾರು ಆಗಿರಲೇ ಬೇಕು. ಅವನನ್ನು ಮಾತನಾಡಿಸಲೇಬೇಕು ಅಂದುಕೊಂಡು ಅವನ ಮನೆಯ ಕಡೆ ಹೊರಟ.

ದಿನೇಶನ ಮನೆ ಶಂಕರನ ಮನೆಗಿಂತ ಒಂದು ಮೈಲಿ ದೂರದಲ್ಲಿತ್ತು. ಆದರೂ ಕಾಮಿಕ್ಸ್ ಹಿಂದಿರುಗಿಸಬೇಕೆಂಬ ನೆವದಲ್ಲಿ ಅವನ ಮನೆಯ ಕಡೆ ಹೊರಟುಬಿಟ್ಟ. ದಿನೇಶನ ಮನೆ ಚಿಕ್ಕದು. ಅದಕ್ಕೆ ಅವರು ಅವನ ಮನೆಯ ಹಿಂದಿನ ತೋಟದಲ್ಲಿಯೇ ಕುಳಿತು ಮಾತಾಡುತ್ತಿದ್ದರು. ದಿನೇಶನ ಮನೆಯ ಬಾಗಿಲಲ್ಲೇ ನಿಂತು ಅವನನ್ನ ಕರೆದ. ದಿನೇಶ ಇನ್ನೂ ಖಾಕಿ ಚಡ್ಡಿಯಲ್ಲಿಯೇ ಇದ್ದ. "ಅರೇ ಇವತ್ತು ಇಷ್ಟು ದೊಡ್ಡ ಜನ ಸತ್ತಿದ್ದಾನೆ, ನಿನ್ನ ಶಾಖೆಗೆ ರಜೆ ಇಲ್ಲವಾ?" ತೋಟದ ಕಡೆ ನಡೆಯುತ್ತಾ ಶಂಕರ ಕೇಳಿದ.

ಈ ದಿನೇಶನ ಮನೆಯಲ್ಲಿ ಎಲ್ಲರೂ ಶಾಖೆಗೆ ಹೋಗುತ್ತಿದ್ದರು. ಅವನ ಅಣ್ಣಂದಿರು ಇಬ್ಬರೂ ಕಾಲೇಜಿಗೂ ಬಿಳಿ ಮುಂಡು ಹಾಕಿಕೊಂಡೇ ಹೋಗುತ್ತಿದ್ದರು. ಬೆಳಗ್ಗೆ ಅಥವಾ ಸಂಜೆ ಮಾತ್ರ ಖಾಕಿ ಚಡ್ಡಿ ಹಾಕಿಕೊಂಡು ಪಾಳು ಬಿದ್ದ ದೇವಿ ಗುಡಿಯ ಮುಂದೆ ಹಾಜರ್. ಅಲ್ಲಿ ಅವರೆಲ್ಲಾ ಕೈಯನ್ನು ಎದೆಯ ಮೇಲಿಟ್ಟು ಪ್ರಾರ್ಥನೆ ಮಾಡುವುದನ್ನೂ, ಮತ್ತೆ ದೊಣ್ಣೆ ವರಸೆ, ಕಬಡ್ಡಿ ಆಡುವುದನ್ನು ಶಂಕರ ನೋಡಿದ್ದ. ಹತ್ತಿಪ್ಪತ್ತು ಜನ ದಿನವೂ ಇದನ್ನೇ ಹೇಗೆ ಮಾಡುತ್ತಾರೆ ಅಂತ ಅವನು ಹಲವಾರು ಬಾರಿ ಯೋಚಿಸಿಯೂ ಇದ್ದ.

ದಿನೇಶನ ಅಣ್ಣಂದಿರು ಶಂಕರನನ್ನು ಕಂಡಾಗಲೆಲ್ಲಾ "ಬಾರೋ ನೀನು ನಾಳೆಯಿಂದ ದಿನೇಶನ ಜೊತೆ. ಮೂರು ಹೊತ್ತು ಕ್ಯಾಸೆಟ್ ಹಾಕಿ ಮನೆಯಲ್ಲಿ ಯಾಕಿ ಇರ್ತೀಯ" ಅಂತ ಹೇಳುತ್ತಿದ್ದರೂ ಶಂಕರನಿಗೇನೋ ಆ ಹಳೇ ದೇವಸ್ಥಾನಕ್ಕೆ ಹೋಗಬೇಕೆಂದು ಅನ್ನಿಸಿರಲಿಲ್ಲ. ಅದೂ ಅಲ್ಲದೆ ಅವನ ಅಪ್ಪನಿಗೆ ಈ ಖಾಕಿ ಚಡ್ಡಿಗಳನ್ನು ಕಂಡರೆ ಅಷ್ಟೇನೂ ಇಷ್ಟವಿಲ್ಲವೆಂದು ಅವನಿಗೆ ಗೊತ್ತಿತ್ತು. ಅದಕ್ಕೇ ಅವನು ಸುಮ್ಮನಿದ್ದ. ಆದರೆ ಇವತ್ತೂ, ಇಂತಹ ಮುಖ್ಯ ಜನ ಸತ್ತ ದಿನವೂ ಇವರೆಲ್ಲಾ ಕಬಡ್ಡಿ ಆಡಿದರೆಂದರೆ ಇವರೆಂತವರಪ್ಪಾ ಅಂದುಕೊಳ್ಳುತ್ತಲೇ ಅವನು ದಿನೇಶನನ್ನು ಪ್ರಶ್ನಿಸಿದ್ದ.

"ಅವ ಸತ್ತಿದ್ದು ಒಳ್ಳೆಯದೇ ಆಯ್ತು ಮಾರಾಯ. ಅವನಿದ್ದರೆ ನಮ್ಮನ್ನ ಬೇರೆಯವರಿಗೆ ಮಾರಿ ನಮ್ಮ ದೇಶದಲ್ಲಿಯೇ ನಾವು ಬೇಡಿ ತಿನ್ನುವ ಪರಿಸ್ಥಿತಿ ಬರ್ತಾ ಇತ್ತು" ದಿನೇಶ ಯಾರದೋ ಮಾತನ್ನು ಹೇಳುತ್ತಿದ್ದ. "ಬಹುಶಃ ಇವ ಟಿವಿ

ನೋಡಿರಲಿಕ್ಕಿಲ್ಲ. ನೋಡಿದ್ದರೆ ಇಮ್ನ ಹೀಗೆ ಮಾತಾಡುತ್ತಿರಲಿಲ್ಲ" ಶಂಕರನಿಗೆ ಅನ್ನಿಸಿತು. ದಿನೇಶನ ಮನೆಯಲ್ಲಿ ಟೀವಿ ಇರಲಿಲ್ಲ. ಶಂಕರನೇ ಹೇಳಿದ "ಟೀವಿಯಲ್ಲಿ ತೋರಿಸ್ತಾ ಇದ್ದಾರೆ ಗೊತ್ತಾ. ಪಾಪ, ಅದು ಅವನ ಕೈ ಕಾಲಾ ಗೊತ್ತಿಲ್ಲವಂತೆ. ಆದರೂ ಸುಟ್ಟರು".

"ನೋಡ್ದೆ ನೋಡ್ದೆ. ಬರೇ ಬೊಗಳೆ. ಅಲ್ಲಾ ಅವನು ಸತ್ತರೆ ಅದನ್ನು ಟೀವಿಯಲ್ಲಿ ಯಾಕೆ ತೋರಿಸಬೇಕು. ನೋಡು ನಾಡಿದ್ದು ಎಲೆಕ್ಷನ್ ಬರ್ತಾ ಇದೆಯಲ್ಲಾ, ಅದರಲ್ಲಿ ಇವರೇ ಮತ್ತೆ ಬರಬೇಕು ಅಂತ ಹೀಗೆ ಅಳುಮದನೆಲ್ಲಾ ತೋರಿಸ್ತಾ ಇದ್ದಾರೆ. ಇಲ್ಲದಿದ್ದರೆ ಈಗ ವಿ.ಪಿ.ಸಿಂಗ್ ಸತ್ತರೆ ಅಥವಾ ವಾಜಪೇಯಿ ಸತ್ತರೆ ಹೀಗೆ ತೋರಿಸ್ತಿದ್ರಾ. ಎಲ್ಲಾ ಅವರ ಕರಾಮತ್ತು. ಅತ್ತು ಅತ್ತೇ ಆ ಹೆಂಗಸು ನಮ್ಮನ್ನೆಲ್ಲಾ ಆಳ್ತಾಳೆ ನೋಡು"

ಶಂಕನಿಗೆ ತಿಳಿದುಹೋಯ್ತು. ದಿನೇಶ ಪಕ್ಕದ ಮನೆಯಲ್ಲಿ ಟೀವಿ ನೋಡಿದ್ದಾನೆ. ಮತ್ತೆ ಶಾಖೆಗೆ ಹೋಗಿದ್ದಾನೆ. ಅಲ್ಲಿ ಯಾವತ್ತಿನ ಹಾಗೆ ಇವತ್ತೂ ಆ ಕಪ್ಪಗಿನ ದಡಿಯ ಭಾಷಣ ಕೊಟ್ಟಿದ್ದಾನೆ. ಅದನ್ನೇ ಈಗ ಇವ ನನಗೆ ಒಪ್ಪಿಸುತ್ತಿದ್ದಾನೆ. ಇಲ್ಲದಿದ್ದರೆ ಈ ದಿನೇಶನಿಗೆ ಇಷ್ಟೆಲ್ಲಾ ತಲೆ ಎಲ್ಲಿಂದ ಓಡಬೇಕು. ಆದರೂ ಅವನು ಹೇಳುಮದರಲ್ಲೂ ಒಂದು ಪಾಯಿಂಟ್ ಇದೆ. ಇಲೆಕ್ಷನ್ ಬರ್ತಾ ಇದೆ. ಅದಕ್ಕೇನಾದರೂ ಟೀವಿಯಲ್ಲಿ ಈ ತರಹ ಎಲ್ಲವನ್ನೂ ತೋರಿಸುತ್ತಿರಬಹುದು. ಹೌದಲ್ಲಾ ಇಷ್ಟರವರೆಗೂ ಎಷ್ಟೆಲ್ಲಾ ದೊಡ್ಡ ದೊಡ್ಡ ಜನರು ಸತ್ತಿದ್ದಾರೆ. ಯಾರದ್ದೂ ಶವಯಾತ್ರೆ ಹೀಗೆ ಟೀವಿಯಲ್ಲಿ ತೋರಿಸಿರಲಿಲ್ಲ. ಆದರೆ ಇವನದ್ದು ಮಾತ್ರ ತೋರಿಸಿದ್ದಾರೆಂದರೆ ಕರಾಮತ್ತು ಬೇರೆಯೇ ಇರಬೇಕು
-----------------------------------------------------------------------------------------------

ಆಗಸ್ಟ್ ೧೯೯೧

ತಿಂಗಟ್ಟಳೆ 'ಸ್ಕ್ರೀನ್' ಪೇಪರ್ ನಲ್ಲಿ ಬರುತ್ತಿದ್ದುದು ಒಂದೇ ಚಿತ್ರದ ಬಗ್ಗೆ. ಅದು ಸಂಗೀತಪ್ರದಾನ ಚಿತ್ರಗಳ ಸುಗ್ಗಿ ಕಾಲ. ಒಂದಾದ ಮೇಲೊಂದರಂತೆ ರೋಮ್ಯಾಂಟಿಕ್ ಚಿತ್ರಗಳು ಯುವ ನಾಯಕ ಮತ್ತು ನಾಯಕಿಯರನ್ನು ಪರಿಚಯಿಸುತ್ತಿದ್ದಮ. ಇಂತಹ ಸಮಯದಲ್ಲಿ ಬರುತ್ತಿತ್ತು ಮತ್ತೊಂದು ಮಹೋನ್ನತ ಚಿತ್ರ - "ಸಾಜನ್". ಶಂಕರನಂತೂ ಮೊದಲೇ ಆ ಚಿತ್ರದ ಆಡಿಯೋ ಕೇಳಿಯೇ ಸುಸ್ತಾಗಿದ್ದ. ಒಂದೊಂದು ಹಾಡೂ ಒಂದೊಂದು ಕಥೆ ಹೇಳುತ್ತಿತ್ತು. ಅದನ್ನು ತೆರೆಯ ಮೇಲೆ ಹೇಗೆ ತಂದಿರಬಹುದೆಂದು ಶಂಕರ ಕನಸು ಕಾಣುತ್ತಿದ್ದ. ಅವನ ಮನೆಯ ಟೇಪ್ ನಲ್ಲಿ ಬರೇ ಅದೇ ಕ್ಯಾಸೆಟ್ ಓಡುತ್ತಿತ್ತು.

ಅವನು ಮಾಮೂಲಾಗಿ ಕ್ಯಾಸೆಟ್ ತೆಗೆದುಕೊಳ್ಳುತ್ತಿದ್ದದು ಮೂಲೆಯ ಸಲೀಂನ ಅಂಗಡಿಯಿಂದ. ಅದ್ಯಾವ್ರೋ ಮಾಯೆಯಿಂದ ಅವನು ಚಿತ್ರ ಬಿಡುಗಡೆಯಾದ ದಿನದೊಳಗೆ ಅದರ ವೀಡಿಯೋ ಕ್ಯಾಸೆಟ್ ಇಟ್ಟುಕೊಂಡುಬಿಡುತ್ತಿದ್ದ. ಶಂಕರನ ಹುಚ್ಚು ಅವನಿಗೆ ತಿಳಿಯದ್ದೇನಿಲ್ಲ. ಅದಕ್ಕೆ ಯಾವಾಗಲೂ ಶಂಕರನಿಗೆ ಫಸ್ಟ್ ಕಾಪಿ ರಿಸರ್ವ್ ಮಾಡಿಬಿಡುತ್ತಿದ್ದ. ಆಡಿಯೋ ಕ್ಯಾಸೆಟ್ ಗಳ ಜೊತೆ ಬರುವ ರಂಗುರಂಗಿನ ಪೋಸ್ಟರುಗಳನ್ನು ಪುಕ್ಕಟೆಯಾಗಿಯೇ ಶಂಕರನಿಗೆ ಕೊಟ್ಟು ಬಿಡುತ್ತಿದ್ದ. ಶಂಕರನ ರೂಮಿನ ತುಂಬಾ ಬರೇ "ದಿಲ್" "ಮೈನೆ ಪ್ಯಾರ್ ಕಿಯಾ" ಇಂತಹ ಪೋಸ್ಟರ್ ಗಳೇ ತುಂಬಿಹೋಗಿದ್ದಮ.

ಅವತ್ತು "ಸಾಜನ್" ಚಿತ್ರ ಬಿಡುಗಡೆಯಾಗುಮದಿತ್ತು. ವಾಡಿಕೆಯಂತೆ ಇನ್ನೆರಡು ದಿನಗಳಲ್ಲಿ ಅದರ ಕ್ಯಾಸೆಟ್ ಸಲೀಂನ ಅಂಗಡಿಗೆ ಬರುಮದಿತ್ತು. ಅದನ್ನು ಮೊದಲು ನೋಡುವ ಕುತೂಹಲ ಶಂಕರನದು. ಹೇಗೂ ಶಾಲೆಯಿಂದ ಬರುವಾಗ ಸಲೀಂನ ಅಂಗಡಿ ಸಿಗುತ್ತದೆ. ರಿಸರ್ವ್ ಮಾಡಲು ಹೇಳೋಣವೆಂದುಕೊಂಡು ಬೆಳಗ್ಗೆ ಶಾಲೆಗೆ ಹೋಗಿದ್ದ.

ಇತ್ತೀಚೆಗೆ ದಿನೇಶ ತುಂಬಾ ಬದಲಾಗಿದ್ದ. ಅವನು ಕ್ಲಾಸಿನಲ್ಲಿ ಸುಲೈಮಾನ್, ರಫೀಕ್, ಹಮೀದ್ ಇವರ ಜೊತೆಗೆಲ್ಲಾ ಸೇರುತ್ತಲೇ ಇರಲಿಲ್ಲ. ಕ್ರಿಕೆಟ್ ಚೆನ್ನಾಗಿ ಆಡುತ್ತಿದ್ದ ದಿನೇಶ ಈಗ ಅದನ್ನು ಬಿಟ್ಟು ಕಬ್ಬಡ್ಡಿ, ಖೋಖೋ ಆಡಲು ಶುರುಮಾಡಿದ. ಕ್ರಿಕೆಟ್ ನಮ್ಮ ಆಟವಲ್ಲವೆಂದೂ, ನಮ್ಮ ಆಟಗಳನ್ನೇ ಆಡಬೇಕೆಂದೂ ಶಂಕರನಿಗೂ ಹೇಳಿದ್ದ. ಆದರೆ ಶಂಕರ ಯಾಮದೇ ಆಟ ಆಡುತ್ತಿರಲಿಲ್ಲವಾದ್ದರಿಂದ ಅವನಿಗೆ ಇದ್ಯಾಮದೂ ಮುಖ್ಯವೆನ್ನಿಸಿರಲಿಲ್ಲ. ಆದರೆ ಹಮೀದನ ಜೊತೆ ಮಾತಾಡದಿರುಮದು ಶಂಕರನಿಗೆ ಬೇಕಿರಲಿಲ್ಲ. ಯಾಕೆಂದರೆ ಹಮೀದನ ತಂದೆ ದುಬೈನಿಂದ ಬರುವಾಗ ತರುತ್ತಿದ್ದ ಚಾಕಲೇಟಿನಲ್ಲಿ ಶಂಕರನಿಗೂ ದೊಡ್ಡ ಪಾಲು ಸಿಗುತಿತ್ತು.

"ದಿನೇಶ, ಸಾಜನ್ ರಿಲೀಸ್ ಆಗ್ತಾ ಇದೆ. ದಾರೀಲೇ ಹೋಗ್ತಾ ಸಲೀಂನಿಗೆ ಹೇಳಿಬಿಡೋಣ. ನಾಡಿದ್ದು ಶನಿವಾರ ಮನೆಗೆ ಬಂದುಬಿಡು. ಒಟ್ಟಿಗೇ ನೋಡೋಣ. ನನಗಂತೂ 'ಬಹುತ್ ಪ್ಯಾರ್ ಕರತೇ ಹೈ' ಸಾಂಗ್ ನೋಡ್ಬೇಕಪ್ಪಾ. ಹಾಡೆಲ್ಲಾ ಎರಡೆರಡು ಸಲ ರಿವೈಂಡ್ ಮಾಡಿ ನೋಡೋಣ" ಶಂಕರ ಉತ್ಸಾಹದಿಂದ ಹೇಳುತ್ತಿದ್ದ. ದಿನೇಶನ ಮುಖ

ಗಂಭೀರವಾಗಿತ್ತು "ನಾನು ಬರೋಲ್ಲ ಕಣೋ. ನನಗೆ ಕೆಲಸ ಇದೆ". ಶಂಕರನಿಗೆ ನಂಬಲಾಗಲಿಲ್ಲ. ಅಲ್ಲಾ ವಿಡಿಯೋ ನೋಡಲು ಮಧ್ಯರಾತ್ರಿ ಕರೆದರೂ ಓಡಿಬರುತ್ತಿದ್ದ ದಿನೇಶ ಹೀಗೆ ಹೇಳುತ್ತಿದ್ದಾನೆಂದರೆ ಏನೋ ಆಗಿರಬೇಕು.

"ಏನಪ್ಪಾ ಯಾಕೆ ಬರೋಲ್ಲ?". "ಯಾಕೆ ಅಂದರೆ. ಬರೋಲ್ಲಾ ಅಷ್ಟೇ". "ನಿಜ ಹೇಳು. ನಿನಗೆ ಮಾಧುರಿ ದೀಕ್ಷಿತ್ ಅಂದರೆ ಇಷ್ಟ ಇಲ್ಲವೇನೋ? ಅವಳೇ ಕಣೋ ಇದರಲ್ಲೂ. ಬಾರೋ ನಾನೊಬ್ಬನೇ ಕೂತು ನೋಡಕ್ಕಾಗುತ್ತೇನೋ?". "ಮಾಧುರಿ ಏನೋ ಸರಿ. ಆದರೆ ಅವನೂ ಇದ್ದಾನಲ್ಲ. ಅದಕ್ಕೇ ನಾನು ಬರೊಲ್ಲ". "ಅವನಾ? ಯಾರು ಸಂಜಯ್ ದತ್ತಾ? ಅವನು ಇದರಲ್ಲಿ ಡಿಫರೆಂಟಾಗಿ ಮಾಡಿದ್ದಾನಂತೆ. ಸ್ಕ್ರೀನ್ ನಲ್ಲಿ ಬರೆದಿದ್ದರು. ಮತ್ತೆ ಸಲ್ಮಾನ್ ಖಾನ್ ಕೂಡ ಇದ್ದಾನೆ.."

"ಅದಕ್ಕೇ, ಅದಕ್ಕೇ, ಅವನಿರುವುದಕ್ಕೇ ನಾನು ಈ ಸಿನೆಮಾ ನೋಡೋದಿಲ್ಲ ಅಂದದ್ದು" ದಿನೇಶ ಆವೇಶದಿಂದ ಕಿರುಚಿದ. ಶಂಕರನಿಗೆ ಸಣ್ಣಗೆ ವಿಷಯ ಸ್ಪಷ್ಟವಾಗತೊಡಗಿತು. ಇವ ಹಮೀದನನ್ನು ದೂರ ಇಟ್ಟಂತೆ ಈಗ ಸಲ್ಮಾನ್ ಖಾನನನ್ನೂ ದೂರಮಾಡುತ್ತಿದ್ದಾನೆ. ಆದರೆ ಯಾಕೆ? ಅವನಿಗೆ ಅರ್ಥವಾಗುತ್ತಿರಲಿಲ್ಲ. ಕೇಳಿಯೇ ಬಿಡೋಣ ಅಂದುಕೊಂಡು ಮೆಲ್ಲಗೆ ಕೇಳಿದ "ಅಲ್ಲಾ ದಿನೇಶ. ಅವತ್ತು ಮೈನೆ ಪ್ಯಾರ್ ಕಿಯಾ ವನ್ನ ನಾವಿಬ್ಬರೂ ನೋಡುತ್ತಿದ್ದಾಗ ನೀನು ಏನೂ ಹೇಳಿರಲಿಲ್ಲ. ನನ್ನ ರೂಮಿಗೆ ಬಂದಾಗಲೆಲ್ಲಾ ಅದರ ಹಾಡೇ ಹಾಕೂಂತ ಹೇಳ್ತಾ ಇದ್ದೆ. ಈಗೇನೂ ಹೊಸದಾಗಿ ನಿನಗೆ ಸಲ್ಮಾನ್ ಬೇಡ?"

"ನೋಡು ಶಂಕರ, ನಿನಗೆ ಇದೆಲ್ಲಾ ಅರ್ಥ ಆಗುವುದಿಲ್ಲ. ಆಗ ನನಗೆ ಇವರ ಒಳಗಿನ ಆಟವೆಲ್ಲಾ ಗೊತ್ತಾಗುತ್ತಿರಲಿಲ್ಲ. ಈಗ ಎಲ್ಲಾ ಅರ್ಥವಾಗುತ್ತಿದೆ. ನಿನಗೂ ಹೇಳ್ತೇನೆ ಕೇಳು. ಈ ಸಲ್ಮಾನ್, ಅಮೀರ್ ಇಂತಹವರ ಸಿನೆಮಾ ನೋಡಬೇಡ. ನೋಡಬೇಕಾ ಅನಿಲ್ ಕಪೂರನದು ನೋಡು. ಬಚ್ಚನ್ ನನ್ನ ನೋಡು." ಶಂಕರನ ತಲೆ ತಿರುಗುತ್ತಿತ್ತು. ಅರೇ ಸಿನೆಮಾ ನೋಡುವಾಗಲೂ ಇಷ್ಟೆಲ್ಲಾ ಯೋಚನೆ ಮಾಡಬೇಕಾ? ಒಳ್ಳೇ ನಿನೆಮಾ ಅಂದರೆ ನೋಡೋದಪ್ಪಾ. ಅವನ ಸಿನೆಮಾ, ನಮ್ಮವನ ಸಿನೆಮಾ ಅಂತ ನೋಡೋಕಾಗುತ್ತಾ?

ಹೋಗಲಿ ಕೊನೆಯ ಪ್ರಯತ್ನ ಅನ್ನುವಂತೆ ಶಂಕರ "ಸಾಜನ್ ನಲ್ಲಿ ಸಲ್ಮಾನ್ ನ ಜೊತೆ ಸಂಜಯ್ ದತ್ತ್ ಕೂಡ ಇದ್ದಾನೆ. ನೋಡುವ ಮಾರಾಯ" ಅಂದ. ದಿನೇಶನಿಗೆ ಅನ್ನಿಸಿರಬೇಕು ಇವನು ಸುಮ್ಮನೆ ಒಪ್ಪಿಕೊಳ್ಳುವ ಆಸಾಮಿ ಅಲ್ಲವೆಂದು. ಅವನು ಬೇರೆಯವರ ಮಾತುಗಳನ್ನು ಆಡತೊಡಗಿದ -

"ಈ ಹಿಂದಿ ಚಿತ್ರದಲ್ಲಿ ಮೊದಲೆಲ್ಲಾ ನಮ್ಮವರೇ ಇದ್ದರು. ನಿನಗೆ ಗೊತ್ತಾ, ಅಂತಾ ಯೂಸುಫ್ ಖಾನ್ ಕೂಡ ಹಿಂದಿ ಚಿತ್ರ ಮಾಡೋವಾಗ ತನ್ನ ಹೆಸರನ್ನ ದಿಲೀಪ್ ಕುಮಾರ್ ಅಂತ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಇತ್ತು. ಮತ್ತೆ ಕೂಡ ನೋಡು. ಸೂಪರ್ ಸ್ಟಾರ್ ಗಳೆಲ್ಲಾ ನಮ್ಮವರೇ - ಕಪೂರ್ ಗಳು, ದೇವಾನಂದ್, ರಾಜೇಶ್ ಖನ್ನಾ, ಅಮಿತಾಬ್. ಆದರೆ ಈಗ ಅವರದೇ ರಾಜ್ಯ. ಅಮೀರ್ ಖಾನ್, ಸಲ್ಮಾನ್ ಖಾನ್ ಮತ್ತೀಗ ಹೊಸದಾಗಿ ಆ ಸರ್ಕಸ್ ಸೀರಿಯಲ್ ನ ಶಾರುಖ್ ನನ್ನೂ ಹೀರೋ ಮಾಡ್ತಾರಂತೆ. ನಮ್ಮವರೇನೂ ಸತ್ತು ಹೋಗಿದ್ದಾರಾ?"

ಶಂಕರನಿಗೂ ಪಾಯಿಂಟ್ ಸರಿ ಅನ್ನಿಸತೊಡಗಿತು. ಹೌದಲ್ಲಾ ಈಗೀಗ ದೊಡ್ಡ ಹೀರೋಗಳೆಲ್ಲಾ ಅವರೇ. ಫಕ್ಕನೆ ಹೊಳೆಯಿತು ಅವನಿಗೆ "ಆದರೆ ಹೀರೋಯಿನ್ ಗಳೆಲ್ಲಾ ನಮ್ಮವರೇ ಅಲ್ಲವಾ. ಭಾಗ್ಯಶ್ರೀ, ಮೀನಾಕ್ಷಿ ಶೇಷಾದ್ರಿ, ಮಾಧುರಿ, ದಿವ್ಯ ಭಾರತಿ ಎಲ್ಲಾ. ಮತ್ತೆ ರೇಖಾ, ಶ್ರೀದೇವಿ, ಹೇಮಾಮಾಲಿನಿ ನೋಡು ದಿನೇಶ ಹೀರೋ ಅವರಿರಬಹುದು. ಆದರೆ ಹೀರೋಯಿನ್ ಗಳು ಮಾತ್ರ ನಮ್ಮವರೇ. ಒಪ್ಪಿಕೋ" ಗೆದ್ದವನಂತೆ ಶಂಕರನ ಮುಖದಲ್ಲಿ ನಗುವಿತ್ತು. ದಿನೇಶ ಇದಕ್ಕೆಲ್ಲಾ ಬಗ್ಗುವವನಂತೆ ಕಾಣಲಿಲ್ಲ. ಅವನಿಗೆ ಇದೆಲ್ಲಾ ಯಾರೋ ಮೊದಲೇ ಹೇಳಿದ್ದವರಂತೆ ಪುನಃ ಗಂಭೀರವಾಗಿ ಮಾತನಾಡತೊಡಗಿದ.

"ಇದೇ ನೋಡು ಶಂಕರ ಅವರ ಕರಾಮತ್ತು. ಅವರು ಬರೇ ಹೀರೋ ಆಗ್ತಾರೆ. ನಮ್ಮ ಹುಡುಗಿಯರ ಜೊತೆ ಕುಣಿತಾರೆ. ಯಾಕೆ ಹೀರೋ ಆಗಲು ಸುಂದರ ಹುಡುಗರು ಅವರಲ್ಲಿ ಇದ್ದಾರೆ. ಹೀರೋಯಿನ್ ಆಗಲು ಹುಡುಗಿಯರು ಇಲ್ಲವಾ. ಅವರ ಹುಡುಗಿಯರು ಮಾತ್ರ ಬುರ್ಖ ಹಾಕಿಕೊಂಡು ಓಡಾಡಬೇಕು. ನಮ್ಮ ಹುಡುಗಿಯರು ಮಾತ್ರ ಅವರ ಜೊತೆ ಮರ ಸುತ್ತಬೇಕು. ತಾಕತ್ತಿದ್ದರೆ ಅವರೂ ಹೆಣ್ಣು ಮಕ್ಕಳನ್ನು ಆಕ್ಟ್ ಮಾಡಲು ಸೇರಿಸಲಿ. ಇಲ್ಲದಿದ್ದರೆ ಅವರ ಹುಡುಗರೂ ಹೀರೋಗಳಾಗಿ ಫೋಸ್ ಕೊಡುವುದು ನಿಲ್ಲಿಸಲಿ."

ದಿನೇಶ ಮಾತಾಡುತ್ತಿದ್ದರೆ ಶಂಕರನಿಗೆ ಪಾಳು ಗುಡಿಯಲ್ಲಿ ಕರಿ ದಡಿಯ ಮಾತಾಡಿದಂತೇ ಅನ್ನಿಸುತಿತ್ತು. ಇದೆಲ್ಲಾ ನಿಜಾನ ಅವನಿಗೆ ಸಿಕ್ಕಾಪಟ್ಟೆ ತಲೆಬಿಸಿ ಆಗತೊಡಗಿತು. ಆದರೂ "ಸಾಜನ್" ಅವನು ನೋಡಲೇ ಬೇಕಿತ್ತು. ಸಲ್ಮಾನ್ ಖಾನ್

ಜೊತೆ ಮಾಧುರಿ ಕುಣಿದರೆ ಅವನಿಗೇನೂ ಅನ್ನಿಸುತ್ತಿರಲಿಲ್ಲ. ಇಬ್ಬರ ಜೊತೆ ಚೆನ್ನಾಗಿತ್ತು. "ಈಗ ನೀನು ಸಲೀಂನ ಅಂಗಡಿಗೆ ಬರ್ತೀಯ ಇಲ್ಲವಾ" ಶಂಕರ ಕೊನೆಯದಾಗಿ ಕೇಳಿದ. "ನೋಡು ಶಂಕರ, ನೀನು ಯಾಕೆ ಕ್ಯಾಸೆಟ್ ತರಲು ಸಲೀಂನ ಅಂಗಡಿಗೇ ಹೋಗಬೇಕು. ಅಲ್ಲಿ ಪೇಟೆಯಲ್ಲಿ ಶೇಖರನ ಅಂಗಡಿ ಇದೆಯಲ್ಲಾ. ಕೇರಳದಿಂದ ಒಳ್ಳೇ ಕ್ಯಾಸೆಟ್ ತರಿಸ್ತಾನಂತೆ ಅವ" ದಿನೇಶನದು ಅದೇ ರಾಗ.

---------------------------------------------------------------------------------------------------------

ಮಾರ್ಚ್ ೧೯೯೨

ಶಂಕರ ತನ್ನ ಸುತ್ತಲಿನ ಪ್ರಪಂಚದ ಜನರಂತೆ ಕ್ರಿಕೆಟ್ ನಲ್ಲಿ ಮುಳುಗಿಹೋಗಿದ್ದ. ವಿಶ್ವಕಪ್ ಸಮರ ಮತ್ತೆ ಆರಂಭವಾಗಿತ್ತು. ಭಾರತ ಪ್ರಶಸ್ತಿ ಪಡೆದು ಸುಮಾರು ಹತ್ತು ವರ್ಷ ಕಳೆದಿತ್ತು. ಮತ್ತೆ ಪ್ರಶಸ್ತಿಗಾಗಿ ಎಲ್ಲೆಡೆ ಕಾತುರ. ಪರೀಕ್ಷೆಯ ತಯಾರಿಯನ್ನೂ ಬಿಟ್ಟು ಶಂಕರ ಟೀವಿಯ ಮುಂದೆ ಕೂರತೊಡಗಿದ. ಖೋಖೋ ಆಡುತ್ತಿದ್ದ ದಿನೇಶನಿಗೂ ಇದ್ದಕಿದ್ದಂತೆ ಕ್ರಿಕೇಟಿನ ಮೇಲೆ ಆಸೆ ಹತ್ತತೊಡಗಿತು. ಆದರೆ ಅದಕ್ಕೆ ಬೇರೆಯೇ ಕಾರಣ ಇತ್ತು.

"ಪಾಕಿಸ್ತಾನವನ್ನೊಂದು ಸೋಲಿಸಿದರೆ ಸಾಕು ಶಂಕರ. ನಮ್ಮವರು ವಿಶ್ವಕಪ್ ಗೆದ್ದಂತೆ" ದಿನೇಶ ಪದೇ ಪದೇ ಹೇಳುತ್ತಿದ್ದ. ಅವನು ಎಣಿಸುತ್ತಿದ್ದ ದಿನ ಬಂದೇ ಬಿಟ್ಟಿತು. ಆ ವೇಳೆಗಾಗಲೇ ನಮ್ಮವರು ಇಂಗ್ಲೆಡಿನ ಕೈಯಲ್ಲಿ ಸೋತಿದ್ದರು. ಆಸ್ಟ್ರೇಲಿಯಾದವರು ನಮ್ಮನ್ನು ಒಂದು ರನ್ನಿನಿಂದ ಸೋಲಿಸಿದ್ದರು. ಶ್ರೀಲಂಕಾದ ಜೊತೆಗಿನ ಮ್ಯಾಚು ರದ್ದಾಗಿತ್ತು. ಹಾಗಾಗಿ ಪಾಕಿಸ್ತಾನದ ಜೊತೆಗಿನ ಮ್ಯಾಚ್ ಭಾರತಕ್ಕೆ ಸವಾಲಾಗಿತ್ತು.

ಆವತ್ತು ಭಾರತ ಪಾಕಿಸ್ತಾನವನ್ನು ಸೋಲಿಸಿತು. ಶಂಕರನ ಮನೆಯಲ್ಲಿ ಮ್ಯಾಚ್ ನೋಡುತ್ತಿದ್ದ ದಿನೇಶ ಹುಚ್ಚನಂತೆ ಊರತುಂಬಾ ಕಿರಿಚುತ್ತಿದ್ದ "ಭಾರತ್ ಮಾತಾ ಕೀ ಜೈ". ಅವನ ಅಣ್ಣಂದಿರೂ ಮತ್ತವರ ಸ್ನೇಹಿತರೂ ಬೀದಿಯವರಿಗೆಲ್ಲಾ ಸಿಹಿ ಹಂಚಿದರಂತೆ. ಮರುದಿನ ದಿನೇಶ ಶಂಕರನಿಗೂ ಅದನ್ನು ಕೊಟ್ಟ. ದಿನೇಶನ ಪಾಲಿನ ವಿಶ್ವಕಪ್ ಮುಗಿದಿತ್ತು. ಅವನ ದೃಷ್ಟಿಯಲ್ಲಿ ಭಾರತ ಕಪ್ ತೆಗೆದುಕೊಂಡಾಗಿತ್ತು. ಮತ್ತೆ ಭಾರತ ಜಿಂಬಾವೆ ಬಿಟ್ಟು ಉಳಿದೆಲ್ಲರ ಜೊತೆ ಸೋತಾಗಲೂ ಅವನಿಗೆ ಏನೂ ಅನ್ನಿಸಲಿಲ್ಲ. ಸೌತ್ ಆಫ್ರಿಕಾದವರು ಸೆಮಿ ಫೈನಲ್ ನಲ್ಲಿ ಗೆಲ್ಲುವ ಪರಿಸ್ಥಿತಿಯಲ್ಲಿದ್ದೂ ಸೋತಾಗ ಶಂಕರ ಅತ್ತಂತೆ ಅವನು ಅಳಲಿಲ್ಲ.

ಆದರೆ ಯಾವಾಗ ಇಮ್ರಾನ್ ಖಾನ್ ಸಿಡಿದೆದ್ದು ಫೈನಲ್ ತಲುಪಿದನೋ ಶುರುವಾಯ್ತು ದಿನೇಶನ ಆರ್ಭಟ. ಫೈನಲ್ಲಿಗೆ ಪಾಕಿಸ್ತಾನ ಬಂದದ್ದೇ ಅವನಿಗೆ ಉರಿ ಹತ್ತಿತ್ತು. ಇಂಗ್ಲೆಡೇ ಗೆಲ್ಲಲಿ ಅಂತ ಅವರೆಲ್ಲಾ ಆ ಪಾಳು ಗುಡಿಯ ದೇವಿಗೆ ಅರ್ಚನೆ ಕೂಡ ಮಾಡಿದ್ದರೆಂದು ದಿನೇಶನೇ ಶಂಕರನಿಗೆ ಹೇಳಿದ್ದ. "ಇಂಗ್ಲೆಡಿನವರು ನಮ್ಮನ್ನು ಗುಲಾಮರನ್ನಾಗಿ ಮಾಡಿದರು. ಆದರೆ ಇವರು ನಮ್ಮ ಮನೆ ಒಡೆದು ಹೋದವರು. ಇಬ್ಬರೂ ನಮ್ಮ ಶತ್ರುಗಳೇ. ಆದರೆ ಪಾಕಿಸ್ತಾದ ಹಾಗೆ ಇಂಗ್ಲೆಡಿನವರು ನಮ್ಮ ಮೇಲೆ ದ್ವೇಷ ಸಾಧಿಸಿಲ್ಲ" ಮತ್ತೆ ದಿನೇಶ ಪುರಾಣ ಬಿಡುತ್ತಿದ್ದ.

ಯಾವಾಗ ಇಮ್ರಾನ್ ಖಾನ್ ಗಾಜಿನ ವಿಶ್ವಕಪ್ ಎತ್ತಿ ಅಳುತ್ತಾ ಭಾಷಣ ಮಾಡಿದನೋ ಶಂಕರನಿಗೆ ಅಯ್ಯೋ ಅನ್ನಿಸಿತ್ತು. ಅವನು ತಾನು ಕ್ರಿಕೆಟ್ ಬಿಟ್ಟು ಕ್ಯಾನ್ಸರ್ ಆಸ್ಪತ್ರೆ ಕಟ್ಟಿಸುತ್ತೇನೆಂದು ಹೇಳಿದಾಗ ಅವನು ನಿಜವಾಗಲೂ ಗ್ರೇಟ್ ಅನ್ನಿಸಿತು. ಆದರೆ ಈ ದಿನೇಶ ಮಾತ್ರ ನಿಗಿನಿಗಿಯುವ ಕೆಂಡವಾಗಿದ್ದ. ಪಾಕಿಸ್ತಾನದವರು ಚೆಂಡಿಗೆ ಕ್ರೀಮ್ ಹಾಕಿ ಅದನ್ನು ಹಾಳು ಮಾಡುತ್ತಿದ್ದರೆಂದೂ, ಮತ್ತೆ ಅವರು ಗೆದ್ದದ್ದೇನೂ ಅವರ ಆಟದಿಂದಲ್ಲ, ಸೌತ್ ಆಫ್ರಿಕಾದವರ ಜೊತೆ ಅನ್ಯಾಯವಾಯಿತು. ಅವರಿದ್ದರೆ ಇವರೆಲ್ಲಿ ಬರುತ್ತಿದ್ದರು ಇತ್ಯಾದಿಯಾಗಿ ಕ್ಯಾತೆ ತೆಗೆಯತೊಡಗಿದ.

ಆ ಹೊತ್ತಿಗಾಗಲೇ ದಿನೇಶನಿಗೆ ಹೊಸ ಚಟ ಶುರು ಹತ್ತಿತ್ತು. ಅವನ ಮನೆಯಲ್ಲಿ ಇದ್ದಕ್ಕಿದ್ದಂತೆ ಯಾವುದೋ ದೇವಸ್ಥಾನದ ಪೋಸ್ಟರ್ ಗಳು ಗೋಡೆ ತುಂಬಾ ರಾರಾಜಿಸುತ್ತಿದ್ದವು. ಅದು ಅಯೋಧ್ಯೆಯಲ್ಲಿ ಕಟ್ಟಬೇಕೆಂದಿರುವ ರಾಮ ಮಂದಿರದ ಚಿತ್ರವೆಂದೂ, ಬಹಳ ಬೇಗ ಶ್ರೀರಾಮನ ಜನ್ಮ ಭೂಮಿಯಲ್ಲಿ ಅವನಿಗೆ ದೇವಾಲಯ ಸಿದ್ಧವಾಗುವುದೆಂದು ಅವನೇ ಶಂಕರನಿಗೆ ತಿಳಿಸಿದ. ಅಂತಹ ಒಂದು ಪೋಸ್ಟರನ್ನು ಅವನು ಶಂಕರನಿಗೂ ಕೊಟ್ಟ. ಆದರೆ ಶಂಕರನ ಕೋಣೆಯ ಗೋಡೆಗಳೆಲ್ಲಾ ಸಲೀಂ ಕೊಟ್ಟ ಸಲ್ಮಾನನ ಪೋಸ್ಟರ್ ಗಳೇ ಇದ್ದಿದ್ದರಿಂದ ಅವನಿಗೆ ಈ ಹೊಸದನ್ನು ಅಂಟಿಸಲು ಜಾಗ ಸಿಗಲಿಲ್ಲ. ಮುಖ್ಯವಾಗಿ ಅವನಿಗೆ ಅದು ಬೇಕಾಗಿಯೂ ಇರಲಿಲ್ಲ.

"ರಥ ಇವತ್ತು ನಮ್ಮ ಊರಿಗೇ ಬರುತ್ತಿದೆ. ನೀನು ಬಾ" ಶಂಕರನನ್ನು ಎಳೆದುಕೊಂಡು ದಿನೇಶ ಪಾಳು ಗುಡಿಗೆ ಬಂದ. ಅಲ್ಲಿ ಎಲ್ಲೆಲ್ಲೂ ಖಾಕಿ ಚಡ್ಡಿಗಳೇ. ಅರೇ ಮುಂಚೆ ಎಲ್ಲಾ ಹತ್ತಿಪ್ಪತ್ತು ಮಂದಿ ಇದ್ದವರು ಈಗ ಹೇಗೆ ಇಷ್ಟು ಮಂದಿ

ಆದರು? ಶಂಕರ ಯೋಚಿಸುತ್ತಿದ್ದ. ರಥ ಬಂತು. ಅದರಲ್ಲಿ ಒಂದು ದೀಪ ಉರಿಯುತ್ತಿತ್ತು. "ಅದು ಅಯೋಧ್ಯೆಯಲ್ಲಿ ಹಚ್ಚಿದ ದೀಪ ಕಣೋ" ದಿನೇಶ ವಿವರಣೆ ನೀಡುತ್ತಿದ್ದ. ಶಂಕರನಿಗೇನೋ ಅದರಲ್ಲಿ ವಿಶೇಷ ಕಾಣಲಿಲ್ಲ.

ಅಲ್ಲಿದ್ದವರೆಲ್ಲಾ ಕೈಜೋಡಿಸಿ ನಿಂತಿದ್ದರು. ಕರಿ ದಡಿಯ ಮಾತಾಡಲು ಶುರು ಮಾಡಿದ. ನಮ್ಮ ಊರಿನವರ ಬೆಂಬಲ ರಾಮ ಮಂದಿರ ನಿರ್ಮಾಣಕ್ಕೆ ಸದಾ ಇದೆ ಅಂದ. "ನಮ್ಮ ಊರಿನಿಂದ ಹತ್ತು ಜನ ಅಯೋಧ್ಯೆಗೆ ಈ ಕೂಡಲೇ ರಥದ ಜೊತೆಯಲ್ಲಿ ಹೊರಡುತ್ತಾರೆ. ಅವರ ಹೆಸರುಗಳು ಹೀಗಿವೆ" ಅಂದು ಹೆಸರುಗಳನ್ನು ಓದಿದ. ಅದರಲ್ಲಿ ದಿನೇಶನ ಚಿಕ್ಕ ಅಣ್ಣನ ಹೆಸರೂ ಇತ್ತು. ಹೆಸರು ಓದುತ್ತಿದ್ದಂತೆ ಅವರೆಲ್ಲಾ ವೇದಿಕೆಯನ್ನು ಹತ್ತಿದರು. ಎದೆಯ ಮೇಲೆ ಕೈ ಇಟ್ಟು "ಪ್ರಾಣ ಬಿಟ್ಟೇವು. ರಾಮು ಮಂದಿರ ಕಟ್ಟದೇ ಬಿಡುವುದಿಲ್ಲ" ಅಂತ ದಡಿಯ ಹೇಳಿಕೊಟ್ಟ ಹಾಗೆ ಪ್ರಮಾಣವನ್ನೂ ಮಾಡಿದರು. "ಅಲ್ಲಾ ನಿನ್ನ ಅಣ್ಣ ಅಯೋಧ್ಯೆಗೆ ಹೋದರೆ ಕಾಲೇಜಿಗೆ ಯಾವಾಗ ಹೋಗ್ತಾನೆ?" ಶಂಕರ ಕೇಳಿದ. ಮತ್ತೆ ಆವೇಶಕ್ಕೆ ಒಳಗಾದವನಂತೆ ದಿನೇಶ ಬೇರೆಯವರ ಮಾತನ್ನು ಹೇಳತೊಡಗಿದ "ರಾಮ ಮಂದಿರ ನಿರ್ಮಾಣ ನಮ್ಮ ಮೊದಲ ಕರ್ತವ್ಯ. ನಮ್ಮವರು ಕಟ್ಟಿದ್ದ ಮಂದಿರವನ್ನು ಕೆಡವಿ ಅವರು ಮಸೀದಿ ಕಟ್ಟಿದ್ದಾರೆ. ಇಷ್ಟರವರೆಗೆ ಕಾದಿದ್ದು ಸಾಕು. ಇನ್ನೂ ನಾವು ಸುಮ್ಮನಿದ್ದರೆ ಈ ದೇವಸ್ಥಾನವನ್ನೂ ಅವರು ಮಸೀದಿ ಮಾಡಿಬಿಡುತ್ತಾರೆ. ಕಾಲೇಜು ಶ್ರೀರಾಮನಿಗಿಂತ ದೊಡ್ಡದೇನಲ್ಲ."

ಶಂಕರನಿಗೆ ಮುಂದೆ ಮಾತಾಡಲು ಭಯವಾಯಿತು. ವೇದಿಕೆಯ ಮೇಲಿದ್ದ ದಡಿಯ ಇಟ್ಟಿಗೆ ಕೊಡಲು ಜನ ಸಾಲಾಗಿ ಬರಬೇಕೆಂದು ಕಿರಿಚುತ್ತಿದ್ದ. ಅಲ್ಲಿದ್ದ ಇಟ್ಟಿಗೆಗಳ ಮೇಲೆ "ಜೈ ಶ್ರೀರಾಮ್" ಅಂತ ಬರೆಸಿದ್ದರು. ಜನ ಒಂದೊಂದೇ ಇಟ್ಟಿಗೆಯನ್ನು ಕಣ್ಣಿಗೆ ಒತ್ತಿಕೊಂಡು ಅಲ್ಲಿದ್ದ ಖಾಕಿ ಚಡ್ಡಿಗಳಿಗೆ ಕೊಡುತ್ತಿದ್ದರು. ದಿನೇಶ ಶಂಕರನ ಕೈ ಹಿಡಿದುಕೊಂಡು ಸಾಲಿನಲ್ಲಿ ಸೇರಿಕೊಂಡ. ಇಟ್ಟಿಗೆ ದಿನೇಶನ ಕೈಯಲ್ಲಿ ಇಟ್ಟಾಗ ಅವನು ಜೋರ್‌ಆಗಿ "ಜೈ ಶ್ರೀರಾಂ" ಅಂದ. "ಜೈ ಶ್ರೀರಾಂ" ಶಂಕರನೂ ಮೆಲ್ಲಗೆ ತೊದಲಿದ.

------------------------------------------------------------------------------------------------------------

ಡಿಸೆಂಬರ್ ೧೯೯೨

ಏನಾಗಬಾರದಿತ್ತೋ ಅದೇ ಆಯಿತು. ಗುಸುಗುಸು ಸುದ್ದಿ ನಿಜವಾಯಿತು. ಬಾಬರಿ ಮಸೀದಿಯನ್ನು ಅಯೋಧ್ಯೆಯಲ್ಲಿ ನೆಲಸಮ ಮಾಡಿದರು. ಆದರೆ ಅಲ್ಲಿ ಹೊತ್ತಿದ ಬೆಂಕಿ ದೇಶದಲೆಲ್ಲಾ ಹಬ್ಬುತ್ತಿತ್ತು. ಶಂಕರನಿಗೆ ಮೊದಮೊದಲು ಇದೆಲ್ಲಾ ಚಿಕ್ಕ ವಿಷಯ ಎಂ[illegible]ನ್ನಿಸುತ್ತಿತ್ತು . ಅಲ್ಲಾ ಎಲ್ಲೋ ಮಸೀದಿ ಇದ್ದರೆ ಅದ್ದಕ್ಕೆ ಯಾಕಿಷ್ಟು ಗಲಾಟೆ ಅಂತ ಅವನಿಗೆ ಗೊತ್ತಾಗುತ್ತಿರಲಿಲ್ಲ. ಅವನ ಊರಲ್ಲೂ ಒಂದು ರಾಮ ಮಂದಿರ ಇತ್ತು. ಅವನ ಅಜ್ಜನ ಮನೆ ಇರುವ ಊರಲ್ಲೂ ಮತ್ತೊಂದು ಮಂದಿರ ಇತ್ತು. ಸಾಕಲ್ಲವಾ ಊರಿಗೊಂದು ಮಂದಿರ. ಮತ್ತೆ ಎಲ್ಲೋ ಕಾಣದ ಊರಲ್ಲಿ ಮಂದಿರ ಕಟ್ಟುವ ಗೌಜಿ ಯಾಕೆಂದು ಅವನಿಗಂತೂ ತಿಳಿಯುತ್ತಿರಲಿಲ್ಲ.

ಆದರೆ ದಿನೇಶನ ಪ್ರಕಾರ ಅಯೋಧ್ಯೆಯ ಮಸೀದಿಯನ್ನು ಬೀಳಿಸಿದ್ದು ಮಹಾ ಐತಿಹಾಸಿಕ ಘಟನೆಯಾಗಿತ್ತು. "ಇನ್ನು ನೋಡುವ ಆ ನನ್ನ ಮಕ್ಕಳು ಹೇಗೆ ಮೆರಿತಾರೇಂತ" ಕ್ಲಾಸಿನಲ್ಲಿ ಹಮೀದ ಮತ್ತವನ ಕಡೆಯವರನ್ನು ಕಂಡಾಗಲೆಲ್ಲಾ ಜೋರಾಗಿಯೇ ಅನ್ನುತ್ತಿದ್ದ. ಈ ಮಧ್ಯೆ ದಿನೇಶನ ಅಣ್ಣನೂ ಈ ಕೆಲಸದಲ್ಲಿ ಪಾಲುದಾರನಾಗಿದ್ದಾನೆಂದು ಅವನೇ ಶಂಕರನಿಗೆ ಹೇಳಿದ್ದ. "ನನ್ನ ಅಣ್ಣನೂ ಮಸೀದಿಯ ಮೇಲೆ ಹತ್ತಿದ್ದನಂತೆ. ಆದರೆ ಜನ ಹೆಚ್ಚಾಗಿ ಅವನು ಕೆಳಗೆ ಬರಬೇಕಾಯಿತಂತೆ. ಆದರೂ ಅವನು ಕೈಯಲ್ಲಿದ್ದ ತ್ರಿಶೂಲವನ್ನು ಮೇಲಿನವರಿಗೆ ಕೊಟ್ಟು ಮಸೀದಿ ಬೀಳಿಸಲು ಸಹಾಯ ಮಾಡಿದನಂತೆ"

ಅಲ್ಲಾ ಊರು ಬಿಟ್ಟು ರಥದ ಹಿಂದೆ ಹೋದ ದಿನೇಶನ ಅಣ್ಣ ಈವರಗೆ ಏನಾದ ಅಂತ ಒಂದು ಸುದ್ದಿ ಇರಲಿಲ್ಲ. ಆದರೆ ಇದ್ದಕ್ಕಿದ್ದ ಹಾಗೆ ಅವನು ಅಯೋಧ್ಯೆಯವರೆಗೂ ಹೋಗಿ ಅಲ್ಲಿ ಮಸೀದಿ ಹೊಡೆದುಹಾಕುವುದೆಂದರೆ? ಶಂಕರನಿಗೆ ಇದನ್ನೆಲ್ಲಾ ನಂಬಬೇಕು ಅಂತ ಅನ್ನಿಸುತ್ತಲೇ ಇರಲಿಲ್ಲ. ಆದರೆ ದಿನೇಶನನ್ನು ಈ ಕುರಿತು ಪ್ರಶ್ನಿಸುವುದೆಂದರೆ ಅವನ ಉಗ್ರರೂಪ ನೋಡುವುದೆಂದೇ ಅರ್ಥ. ಇದಕ್ಕೆ ಶಂಕರ ತಯಾರಿರಲಿಲ್ಲ. ಅದಕ್ಕಾಗಿ ಸುಮ್ಮನೇ ಇದ್ದ. ಆದರೂ ತಡೆಯಲ್ಲಿಕ್ಕಾಗದೇ ಕೇಳಿದ "ಈಗ ನಿನ್ನ ಅಣ್ಣ ಎಲ್ಲಿದ್ದಾನೆ?"

"ಅಯೋಧ್ಯೆಯಲ್ಲಿ ಈಗ ಭಾರೀ ಪೋಲೀಸ್ ಕಾವಲಂತೆ. ಮಸೀದಿ ಒಡೆದಾಗ ವೀಡಿಯೋ ತೆಗೆದಿದ್ದರಂತೆ. ಪೋಲೀಸಿನವರು ಈಗ ಆ ಕ್ಯಾಸೆಟ್ ಹಿಡಿಕೊಂಡು ಅದರಲ್ಲಿರುವ ಜನರನ್ನು ಹುಡುಕುತ್ತಿದ್ದಾರಂತೆ. ನಮ್ಮ ಅಣ್ಣ ಮತ್ತೆ ಅವನ ಜೊತೆಗಿರುವವರು ಹೇಗೆಹೇಗೋ ತಪ್ಪಿಸಿಕೊಂಡು ಇಲ್ಲಿಗೇ ಬರುತ್ತಿದ್ದಾರಂತೆ. ಅವರು ಬಂದರೆ ದೊಡ್ಡದಾಗಿ

ಸನ್ಮಾನ ಮಾಡಬೇಕೆಂದು ಶಾಖಾ ಪ್ರಮುಖರು ಹೇಳಿದ್ದಾರೆ." ಈ ಪ್ರಮುಖ ಎಂ[illegible] ಕ ರಿ ದಡಿಯನೇ ಇರಬೇಕೆಂದು ಶಂಕರನಿಗೆ ಅನ್ನಿಸಿತು. ಆದರೆ ಕೇಳಲು ಧೈರ್ಯ ಬರಲಿಲ್ಲ.

ಊರಿನಲ್ಲೀಗ ಭಯಂಕರ ವಾತಾವರಣ ನಿರ್ಮಾಣವಾಗಿತ್ತು. ಊರಿನಲ್ಲಿದ್ದವರೆಲ್ಲಾ ದಿನೇಶನಂತೆ ಆಗಿಹೋಗಿದ್ದಾರೆಂದು ಅವನಿಗೆ ಅನ್ನಿಸುತ್ತಿತ್ತು. ಸಲೀಂ ಕೂಡ ಈಗ ಕ್ಯಾಸೆಟ್ ಅಂಗಡಿಯ ಜೊತೆ ಟೈಲರಿಂಗ್ ಶುರುಮಾಡಿಕೊಂಡಿದ್ದ. ಶಂಕರ ಮಾತ್ರ ಅವನ ಅಂಗಡಿಗೇ ಹೋಗುತ್ತಿದ್ದ. ದಿನೇಶನ ಮಾತು ಕೇಳಿ ಅವನು ಒಂದು ಸಲ ಶೇಖರನ ಅಂಗಡಿಯಿಂದ ಕ್ಯಾಸೆಟ್ ತಂದಿದ್ದ. ಆದರೆ ಅದು ಫಂಗಸ್ ಹಿಡಿದದಂತೆ ಕಾಣುತಿತ್ತು. ಆದರೆ ಈಗೀಗ ಸಲೀಂಮನ ಅಂಗಡಿಗೆ ಹೋದಾಗ ಅವನು ಬರೇ ಬುರ್ಖಾಗಳನ್ನೇ ಹೊಲಿಯುತ್ತಿದ್ದದ್ದನ್ನು ಶಂಕರ ನೋಡುತ್ತಿದ್ದ.

ಶಾಲೆಯಲ್ಲೂ ಪರಿಸ್ಥಿತಿ ಚೆನ್ನಾಗಿರಲಿಲ್ಲ. ಹಮೀದ ಮತ್ತವನ ಗೆಳೆಯರು ಪಿ.ಟಿ ಪೀರಿಯಡ್ ನಲ್ಲೂ ಬೇರೆಯವರೊಂದಿಗೆ ಆಟಕ್ಕೆ ಸೇರುತ್ತಿರಲಿಲ್ಲ. ಅವರು ಬೇರೆಯೇ ಫುಟ್ಬಾಲ್ ತೆಗೆದುಕೊಂಡು ದೂರದಲ್ಲಿ ತಮ್ಮ ಪಾಡಿಗೆ ತಾಮ ಆಡುತ್ತಿದ್ದರು. ಹಿಂದೆ ಎಂ[illegible] ಲೆಗೆ ಟೋಪಿ ಹಾಕದ ಹಮೀದ ಈಗ ಟೋಪಿ ಹಾಕಿಕೊಳ್ಳದೆ ಶಾಲೆಗೆ ಬರುತ್ತಿರಲಿಲ್ಲ. ಎಲ್ಲರ ಜೊತೆ ಸರಸ್ವತಿ ವಂದನೆ ಮಾಡುತ್ತಿದ್ದವರು ಈಗ ಅದಕ್ಕೆ ಬರುತ್ತಿರಲಿಲ್ಲ. ಮತ್ತೆ ಶುಕ್ರವಾರ ಹೆಡ್ಮಾಸ್ಟರಿಗೆ ಹೇಳಿ ಮಧ್ಯಾಹ್ನ ಬೇಗ ಕ್ಲಾಸಿನಿಂದ ಹೋಗುತ್ತಿದ್ದರು. ಅವರಿಗೆ ಈಗ ಮಸೀದಿಗೆ ಹೋಗುಮದು ಕಡ್ಡಾವಂತೆ. ಇದನ್ನು ಶಂಕರನಿಗೆ ದಿನೇಶನೇ ಹೇಳಿದ್ದ.

"ನೋಡು ಅವರು ಎಷ್ಟು ನಿಯತ್ತಾಗಿ ತಮ್ಮ ಕೆಲಸ ಮಾಡ್ತಾರೆ. ಆದರೆ ನಮ್ಮವರಿಗೆ ಆ ಬುದ್ದಿಯೇ ಇಲ್ಲ. ಶಾಖೆಗೆ ಬಂದರೆ ಎಷ್ಟೊಂದು ವಿಷಯ ತಿಳಿಯುತ್ತದೆ. ಆದರೆ ಜನರಿಗೆ ಅದು ಬೇಡ. ಬಿಡು, ನಮ್ಮವರು ಅವರಷ್ಟು ನಿಯತ್ತಿನವರಾಗಿದ್ದರೆ ಕಾಶಿ, ಮಥುರಾ ಮುಂತಾದ ಕಡೆ ದೇವಸ್ಥಾನದ ಜಾಗದಲ್ಲಿ ಮಸೀದಿ ಕಟ್ಟಲು ಯಾಕೆ ಬಿಡುತ್ತಿದ್ದರು?" ದಿನೇಶ ಮಾತಾಡುತ್ತಿದ್ದರೆ ಶಂಕರನಿಗೆ ಅವನು ತನ್ನ ಬಗ್ಗೆಯೇ ಮಾತಾಡುತ್ತಿದ್ದಾನೇನೋ ಅಂತ ಅನ್ನಿಸುತ್ತಿತ್ತು.

ಆದರೆ ಈ ಕಾಶಿ, ಮಥುರಾ ಕತೆಗಳು ಶಂಕರನಿಗೆ ಹೊಸದಾಗಿದ್ದಮ. ದಿನೇಶನ ಅಣ್ಣನೇನಾದರೂ ಈಗ ಕಾಶಿಗೆ ಹೋಗಿರಬಹುದೇ? ಅವನು ಯೋಚಿಸುತ್ತಿದ್ದ. ಕಾಶಿಯಲ್ಲೂ ಮಂದಿರ ಕಟ್ಟುಮದಕ್ಕೆ ನಾವೇ ಇಟ್ಟಿಗೆ ಕಳಿಸಬೇಕಾ? ಅವನಿಗೆ ಚಿಂತೆ ಆಗತೊಡಗಿತು. ನಮ್ಮ ಊರಿನಲ್ಲಿರುವ ಮಸೀದಿಯನ್ನೂ ಬೀಳಿಸ್ತಾರಾ? ಆ ಕಪ್ಪು ದಡಿಯನೂ ಈ ದಿನೇಶನಂತವರು ಸೇರಿದರೆ ಅದನ್ನೂ ಮಾಡಿಯಾರೆಂದು ಅವನಿಗೆ ಅನ್ನಿಸತೊಡಗಿತು. ಅವರು ಹಾಗೆ ಮಾಡಿದರೆ ಹಮೀದ, ಸಲೀಮ ಎಲ್ಲಿಗೆ ಹೋಗಿ ನಮಾಜ[illegible] ?

ಶಂಕರನ ತಲೆ ಪ್ರಶ್ನೆಗಳ ಗೂಡಾಗುತಿತ್ತು. ಮನೆಗೆ ಹೋದವನೇ ಜೋರಾಗಿ ಹಾಡು ಹಾಕಿ ಮಲಗಿಬಿಟ್ಟ. "ಜಿಯೇ ತೋ ಜಿಯೇ ಕೈಸೆ ಬಿನ್ ಆಪಕೆ..." ಎಸ್.ಪಿ. ಮನಸ್ಸು ತುಂಬಿ ಹಾಡುತ್ತಿದ್ದರೆ ಸಲ್ಮಾನನ ಮುಖವೇ ಕಾಣುತ್ತಿತ್ತು.

-------------------------------------------------------------------------------------------
ಮಾರ್ಚ್ ೧೯೯೩

ಮಸೀದಿ ಹೊಡೆದುಹಾಕಿದ ಘಟನೆ ಕಣ್ಣಿಂದ ಮಾಸುತ್ತಿತ್ತು. ಎಷ್ಟೆಲ್ಲಾ ಬದಲಾಯಿತು ಈ ಸಮಯದಲ್ಲಿ. ಮಸೀದಿ ಹೊಡೆದು ತಿಂಗಳುಗಳು ಕಳೆದರೂ ದಿನೇಶನ ಅಣ್ಣನ ಸುದ್ದಿಯೇ ಇರಲಿಲ್ಲ. ಮೊದಮೊದಲು ತನ್ನ ಅಣ್ಣ ವೀರನೆಂದು, ಶೂರನೆಂದು ತಿಳಿದುಕೊಂಡಿದ್ದ ದಿನೇಶನಿಗೆ ಈಗೀಗ ಅಣ್ಣನ ಮೇಲೆ ಸಿಟ್ಟು ಬರುತ್ತಿತ್ತು. ಅವನ ಮನೆಯಲ್ಲಿ ಅವನ ಅಮ್ಮ ಯಾವಾಗಲೂ ಅಳುತ್ತಾ ಕೂರುತ್ತಿದ್ದರು. ಮಗನೊಬ್ಬ ಹೀಗೆ ಮನೆ ಬಿಟ್ಟು ಎಲ್ಲೋ ಹೋದರೆ ಅವರೇನು ಮಾಡಿಯಾರು ಪಾಪ.

ಶಂಕರನ ಬಳಿ ಈಗೀಗ ದಿನೇಶ ಎಲ್ಲಾ ಹೇಳುತ್ತಿದ್ದ. ಅವನ ದೊಡ್ಡ ಅಣ್ಣನಿಗೆ ತನ್ನ ತಮ್ಮ ಅಯೋಧ್ಯೆಗೆ ಹೋಗುಮದು ಇಷ್ಟವಿರಲಿಲ್ಲವಂತೆ. ಆದರೆ ಆ ಕರಿಯ ದಡಿಯ ಮನೆಗೆ ಬಂದು ಏನೇನೋ ಮಾಡಿ ಪುಸಲಾಯಿಸಿದ್ದನಂತೆ. ಮಸೀದಿ ಕೆಡವಲು ಹೋದ ದಿನೇಶನ ಅಣ್ಣ ಓದಲು ಅಷ್ಟೇನೂ ಹುಶಾರಿರಲಿಲ್ಲ. ಅಯೋಧ್ಯೆಗೆ ಹೋಗಿ ಬಂದರೆ ತಾನು ಕೆಲಸ ತೆಗೆಸಿಕೊಡುಮದಾಗಿ ಅವನು ಹೇಳಿದ್ದಾನಂತೆ. ಹೋಗಿ ಬರುವ ಖರ್ಚೂ ಅವನೇ ಕೊಟ್ಟಿದ್ದನಂತೆ. ಅಲ್ಲಿ ಇರುವ್ ತನಕ ಹೊಟ್ಟೆಗೆ ಏನೂ ತೊಂದರೆ ಇಲ್ಲವೆಂದು ಅವನು ಹೇಳಿ ಮನೆಯವರನ್ನು ಒಪ್ಪಿಸಿದ್ದನಂತೆ.

ಆದರೆ ಯಾವಾಗ ಮಸೀದಿ ಬೀಳಿಸಿದ್ದು ದೊಡ್ಡ ವಿಷಯವಾಯಿತೋ ಆ ದಡಿಯ ಬೇರೆಯೇ ಮಾತಾಡಲು ಶುರುಮಾಡಿದ್ದಾನಂತೆ. ದಿನೇಶನ ಅಪ್ಪ ಮತ್ತು ಅಣ್ಣ ಅವನ ಬಳಿ ಸಾರಿಸಾರಿ ಹೋಗುತ್ತಿದ್ದರಂತೆ. "ಅಯ್ಯಾ ನಮ್ಮ ಮಗ ಎಲ್ಲಿ ಇದ್ದಾನೇಂತ ಹೇಳಿಬಿಡಿ. ನಾವೇ ಹೋಗಿ ಕರೆದುಕೊಂಡು ಬರುತ್ತೇವೆ" ಅಂತ ದಿನೇಶನ ಅಪ್ಪ ಅವನ ಕಾಲು ಹಿಡಿದಿದ್ದರಂತೆ. ಆದರೆ ಅವನು ಜಪ್ಪಯ್ಯ ಅಂದರೂ ಬಾಯಿ ಬಿಡುತ್ತಿರಲಿಲ್ಲವಂತೆ. ಮತ್ತೆ ಮೊನ್ನೆ ಇವರ ಮನೆಗೆ ಬಂದು ಬಾಯಿಗೆ ಬಂದಂತೆ ಜೋರುಮಾಡಿದ್ದನಂತೆ -

"ನಿಮ್ಮ ಮಗನಿಗೆ ಸ್ವಲ್ಪವೂ ಬುದ್ಧಿ ಇಲ್ಲವಾ? ಅಲ್ಲಿ ಅಯೋಧ್ಯೆಯಲ್ಲಿ ಮಸೀದಿ ಕೆಡವಿದ ವೀಡಿಯೋದಲ್ಲಿ ಅವನೂ ಇದ್ದಾನೆ. ಕ್ಯಾಮೆರಾ ನೋಡಿಕೊಂಡು ಜೋರಾಗಿ ಬೊಬ್ಬೆ ಹೊಡೆಯುವುದು ಎಂ[illegible] ಅವನಿಗೆ . ಮದುವೆ ಕ್ಯಾಸೆಟ್ ಅಂದುಕೊಂಡಿದ್ದಾನಾ ಹೇಗೆ? ಅವನು ಒಬ್ಬನೇ ಬಂದಿದ್ದರೆ ಹಾಳಾಗಿ ಹೋಗಲಿ. ನಮ್ಮ ಕುತ್ತಿಗೆಗೂ ತಂದಿಟ್ಟಿದ್ದಾನೆ. ಕ್ಯಾಸೆಟಿನಲ್ಲಿ ಅವನು ಬ್ಯಾನರ್ ಹಿಡಿದು ಕುಣಿದಿದ್ದಾನಲ್ಲಾ, ಆ ಬ್ಯಾನೆರ್ ನಲ್ಲಿ ನಮ್ಮ ಊರಿನ ಹೆಸರಿದೆ. ರಥ ಬರುವಾಗ ನಾನೇ ಬರೆಸಿದ್ದು. ಅದನ್ನೂ ಲೋಕಕ್ಕೇ ತೋರಿಸಿ ನಮ್ಮನ್ನೂ ಜೈಲಿಗೆ ಹೋಗುವಂತೆ ಮಾಡಿದ್ದಾನೆ ನಿಮ್ಮ ಮಗ"

ದಿನೇಶನಿಗೆ ಇದರಿಂದ ಭಾರೀ ಸಿಟ್ಟು ಬಂದಿತ್ತು. ಮೊದಲೆಲ್ಲಾ ಸನ್ಮಾನ ಅದೂ ಇದೂ ಅಂತ ಮಾತಾಡುತ್ತಿದ್ದ ಮನುಷ್ಯ ಏಕಾಏಕಿ ಹೀಗೆ ಬದಲಾಗಿದ್ದು ಅವನಿಗೆ ವಿಪರೀತ ಬೇಸರ ತಂದಿತ್ತು. ಅವನೀಗ ಶಾಖೆಗೆ ಹೋಗುವುದನ್ನು ಬಿಟ್ಟಿದ್ದ. ಶಾಲೆಯಲ್ಲೂ ಅವನು ಹಮೀದನೊಂದಿಗೆ ಮಾತಾಡದಿದ್ದರೂ ಅವರ ಜೊತೆ ಜಗಳವಂತೂ ಮಾಡುತ್ತಿರಲಿಲ್ಲ. ಅಷ್ಟರಮಟ್ಟಿಗೆ ಶಂಕರ ಖುಷಿಯಾಗಿದ್ದ. ಯಾಕೆಂದರೆ ಅವನಿಗೆ ಇಬ್ಬರೂ ಬೇಕಿದ್ದರು.

ಈ ಮಧ್ಯೆ ದಿನೇಶನ ತಂದೆ ಮಗನ ಹುಡುಕಾಟವನ್ನು ತಾವೇ ವಹಿಸಿಕೊಂಡಿದ್ದರು. ದೂರದೂರದ ಊರಿನಲ್ಲಿರುವವರಿಗೆಲ್ಲಾ ತಮ್ಮ ಮಗನ ಫೋಟೋ ಕಳಿಸಿದರು. ಯಾರು ಯಾರ ಹತ್ತಿರವೋ ಕವಡೆ ಹಾಕಿಸಿದರು. ಒಬ್ಬರು ನಿಮ್ಮ ಮಗ ಉತ್ತರ ಕಡೆ ಹೋಗಿದ್ದಾನೆ. ಅವನನ್ನು ಅಲ್ಲಿ ಹುಡುಕಿಸಿ ಅಂತ ಹೇಳಿದರು. ಮತ್ತೆ ಕೆಲವರು ದೆಲ್ಲಿಗೆ ಹೋಗಿ ಅಲ್ಲಿ ಜೈಲಿನಲ್ಲಿ ಹುಡುಕುವಂತೆ ತಿಳಿಹೇಳಿದರು. ಶಂಕರ ಅಂತೂ ದಿನೇಶನ ಮನೆಯ ಕಡೆ ಹೋಗುತ್ತಲೇ ಇರಲಿಲ್ಲ. ದಿನೇಶನ ಅಮ್ಮ ಅಳುವುದನ್ನು ಅವನ ಕೈಯಿಂದ ನೋಡಲು ಆಗುತ್ತಿರಲಿಲ್ಲ.

ಈ ಮಧ್ಯೆ ಅವರೆಲ್ಲಾ ಮತ್ತೆ ಗಾಭರಿಯಾಗುವ ಘಟನೆ ನಡೆದಿತ್ತು. ಬಾಂಬೆಯಲ್ಲಿ ಬಾಂಬ್ ಬಿದ್ದಿತ್ತು. ಹೇಳಬೇಕೆಂದರೆ ಬಾಂಬ್ ಗಳನ್ನು ಸಿಡಿಸಿದ್ದರು. ದೊಡ್ಡ ದೊಡ್ಡ ಹೆಸರುಗಳೆಲ್ಲಾ ಇದರಲ್ಲಿ ಸೇರಿದ್ದಾರೆಂದು ದೊಡ್ಡ ಸುದ್ದಿಯಾಗಿತ್ತು. ದೇಶವೇ ಒಂದು ದೊಡ್ಡ ಸಂಕಟದ ಸಮಯದಲ್ಲಿ ಇದ್ದಂತೆ ಕಂಡುಬರುತ್ತಿತ್ತು. ಯಾವಾಗ ಏನಾಗುತ್ತದೆಯೆಂದು ಯಾರೂ ಊಹಿಸಲಾರದಷ್ಟು ವೇಗದಲ್ಲಿ ಘಟನೆಗಳು ನಡೆಯುತ್ತಿದ್ದವು.

ಶಂಕರನೇನೋ ಮುಂದೆಬರುವ "ಖಳ್ ನಾಯಕ್" ಚಿತ್ರವನ್ನೇ ಎದುರು ನೋಡುತ್ತಿದ್ದ. "ಸಾಜನ್" ನಂತರ ಸಂಜಯ್ ದತ್ತ್ ಮತ್ತೆ ಸೂಪರ್ ಹಿಟ್ ಚಿತ್ರ ಕೊಡುತ್ತಾನೆಂದು ಅವನೂ ಎಲ್ಲರ ಹಾಗೆ ಕಾಯುತ್ತಿದ್ದ. ಆದರೆ ಇದ್ದಕ್ಕಿದ್ದಂತೆ ಸಂಜಯ್ ನನ್ನು ಪೋಲೀಸರು ಹಿಡಿದುಕೊಂಡು ಹೋದರು. ಬಾಂಬೆಯಲ್ಲಿ ಬಾಂಬ್ ಎಸೆದವರಿಗೆ ಅವನು ಸಹಾಯ ಮಾಡಿದ್ದನಂತೆ. ಅವನು ನಿಜವಾಗಿಯೂ "ಖಳನಾಯಕ" ನೇ ಆಗಿಹೋಗಿದ್ದ.

ಇದರಿಂದೆಲ್ಲಾ ಹೆಚ್ಚು ಬೇಜಾರು ಆದದ್ದು ದಿನೇಶನಿಗೇ "ಯಾರನ್ನೂ ನಂಬುವ ಹಾಗೆ ಇಲ್ಲ ಮಾರಾಯ. ಇಲ್ಲಿ ನಾವು ಸಲ್ಮಾನ್ ಖಾನ್ ಬೇಡ. ಸಂಜಯ್ ದತ್ತ್ ಸಿನೆಮಾ ನೋಡುವಾ, ಅವ ನಮ್ಮವ ಅಂತೆಲ್ಲಾ ಸುಮ್ಮನೇ ಅಂದುಕೊಳ್ಳುತ್ತೇವೆ. ಅವನಂತವರು ನೋಡು. ನಮ್ಮ ದೇಶಕ್ಕೇ ಬಾಂಬ್ ಇಡುತ್ತಾರೆ. ನಮ್ಮವರನ್ನೇ ನಾವು ನಂಬಲು ಆಗುವುದಿಲ್ಲ ಮಾರಾಯ" ಅಂತ ಅವನು ಶಂಕನಿಗೆ ಪದೇ ಪದೇ ಹೇಳುತ್ತಿದ್ದ. ಶಂಕರನೂ "ಹೌದು ನಮ್ಮವರಲ್ಲೂ ಕೆಟ್ಟವರಿರ್ತಾರೆ. ಅವರಲ್ಲೂ ಒಳ್ಳೆಯವರಿರ್ತಾರೆ" ಅಂತು ಹೇಳಬೇಕೆಂದುಕೊಂಡ. ಆದರೆ ಯಾಕೋ ಹೇಳಲಿಲ್ಲ.

ಇದೆಲ್ಲಾ ನಡೆದು ಸುಮಾರು ೬ ತಿಂಗಳ ನಂತರ ಇದ್ದಕ್ಕಿದ್ದಂತೆ ದಿನೇಶನ ಮನೆಯವರಿಗೆ ಒಂದು ಸಂತೋಷದ ವಿಷಯ ಕಾದಿತ್ತು. ಅವನ ಅಣ್ಣ ಎಲ್ಲಿದ್ದಾನೆಂದು ಅವರಿಗೆ ತಿಳಿದುಹೋಗಿತ್ತು. ಅಣ್ಣ ಸಿಕ್ಕಿದ್ದ ಕತೆಯನ್ನು ದಿನೇಶನೇ ಶಂಕರನಿಗೆ ಹೇಳಿದ್ದ. ನಡೆದದ್ದು ಏನೆಂದರೆ ಹಮೀದನ ತಂದೆ ದುಬೈನಿಂದ ಭಾರತಕ್ಕೆ ಬರುವಾಗ ಬಾಂಬೆವರೆಗೆ ಫ್ಲೈಟಿನಲ್ಲಿ ಬಂದಿದ್ದರು. ಅಲ್ಲಿ ಅವರು ಹೋಟೇಲಿನಲ್ಲಿ ಚಾ ಕುಡಿಯಲು ಹೋದಾಗ ಅಲ್ಲಿ ಈ ದಿನೇಶನ ಅಣ್ಣನನ್ನು ನೋಡಿದರಂತೆ.

ನೋಡಿ ತುಂಬಾ ವರ್ಷವಾಗಿದ್ದರಿಂದ ಅವರಿಗೆ ಪಕ್ಕನೇ ಗುರುತು ಸಿಕ್ಕಲಿಲ್ಲವಂತೆ. ಕೂಡಲೇ ಮನೆಗೆ ಫೋನ್ ಮಾಡಿ ಹಮೀದನ ತಾಯಿಯ ಹತ್ತಿರ ಹೀಗೆ ಹೀಗೆ ವಿಷಯ ಅಂತ ಹೇಳಿದರಂತೆ. ಅವರು ತಕ್ಷಣ ನಡೆದ ಕತೆಯೆಲ್ಲಾ ತಿಳಿಸಿ ಅದು ಅವನೇ ಇರಬೇಕು ವಿಚಾರಿಸಿ ಅಂತ ಹೇಳಿದರಂತೆ. ಮತ್ತೆ ಹಮೀದನ ತಂದೆ ಅಲ್ಲಿಗೆ ಹೋಗಿ ಅವನನ್ನು ವಿಚಾರಿಸಿದಾಗ ಅವನು ಮೊದಲು ಬಾಯಿಬಿಡಲಿಲ್ಲವಂತೆ. ಇವರು ತಾನು ಹೀಗೆಹೀಗೆ ಅಂತ ಹೇಳಿದಾಗ ಅವನು ಅಳುತ್ತಾ ಇರುವ ವಿಚಾರ ಹೇಳಿದನಂತೆ. ಅಯೋಧ್ಯೆಯಲ್ಲಿ ಮಸೀದಿ ಬಿದ್ದ ತಕ್ಷಣ ಇವರನ್ನೆಲ್ಲಾ ಬಿಟ್ಟು ನಾಯಕರೆಲ್ಲಾ ಓಡಿ ಹೋದರಂತೆ. ಕೈಯಲ್ಲಿ ಒಂದು ಕಾಸೂ ಇರದ ಇವರು ಪೋಲೀಸರಿಂದ ತಪ್ಪಿಸಿಕೊಳ್ಳಲು ಹೇಗೋ ಸಿಕ್ಕಸಿಕ್ಕ ಕಡೆ ಓಡಿದರಂತೆ.

ಮನೆಗೆ ವಾಪಸ್ ಹೋದರೆ ಪೋಲೀಸಿನವರು ಜೈಲಿಗೆ ಹಾಕಬಹುದೆಂದು ಹೆದರಿ ಬಾಂಬೆಗೆ ಓಡಿ ಬಂದರಂತೆ. ಇಲ್ಲಿ ಹೋಟೇಲು, ಮಿಲ್ಲು ಅಂತ ಚಿಕ್ಕ ಚಿಕ್ಕ ಕೆಲಸ ಮಾಡಿಕೊಂಡು ಫುಟ್ ಪಾತಿನ ಮೇಲೆ ಜೀವನ ಸಾಗಿಸುತ್ತಿದ್ದರಂತೆ. ಅವನ ಕತೆ ಕೇಳಿ ಹಮೀದನ ತಂದೆ ತನ್ನ ಜೊತೆ ಊರಿಗೆ ಬರುವಂತೆ ಹೇಳಿದರಂತೆ. ಮೊದಲು ಒಪ್ಪದ ಅವನು ತನ್ನ ತಾಯಿಯ ಸ್ಥಿತಿ ಕೇಳಿ ಒಪ್ಪಿಕೊಂಡನಂತೆ. ಹಮೀದನ ತಂದೆಯೇ ಅವನನ್ನು ಇಲ್ಲಿಗೆ ಕರೆದುಕೊಂಡು ಬರುತ್ತಿದ್ದಾರಂತೆ. ದಿನೇಶನ ತಂದೆ ತಾಯಿ ಮತ್ತು ಅಣ್ಣ ಹಮೀದನ ಮನೆಯಲ್ಲಿಯೇ ಅವನಿಗೋಸ್ಕರ ಕಾಯುತ್ತಿದ್ದಾರಂತೆ.

"ನನಗೆ ತುಂಬಾ ಖುಷಿ ಆಗಿದೆ ಶಂಕರ. ಯಾವುದಾದರೂ ಕ್ಯಾಸೆಟ್ ತರೋಣ" ದಿನೇಶ ಹೇಳಿದ. ಶಂಕರನಿಗೆ ನಂಬಲಾಗಲಿಲ್ಲ. ದಿನೇಶನೇ ಪಿಚ್ಚರ್ ನೋಡಬೇಕೂಂತ ಹೇಳದೆ ಎಷ್ಟು ಸಮಯ ಆಯ್ತು. ಇವತ್ತು ನೋಡಲೇಬೇಕು ಅಂದುಕೊಂಡು "ಆಯ್ತು ನೋಡೋಣ. ಬಾಜೀಗರ್ ಅಂತ ಹೊಸ ಸಿನೆಮಾ ಬಂದಿದೆಯಂತೆ. ಬಹಳ ಚೆನ್ನಾಗಿದೆ ಅಂತ ಸ್ಕ್ರೀನ್ ನಲ್ಲಿ ಬರೆದಿದ್ದಾರೆ. ನೋಡೋಣ್ವಾ? ಆದರೆ ಹೀರೋ ಶಾರೂಖ್ ಅಂತ. ಅದೇ ಆ ಸರ್ಕಸ್ ಸೀರಿಯಲ್ ನವ"

ಶಂಕರನಿಗೆ ಹಳೇ ಕತೆ ನೆನಪಿತ್ತು. ಅದಕ್ಕೇ ಹೀರೋ ಹೆಸರು ಮೊದಲೇ ಹೇಳಿಬಿಟ್ಟ. ಆದರೆ ದಿನೇಶ ಇದೆಲ್ಲಾ ಕೇಳಿ ಏನೂ ಆಗದವನಂತೆ "ಅದಕ್ಕೇನು ನೋಡೋಣ ಬಿಡೋ. ಸಿನೆಮಾ ಚೆನ್ನಾಗಿರಬೇಕು ಅಷ್ಟೇ. ಹೀರೋ ಯಾರಾಗಿದ್ದರೇನು? ಮತ್ತೆ ಸಲೀಂನ ಅಂಗಡಿಯಿಂದ ಕ್ಯಾಸೆಟ್ ತರುವಾಗ ಜೊತೆಯಲ್ಲಿ ಆ ಹಮೀದನನ್ನೂ ಕರೆದುಕೊಂಡು ಬರುವಾ. ಶಾರುಖ್ ಅಂದರೆ ಅವನಿಗೆ ಬಹಳ ಇಷ್ಟ" ದಿನೇಶ ಹೇಳುತ್ತಿದ್ದರೆ ಶಂಕರ ಗರಬಡಿದವನಂತೆ ನಿಂತುಬಿಟ್ಟಿದ್ದ. ಕೇಳುತ್ತಿದ್ದದೆಲ್ಲಾ ಕನಸಲ್ಲಾ ಅಂತ ನಂಬಲು ಅವನಿಗೆ ಕಷ್ಟವಾಗುತ್ತಿತ್ತು. "ನಡಿಯಪ್ಪಾ ಬೇಗ. ಸಲೀಂ ನಮಾಜ[illegible]ಗ ಹ ೋಗುವಮೊದಲುಕ್ಯಾಸೆ[illegible]ುತ್ತಲೇ ಇದ್ದ.

## <u>ಸರಿತಳ ಬ್ಲಾಗ್</u>

Tuesday, November 28, 2006

ಸರಿತ ಹಾಗೆ ತನ್ನ ಲ್ಯಾಪ್ ಟಾಪ್ ನ ಮುಂದೆ ಎಷ್ಟು ಹೊತ್ತಿನಿಂದ ಕುಳಿತಿದ್ದಳೋ ಗೊತ್ತಿಲ್ಲ. ಸ್ಕ್ರೀನ್ ಆಫ್ ಆಗಿದ್ದನ್ನು ನೋಡಿ ತಾನು ಅರ್ಧ ಘಂಟೆಯಿಂದ ಹೀಗೆ ಮಂಕಾಗಿ ಕುಳಿತಿರಬಹುದೆಂದು ಅವಳಿಗೆ ಅನ್ನಿಸಿತು. ಅಲ್ಲಾ ಬರುವ ವಾರ ಫೈನಲ್ ರಿಲೀಸ್ ಬೇರೆ ಇದೆ. ಮಧ್ಯದಲ್ಲಿ ಮಗಳ ಪ್ರಾಜೆಕ್ಟ್ ಗೆ ಅದ್ಯಾವುದೋ ದೇಶದ ಬುಡಕಟ್ಟು ಜನರ ಬಗ್ಗೆ ಬೇರೆ ಇಂಟರ್ನೆಟ್ ನಲ್ಲಿ ಹುಡುಕಬೇಕಾಗಿದೆ. ಆ ಮೇಲೆ ಅದೇ ತರದ ಡ್ರೆಸ್ ಬೇರೆ ಅವಳಿಗೆ ಹೊಲಿಸಬೇಕು. ಇದೆಲ್ಲದರ ಮಧ್ಯೆ ಈ ಹೊಸ ವಿಷಯ ಇಷ್ಟು ಬೇಗ ಮುಂದುವರೆಯುತ್ತದೆ ಎಂದು ಅವಳೇನೂ ಅಂದುಕೊಳ್ಳಿರಲಿಲ್ಲ.

ಲ್ಯಾಪ್ ಟಾಪ್ ಆನ್ ಮಾಡಿ ಗೂಗಲ್ ನಲ್ಲಿ ಮಗಳಿಗೆ ಬೇಕಾದ ವಿಷಯವನ್ನು ಹುಡುಕಲು ಪ್ರಾರಂಭಿಸಿದಳು. ಅಲ್ಲಾ ಶಾಲೆಗೆ ಹೋಗುವ ಮಗಳಿದ್ದಾಳೆ ತನಗೆ. ಈ ಸಮಯದಲ್ಲಿ ತಾನು ಮಾಡುತ್ತಿರುವುದು ಸರಿಯಾ? ಸರಿತ ಯೋಚಿಸುತ್ತಿದ್ದಳು. ಗೂಗಲ್ ತೋರಿಸಿದ ಉತ್ತರದಲ್ಲಿ ಯಾವುದೋ ಒಂದು ನಂಬುವಂತಿದ್ದದ್ದನ್ನು ಸೆಲೆಕ್ಟ್ ಮಾಡಿದಳು. ಅಲ್ಲಾ ಮಗಳಿಗೆ ಈ ವಿಷಯ ಹೇಳೋದು ಹೇಗೆ? ಅಪ್ಪ ಇದ್ದಿದ್ದರೆ ಚೆನ್ನಾಗಿರ್ತಿತ್ತೇನೋ. ಅವರು ಮಗಳಿಗೆ ತಿಳಿಸಿ ಹೇಳುತ್ತಿದ್ದರು. ಹೇಗಿದ್ದರೂ ಹೇಳಬೇಕು. ಇವತ್ತೇ ಹೇಳಿಬಿಡೋಣ. ರಾತ್ರಿ ಮಲಗುವಾಗ ಬೇರೆ ಕತೆ ಹೇಳುವ ಬದಲು ತನ್ನ ಕತೆಯನ್ನೇ ಹೇಳುವ - ಸರಿತ ಯೋಚಿಸುತ್ತಿದ್ದಾಗ ಬಾಗಿಲು ಬಡಿಯುವ ಸದ್ದು ಕೇಳಿಸಿತು.

"ಕಮ್ ಇನ್" ಜೋರಾಗಿಯೇ ಹೇಳಿದಳು. ಅವಳು ಮೊದಮೊದಲು ಈ ಕಂಪೆನಿ ಸೇರಿದಾಗ ಎಲ್ಲರೂ ಬೇಕೆಂದಾಗ ಇವಳ ಕ್ಯಾಬಿನ್ ಗೆ ನುಗ್ಗಿ ಬಿಡುತ್ತಿದ್ದರು. ಸರಿತಳಿಗೆ ಯಾಕೋ ಇದು ಮೊದಲಿನಿಂದಲೂ ಹಿಡಿಸಿರಲಿಲ್ಲ. ಸೂಕ್ಷ್ಮವಾಗಿ ತನಗೆ ಇದೆಲ್ಲಾ ಹಿಡಿಸೊಲ್ಲ ಅಂತ ಹೇಳುವ ಪ್ರಯತ್ನ ಮಾಡಿದಳು. ಯಾರು ಅದನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡದಾಗ ಯಾರು ಕೂಡ ಬಾಗಿಲು ಬಡಿಯದೆ ಒಳಗೆ ಬರಬಾರದೆನ್ನುವ ನಿಷ್ಟುರವಾದ ನಿಯಮ ಮಾಡಿದಳು. "ಇವೆಲ್ಲಾ ಸರಕಾರೀ ಆಫೀಸಿನ ನಿಯಮಗಳು. ಈ ಐಟಿ ಇಂಡಸ್ಟ್ರಿಯಲ್ಲಿ ಸೋಶಿಯಲ್ ಆಗಿ ಇರಬೇಕು" ಅಂತ ಹಲವು ಜನ ವಾದ ಮಾಡಿದರೂ ಸರಿತ ಅದನೆಲ್ಲಾ ತಲೆಗೆ ಹಾಕಿಕೊಳ್ಳಲು ಹೋಗಿರಲಿಲ್ಲ.

ಒಳಗೆ ಬಂದವನು ಶಿಶಿರ. ಕಂಪೆನಿ ಸೇರಿ ಒಂದು ವರ್ಷ ಮೇಲಾಗಿತ್ತು. ಬುದ್ದಿವಂತ ಹುಡುಗ. ಸರಿತಳಿಗೆ ಅವನನ್ನ ಕಂಡರೆ ಅಭಿಮಾನ. ಅವಳೇ ಅವನನ್ನ ಕ್ಯಾಂಪಸ್ ಸೆಲೆಕ್ಷನ್ ವೇಳೆ ಆಯ್ಕೆ ಮಾಡಿದ್ದಳು ಮತ್ತು ತನ್ನ ಟೀಮ್ ನಲ್ಲಿ ಅವನು ಬೇಕೆಂದು ಒತ್ತಾಯ ಮಾಡಿ ಹಾಕಿಸಿಕೊಂಡಿದ್ದಳು. ಟೀಮ್ ನಲ್ಲಿದ್ದ ಎಲ್ಲರಿಗೂ ಇದು ತಿಳಿದಿದ್ದರಿಂದ ಏನಾದರೂ ಬೇಡಿಕೆ ಮುಂದಿಡುವುದಿದ್ದರೆ ಶಿಶಿರನನ್ನೇ ಕಳುಹಿಸುತ್ತಿದ್ದರು. "ಮ್ಯಾಡಂ ಒಂದು ವಿಷಯ ಹೇಳೋದಿತ್ತು" ಶಿಶಿರ ಮಾತಾಡಲು ಶುರುಮಾಡಿದ. "ಕೂತುಕೋ ಮೊದಲು" ಸರಿತ ಹೇಳಿದಳು. "ಇಟ್ಸ್ ಒಕೆ ಮ್ಯಾಡಂ" ಶಿಶಿರ ಏನೋ ಹೇಳಲು ಹಿಂದೇಟು ಹಾಕುತ್ತಿದ್ದ.

"ಪರವಾಗಿಲ್ಲ ಹೇಳು, ವಾಟ್ ಈಸ್ ದ ಮ್ಯಾಟರ್" ಸರಿತ ಕೇಳಿದಳು "ಆದರೆ ಬರುವ ವಾರ ರಿಲೀಸ್ ಇದೆ. ಗೊತ್ತಿದೆಯಲ್ಲಾ ಕಳೆದ ಸಲ ಲಾಸ್ಟ್ ಮಿನಿಟ್ ನಲ್ಲಿ ಆ ಪ್ರಭಾಕರ ಕೈಕೊಟ್ಟ ಹಾಗೆ ನೀನೇನಾದರೂ...ಡು ಉ ಹ್ಯಾವ್ ಎನಿ ಸಚ್ ಪ್ಲಾನ್ಸ್?" "ನೋ ಮ್ಯಾಡಂ. ಹಾಗೇನಿಲ್ಲ. ಅಫ್ ಕೋರ್ಸ್ ನಾವು ರಿಲೀಸ್ ಗೆ ತಯಾರಿದ್ದೇವೆ. ಆದರೆ ಇವತ್ತು ಮಧ್ಯಾಹ್ನ ನಾವೆಲ್ಲಾ ಬೇಗ ಹೋಗ ಬೇಕೂಂತ..." ಶಿಶಿರ ಹೇಳುತ್ತಿದ್ದರೆ ಸರಿತ ಮಧ್ಯದಲ್ಲೇ ತಡೆದಳು "ಯಾಕೆ? ನಾಳೆ ಹೇಗಿದ್ದರೂ ಶನಿವಾರ. ನಿಮ್ಮ ಪಾರ್ಟಿ ಪ್ಲಾನ್ಸ್ ಎಲ್ಲಾ ನಾಳೆಗೆ ಇಟ್ಟುಕೊಳ್ಳಿ. ಟುಡೆ ಐ ವಾಂಟ್ ಯು ಟು ವರ್ಕ್"

"ಅದು ಹಾಗಲ್ಲ ಮ್ಯಾಡಂ. ಹೊಸ ಬಾಂಡ್ ಫಿಚ್ಚರ್ ಬಂದಿದೆಯಲ್ಲಾ. ಅದನ್ನ ನೋಡಲು ಎಲ್ಲರೂ ಪಿ.ವಿ.ಆರ್. ಗೆ ಒಟ್ಟಿಗೇ ಹೋಗೋಣಾಂತ. ವೀಕೆಂಡ್ ನಲ್ಲಿ ಟಿಕೇಟ್ ಸಿಗೋಲ್ಲಾ ಮ್ಯಾಡಂ. ಅದಕ್ಕೇ ಇವತ್ತೇ ಹೋಗೋಣಾಂತ ಡಿಸೈಡ್ ಮಾಡಿದೀವಿ. ಬೇಕಾದರೆ ನಾಳೆ ಬರ್ಲಿಕ್ಕೆ ಎಲ್ಲರೂ ರೆಡಿ ಇದ್ದೀವಿ ಮ್ಯಾಡಂ" ಶಿಶಿರ ಸಮಜಾಯಿಕೆ ಕೊಡುತ್ತಿದ್ದ. ಸರಿತಳಿಗೆ ಗೊತ್ತಾಯ್ತು. ಇವರು ಹೊರಗಡೆ ಸರಿಯಾಗಿ ರಿಹರ್ಸಲ್ ಮಾಡಿದ್ದಾರೆ. ತಾನು ಯಾವ ಪ್ರಶ್ನೆ ಕೇಳಬೇಕೂಂತ ಊಹಿಸಿ ಅದಕ್ಕೆ ಸರಿಯಾದ ಉತ್ತರ ರೆಡಿ ಮಾಡಿದ್ದಾರೆ. ಆದರೆ ನಾಳೆ ತನಗೆ ಆ ಕೆಲಸ ಇದೆಯಲ್ಲಾ. ಏನು ಮಾಡೋಣ?

ಶಿಶಿರನ ಮುಖ ನೋಡಿದಳು. ಪಾಪ ಹುಡುಗ ಆಸೆಯಿಂದ ನೋಡುತ್ತಿದ್ದಾನೆ. ಹೊರಗಡೆ ಎಲ್ಲರೂ ಇವನಿಗಾಗಿಯೇ ಕಾಯುತ್ತಿರಬಹುದು. ನಾನೀಗ ಇಲ್ಲ ಅಂದರೆ ಅವರಿಗೆಲ್ಲಾ ಎಷ್ಟು ನೋವಾಗಬಹುದು. ಇರಲಿ ಹೋಗಲಿ, ಕೆಲಸ ಮಾಡುವುದರಲ್ಲಿ ಯಾರೂ ಕಳ್ಳರಿಲ್ಲ ತನ್ನ ಟೀಮ್ ನಲ್ಲಿ. ಮತ್ತೇನು ಕಷ್ಟ "ಒಕೆ. ನೀವು ಬಾಂಡ್ ನನ್ನು ನೋಡಿಕೊಂಡು ಬನ್ನಿ" . ಶಿಶಿರನ ಮುಖದಲ್ಲಿ ಸಂತೋಷ ಎದ್ದು ಕಾಣುತ್ತಿತ್ತು. "ಥ್ಯಾಂಕ್ಸ್ ಮ್ಯಾಡಂ. ನಾಳೆ ಬಂದು ನಾವು ಕೆಲಸ ಮಾಡುತ್ತೇವೆ" ಶಿಶಿರ ಹೋಗಲು ಅಣಿಯಾದ. "ನೋ ಶಿಶಿರ್. ನಾಳೆ ಬರುವುದೇನು ಬೇಡ. ಕಮ್ ಆನ್ ಮಂಡೇ." ಶಿಶಿರನಿಗೆ ನಂಬಲೇ ಆಗುತ್ತಿರಲಿಲ್ಲ. "ನನ್ನನ್ನ ಬರ್ತೀರಾಂತ ಕೇಳೊಲ್ವಾ?" ಸರಿತ ಕೇಳಿದಾಗ ಶಿಶಿರ ಬೀಳುವುದೊಂದು ಬಾಕಿ "ವಿಲ್ ಯು ಕಮ್ ಮ್ಯಾಡಂ. ಟಿಕೆಟ್ ಬುಕ್ ಮಾಡಿಸಲಾ?" ಶಿಶಿರ ಎಕ್ಸೈಟ್ ಆಗಿದ್ದ.

"ನೋ. ಜಸ್ಟ್ ಜೋಕಿಂಗ್. ನೀವೆಲ್ಲಾ ಹೋಗಿ ಬನ್ನಿ. ಬಟ್ ಮಂಡೇ ಮೀಟಿಂಗ್ ನಲ್ಲಿ ನೀನು ಮೂವೀನ ರಿವ್ಯೂ ಮಾಡಬೇಕು". "ಒಕೆ ಮ್ಯಾಡಂ. ಥ್ಯಾಂಕ್ಸ್ ವೆರಿಮಚ್. ಹ್ಯಾಪಿ ವೀಕೆಂಡ್ ಮ್ಯಾಡಂ" ಶಿಶಿರ ಸುದ್ದಿಯನ್ನು ಬೇರೆ ಟೀಮ್ ಮೇಟ್ಸ್ ಗೆ ಹೇಳಲು ಬಾಗಿಲು ತೆರೆದು ಓಡಿದ. ಯಾಕೋ ಸರಿತಳಿಗೆ ಒಂದು ತರಹ ನೆಮ್ಮದಿಯಾಯ್ತು. ಯಾವಾಗಲೂ ಟೆನ್ಷನ್ ನಿಂದಲೇ ತುಂಬಿರುತ್ತಿದ್ದ ತನ್ನ ಕ್ಯಾಬಿನ್ ನಲ್ಲಿ ಇವತ್ಯಾಕೋ ನಗು ತುಂಬಿತ್ತು. ನಿಜ ಈ ವೀಕೆಂಡ್ ಶಿಶಿರ ವಿಷ್ ಮಾಡಿದಂತೆ "ಹ್ಯಾಪಿ" ಆದರೆ ತಾನು ಯಾವಾಗಲೂ ಹೀಗೆಯೇ ಇರಬಹುದು, ಯಾರಿಗೆ ಗೊತ್ತು, ಬರುವ ವೀಕೆಂಡ್ ತಾನೂ ಪಿ.ವಿ.ಆರ್ ಗೆ ಹೋಗಬಹುದು - ಸರಿತ ಮೆಲ್ಲನೆ ನಗುತ್ತಿದ್ದಳು.

ಶಿಶಿರನನ್ನು ನೋಡುತ್ತಿದ್ದರೆ ಅವಳಿಗೆ ತನ್ನ ಕಾಲೇಜಿನ ದಿನಗಳೇ ನೆನಪಿಗೆ ಬರುತ್ತಿತ್ತು. ಅಲ್ಲೂ ಎಲ್ಲಾ ಹುಡುಗರು ಈ ಶಿಶಿರನ ತರಾನೇ ಅವಳ ಹತ್ತಿರ ಮಾತಾಡಲು ಭಯ ಪಡುತ್ತಿದ್ದರು. ಬೇರೆ ಹುಡುಗಿಯರ ಹತ್ತಿರ ಘಂಟೆಗಟ್ಟಲೆ ಮಾತಾಡುವ ಮಜ್ನೂಗಳೂ ಇವಳ ಹತ್ತಿರ ನೋಟ್ಸ್ ಕೇಳುವುದಕ್ಕೂ ಭಯ ಪಡುತ್ತಿದ್ದರು. ಅತೀ ಬುದ್ದಿವಂತೆ ಅಲ್ಲದಿದ್ದರೂ ಭಾಷಣ, ಸಾಹಿತ್ಯ ಅಂತ ಓಡಾಡುತ್ತಿದ್ದ ಅವಳಿಗೆ ಈ ಬಗ್ಗೆ ಯೋಚಿಸಲೂ ಪುರುಸೊತ್ತಿರಲಿಲ್ಲ. ಪಿಯುಸಿ ಮುಗಿಸಿ ಡಿಗ್ರಿಗೆ ಸೇರಿದ ಮೇಲೂ ಇದೇ ಪರಿಸ್ಥಿತಿ ಮುಂದುವರೆಯಿತು.

ಆದರೆ ಅಲ್ಲಿ ಸರಿತಳಿಗೆ ಇದ್ದಕಿದ್ದಂತೆ ಒಮ್ಮೆ ತನಗೆ ಒಬ್ಬ ಜೊತೆಗಾರ ಬೇಕೆಂದು ಅನ್ನಿಸುತ್ತಿತ್ತು. ತನ್ನ ಜೊತೆಯಲ್ಲಿದ್ದವರೆಲ್ಲಾ ಹುಡುಗರ ಜೊತೆ ಬೈಕನ್ನೇರಿ ಸಿನೆಮಾ, ಪಬ್ ಅಂತ ಸುತ್ತುತ್ತಿದ್ದರೆ ತಾನೊಬ್ಬಳೇ ಒಂಟಿ ಎಂ□ ವಳಿಗೆ ಅನ್ನಿಸುತ್ತಿತ್ತು . ತೀರಾ ಸುಂದರಿ ಅಲ್ಲದಿದ್ದರೂ ಎದ್ದು ಕಾಣುವ ಹುಡುಗಿಯಾದ ನನಗೆ ಯಾಕೆ ಯಾರೂ ಪ್ರಪೋಸ್ ಮಾಡಿಲ್ಲವೆಂದು ಒಮ್ಮೊಮ್ಮೆ ಅವಳು ಯೋಚಿಸಿದ್ದೂ ಉಂಟು. ಅವಳ ರೂಮ್ ಮೇಟ್ ಸರಿತಳ ಬಳಿ ಒಮ್ಮೆ ಹೇಳಿದ್ದಳು "ಹುಡುಗರಿಗೆ ಬುದ್ದಿವಂತ ಹುಡುಗಿಯರನ್ನ ಕಂಡರೆ ಆಗುವುದಿಲ್ಲ ಕಣೇ. ಯು ನೋ, ದೇ ವಾಂಟ್ ದೆಯರ್ ಗರ್ಲ್ ಫ್ರೆಂಡ್ಸ್ ಟು ಬಿ ಎಂಪ್ಟಿ ಹೆಡ್ಸ್"

ಅರೇ, ಇದೊಳ್ಳೆ ತಮಾಶೆ ಆಯಿತಲ್ಲಾ. ಬುದ್ದಿವಂತಳಾಗಿರೋದೇ ತಪ್ಪಾ? ತನ್ನ ಕತೆ, ಕವನವನ್ನ ಕಾಲೇಜಿನಲ್ಲಿ ಮೆಚ್ಚುವ ಜನ ಇಷ್ಟೊಂದು ಇರುವಾಗ ತನ್ನ ಜೊತೆ ಸಿನೆಮಾಗೆ ಬರೋಕೆ ಇವರಿಗೆಲ್ಲಾ ಹೆದರಿಕೆನಾ? ಸರಿತಳಿಗೆ ಯಾಕೋ ಹುಡುಗರ ಬಗ್ಗೆ ಹೊಟ್ಟೆ ತಳಿಸಿ ಬಂದಂತಾಯ್ತು. ರೂಮಿಗೆ ಬಂದವಳೇ ಸರಸರನೇ ಒಂದು ಚೀಟಿ ಬರೆದು ಕಾಲೇಜಿನ ನೋಟೀಸ್ ಬೋರ್ಡ್ ನಲ್ಲಿ ಅಂಟಿಸಿಬಿಟ್ಟಳು. ಅದರಲ್ಲಿ ಸರಿತ ಬರೆದ್ದದ್ದೇನೆಂದರೆ -

"ಸೂಚನೆ: ಈ ಕಾಲೇಜಿನಲ್ಲಿ ಬಿ.ಎಸ್ಸಿ ಓದುತ್ತಿರುವ ಸರಿತ ಎಂ□ ನು ಯೋಗ್ಯ ಹುಡುಗರಿಂದ ನನ್ನ ಬಾಯ್ ಫ್ರೆಂಡ್ ಆಗಲು ಅರ್ಜಿ ಆಹ್ವಾನಿಸುತ್ತಿದ್ದೇನೆ. ಅರ್ಜಿ ಹಾಕುವ ಹುಡುಗ ಸಭ್ಯನಾಗಿರಬೇಕು ಎಂ□ದನ್ನು ಟ್ಟರೆ ಮತ್ಯಾವ ನಿರ್ಬಂಧವೂ ಇಲ್ಲ. ನನಗೆ ಸರಿಯೆನಿಸುವ ಹುಡುಗ ಸಿಗುವವರೆಗೂ ಈ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಮೊದಲು ಬಂದವರಿಗೆ ವಿಶೇಷ ಆದ್ಯತೆ ಏನೂ ಇಲ್ಲ."

"□ ಚ್ಚಿತ್ತಪ್ಪಾ ನನಗೆ ಆ ಕಾಲದಲ್ಲಿ " ಸರಿತಾ ಯೋಚಿಸುತ್ತಿದ್ದಳು. ತಾನಾಗ ಕರೆದ ಪೋಸ್ಟಿಗೆ ಯಾರೂ ಯಾಕೆ ಅರ್ಜಿ ಹಾಕಲಿಲ್ಲ ಎಂ□ ಂತೆ ತನಗಿನ್ನೂ ಎಲ್ಲೋ ಮೂಲೆಯಲ್ಲಿ ಕಾಡುತ್ತಿದೆ ಎಂ□ ರಿತಳಿಗೆ ಅನ್ನಿಸುತ್ತಿತ್ತು. ಬಹುಶಃ ಅದಕ್ಕೇ ಇರಬೇಕು ತಾನು ಅನಂತರ ಈ ಎಲ್ಲಾ ವಿಷಯಗಳ ಬಗ್ಗೆ ನಿರಾಸಕ್ತಳಾಗಿ ಬರೇ ಓದಿನ ಬಗ್ಗೆ ಗಮನ ಹರಿಸಿದ್ದು. ಆಗ ಹಾಗೆ ಮಾಡಿದ್ದು ಎಷ್ಟು ಒಳ್ಳೆಯದಾಯ್ತು. ತಾನು ಅಂದು ಹೆಚ್ಚು ಗಮನ ಇಟ್ಟು ಓದಿದಕ್ಕೇ ತನಗೆ ಬಿ.ಎಸ್ಸಿ ಯಲ್ಲಿ ಒಳ್ಳೇ ಅಂಕ ಬಂದು ಯೂನಿವರ್ಸಿಟಿಗೆ ಹೋಗಲು ಸಾಧ್ಯವಾದದ್ದು ಸರಿತಾ ಯೋಚಿಸುತ್ತಿದ್ದಳು.

ಯೂನಿವರ್ಸಿಟಿ - ಸರಿತಳ ಪಾಲಿಗೆ ಹೊಸ ಲೋಕವನ್ನೇ ತೆರೆದಿಟ್ಟಿತು. ಇಲ್ಲಿ ಕಾಲೇಜಿನಲ್ಲಿದ್ದಂತೆ ಯಾರೂ ಚಿಕ್ಕ ಚಿಕ್ಕ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಇಲ್ಲಿ ಎಲ್ಲವೂ ಒಂದು ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿತ್ತು. ಸರಿತ ಗಣಿತದಲ್ಲಿ ಎಂ□.ಎಸ್ಸಿ ಮಾಡಲು ಬಂದವಳು ಮುಂದೆ ಪಿಹೆಚ್.ಡಿ ಮಾಡಲು ಅಲ್ಲೇ ಉಳಿದಳು. ಅಪ್ಪ ಮದುವೆ

ಆಗಮ್ಮಾ ಅಂದರೂ ಕೇಳದೆ ಯೂನಿವರ್ಸಿಟಿ ಹಾಸ್ಟೆಲಿನಲ್ಲಿಯೇ ಉಳಿದುಕೊಂಡು ರಿಸರ್ಚ್ ಮಾಡಿಕೊಂಡಿದ್ದಳು. "ನಿಜವಾಗಲೂ ಆ ದಿನಗಳು ತುಂಬಾ ಚೆನ್ನಾಗಿತ್ತು" ಸರಿತ ಮತ್ತೆ ಇಂದು ಆ ದಿನಗಳನ್ನು ಜೀವಿಸುತ್ತಿದ್ದಳು.

ಸರಿತ ಪಿಹೆಚ್.ಡಿ ಮಾಡಲು ಶುರುಮಾಡಿದ ಸ್ವಲ್ಪ ಸಮಯಕ್ಕೇ ಶಶಿ ಅವಳಿಗೆ ಪರಿಚಯವಾದ. ಅವಳ ಗೈಡ್ ಆಗಿದ್ದ ಶಾಸ್ತ್ರಿ ಅವರು ಕಾನ್ಫರೆನ್ಸ್ ಗಳಿಗಲ್ಲಾ ಹೋಗುತ್ತಿರಲಿಲ್ಲ. ಹಾಗಾಗಿ ರಿಸರ್ಚ್ ಪೇಪರ್ ಗಳನ್ನು ಪ್ರೆಸೆಂಟ್ ಮಾಡಲು ಸರಿತಳೇ ಎಲ್ಲಾ ಕಡೆ ಹೋಗುತ್ತಿದ್ದಳು. ಹಾಗೆ ಒಂದು ಕಡೆ ಪರಿಚಯವಾದವನೇ ಈ ಶಶಿಧರ. ಅವನೂ ಇದೇ ಯೂನಿವರ್ಸಿಟಿಯಲ್ಲಿ ರಿಸರ್ಚ್ ಮಾಡುತ್ತಿದ್ದ. ಇಬ್ಬರೂ ಪದೇ ಪದೇ ಕ್ಯಾಂಪಸ್ ನಲ್ಲಿ ಭೇಟಿಯಾಗುತ್ತಿದ್ದರು. ಒಟ್ಟಿಗೇ ಕ್ಯಾಂಟೀನ್ ನಲ್ಲಿ ಕಾಫಿ ಕುಡಿಯಲು ಪ್ರಾರಂಭಿಸಿದ ಇಬ್ಬರೂ ನಂತರ ಜೊತೆಯಲ್ಲಿ ಊಟ ಮಾಡಲು ಆರಂಭಿಸಿದರು. ಮತ್ತೆ ಲ್ಯಾಬ್ ನಲ್ಲಿ ಇಂಟರ್ ಕಾಮ್ ನ ಮೂಲಕ ಮಾತಾಡುತ್ತಿದ್ದವರು ಸಂಜೆಯಾದರೆ ಕ್ಯಾಂಪಸ್ಸಿನಲ್ಲಿ ಎಲ್.ಎಮ್.ಸ್ಪಾಟ್ ನಲ್ಲಿ (ಲೈಲಾ-ಮಜ್ನು ಸ್ಪಾಟ್) ಹಾಜರ್.

"ಏನಮ್ಮಾ ರೋಮಾನ್ಸ್ ಜೋರಾ?" ಗೆಳತಿಯೊಬ್ಬಳು ಕೇಳಿದಾಗ ತಾನೇ ತನಗೆ ಶಶಿಯೂ ತಾನು ಪ್ರೀತಿಸುತ್ತಿದ್ದೇವೆಂದು ತಿಳಿದದ್ದು - ಸರಿತ ಊಟ ಮಾಡುತ್ತಾ ಯೋಚಿಸುತ್ತಿದ್ದಳು. ಎಷ್ಟು ಮಜವಾಗಿತ್ತು ಆ ದಿನಗಳು. ಪುಸ್ತಕ, ಕ್ಲಾಸಿಕ್ ಸಿನೆಮಾ, ಸೋಷಿಯಲಿಸಂ..ತನಗೂ ಶಶಿಗೂ ಎಷ್ಟೊಂದು ಸಾಮ್ಯತೆ ಇತ್ತು. ಅವನ ಜೊತೆಯಲ್ಲಿ ಓದುತ್ತಾ, ರಿಸರ್ಚ್ ಮಾಡುತ್ತಾ ೪ ವರ್ಷ ಹೋದದ್ದೇ ತಿಳಿದಿರಲಿಲ್ಲ ತನಗೆ. ಅಪ್ಪ ಅಂತು ನನಗೆ ಹುಡುಗ ನೋಡಿ ನೋಡಿ ಸಾಕಾಗಿದ್ದರು. "ಇಷ್ಟು ಓದಿದ್ದೀಯ ನೀನು. ನಿನಗೆ ಎಲ್ಲಿಂದ ಹುಡುಗ ತರಲಮ್ಮಾ" ಅವರದ್ದೊಂದೇ ಅಳು.

ಅವರು ತರುತ್ತಿದ್ದ ಹುಡುಗರೋ- ಅರೆ ಬರೆ ಓದಿ ಊರಿನಲ್ಲಿ ಜಮೀನು ಮಾಡಿಕೊಂಡಿದ್ದವರು, ರಾಶಿ ದುಡ್ಡು ಇದ್ದು ಏನು ಮಾಡಬೇಕೆಂದು ತೋಚದವರು ಬರಿ ಇಂತವರೇ. ಅಂತ ಒಬ್ಬ ಹುಡುಗನನ್ನ ಮದುವೆ ಆಗಿದ್ದರೆ ತನ್ನ ಬದುಕು ಹೇಗಿರುತ್ತಿತ್ತು? ಸರಿತ ಕೆಲವೊಮ್ಮೆ ಯೋಚಿಸುತ್ತಾಳೆ. "..ರಿ..ಗ..ಮ..ಪ" ಮೊಬೈಲ್ ಕೂಗತೊಡಗಿತು. ಅರೇ ಮಗಳ ಮೆಸೇಜ್. "ಡಿಡ್ ಯು ಸರ್ಚ್ ಅಬೌಟ್ ದ ಪ್ರಾಜೆಕ್ಟ್?" ಚುಟುಕಾದ ಮೊಬೈಲ್ ಭಾಷೆಯಲ್ಲಿ ಬಂದ ಮೆಸೇಜ್ ಓದಿ ಅವಳಿಗೆ ಬೆಳಗ್ಗೆ ಡೌನ್ ಲೋಡ್ ಮಾಡಿದ ಪೇಜಿನ ಬಗ್ಗೆ ಮತ್ತೆ ನೆನಪಾಯ್ತು. ಇರಲಿ ಅಂತ ಅದರ ಪ್ರಿಂಟೌಟ್ ತೆಗೆಯುತ್ತಾ ಮತ್ತೆ ಹಳೆಯ ನೆನಪಿಗೆ ಜಾರಿದಳು.

ಶಶಿ - ಎಷ್ಟೊಂದು ಕಾಳಜಿ ಇತ್ತು ಮೊದಲು ಅವನಿಗೆ ನನ್ನ ಮೇಲೆ. ಪಿಹೆಚ್.ಡಿ ಸಿಗುವ ಮೊದಲೇ ನಾವು ಮದುವೆ ಆಗಿದ್ದೆವು. ಕ್ಯಾಂಪಸ್ ನಲ್ಲಿ ಇದೆಲ್ಲಾ ಮಾಮೂಲು ಸಂಗತಿ ಆದ್ದರಿಂದ ಯಾರೂ ಹೆಚ್ಚು ತಲೆಕೆಡಿಸಿಕೊಂಡಿರಲಿಲ್ಲ. ಅಪ್ಪನೂ ನನಗೆ ಹುಡುಗನನ್ನ ಹುಡುಕಿ ಸುಸ್ತಾಗಿದ್ದರಿಂದ ಮದುವೆಯ ಬಗ್ಗೆ ಏನೂ ಹೇಳಲಿಲ್ಲ. ಹೇಳಿದರೂ ಕೇಳುವ ಸ್ಥಿತಿಯಲ್ಲಿ ನಾನು ಆಗ ಇದ್ದೆನಾ? ಆಗ ನಮಗೆ ನಮ್ಮದೇ ಲೋಕ ಇತ್ತು. ಥೀಸೀಸ್ ಬರೆದು ಸಬ್ಮಿಟ್ ಮಾಡಿದ ಕೂಡಲೇ ನನಗೆ ಒಳ್ಳೆಯ ಕಂಪೆನಿಯಿಂದ ಕೈ ತುಂಬ ಸಂಬಳ ಬರುವ ಕೆಲಸದ ಆಫರ್ ಬಂದಿತ್ತು. ಆದರೆ ಆಗ ಶಶಿ ಇದೆಲ್ಲಾ ಬೇಡವೆಂದಿದ್ದ.

ಮತ್ತು ಆಗ ನನಗೆ ಇದು ತಪ್ಪು ಅಂತ ಅನ್ನಿಸಿರಲಿಲ್ಲ. ಅವನಿಗೆ ಒಂದು ರಿಸರ್ಚ್ ಸಂಸ್ಥೆಯಲ್ಲಿ ಕೆಲಸ ಸಿಕ್ಕಿತ್ತು. ಅಲ್ಲೇ ಸೇರುವಂತೆ ನನ್ನನ್ನೂ ಒತ್ತಾಯಿಸಿದ. ನನಗೂ ಅವನ ಜೊತೆ ಇರುವುದೊಂದೇ ಆಗ ಕನಸು. ಸುಮ್ಮನೆ ಹೂಂಗುಟ್ಟಿದೆನಲ್ಲಾ. ಆದರೆ ಅಲ್ಲಿ ಆದದ್ದೇನು? ಸೇರಿದ ಸ್ವಲ್ಪ ಸಮಯಕ್ಕೆ ಶಶಿಯ ತಂದೆ ತೀರಿಹೋದರು. ಮತ್ತೆ ಶಶಿಯ ತಾಯಿ ನಮ್ಮ ಜೊತೆಗೆ ಇರತೊಡಗಿದರು. ಶಶಿಯ ತಾಯಿ ಕೆಟ್ಟವರೇನಲ್ಲ ಆದರೆ ಹಳೇ ಕಾಲದವರು. ಸೊಸೆ ಕೆಲಸಕ್ಕೆ ಹೋಗುವುದು ಅವರಿಗೆ ಇಷ್ಟ ಆಗುತ್ತಿರಲಿಲ್ಲ. ಮತ್ತೆ ಅವರು ಅದನ್ನು ಬೇರೆ ರೀತಿ ನನಗೆ ಹೇಳುತ್ತಿದ್ದರು ಕೂಡ.

ವರ್ಷವೊಂದರಲ್ಲಿ ನಮಗೆ ಮಗಳು ಹುಟ್ಟಿದಾಗ ರಜೆಯ ಮೇಲಿದ್ದೆ. ಎಲ್ಲರಂತೆ ನಾಲ್ಕೈದು ತಿಂಗಳು ಕಳೆದು ಪುನಃ ಕೆಲಸಕ್ಕೆ ಸೇರುತ್ತೇನೆಂದರೆ ಶಶಿಯ ತಾಯಿ ಬಿಡಲೇ ಇಲ್ಲ. "ಮಗುವನ್ನ ನೋಡಿಕೋ. ಅಷ್ಟು ಸಾಕು ನಿನಗೆ" ಒಂದೇ ಹಟ ಅವರದು. ಶಶಿಯೂ ಸುಮ್ಮನೇ ಇದ್ದುದ್ದು ನೋಡಿ ನನಗೆ ಏನೋ ತಪ್ಪು ಮಾಡಿದೆ ಅಂತ ಅನ್ನಿಸಲು ಶುರುವಾಯಿತು. ಈ ಮಧ್ಯೆ ಶಶಿಗೆ ಬೇರೆ ಯೂನಿವರ್ಸಿಟಿಯಿಂದ ಒಳ್ಳೇ ಆಫರ್ ಬಂದಿತ್ತು . "ನಡಿ ಸರಿತ, ನೀನೂ ಇಲ್ಲಿ ರಿಸೈನ್ ಮಾಡು. ನಿನಗೂ ಅಲ್ಲೇ ಕೆಲಸ ಕೊಡುವಂತೆ ಕೇಳಿದ್ದೇನೆ. ಅವರೂ ಒಪ್ಪಿದ್ದಾರೆ. ಐ ವಿಲ್ ಬಿ ಹೆಡಿಂಗ್ ಎ ಡಿಪಾರ್ಟಮೆಂಟ್ ದೇರ್" ಶಶಿ ಅಂದಾಗ ನನಗೆ ಎಷ್ಟು ಬೇಸರವಾಗಿರಬೇಡ.

ಒಂದು ನನನ್ನು ಮೊದಲೇ ಕಂಪೆನಿಯವರು ಕರೆದಾಗ ಬೇಡವೆಂದ. ಹೋಗಲಿ ಅಂತ ಅವನ ಜೊತೆ ಇಲ್ಲಿಗೆ ಬಂದರೆ ಇಲ್ಲಿ ನನನ್ನು ಕೆಲಸ ಮಾಡಲು ಬಿಡುತ್ತಿಲ್ಲ. ಈಗ ಅವನಿಗೆ ಒಳ್ಳೇ ಕೆಲಸ ಸಿಗುತ್ತಿದೆ ಅಂದ ಮಾತ್ರಕ್ಕೆ ನಾನು ಅವನ

ಹಿಂದೆ ಹೋಗಬೇಕಾ? ನನಗೆ ಅವನು ಕೆಲಸ ತೆಗೆಸಿ ಕೊಡುತ್ತಿದ್ದಾನಂತೆ. ನನಗೇನು ಯೋಗ್ಯತೆ ಇಲ್ಲವಾ ಕೆಲಸ ಪಡೆಯಲು. ಆಗಿದ್ದಾಗಲಿ ಅಂತ ಗಟ್ಟಿ ಮನಸ್ಸು ಮಾಡಿ ಶಶಿಗೆ ಹೇಳಿದೆ "ಇಲ್ಲ ಶಶಿ, ನಾನು ಬರೋಲ್ಲ. ಐ ಆಮ್ ಹ್ಯಾಪಿ ಹಿಯರ್. ಇಲ್ಲಿಂದ ಬಿಟ್ಟರೆ ಯಾವುದಾದರೂ ಕಂಪೆನಿ ಸೇರಿಕೊಳ್ತೇನೆ. ಆದರೆ ಇದೇ ಕೆಲಸ ಮಾಡಲು ಈ ಕೆಲಸ ಮಾತ್ರ ಬಿಡೋದಿಲ್ಲ."

ಬಹುಶಃ ಶಶಿ ಇದನ್ನು ಎಕ್ಸ್ಪೆಟ್ ಮಾಡಿರಲಿಲ್ಲ ಅಂತ ಕಾಣುತ್ತದೆ. ಅವನು ಏನೂ ಹೇಳದೇ ಹೊರಟುಹೋದ. ಆದರೆ ಅವನ ಅಮ್ಮ ಮಾತ್ರ ಸುಮ್ಮನಿರಲಿಲ್ಲ. ಬಾಯಿಗೆ ಬಂದಂತೆ ಬಯ್ದರು. "ಹುಡುಗಿಯರನ್ನು ಜಾಸ್ತಿ ಓದಿಸಿದರೆ ಹೀಗೇ ಆಗೋದು. ನಿನ್ನ ಅಪ್ಪನಿಗೆ ಬುದ್ದಿ ಇರಲಿಲ್ಲ" ಒಂದೇ ಸಮ ಅವರ ಬಾಯಿಂದ ಕೆಟ್ಟ ಬೈಗಳದ ಸುರಿಮಳೆ ಆಗುತ್ತಿತ್ತು. ನಾನೂ ಯೋಚಿಸಿದೆ. ನನ್ನ ಮಗುವೂ ಹೆಣ್ಣು. ಇವರು ಹೀಗೇ ಇದ್ದರೆ ಇವತ್ತು ನಾನು ಹೆಚ್ಚು ಓದಿದ್ದಕ್ಕೆ ನನಗೆ ಬಯ್ದಿದ್ದಾರೆ. ನಾಳೆ ನನ್ನ ಮಗಳನ್ನು ಓದಲಿಕ್ಕೇ ಬಿಡಲಿಕ್ಕಿಲ್ಲ. ಇವರ ಜೊತೆ ಇದ್ದರೆ ನಾನು ಕಷ್ಟ ಪಟ್ಟು ಕಲಿತ ವಿದ್ಯೆಗೆ ಏನು ಬೆಲೆ? ಶಶಿಯಂತೆ ನಾನೂ ನನ್ನ ಪಿಹೆಚ್.ಡಿ ಗಾಗಿ ಹಗಲೂ ರಾತ್ರಿ ದುಡಿದಿದ್ದೇನೆ. ಈಗ ಅವನ ಕೆರಿಯರ್ ಬಗ್ಗೆ ಮಾತ್ರ ಅವನಿಗೆ ಚಿಂತೆ. ನನ್ನ ಬಗ್ಗೆ ಅವನಿಗೆ ಎಳ್ಳಷ್ಟು ಕೇರ್ ಇಲ್ಲ. ಇಲ್ಲೇ ಇದ್ದರೆ ನಾನು ಬರೇ ಸರಿತ ಆಗಿ ಬಿಡುತ್ತೇನೆ. ಡಾ||ಸರಿತ ಎಲ್ಲೋ ಮೂಲೆಯಲ್ಲಿ ಉಸಿರುಗಟ್ಟಿ ಮೆಲ್ಲಮೆಲ್ಲ ಸಾಯುತ್ತಾಳೆ ಅಥವಾ ಇವರೇ ಸಾಯಿಸಿಬಿಡುತ್ತಾರೆ.

"ಅವತ್ತು ನಾನು ಆವೇಶದಲ್ಲಿ ನಿರ್ಧಾರ ತೆಗೆದುಕೊಂಡರೂ ಅದು ಆ ಸಮಯಕ್ಕೆ ಸರಿಯಾಗಿಯೇ ಇತ್ತು" ಸರಿತ ತೆಗೆದ ಪ್ರಿನ್ಟೌಟ್ ಗಳನ್ನು ಫೈನಿನಲ್ಲಿ ಜೋಡಿಸುತ್ತಾ ಯೋಚಿಸಿದಳು. ತನ್ನ ಕ್ಯಾಬಿನ್ ನ ಸುತ್ತ ಕಣ್ಣಾಡಿಸಿದಳು. ಕಪಾಟಿನಲ್ಲಿ ಮೂರ್ನಾಲಕ್ಕು ಪ್ಲೇಕ್ ಗಳು - "ಬೆಸ್ಟ್ ಪರ್ಫಾಮರ್", "ಔಟ್ಸ್ಟಾಂಡಿಗ್ ಮ್ಯಾನೇಜರ್" ಹೀಗೆ. ಅವಳು ಕಂಪೆನಿಯಲ್ಲಿ ಹಂತಹಂತವಾಗಿ ಮೇಲೇರಿದ್ದಳು. ಅವತ್ತು ಶಶಿಯನ್ನು ತೊರೆದು ಬಂದವಳು ಸೀದಾ ಈ ಕಂಪೆನಿ ಸೇರಿದ್ದಳು. ಎಲ್ಲರೂ ಇವಳ ಬಗ್ಗೆ ಆಡಿಕೊಂಡರೂ ಅಪ್ಪ ಜೊತೆಗಿದ್ದ ಕಾರಣ ಸರಿತ ಧೈರ್ಯವಾಗಿದ್ದಳು.

ಮೊದಮೊದಲು ಇದೆಲ್ಲಾ ಚೆನ್ನಾಗಿಯೇ ಇತ್ತು. ಕಂಪೆನಿಯಲ್ಲಿ ಕೈತುಂಬಾ ಸಂಬಳ, ಮನೆಯಲ್ಲಿ ಮುದ್ದಾದ ಮಗು ಎಲ್ಲಾ ಒಳ್ಳೆಯದು ಅನ್ನಿಸ್ತಾ ಇತ್ತು. ಆದರೆ ಅಪ್ಪ ತೀರಿಹೋಗಿ ಮಗಳು ಶಾಲೆಗೆ ಹೋಗಲು ಶುರುಮಾಡಿದ ಮೇಲೆ ತಾನು ಒಂಟಿ ಏನೋ ಅಂತ ಮತ್ತೆ ಅನ್ನಿಸಲಿಕ್ಕೆ ಶುರುವಾಯ್ತು. ಅದೂ ಕಂಪೆನಿಯಲ್ಲಿ ನಡೆಯುವ ಪಾರ್ಟಿಗಳಲ್ಲಿ ಜೊತೆಯಲ್ಲಿ ಕುಣಿಯುವುದನ್ನು ನೋಡಿದಾಗ, ಟೀಮ್ ನಲ್ಲಿದ್ದ ಚಿಕ್ಕ ಹುಡುಗಿಯರು ಮದುವೆ ಕಾಗದ ಕೊಡಲು ಬಂದಾಗ ಹಿಂದೆ ಕಾಲೇಜಿನಲ್ಲಿ ಕಾಡಿದ ಒಂಟಿತನ ಮತ್ತೆ ಕಾಡುತ್ತಿತ್ತು. ಆದರೆ ಈಗ ಹಿಂದಿನಂತೆ ನೋಟೀಸ್ ಬೋರ್ಡಿನಲ್ಲಿ ಜೊತೆಗಾರ ಬೇಕು ಅಂತ ಹಾಕುವಂತಿಲ್ಲವಲ್ಲಾ?

"ಅರೇ! ಘಂಟೆ ಆವಾಗಲೇ ಆರು. ಮಗಳು ಕಾಯುತ್ತಿರಬಹುದು." ಸರಿತ ಹೊರಡಲು ಅನುವಾದಳು. ಓಪನ್ ಇದ್ದ ಬ್ರೌಸರ್ ಅನ್ನು ಮುಚ್ಚುತ್ತಿದ್ದಾಗ ತನ್ನ ಬ್ಲಾಗನ್ನು ನೋಡಿ ತಾನೇ ನಕ್ಕಳು. "ಈ ಬ್ಲಾಗಿನಿಂದಲೇ ಅಲ್ವಾ ಈಗ ನಾನು ಮತ್ತೆ ಸಂತೋಷವಾಗಿರುವುದು" ಸರಿತ ಅಂದುಕೊಂಡಳು. ಹೌದು ಈ ಮಧ್ಯೆ ಸರಿತ ತನ್ನ ಕವನ ಬರೆಯುವ ಕೆಲಸ ಮತ್ತೆ ಆರಂಭಿಸಿದಳು, ಅದೂ ಬ್ಲಾಗ್ ನ ಮೂಲಕ. ಒಂದು ಬ್ಲಾಗ್ ಅನ್ನು ತನ್ನ ಹೆಸರಲ್ಲಿ ತಗೆದು ಅದರಲ್ಲಿ ತನ್ನ ಕವನ, ಕತೆಗಳನ್ನು ಹಾಕುತ್ತಿದ್ದಳು. ಅಪರೂಪಕೊಮ್ಮೆ ಅವಳ ಹಳೇ ಫ್ರೆಂಡ್ಸ್ ಕಮೆಂಟ್ಸ್ ಕೂಡ ಬರೆಯುತ್ತಿದ್ದರು. ಆದರೆ ಒಂದು ದಿನ ಬಂತು ವಿಶೇಷ ಕಮೆಂಟ್ ಬಂದಿತ್ತು.

ಸರಿತ ಸೀತೆಯ ಮೇಲೆ ಒಂದು ಕವನ ಬರೆದು ಬ್ಲಾಗ್ ನಲ್ಲಿ ಪೋಸ್ಟ್ ಮಾಡಿದ್ದಳು. ಯಾರೋ ಏನೋ ಕಮೆಂಟ್ ಮಾಡಿದ್ದರೆಂದು ಮತ್ತೆ ಒಂದು ದೀರ್ಘ ಲೇಖನವನ್ನೂ ಬರೆದು ಹಾಕಿದ್ದಳು. ಅದರಲ್ಲಿ ಅವಳ ಅನುಭವವೂ ಸೇರಿ ಅದಕ್ಕೊಂದು ವಿಶೇಷ ಕಳೆ ಬಂದಿತ್ತು. ಹಿಂದೆ ಕಮೆಂಟ್ ಕಳಿಸಿದ್ದ ಆ ವ್ಯಕ್ತಿಯೇ ಮತ್ತೆ ಸುಂದರವಾದ ಮೆಸೇಜ್ ಕಳಿಸಿದ್ದ. ಯಾಕೋ ಸರಿತಳಿಗೆ ಈ ವ್ಯಕ್ತಿ ಬಹಳ ಸೆನ್ಸಿಬಲ್ ಮತ್ತು ಸೆನ್ಸಿಟಿವ್ ಇರಬೇಕೆಂದು ಅನ್ನಿಸಿತು. ಒಂದು "ಥಾಂಕ್ ಯೂ" ಮೆಸೇಜ್ ಬರೆದು ಆ ವಿಷಯವನ್ನು ಮರೆತಳು. ಆದರೆ ಅದೇನೋ ಮತ್ತೆ ಮತ್ತೆ ಆ ವ್ಯಕ್ತಿ ಮತ್ತು ಸರಿತಳ ನಡುವೆ ಇ-ಮೈಲ್ ವ್ಯವಹಾರ ಮುಂದುವರೆಯಿತು.

ಅದ್ಯಾವುದೋ ಒಂದು ದಿನ ಅವರು ತಮ್ಮ ಕತೆಗಳನ್ನು ಒಬ್ಬರಿಗೊಬ್ಬರು ಹೇಳಿಕೊಂಡರು. ಸರಿತಳಿಗೆ ತಾನು ಹೇಗೆ ಯಾರಿಗೂ ಹೇಳದ ತನ್ನ ಕಥೆಯನ್ನು ಅವನಿಗೆ ಹೇಳಿದೆನೆಂದು ಇವತ್ತಿಗೂ ಆಶ್ಚರ್ಯ. ಯಾವಾಗಲು ಪುಟಗಟ್ಟಲೆ ಬರೆಯುತ್ತಿದ್ದವನು ಇವತ್ತು ಅವನ ಜೀವನದ ಅತ್ಯಂತ ಚಿಕ್ಕ ಮತ್ತು ಅಷ್ಟೇ ಮುಖ್ಯ ಇ-ಮೈಲ್ ಸರಿತಳಿಗೆ ಬರೆದಿದ್ದ - "ವಿ ವಿಲ್ ಮೀಟ್ ಟುಮಾರೋ. ಮಗಳನ್ನೂ ಜೊತೆಯಲ್ಲಿ ಕರೆದುಕೊಂಡು ಬನ್ನಿ."

ಬೆಳಗ್ಗೆ ಇದನ್ನು ಓದಿದಾಗಿನಿಂದ ಸರಿತಳಿಗೆ ಮಂಕು. ಅದೇ ದ್ವಂದ್ವ - ತಾನವನನ್ನು ಭೇಟಿ ಮಾಡಬೇಕಾ? ಇಡೀ ದಿನ ತನ್ನ ಜೀವನದ ಬಗ್ಗೆ ಯೋಚಿಸುತ್ತಿದ್ದವಳು ಕಾರ್ ತೆಗೆದು ಗೇಟ್ ಬಳಿ ಬಂದಳು "ಅವನಿಗೂ ನನ್ನ ಜೀವನದ ಬಗ್ಗೆ ಗೊತ್ತಿದೆ. ನನಗೂ ಅವನ ಬಗ್ಗೆ ಎಲ್ಲಾ ತಿಳಿದಿದೆ. ಅವನು ನನ್ನನ್ನು ಮಾತ್ರ ಬರಲು ಹೇಳಿದ್ದರೆ ಬೇರೆ ಮಾತು. ಆದರೆ ಮಗಳನ್ನೂ ಕರೆದಿದ್ದಾನೆ. ಅಂದರೆ ಅವನಿಗೆ ಅವನ ಮುಂದಿನ ರೆಸ್ಪಾನ್ಸಿಬಿಲಿಟಿಯ ಬಗ್ಗೆ ಚೆನ್ನಾಗಿ ಅರ್ಥವಾಗಿದೆ. ಹಿಂದೆ ಶಶಿಯನ್ನು ಅಷ್ಟು ಸಮಯ ನೋಡಿಯೂ ಅರ್ಥಮಾಡಿಕೊಳ್ಳದೇ ಹೋದೆ. ಇಲ್ಲಿ ಇವನು ನನ್ನನ್ನು ನೋಡದೆಯೇ ನನ್ನನ್ನು ಸಂಪೂರ್ಣವಾಗಿ ಅರಿತಿದ್ದಾನೆ. ಮೀಟ್ ಮಾಡೋಣ"

"ಮಮ್ಮ ಕಮಿಂಗ್ ಸೂನ್" ಮಗಳಿಗೆ ಮೆಸೇಜ್ ಕಳಿಸಿ ಕಾರಿಗೆ ಗೇಟ್ ತೆರೆದ ವಾಚ್ ಮೇನ್ ನನ್ನು ನೋಡಿ "ಥ್ಯಾಂಕ್ಸ್" ಅಂದು ಮುಗುಳ್ನಕ್ಕಳು. ಇಷ್ಟು ವರ್ಷದಿಂದ ಬಾಗಿಲು ತೆರೆಯುತ್ತಿದ್ದರೂ ನೋಡದ ಮ್ಯಾಡಂ ಇವತ್ತು ನಕ್ಕಿದ್ದನ್ನು ನೋಡಿ ವಾಚ್ ಮ್ಯಾನ್ ಕೂಡ ನಗುತ್ತಾ ನಿಂತ.

## ಬಣ್ಣಗಳು

Wednesday, December 20, 2006

ಅವನ ಮುಖದಲ್ಲಿ ಪಶ್ಚಾತ್ತಾಪವಿದೆಯಾ? ಎಲ್ಲೋ ಒಂದು ಕಡೆ ಪಾಪಪ್ರಜ್ಞೆಯ ಛಾಯೆ ಅವನ ತುಟಿಯ ಕೆಳಗಡೆ ಅವಿತು ನೋಡುತ್ತಿದೆಯಾ? ಮೈಯೆಲ್ಲಾ ಬಂಗಾರದಿಂದ ತುಂಬಿದ್ದರೂ ದಿಗಂಬರತೆ ಅವನ ಕಣ್ಣಿಂದ ಸೂಸುತ್ತಿದೆಯಾ? "ಆತ್ಮದಾಮಂತ್ರಣವನ್ನೋದಿಯೂ ಭೋಗಾಭಿಲಾಷೆಯಿಂದಿನ್ನು ನಾನಿರಲಾರೆ" ಎಂಬ ದೃಢನಿರ್ಧಾರ ಅವನ ನಿಲುವಿನಲ್ಲಿ ಕಾಣುವಂತೆ ಆ ಚಿತ್ರ ರಚಿಸಲಾಗಿತ್ತು.

ಅರಮನೆ ಬಿಟ್ಟು ಹೋಗಲು ನಿರ್ಧರಿಸಿದ ಸಿದ್ಧಾರ್ಥ ಎಂಬ ಭಾವಿ ಬುದ್ಧನನ್ನು ನೋಡಿದ ಹಾಗೆ ಚಿತ್ರ ಬರೆದ್ದಿದ್ದೀಯ ಅಂತ ಎಲ್ಲರೂ ಹೊಗಳಿದಾಗ ಅವನಿಗೆ ವಿಶೇಷ ಸಂತೋಷವೇನೂ ಆಗಿರಲಿಲ್ಲ. ಮನಸ್ಸಿನಲ್ಲಿ ಒಂದು ಚಿತ್ರ ಬಂದು; ಅದು ಮತ್ತೆ ಬಣ್ಣ, ಕುಂಚದ ಮೂಲಕ ಕಾಗದದ ಮೇಲೆ ಮೂಡಿದಾಗ ಸಿಗುವ ತೃಪ್ತಿಗಿಂತ ಈ ಹೊಗಳಿಕೆಯೇನು ದೊಡ್ಡದಲ್ಲ ಎಂಬುದು ಅವನ ಯಾವತ್ತಿನ ಭಾವನೆ. ಅವನು ಅವನಿಗಾಗಿಯೇ ಚಿತ್ರ ಬರೆಯುತ್ತಿದ್ದ. ಚಿತ್ರ ಮನದಲ್ಲಿ ಮೂಡಿದ ತಕ್ಷಣ ಅದನ್ನು ಬರೆಯುವ ಉತ್ಕಟತೆ ಅವನಲ್ಲಿ ಬರುತ್ತಿತ್ತು.

ಕಾಲೇಜಿನಲ್ಲಿ ಒಮ್ಮೆ ಹಾಗೆಯೇ ಆಗಿತ್ತು. ಮೇಷ್ಟ್ರು ತನ್ಮಯರಾಗಿ "ವಾಲ್ಮೀಕಿಯ ಭಾಗ್ಯ" ಓದಿ ಹೇಳುತ್ತಿದ್ದರು
" ಕೈಹಿಡಿದ ನಲ್ಲನೇ ಪೇಸಿಬಿಸುಟ್ಟರೆ
ಇನ್ನಾರೇನು ಮಾಡುವರು?
ನಿನ್ನೊಳೇನಪರಾಧಂ?-
ಕರುಣಾಳು ರಾಘವನೊಳುಂ ತಪ್ಪಿಲ್ಲ;
ಕಡುಪಾತಕಂಗೈದು ಪೆಣ್ಣಾಗಿ ಸಂಭವಿಸಿದೊಡಲಂ
ಈ ಪಾಳೊಡಲಂ, ಪೊರೆವುದೆನ್ನಪರಾಧಂ!"

ಸೀತೆ ಲಕ್ಷ್ಮಣನಿಗೆ ಹೇಳುವುದನ್ನು ಮೇಷ್ಟ್ರು ಅಷ್ಟೇ ಪರಿಣಾಮಕಾರಿಯಾಗಿ ರಾಗವಾಗಿ ಓದುತ್ತಿದ್ದರು. ಇವನಿಗೆ ಕರುಳೇ ಕಿವುಚಿದಂತೆ ಆಗುತ್ತಿತ್ತು. ಮನಸ್ಸಿನಲ್ಲಿ ಮೆಲ್ಲನೆ ಸೀತೆ ಮೂಡತೊಡಗಿದಳು. ಬಸುರಿ ಸೀತೆ, ನಡೆಯಲಾಗದ ಸೀತೆ, ಗಂಡನೇ ತನ್ನನ್ನು ಮತ್ತೊಮ್ಮೆ ಸಂಶಯಿಸಿ ಕಾಡಿಗಟ್ಟಿದರೂ ಅವನನ್ನು ಕರುಣಾಳು ಎಂದು ಕರೆದ ಸೀತೆ - ಅವನಿಗೆ ಮೆಲ್ಲಮೆಲ್ಲನೇ ತೆರೆದುಕೊಳ್ಳುತ್ತಿದ್ದಳು. ಅವನ ಕೈ ಅವನಿಗರಿವಿಲ್ಲದಂತೆ ಕಾಗದದ ಮೇಲೆ ಓಡಾಡತೊಡಗಿತು. ಪೆನ್ನು ಕಾಗದವನ್ನು ಸೋಕಿದ ತಕ್ಷಣ ನೀಲಿ ಬಣ್ಣದ ಸೀತೆ ಕಾಗದದಲ್ಲಿ ಮೂಡತೊಡಗಿದಳು. ಅದೇ ಸೀತೆ - "ರಾಮಾ! ಪೆಣ್ಣೆನ್ನೊಳ್ ಕರುಣೆಯಿರಲ್ಕೆ...." ಅಂತ ಕೇಳಿಕೊಂಡ ಸೀತೆ.

ಸೀತೆ ಪೂರ್ತಿಯಾಗಿ ಕಾಗದದಲ್ಲಿ ಮೂಡಿದ್ದನ್ನು ನೋಡಿ ಅವನ ಜೊತೆಯಲ್ಲಿದ್ದವರಿಗೆಲ್ಲಾ ಆಶ್ಚರ್ಯ. ತಾವೆಲ್ಲಾ ಇಷ್ಟು ಹೊತ್ತು ಕೇಳುತ್ತಿದ್ದ ಸೀತೆ ಹೀಗೆ ಕಾಗದದ ಮೇಲೆ ಬರುತ್ತಾಳೆಂದು ಅವರಿಗೆ ನಂಬಲೇ ಆಗುತ್ತಿರಲಿಲ್ಲ. ಮೇಷ್ಟ್ರಿಗೂ ಸಂತೋಷ. ಇಷ್ಟು ವರ್ಷ ಪಾಠ ಮಾಡುವಾಗ ಮನಸ್ಸಿನಲ್ಲಿ ಕಾಣಿಸಿಕೊಳ್ಳುತ್ತಿದ್ದ ಸೀತೆ ಹೀಗೆ ಏಕಾಏಕಿ ಕಣ್ಣ ಮುಂದೆ ನಿಂತರೆ, ಪಾಪ ಅವರಿಗಾದರೂ ಹೇಗಾಗಬೇಡ. ಅವನನ್ನು ಕರೆದು ಅವನಿಗೆ ತಾವು ಓದಿ ಮೆಚ್ಚಿದ ಎಲ್ಲಾ ಕಾವ್ಯವನ್ನು ಕೊಟ್ಟರು. ಅವರಿಗೊಂದು ಆಸೆ. ತಾವು ಓದಿದಾಗ ತಮಗೆ ಕಾಣಿಸಿಕೊಂಡ ಸಿದ್ಧಾರ್ಥ, ಲಕ್ಷ್ಮಣ - ಎಲ್ಲರನ್ನೂ ಬೇರೆಯವರೂ ನೋಡಬೇಕು. ಅವರಿಗೆ ಈ ಹುಡುಗನಲ್ಲಿ ನಂಬಿಕೆ. ಆದರೆ ಇವನಿಗೆ ಓದಲಿಕ್ಕೆಲ್ಲಾ ಇಷ್ಟವಿಲ್ಲ. ಯಾರಾದರೂ ರಾಗವಾಗಿ ಪದ್ಯವನ್ನು ಓದಬೇಕು. ಇವನು ಅದನ್ನು ಕೇಳುತ್ತಾ ಕೇಳುತ್ತಾ ಮೈಮರೆಯಬೇಕು. ಅಂತಹ ಯಾವುದೋ ಒಂದು ಕ್ಷಣದಲ್ಲಿ ಅವನ ಮನಸ್ಸಿನಲ್ಲಿ ಒಂದು ರೂಪ ಮೂಡುತ್ತಿತ್ತು. ಅವನು ಅದನ್ನು ಕಾಗದಕ್ಕಿಳಿಸುತ್ತಿದ್ದ. ಅವನ ಜೊತೆಯಲ್ಲಿದ್ದವರಿಗೆ ಇದು ಅಭಿಮಾನದ ಸಂಗತಿ. ಅವರು ಒಂದೊಂದು ಪುಸ್ತಕವನ್ನು ಓದಿದಾದ ಅದರಲ್ಲಿ ಶಬ್ದರೂಪದಲ್ಲಿದ್ದವರಿಗೆ ಇವನ ಕುಂಚದಿಂದ ರೂಪ ದೊರೆಯುತ್ತಿತ್ತು....ಅಲ್ಲ....ಜೀವ ಸಿಗುತ್ತಿತ್ತು.

ಬರೆದ ಚಿತ್ರವನ್ನೇನು ಅವನು ಇಟ್ಟುಕೊಳ್ಳುತ್ತಿರಲಿಲ್ಲ. ಆ ಚಿತ್ರಗಳು ಅವನ ಮನಸ್ಸಿನಲ್ಲಿದ್ದವು. ಕಾಗದದಲ್ಲಿದ್ದುದ್ದು ಬರೀ ಛಾಯೆಯಷ್ಟೇ. ಬರೆದ್ದದ್ದನ್ನು ಯಾರು ತೆಗೆದುಕೊಂಡು ಹೋಗಿ ಏನು ಮಾಡುತ್ತಿದ್ದರೋ ಅವನಿಗೆ ಲೆಕ್ಕ ಇರಲಿಲ್ಲ. ಅವನ ಧ್ಯಾನ ಏನಿದ್ದರೂ ಶಬ್ದಗಳಲ್ಲಿ ಅಡಗಿದ್ದವರನ್ನು ಬಿಡಿಸುವುದಷ್ಟೇ ಆಗಿತ್ತು. ಮುಖಗಳನ್ನು ಪುಸ್ತಕಗಳ ಬಂಧನದಿಂದ ಬಿಡಿಸುವುದೇ ಅವನಿಗೆ ಕೆಲಸವಾಗಿ ಹೋಯಿತು.

ಎಷ್ಟೋ ಮಂದಿ ಅವನ ಬಳಿ ಬರುತ್ತಿದ್ದರು. ತಮ್ಮ ಫೋಟೋ, ತಮ್ಮ ನೆಚ್ಚಿನವರ ಫೋಟೋ, ಸತ್ತ ತಮ್ಮ ಮಂದಿಯ ಫೋಟೋ ತೆಗೆದುಕೊಂಡು ಇವನ ಬಳಿ ಬರುತ್ತಿದ್ದರು. ಫೋಟೋದಲ್ಲಿದ್ದವರನ್ನು ಕಾಗದದಲ್ಲಿ ಮೂಡಿಸಲು ಬಲವಂತ ಮಾಡುತ್ತಿದ್ದರು. ಅವನು ಒಪ್ಪುತ್ತಿರಲಿಲ್ಲ. ಯಾಕೆಂದರೆ ಅವನಿಗೆ ಅದು ಆಗುತ್ತಿರಲಿಲ್ಲ. ಫೋಟೋವನ್ನು ಎದುರಿಗಿಟ್ಟುಕೊಂಡು ಕುಂಚ ಹಿಡಿದುಕೊಂಡರೆ ಅದು ಓಡುತ್ತಿರಲಿಲ್ಲ. ಎಷ್ಟು ನೋಡಿದರೂ ಫೋಟೋ ಅವನ ಮನಸ್ಸಿನಲ್ಲಿ ನಿಲ್ಲುತ್ತಿರಲಿಲ್ಲ. ಮನಸ್ಸಿನಲ್ಲಿ ರೂಪಗೊಳ್ಳದ್ದನ್ನು ಅವನಿಂದ ಬರೆಯಲು ಆಗುತ್ತಲೇ ಇರಲಿಲ್ಲ. ಅವನ ಚಿತ್ರಕ್ಕೆ ಶಬ್ದವೇ ಮೂಲ. ಅದು ಅವನ ಮನಸ್ಸಿನಲ್ಲಿ ನಾಟಿದರೆ ಮಾತ್ರ ಅದಕ್ಕೊಂದು ರೂಪ ಮೂಡುತ್ತಿತ್ತು.

ಜನರು ಅವನನ್ನು ಆಡಿಕೊಂಡರು. ತಮ್ಮ ಚಿತ್ರ ಬರೆಯಲು ಒಪ್ಪದ ಅವನಿಗೆ ಅದರ ವಿದ್ಯೆಯೇ ಒಲಿದಿಲ್ಲ ಅಂದರು. ಕೆಲವರು ಅವನಿಗೆ ಹಣ ಕೊಟ್ಟು ತಮಗೆ ಬೇಕಾದ ಚಿತ್ರ ಬರೆಯಲು ಹೇಳಿದರು. ಏನಾದರೂ ಅವನಿಂದ ತಮಗೆ ಬೇಕಾದ ಚಿತ್ರ ಬರೆಯಿಸಿಕೊಳ್ಳಲು ಯಾರಿಗೂ ಸಾಧ್ಯವಾಗಲಿಲ್ಲ. ಯಾಕೆಂದರೆ ಚಿತ್ರ ಬರೆಯುವ ಅವನಿಗೆ ಇದು ಯಾವುದೂ ಬೇಕಾಗಿರಲಿಲ್ಲ. ಅವನಿಗೆ ಅವನದೇ ಲೋಕವಿತ್ತು. ಅಲ್ಲಿ ಅವನ ಮಾತನ್ನು ಕುಂಚ ಕೇಳುತ್ತಿತ್ತು. ಬಣ್ಣಗಳು ಅವನೊಡನೆ ಮಾತಾಡುತ್ತಿದ್ದವು. ಅವನ ಕೈ ಅವುಗಳ ಮೇಲೆ ಸರಿದರೆ ಸಾಕು ಬೇಕಾದ ಬಣ್ಣ ಅವನ ಬಳಿಗೆ ಓಡಿ ಬರುತ್ತಿತ್ತು. ಅವನು ಅದನ್ನು ಹದವಾಗಿ ಕಲಸಿ ಬರೆಯುತ್ತಿದ್ದ, ಅಷ್ಟೇ!

ಅವನು ಬರೆದ ಚಿತ್ರಗಳ ಸಂಖ್ಯೆ ನೂರಕ್ಕಿಂತ ಜಾಸ್ತಿಯಿತ್ತು. ಗೆಳೆಯರು ಪ್ರದರ್ಶನ ಮಾಡೋಣವೆಂದರು. ಪ್ರದರ್ಶನ ಜೋರಾಗಿಯೇ ನಡೆಯಿತು. ದೊಡ್ಡವರೂ ಬಂದರು, ಚಿಕ್ಕ ಮಕ್ಕಳೂ ಬಂದರು. ದೊಡ್ಡವರು ಸೀತೆಯನ್ನು ನೋಡಿ ಅತ್ತರು, ಮಕ್ಕಳು ಊರುಭಂಗವಾಗಿ ಮಲಗಿದ ದುರ್ಯೋಧನನ್ನು ನೋಡಿ ನಕ್ಕರು. ಎಲ್ಲರೂ ಎಲ್ಲಾ ಚಿತ್ರಗಳು ಚೆನ್ನಾಗಿದೆಯೆಂದು ಹೇಳಿ ಹೋದರು.

ಯಾರೋ ದೊಡ್ಡವರು ಹೇಳಿದರು. ಇಲ್ಲೇನು ಮಾಡುತ್ತೀಯಾ? ದೊಡ್ಡ ಊರಿಗೆ ಹೋಗು. ದೊಡ್ಡ ಪ್ರದರ್ಶನ ಮಾಡು. ದೊಡ್ಡ ದೊಡ್ಡ ಜನ ಬರುತ್ತಾರೆ. ದೊಡ್ಡ ಹಣ ಕೊಟ್ಟು ನಿನ್ನ ಚಿತ್ರ ಕೊಂಡುಕೊಳ್ಳುತ್ತಾರೆ. ನೀನು ದೊಡ್ಡ ಮನುಷ್ಯನಾಗುತ್ತೀಯ. ಗೆಳೆಯರು ಹೌದೌದೆಂದರು. ಪ್ರದರ್ಶನ ಮಾಡೋಣ ಅಂದಾಗ ಇವನು ಆಯಿತೂ ಅನ್ನಲಿಲ್ಲ, ಬೇಡ ಅಂತಲೂ ಅನ್ನಲಿಲ್ಲ.

ದೊಡ್ಡ ಊರಿಗೆ ಹೋದದ್ದಾಯ್ತು. ಅಲ್ಲಿ ಪ್ರದರ್ಶನಕ್ಕೆ ಜಾಗವೇ ಸಿಗುತ್ತಿರಲಿಲ್ಲ. ಅಲ್ಲಿ ಎಲ್ಲರೂ ಚಿತ್ರ ಬರೆಯುವವರೇ. ಎಲ್ಲಾ ಕಡೆ ಚಿತ್ರ ಮೇಳಗಳೇ. ಮುಂದಿನ ಒಂದು ವರ್ಷಕ್ಕೆ ಎಲ್ಲಾ ಗ್ಯಾಲರಿಗಳು ಬುಕ್ ಆಗಿ ಬಿಟ್ಟಿದ್ದವು. ಇವನು ಬರೆದ ಚಿತ್ರವನ್ನು ಅವರ್ಯಾರೂ ನೋಡುತ್ತಲೂ ಇರಲಿಲ್ಲ. ನೋಡಿದವರು ಕ್ಯಾಲೆಂಡರ್ ಚಿತ್ರವೆಂದರು. ಮತ್ತೆ ಕೆಲವರು ಇವು ಫುಟ್ ಪಾತಿನಲ್ಲಿ ಮಾರಲೇ ವಾಸಿ ಅಂದರು.

ಎಲ್ಲರೂ ಕೇಳಿದರು ಯಾವ ಕಲಾಶಾಲೆಯಲ್ಲಿ ಕಲಿತದ್ದು? ಯಾರು ಗುರುಗಳು? ಯಾರಾದರೂ ಚಿತ್ರವನ್ನು ಕೊಂಡುಕೊಂಡಿದ್ದಾರಾ? ಬೇರೆಯವರು ಹೇಳಿದ ಹಾಗೆ ಚಿತ್ರ ಬರೆದು ಕೊಡಲು ಆಗುತ್ತಾ? ಬೇರೆಯವರ ಚಿತ್ರದ ನಕಲನ್ನು ಅಸಲಿಯಂತೆ ಕಾಣುವ ಹಾಗೆ ಬರೆದು ಕೊಡಲಾಗುತ್ತಾ? ಗಳೆಯರಿಗೆ ಒಂದೂ ಉತ್ತರ ತಿಳಿದಿರಲಿಲ್ಲ. ಇವನಿಗೆ ಉತ್ತರಿಸುವುದು ಬೇಕಿರಲಿಲ್ಲ. ಅವನು ಅಲ್ಲಿದ್ದ ಚಿತ್ರಗಳನ್ನು ನೋಡುತ್ತಿದ್ದ. ಓಡುವ ಕುದುರೆಗಳು, ಮುಖವೇ ಇಲ್ಲದ ಮುದುಕಿಯರು, ಕೈ ಒಂದು ಕಡೆ, ಕಾಲು ಒಂದು ಕಡೆ ಇರುವ ಮನುಷ್ಯರು, ಮುಖದೊಳಗೆ ಮತ್ತೊಂದು ಮುಖ, ಕಾಗದದ ಮೇಲೆ ಸುಮ್ಮನೇ ಸುರಿದಂತಿದ್ದ ಬರೀ ಬಣ್ಣ - ಅವನಿಗೆ ಇದೆಲ್ಲಾ ಚಿತ್ರಗಳೆಂದೇ ಅನ್ನಿಸಲಿಲ್ಲ. ಅಲ್ಲಿ ಕಾಗದಗಳ ಮೇಲೆ ಯಾರೂ ಇರಲಿಲ್ಲ. ಅವನು ಕಿವಿಕೊಟ್ಟು ಕೇಳಿದ; ಅದರಲ್ಲಿದ್ದ ಆಕೃತಿಗಳು ಮೌನವಾಗಿ ಕೂತಿದ್ದವು.
ಗ್ಯಾಲರಿಯವರು ಹೇಳಿದರು. ಇಂತಹ ಚಿತ್ರಗಳಿಗೆ ಲಕ್ಷ, ಕೋಟಿ ಬೆಲೆ ಇದೆ. ಇಂತಹದ್ದನ್ನು ಬರಿ. ರಾಮ, ಕೃಷ್ಣರ ಕಾಲ ಈಗ ಇಲ್ಲ. ಚಿತ್ರಶಾಲೆಗೆ ಸೇರು, ಅಲ್ಲಿ ಬರೆಯುವುದನ್ನು ಕಲಿ. ಗೆಳೆಯರು ಹೌದೌದೆಂದರು. ಇವನನ್ನು ಶಾಲೆಗೆ ಸೇರಿಸಿಯೇ ಬಿಟ್ಟರು.

ಅಲ್ಲಿ ಅವನಿಗೆ ಗೆರೆ ಹಾಕುವುದು, ಉರುಟು ಆಕಾರ ಮಾಡುವುದು ಎಲ್ಲಾ ಹೇಳಿಕೊಡಲು ಆರಂಭಿಸಿದರು. ಕ್ಲಾಸಿನ ಮಧ್ಯದಲ್ಲಿ ಮೇಜು ಇಟ್ಟರು, ಅದರ ಮೇಲೆ ಹೂದಾನಿ, ಹೂದಾನಿಯಲ್ಲಿ ಸುಂದರ ಹೂವು. ಅದರ ಚಿತ್ರ ಬರೆಯಲು ಹೇಳಿದರು. ಮೇಜಿನ ಅಳತೆಯ ಚರ್ಚೆ ಮಾಡಿದರು. ಹೂದಾನಿಯ ಆಕಾರದ ವಿವರ ಕೊಟ್ಟರು. ಆದರೆ ಹೂವಿನ ಸೌಂದರ್ಯದ ಬಗ್ಗೆ ಅವರು ಹೇಳಲೇ ಇಲ್ಲ. ಇವನ ಮನಸ್ಸಿನಲ್ಲಿ ಕಣ್ಣೆದುರಿಗಿದ್ದ ಮೇಜು, ಹೂದಾನಿ, ಹೂವು ಯಾವುದೂ ಮೂಡಿಬರಲಿಲ್ಲ. ಹಾಗಾಗಿ ಅವನಿಗೆ ಆ ಚಿತ್ರ ಬರೆಯಲು ಆಗಲೇ ಇಲ್ಲ. ಬೇರೆ ಬೇರೆ ಪ್ಯೆಂಟ್ ಗಳ ಬಗ್ಗೆ ಹೇಳಿದರು. ಆದರೆ ಬಣ್ಣಗಳ ಜೊತೆ ಮಾತಾಡುವುದನ್ನು ಹೇಳಿಕೊಡಲೇ ಇಲ್ಲ. ಅದಕ್ಕೆ ಇವನಿಗೆ ಕುಂಚ ಹಿಡಿಯಲು ಆಗಲೇ ಇಲ್ಲ.

ಮತ್ತೊಮ್ಮೆ ಕ್ಲಾಸಿನಲ್ಲಿ ಹುಡುಗನೊಬ್ಬನನ್ನು ಕರೆದುಕೊಂಡು ಬಂದರು. ಮನುಷ್ಯ ದೇಹದ ಅನುಪಾತದ ಬಗ್ಗೆ ಮಾತಾಡಿದರು. ಸಂಖ್ಯೆಗಳನ್ನು ಬರೆದುಕೊಳ್ಳಲು ಹೇಳಿದರು. ಮನುಷ್ಯನ ದೇಹವನ್ನು ಕಣ್ಣಿಂದ ಅಳೆಯುವುದನ್ನು ಹೇಳಿಕೊಟ್ಟರು. ಆದರೆ ಅವನ ಮುಖದಲ್ಲಿನ ಭಾವನೆಯನ್ನು ಅರಿಯುವ ವಿಧಾನವನ್ನು ಹೇಳಿಕೊಡಲೇ ಇಲ್ಲ. ಅವನ ಒಳಗಿರುವುದನ್ನು ಅರಿಯದೇ ಹೊರರೂಪವನ್ನು ಬರೆಯುವುದು ಇವನಿಗೆ ತಿಳಿದಿರಲಿಲ್ಲ. ಹಾಗಾಗಿ ಇವನು ಆ ಹುಡುಗನ ಚಿತ್ರ ಬರೆಯಲೇ ಇಲ್ಲ. ಸುಮ್ಮನೇ ಕಣ್ಣು ಮುಚ್ಚಿ ಕುಳಿತುಬಿಟ್ಟ.
ಆಗ ಅವನಿಗೆ ಮೇಷ್ಟ್ರು ಕ್ಲಾಸಿನಲ್ಲಿ ಓದಿದ ಪದ್ಯದ ನೆನಪಾಯ್ತು -
" ಕೊಳ್ ಗುರುದೇವ, ನಿನಗೆ ದಕ್ಷಿಣೆ
ದಕ್ಷಿಣದ ಪರ್ ಬೆರಳಿದಂ!
ಪರಕೆಗಯ್, ಪೊರೆ ನಿನ್ನ ಕಂದನಂ!"

ದ್ರೋಣನಿಗೆ ದಕ್ಷಿಣೆ ನೀಡುತ್ತಿರುವ ಏಕಲವ್ಯ. ತನ್ನಷ್ಟಕ್ಕೆ ತಾನೇ ವಿದ್ಯೆ ಕಲಿತ ಏಕಲವ್ಯ, ಮಾಡದ ತಪ್ಪಿಗೆ ದಂಡ ತೆತ್ತ ಏಕಲವ್ಯ - ಅವನ ಕುಂಚದಿಂದ ಮೆಲ್ಲಮೆಲ್ಲನೆ ಕಾಗದದ ಮೇಲೆ ಮೂಡಿಬಂದ. ಎಲ್ಲರೂ ಅವನ ಕಾಗದವನ್ನೇ ನೋಡುತ್ತಿದ್ದರು; ಎದುರಿಗಿದ್ದ ಹುಡುಗ ಕೂಡ! ಶಾಲೆಯವರೂ ಸುತ್ತ ನೆರೆದರು. ಯಾವುದೋ ಮಾಯೆ ಎಂಬಂತೆ ವನ ಕೈ ಕಾಗದದ ಮೇಲೆ ಓಡುತ್ತಿತ್ತು . ಕುಂಚ ಓಡಾಡಿದಲ್ಲೆಲ್ಲಾ ಏಕಲವ್ಯನ ದೇಹ ಅವರಿಗೆ ಕಾಣಿಸಿಕೊಳ್ಳುತ್ತಿತ್ತು. ಕಾಗದದಲ್ಲಿ ಅವನು ಮೊದಲೇ ಅವಿತುಕೊಂಡಂತೆ, ಇವನು ತನ್ನ ಕುಂಚದಿಂದ ಅವನನ್ನು ಅನಾವರಣಗೊಳಿತ್ತಿರುವಂತೆ - ಏನೋ ಒಂದು ಜಾದು ಅಲ್ಲಿ ನಡೆಯುತ್ತಿತ್ತು.

ಶಾಲೆಯವರು ಇವನಿಗೆ ಹೇಳಿಕೊಡಲು ತಮ್ಮ ಬಳಿ ಏನೂ ಇಲ್ಲ ಅಂದರು. ಅವನಿಗೆ ತಿಳಿಯದ ಹೊಸ ವಿಷಯ ಇಲ್ಲೇನೂ ಇಲ್ಲ, ಅವನು ಇನ್ನು ಹೋಗಬಹುದೆಂದರು. ಅವನು ಹೋದ. ಆದರೆ ಅವನ ಗೆಳೆಯರಿಗೆ ಸಮಾಧಾನವಾಗಲಿಲ್ಲ. ಅವನನ್ನು ಮತ್ತೊಂದು ಶಾಲೆಗೆ ಸೇರಿಸಿದರು. ಅಲ್ಲಿ ಕಾಗದ ಇರಲಿಲ್ಲ, ಕುಂಚ ಇರಲಿಲ್ಲ. ಅಲ್ಲಿದ್ದದ್ದು ಒಂದೇ - ಕಂಪ್ಯೂಟರ್ ಎಂಬ ಳಿ ಡಬ್ಬ . ಅವನ ಗೆಳೆಯರಿಗೆ ಅನ್ನಿಸಿತ್ತು. ಇವನು ಕಂಪ್ಯೂಟರ್ ಕಲಿಯಬೇಕು. ಆನಿಮೇಶನ್ ಕಲಿತರೆ ಇವನು ಮುಂದೆ ಬರುತ್ತಾನೆ. ಅದಕ್ಕೆ ಆನಿಮೇಶನ್ ಕಲಿಸುವ ದೊಡ್ಡ ಫೀಸಿನ ಚಿಕ್ಕ ಶಾಲೆಗೆ ಅವನನ್ನು ಸೇರಿಸಿದರು.
ಅಲ್ಲಿನ ಭಾಷೆಯೇ ಬೇರೆಯಿತ್ತು. ಕ್ಯಾರೆಕ್ಟರ್ ಅಂದರು, ಸ್ಟೋರಿಬೋರ್ಡ್ ಅಂದರು ಇವನಿಗೆ ಒಂದೂ ತಿಳಿಯುತ್ತಿರಲಿಲ್ಲ. ಲೇಔಟ್ ಡಿಸೈನ್ ಅವನು ಯಾವತ್ತೂ ಮಾಡಿರಲಿಲ್ಲ. ಅವನಿಗೆ ಗೊತ್ತಿದ್ದ ಯಾರ ಬಗ್ಗೆಯೂ ಇಲ್ಲಿ ಚಿತ್ರ ಬರೆಯುತ್ತಿರಲಿಲ್ಲ. ಇಲ್ಲಿ ಚಿತ್ರ ಬರೆಯಲು ಪೇಪರ್ ಇರಲಿಲ್ಲ, ಕುಂಚವಂತೂ ಬೇಕಾಗಿಯೇ ಇರಲಿಲ್ಲ. ಆದರೆ ಇವನಿಗೆ ಕುಂಚವಿಲ್ಲದೇ ಚಿತ್ರ ಬರೆಯುವ ಜಾಯಮಾನವೇ ಅರ್ಥವಾಗುತ್ತಿರಲಿಲ್ಲ.

ಮೌಸನ್ನು ಕುಂಚದಂತೆ ಹೇಗೆ ಉಪಯೋಗಿಸುವುದೆಂದು ಅವನಿಗೆ ಚಿಂತೆಯಾಗತೊಡಗಿತು. ಮೌಸನ್ನು ಹಿಡಿದು ಅತ್ತಿತ್ತ ಆಡಿಸಿದರೆ ಸ್ಕ್ರೀನಿನ ಮೇಲೆ ಗೆರೆಯೇನೋ ಮೂಡುತ್ತಿತ್ತು. ಆದರೆ ಅದು ಅವನು ಅಂದುಕೊಂಡಂತೆ ಇರುತ್ತಿರಲಿಲ್ಲ. ಸ್ಕ್ರೀನಿನಲ್ಲಿ ಒಂದು ಕಡೆ ಒತ್ತಿದರೆ ಸಾವಿರ ಬಣ್ಣಗಳು ಕಾಣಿಸಿಕೊಳ್ಳುತ್ತಿದ್ದುವು. ಆದರೆ ಅವನಿಗೆ ಎಲ್ಲಾ ಒಂದೇ ಅನ್ನಿಸುತ್ತಿತ್ತು. ಮೊದಲಾದರೆ ಅವನು ಬಣ್ಣಗಳ ಮೇಲೆ ಕೈಯಾಡಿಸುತ್ತಿದ್ದ. ಅವು ಅವನ ಬಳಿ ಮಾತಾಡುತ್ತಿದ್ದುವು. ಅವನ ಬೆರಳ ಅಂಚಿಗೆ ಕಚಗುಳಿ ಇಡುತ್ತಿದ್ದುವು. ಇಲ್ಲಿ ಸ್ಕ್ರೀನಿನಲ್ಲಿ ಬಣ್ಣಗಳು ಕಾಣಿಸಿಕೊಳ್ಳುತ್ತಿದವಷ್ಟೇ, ಅವುಗಳು ಮಾತಾಡುತ್ತಿರಲಿಲ್ಲ. ಯಾಕೆಂದರೆ ಅವುಗಳಿಗೆ ಜೀವವೇ ಇರಲಿಲ್ಲ.

ಗೆರೆ ಗಟ್ಟಿಯಾಗಿ ಮೂಡಬೇಕೆಂದರೆ ಹೆಚ್ಚು ಒತ್ತಿ ಬರೆಯಬೇಕೆಂಬ ನಿಯಮ ಅವನಿಗೆ ಯಾರೂ ಹೇಳದೆ ಗೊತ್ತಿತ್ತು. ಆದರೆ ಇಲ್ಲಿ ಅದ್ಯಾವುದೂ ಕೆಲಸಕ್ಕೆ ಬರುತ್ತಿರಲಿಲ್ಲ. ಸಣ್ಣ ಗೆರೆ, ಗಟ್ಟಿ ಗೆರೆ ಎಲ್ಲವನ್ನೂ ಒಂದೇ ರೀತಿ ಬರೆಯಲು ಹೇಳಲಾಗಿತ್ತು. ಮಾಡಿದ್ದು ಸರಿಯಿಲ್ಲವೆಂದರೆ ಹಿಂದೆ ಅವನು ಹೊಸದಾಗಿ ಮೊದಲಿನಿಂದ ಬರೆಯುತ್ತಿದ್ದ. ಇಲ್ಲಿ ಹಾಗಿರಲಿಲ್ಲ. ಬೇಡದ್ದನ್ನು ಅಷ್ಟು ಮಾತ್ರ ಅಳಿಸಿ ಬೇರೆಯದ್ದನ್ನು ಉಳಿಸಿಕೊಳ್ಳಬಹುದಿತ್ತು. ತಿಳಿ ಬಣ್ಣ ಬೇಕೆಂದರೆ ಸ್ವಲ್ಪ ನೀರು ಬೆರೆಸುತ್ತಿದ್ದ ಹಿಂದೆ. ಇಲ್ಲಿ ಚಿತ್ರ ಬರೆಯಲು ನೀರೇ ಬೇಕಿರಲಿಲ್ಲ.

ಸ್ಕ್ರೀನಿನ ಮೇಲೆ ಮೂಡುವುದು ಚಿತ್ರವೇ ಅಲ್ಲ ಅನ್ನಿಸುತ್ತಿತ್ತು ಅವನಿಗೆ. ಅನ್ಯ ಮನಸ್ಕನಾಗಿ ಕೂತಿದ್ದ ಅವನಿಗೆ ಪಕ್ಕದ ರಸ್ತೆಯಿಂದ ರಾಗವಾಗಿ ಹಾಡುತ್ತಿದ್ದ ದಾಸರ ಪದ ಕೇಳಿಸಿತು -
"ಕಡಲಿನ ಬಿತ್ತರ ಸಾಲದು ಪವಡಿಸೆ
ಭಕ್ತಿಯ ಕಂಬನಿ ಮನೆ ಎನಗೆ
ಹಿಮಗಿರಿ ಎತ್ತರ ಸಾಲದು ನಾನಿರೆ
ಭಕ್ತನ ಹೃದಯವು ಸಾಕೆನಗೆ
ಬೃಂದಾವನದಾ ಗೋಪಿಯರರಿತರೆ

ವೇದಗಳಾಡುವ ಸತ್ಯವನು?
ಹಾಲನು ಮಾರುವ ಹೆಣ್ಣುಗಳೊಲ್ಮೆಯೆ
ಮೀರದೆ ಯೋಗಿಯ ಸಾಧನೆಯ?

ಕೇಳುತ್ತಿದ್ದಂತೆ ಅವನಿಗೆ ಇನ್ನು ಇಲ್ಲಿರುವುದು ಬೇಡ ಅನ್ನಿಸಿತು. ಕ್ಲಾಸಿನಲ್ಲಿ ಕೂತಿದ್ದವನು ಇದ್ದಕಿದ್ದಂತೆ ಎದ್ದು ಗಾಜಿನ ಬಾಗಿಲನ್ನು ದೂಡಿ ಹೊರನಡೆದುಬಿಟ್ಟ. ರೂಮಿಗೆ ಬಂದವನೇ ಅದೇ ಗುಂಗಿನಲ್ಲಿ ಪೇಪರಿನಲ್ಲಿ ಅಡಗಿ ಕುಳಿತಿದ್ದ ಕೃಷ್ಣನನ್ನು ಈಚೆ ಎಳೆದುಬಿಟ್ಟ. ಅದೇ ಕೃಷ್ಣ - ಗೋಪಿಯರಿಗೆ ಇಲಿದ ಕೃಷ್ಣ, ಕತ್ತಲಾದಾಗ ಕಾಡಿನ ಮೂಲಕ ಮನೆಗೆ ಹೋಗುತ್ತಿದ್ದ ಗೋಪಾಲನಿಗೆ ಧೈರ್ಯ ಹೇಳಲು ಬಂದ ಕುವೆಂಪುರವರ "ಬಾಲ ಗೋಪಾಲ".

ಗೆಳೆಯರು ಸಂಜೆ ಬಂದು ನೋಡುತ್ತಾರೆ ರೂಮಿನ ತುಂಬಾ ಚಿತ್ರಗಳು. ಬೃಂದಾವನವೇ ಅಲ್ಲಿ ಸೃಷ್ಟಿಯಾದಂತಿತ್ತು. ಬಣ್ಣ ಬಣ್ಣದ ಚಿತ್ರಗಳು. ಅವರಿಗೆ ತಿಳಿದುಹೋಯಿತು - ಇವನು ಇನ್ನು ಆ ಶಾಲೆಗೆ ಹೋಗಲಿಕ್ಕಿಲ್ಲ. ಕೇಳಿದರು ಅವನನ್ನ ಯಾಕಪ್ಪಾ ಯಾಕೆ ಬಂದೆ ಶಾಲೆಯಿಂದ? ಮೆಲ್ಲನೆ ಹೇಳಿದ "ಅಲ್ಲಿ ಬಣ್ಣಗಳು ಮಾತನಾಡುವುದಿಲ್ಲ...!"

# <u>ಒಂದು ಬ್ಯಾಂಕಿನ ಕತೆ</u>

Monday, January 01, 2007

ಸದಾಶಿವರಾಯರಿಗೆ ಜೀವನದಲ್ಲಿ ಕಷ್ಟವೇನೂ ಇರಲಿಲ್ಲ. ಪಾರಂಪರಿಕವಾಗಿ ಬಂದ ಆಸ್ತಿ, ಜೊತೆಗೆ ಗೌರವ, ಈಗ ಪಂಚಾಯ್ತಿ ಅಧ್ಯಕ್ಷರ ಪಟ್ಟ ಎಲ್ಲವೂ ಅವರಿಗೆ ನಿರಾಯಾಸವಾಗಿಯೇ ದಕ್ಕಿತ್ತು. ಹಾಗೆಂದು ಅವರೆಂದೂ ಕೆಲಸಕ್ಕೆ ಮೋಸ ಮಾಡಿದವರಲ್ಲ. ಊರಿನಲ್ಲಿ ಇದು ಆಗಬೇಕು ರಾಯರೇ ಅಂದರೆ ಅವರು ಯಾವತ್ತೂ ಸಿದ್ಧ. ಬೀದಿಗೆಲ್ಲಾ ಎಣ್ಣೆ ದೀಪದ ಬದಲಿಗೆ ಕರೆಂಟ್ ದೀಪ ಹಾಕೋಣ ಅಂತ ಯಾರೋ ಮೀಟಿಂಗ್ ನಲ್ಲಿ ಹೇಳಿದ್ದೇ ತಡ ಬೆಂಗಳೂರಿನವರೆಗೆ ಹೋಗಿ, ಅಲ್ಲಿ ಮಾತಾಡಿ ಊರಿಗೆ ಕರೆಂಟ್ ತಂದಿದ್ದರು. ಈಗ ಊರಿನ ಮಕ್ಕಳು ಸೀಮೆಯಣ್ಣೆ ಹೊಗೆ ಕುಡಿಯದೆ ಓದುತ್ತಿದ್ದಾರೆಂದರೆ ಅದಕ್ಕೆ ರಾಯರೇ ಕಾರಣ. ಊರಿನಲ್ಲಿ ಯಾವುದೇ ಕಾರ್ಯ ನಡೆಯಲಿ - ಅದು ಒಳ್ಳೆಯದೆ ಇರಲಿ, ಕೆಟ್ಟದ್ದೇ ಇರಲಿ - ಅದು ರಾಯರಿಗೆ ತಿಳಿಯದೆ ನಡೆಯುವುದು ಸಾಧ್ಯವಿರಲಿಲ್ಲ. ಆದ್ದರಿಂದಲೇ ಗೋವಿಂದ ಪೈ ತನ್ನ ಹೊಸ ಯೋಜನೆಯನ್ನು ರಾಯರಿಗೇ ಮೊದಲು ತಿಳಿಸಿದ್ದು.

ಈ ಗೋವಿಂದ ಪೈ ಮೂಲತಃ ಘಟ್ಟದ ಕೆಳಗಿನಿಂದ ಇಲ್ಲಿಗೆ ಬಂದವನು. ಅವನಿಗೆ ಇದೇ ಕೆಲಸ ಆಗಬೇಕು ಅಂತೇನೂ ಇರಲಿಲ್ಲ. ಏನು ಕೆಲಸ ಮಾಡಿ ಬೇಕಾದರೂ ಬದುಕುವ ಕಲೆ ಅವನಿಗೆ ಒಗ್ಗಿ ಹೋಗಿತ್ತು. ಬಂದ ಮೊದಲಿಗೆ ಅವನು ಒಂದು ತರಕಾರಿ ಅಂಗಡಿ ಇಟ್ಟುಕೊಂಡಿದ್ದ. ಊರಿನಲ್ಲಿ ಆಗ ವಾರಕ್ಕೆ ಒಂದು ದಿನ ಸಂತೆಯಲ್ಲಿ ಮಾತ್ರ ತರಕಾರಿ ಸಿಗುತ್ತಿದ್ದದು ನೋಡಿ ಅವನು ಈ ಅಂಗಡಿ ಶುರುಮಾಡಿದ. ಮೈಸೂರಿನ ದೊಡ್ಡ ಮಾರ್ಕೆಟ್ ನಿಂದ ತರಕಾರಿ ತಂದು ದಿನವೂ ಮಾರಿದರೆ ಹೆಚ್ಚು ಲಾಭ ಬರುವುದೆಂಬ ಅವನ ಎಣಿಕೆ ಸುಳ್ಳಾಗಲಿಲ್ಲ. ಮೆಲ್ಲ ಮೆಲ್ಲ ತರಕಾರಿಯ ಜೊತೆ ಹಣ್ಣುಗಳನ್ನೂ ತರಲು ಶುರುಮಾಡಿದ ಅವನಿಗೆ ಯಾವಾಗಲೂ ಏನಾದರೂ ಹೊಸ ವಿಷಯದ ಬಗ್ಗೆಯೇ ಯೋಚನೆ.

ಹೀಗೆ ಒಮ್ಮೆ ಬೆಂಗಳೂರಿಗೆ ಹೋದವನಿಗೆ ಅಲ್ಲಿ ಹಾಲು, ಮೊಸರು ಬೇಕಾದಾಗ ಸಿಗುತ್ತಿದ್ದದು ನೋಡಿ ತಾನು ಏನಾದರು ಮಾಡಬೇಕು ಅನ್ನಿಸಿತು. ಆಗ ಊರಿನಲ್ಲಿ ಹಸು ಇದ್ದವರ ಮನೆಯಲ್ಲಿ ಮಾತ್ರ ಹಾಲು. ಉಳಿದವರು ತೊಟ್ಟು ಹಾಲಿಗೆ ಪರದಾಡಬೇಕಿತ್ತು. ಇಂತಹ ಸಮಯದಲ್ಲಿ ಪೈ ಸುತ್ತಮುತ್ತಲಿನ ಹಳ್ಳಿಯ ಜನರ ಹತ್ತಿರ ಮಾತಾಡಿಕೊಂಡು ಡ್ಯೆರಿ ತರಹದ ಒಂದು ವ್ಯವಸ್ಥೆ ಹುಟ್ಟುಹಾಕಿದ. ಆದರೆ ಹಳ್ಳಿಗಳಿಂದ ಹಾಲನ್ನು ತರುವುದೇ ಒಂದು ಮಹಾ ಸಾಹಸವಾಗಿತ್ತು. ಬೆಳಗ್ಗೆ ಕರೆದ ಹಾಲನ್ನು ಊರಿಗೆ ತರುವಾಗ ಅರ್ಧ ಹುಳಿಯಾಗಿ ಹೋಗುತ್ತಿತ್ತು. ಪೈಗಳ ತಲೆಗೆ ಆಗ ಒಂದು ಭಯಂಕರ ಐಡಿಯಾ ಬಂತು. ತಲೆಗೆ ವಿಷಯ ಬಂತೆಂದರೆ ಸುಮ್ಮನೆ ಕೂರುವವರಲ್ಲ ಅವರು. ಹೊರಟೇ ಬಿಟ್ಟರು ಮಂಗಳೂರಿಗೆ. ಮುಂದೆ ಒಂದೇ ವಾರದಲ್ಲಿ ಆ ಊರಿಗೆ ಬಸ್ಸು ಬಂತು!

ಪೈಗಳದ್ದು ಭಯಂಕರ ತಲೆ. ಹಾಲು ತರಲು ಒಂದು ಲಾರಿ ತರುವುದೆಂದು ಅವರು ಮೊದಲು ಯೋಚಿಸಿದ್ದರು. ಆದರೆ ಮತ್ತೆ ಅವರಿಗೆ ಲಾರಿಗಿಂತ ಬಸ್ಸೇ ಒಳ್ಳೆಯದೆನಿಸಿತು. ಹೇಗಿದ್ದರೂ ಹತ್ತಿರದ ಹಳ್ಳಿಗಳಿಂದ ಬರುವ ಶಾಲೆ ಹುಡುಗರು, ಕೆಲಸಕ್ಕೆ ಬರುವ ಆಳುಗಳು ನಡೆದುಕೊಂಡೇ ಬರುತ್ತಿದ್ದರು. ಕಾಯಿಲೆ-ಕಸಾಲೆ ಇದ್ದವರು, ವಯಸ್ಸಾದ ಮುದುಕರು, ಬಸುರಿ-ಬಾಣಂತಿಯರು ನಡೆಯಲಾಗದೆ ಕಷ್ಟ ಪಡುತ್ತಿದ್ದರು. ಬಸ್ಸು ಹಾಕಿದರೆ ಹಾಲಿನ ಜೊತೆ ಇವರೆಲ್ಲರಿಗೂ ಉಪಕಾರವಾಗಬಹುದೆಂದು ಅವರಿಗೆ ಅನ್ನಿಸಿತು. ಹಾಗೆಂದು ಅವರು ತುಂಬ ದೊಡ್ಡ ಮನಸ್ಸಿನವರೇನಲ್ಲ. ಬರೇ ಜನರಿಗೆ ಉಪಕಾರ ಮಾಡುವ ಬುದ್ಧಿಯೇನೂ ಅವರದಲ್ಲ. ಮುಂದಿನ ಭಯಂಕರ ಯೋಜನೆಗೆ ಹೀಗೆಲ್ಲಾ ಅವರು ಅಡಿಪಾಯ ಹಾಕಿದ್ದರು.

ಎಲ್ಲಿಂದಲೋ ಬಂದು ಹೀಗೆ ಊರಿನವರಿಗೆ ತರಕಾರಿ, ಹಣ್ಣು, ಹಾಲು, ಮೊಸರು ಎಲ್ಲಾ ಸಿಗುವಂತೆ ಮಾಡಿದ್ದ ಪೈಗಳ ಬಗ್ಗೆ ಊರಿನವರಿಗೆ ಸಹಜವಾಗಿಯೇ ಗೌರವ ಬೆಳೆದಿತ್ತು. ಒಂದೆರಡು ಬಾರಿ ಪಂಚಾಯ್ತಿ ಚುನಾವಣೆಗೆ ನಿಲ್ಲಬೇಕೆಂದು ಸ್ವಲ್ಪ ಜನ ಕೇಳಿಕೊಂಡರೂ ಇವರು ಅದಕ್ಕೆಲ್ಲಾ ರಾಯರೇ ಸರಿ ಅಂತ ಸುಮ್ಮನಿದ್ದರು. ತನ್ನ ಬಸ್ಸಿನ ಮೊದಲ ಟ್ರಿಪ್ಪಿಗೆ ರಾಯರೇ ಕುಂಬಳಕಾಯಿ ಒಡೆಯಬೇಕೆನ್ನುವ ಆಸೆಯನ್ನು ರಾಯರು ಪೂರೈಸುವುದರೊಂದಿಗೆ ಅವರ ಸ್ನೇಹ ಮುಂದೆ ಗಾಡವಾಗಿ ಬೆಳೆಯುವಂತಾಯ್ತು. ಮುಂದೆ ಏನಾದರು ಮಾಡುವುದಿದ್ದರೆ ಒಟ್ಟಿಗೇ ಸೇರಿ ಮಾಡಬೇಕೆಂದು ಅವರು ಮಾತಾಡಿಕೊಂಡಿದ್ದರು. ಹಾಗಾಗಿ ಇವತ್ತು ಪೈಗಳು ಬೆಳಗ್ಗೆಯೇ ರಾಯರ ಮನೆಗೆ ಬಂದಿದ್ದರು.

"ರಾಯರೇ ನಾವು ಯಾಕೆ ಒಂದು ಬ್ಯಾಂಕ್ ಶುರು ಮಾಡಬಾರದು?" ಪೈಗಳ ಮಾತು ಕೇಳಿ ರಾಯರು ಮೂರ್ಛೆ ಹೋಗುವುದೊಂದು ಬಾಕಿ. ಆದರೆ ಪೈಗಳೆಂದರೆ ಹಾಗೇನೇ. ಬೇರೆಯವರು ಯೋಚಿಸಲೂ ಹೆದರುತ್ತಿದ್ದ ವಿಷಯಗಳನ್ನು ಇವರು ಕಾರ್ಯಗತ ಮಾಡಲು ನಡೆಯುತ್ತಿದ್ದರು. ಆದರೆ ಬ್ಯಾಂಕ್ ಶುರುಮಾಡುವ ಕೆಲಸ ಮಾತ್ರ ರಾಯರಿಗೆ ಬಹಳ ದೊಡ್ಡ ವಿಷಯವೆಂದೇ ಅನ್ನಿಸುತ್ತಿತ್ತು. ಊರಿನಲ್ಲಿ ಆಗ ಒಂದು ಬ್ಯಾಂಕೂ ಇರಲಿಲ್ಲ. ದೂರದ

ಮಂಗಳೂರಿನಲ್ಲಿ ಬ್ಯಾಂಕಗಳು ಒಂದಾದ ಮೇಲೆ ಒಂದು ಶುರು ಆಗುತ್ತಿದ್ದರೂ ಇಲ್ಲಿ ಯಾರೂ ಅಂತಹ ಸಾಹಸಕ್ಕೆ ಕೈಹಾಕಿರಲಿಲ್ಲ. ಮೇಲಾಗಿ ಬ್ಯಾಂಕ್ ಶುರುಮಾಡುವುದೆಂದರೆ ಅಂಗಡಿ ಹಾಕಿದಂತೆ, ಬಸ್ ಓಡಿಸಿದಂತೆ ಅಲ್ಲವಲ್ಲ. ಇದಕ್ಕೆ ಜನ ಬೆಂಬಲ ಬೇಕು, ಕಾಯಿದೆ-ಕಾನೂನು ತಿಳಿದವರು ಬೇಕು. ಈ ಊರಲ್ಲಿ ಅದೆಲ್ಲಾ ಸಾಧ್ಯವೇ? ರಾಯರು ಪೈಗಳನ್ನು ಈ ಎಲ್ಲಾ ವಿಷಯವನ್ನು ಕೇಳಿದರು.

ಪೈಗಳೇನೂ ಸುಮ್ಮನೇ ಈ ವಿಷಯಕ್ಕೆ ಕೈಹಾಕಿದವರಲ್ಲ. ಅವರೆಲ್ಲಾ ಯೋಚಿಸಿಯೇ ಈ ನಿರ್ಧಾರಕ್ಕೆ ಬಂದಿದ್ದರು. ಸುತ್ತಮುತ್ತದ ಊರುಗಳಲ್ಲಿ ಶೆಟ್ಟರ ಕೈಯಿಂದ ಹಣ ತೆಗೆದುಕೊಂಡು ಕಷ್ಟ ಪಡುತ್ತಿದ್ದ ಜನರು ತುಂಬಾ ಇದ್ದರು. ಬ್ಯಾಂಕ್ ಅಂತ ಒಂದಾದರೆ ಅವರೆಲ್ಲಾ ಆ ಶೆಟ್ಟಿಯ ಮನೆ ಕಾಯುವುದು ಬಿಟ್ಟು ತಮ್ಮ ಹತ್ತಿರ ವ್ಯವಹಾರಕ್ಕೆ ಬರುತ್ತಾರೆ ಎಂ□ ಪೈಗಳಿಗೆ ತುಂಬಾ ನಂಬಿಕೆ ಇತ್ತು. ಮತ್ತೆ ಬ್ಯಾಂಕ್ ನೋಡಿಕೊಳ್ಳಲು ವ್ಯವಹಾರ ಗೊತ್ತಿರುವ ಮನುಷ್ಯ ಬೇಕು. ಪೈಗಳು ಆವಾಗಲೇ ಒಬ್ಬನನ್ನು ಈ ವಿಷಯಕ್ಕೆ ನೋಡಿಟ್ಟಿದ್ದರು. ನರಹರಿ ಅಂತ ಪೈಗಳ ಹೆಂಡತಿಯ ಕಡೆಯ ಹುಡುಗ. ನಯ-ವಿನಯ ಇದ್ದವನು, ಕೆಲಸ ಗೊತ್ತಿದ್ದವನು; ಅವನ್ನನ್ನೇ ಕರೆದುಕೊಂಡು ಬಂದು ಮ್ಯಾನೇಜರ್ ಅಂತ ಕೂರಿಸುವುದು ಅಂತ ರಾಯರಿಗೆ ಹೇಳಿದರು. ರಾಯರಿಗೆ ಈ ವಿಷಯದಲ್ಲಿ ಏನೂ ಅಭ್ಯಂತರವಿರಲಿಲ್ಲ.

ಬ್ಯಾಂಕ್ ಗೆ ಡೈರೆಕ್ಟರ್ ಗಳಾಗಿ ತಾವಿಬ್ಬರೇ ಇದ್ದರೆ ಚೆನ್ನಾಗಿರುವುದಿಲ್ಲ ಅಂತ ಪೈಗಳು ರಾಯರಿಗೆ ಹೇಳಿದರು. ಜನರು ತಮ್ಮ ಬಳಿ ಹಣ ಇಡಲು ಬರಬೇಕೆಂದರೆ ಅವರು ನಂಬುವಂತಹ ಜನರು ತಮ್ಮ ಜೊತೆ ಇರಬೇಕು. ಮತ್ತು ಊರಿನಲ್ಲಿ ಸಾದಾರಣವಾಗಿ ಎಲ್ಲರೂ ಗೊತ್ತಿರುವಂತಹ ಮನುಷ್ಯ ತಮ್ಮ ಜೊತೆಗೆ ಇದ್ದರೆ ವಾಸಿ ಅಂತ ಯೋಚಿಸಿದಾಗ ಅವರಿಗೆ ನಾರಾಯಣ ಮಾಸ್ಟರ ಹೆಸರು ತಟ್ಟನೆ ಹೊಳೆಯಿತು. ಹಳೆ ತಲೆ, ಊರಿನ ಎರಡು ತಲೆಮಾರಿಗೆ ಪಾಠ ಮಾಡಿದ ಜೀವ. ಕಳೆದ ತಿಂಗಳಷ್ಟೇ ಕೆಲಸದಿಂದ ನಿವೃತ್ತರಾಗಿದ್ದರು. ಅವರೊಬ್ಬರು ತಮ್ಮ ಜೊತೆಗೆ ಬಂದರೆ ಬ್ಯಾಂಕಿನ ಬಗ್ಗೆ ಊರವರಿಗೆ ನಂಬಿಕೆ ಬರುವುದು ಖಂಡಿತ ಎಂ□ ೀರ್ಮಾನಿಸಿ ಮಾಸ್ಟರನ್ನು ಒಪ್ಪಿಸಲು ಅವರ ಮನೆಯ ಕಡೆ ಹೊರಟರು .

ಇದ್ದಕ್ಕಿದ್ದಂತೆ ಊರಿನ ಪಂಚಾಯ್ತಿ ಅಧ್ಯಕ್ಷರೂ, ಬಸ್ ಓನರ್ ಪೈಗಳೂ ತಮ್ಮ ಮನೆಗೆ ಬರುದಿರುವುದು ನೋಡಿ ಮಾಸ್ಟರ್ ರಿಗೆ ಎದೆ ಧಸಕ್ಕೆಂದಿತು. ಬಂದವರಿಗೆ ನೀರು-ಬೆಲ್ಲ ಕೊಟ್ಟು ಮಾತಾಡಲು ಕೂತಾಗ ಪೈಗಳೇ ವಿಷಯ ಹೀಗೆ ಹೀಗೆ, ನೀವು ನಮ್ಮ ಜೊತೆ ಇದರಲ್ಲಿ ಬರಬೇಕು ಅಂದಾಗ ಮಾಸ್ಟರರಿಗೆ ಏನು ಹೇಳಬೇಕೆಂದೇ ತೋಚಲಿಲ್ಲ. ತಮಗೆ ಈ ವಿಚಾರ ಏನೇನೂ ತಿಳಿಯದು, ಮೇಲಾಗಿ ತಾವು ಮನೆಯಲ್ಲಿಯೇ ಮಕ್ಕಳಿಗೆ ಪಾಠ ಹೇಳಲು ಯೋಚಿಸುತ್ತಿರುವುದಾಗಿ ಪರಿಪರಿಯಾಗಿ ಹೇಳಿದರೂ ಅವರು ಬಿಡಬೇಕೇ. ನೀವು ಏನೂ ಮಾಡುವುದು ಬೇಡ, ಸುಮ್ಮನೆ ದಿನಕ್ಕೊಂದು ಸಲ ಬ್ಯಾಂಕಿನ ಕಡೆ ಬಂದರೆ ಸಾಕು, ನಿಮಗೆ ಗೊತ್ತಿರುವ ಒಂದೆರಡು ಜನರನ್ನು ಬ್ಯಾಂಕಿನಲ್ಲಿ ಹಣ ಇಡುವಂತೆ ಹೇಳಿದರೆ ಮತ್ತೇನೂ ಕೆಲಸವಿಲ್ಲ ಎಂ□ ೈಗಳು ತಮ್ಮ ಯಾವತ್ತಿನ ನಯಗಾರಿಕೆಯಲ್ಲಿ ಹೇಳುತ್ತಿದ್ದರೆ ಮೇಸ್ಟರು ಆಗಬಹುದೆಂದು ಯೋಚಿಸಿದರು.

ಆದರೆ ರಾಯರು ಹೇಳಿದ ಒಂದು ಮಾತು ಅವರನ್ನು ಚಿಂತೆಗೀಡು ಮಾಡಿತು. ಬ್ಯಾಂಕಿನ ಡೈರೆಕ್ಟರ್ ಗಳು ಒಬ್ಬೊಬ್ಬರೂ ಇಂತಿಷ್ಟು ಅಂತ ಮೂಲಧನ ಹಾಕಬೇಕೆಂದು ಕಾನೂನಂತೆ. ಹಾಗಾಗಿ ನೀವೆಷ್ಟು ಕೊಡುತ್ತೀರ ಮಾಷ್ಟರೇ ಅಂತ ರಾಯರು ಕೇಳಿದಾಗ ಅವರ ಬಾಯಿ ಕಟ್ಟಿದಂತಾಯಿತು. ಅಲ್ಲಾ ಜೀವನ ಇಡೀ ಮಕ್ಕಳಿಗೆ ಪಾಠ ಮಾಡಿ ನಿವೃತ್ತರಾದ ಅವರ ಹತ್ತಿರ ಎಷ್ಟು ಹಣ ಇರಲು ಸಾಧ್ಯ. ಪೈಗಳು, ರಾಯರು ಈ ವಿಷಯವನ್ನು ಮೊದಲೇ ಯೋಚಿಸಿದ್ದರು. ಅವರು ಮಾತಾಡಿಕೊಂಡು ಬಂದ ನಿರ್ಧಾರವನ್ನು ಈಗ ಮೇಷ್ಟರಿಗೆ ಹೇಳಿದರು. ಅದರಂತೆ ಮೇಷ್ಟರ ಮನೆಯ ಹಿಂದಿನ ಸ್ವಲ್ಪ ಜಾಗವನ್ನು ರಾಯರು ಕ್ರಯಕ್ಕೆ ತೆಗೆದುಕೊಳ್ಳುವುದು. ಆ ಹಣವನ್ನು ಮೇಷ್ಟರು ಬ್ಯಾಂಕಿನಲ್ಲಿ ಹೂಡುವುದು, ಮತ್ತೆ ಒಂದೆರಡು ವರ್ಷದಲ್ಲಿ ಬ್ಯಾಂಕಿನ ವ್ಯವಹಾರ ಚೆನ್ನಾಗಿ ನಡೆದ ಮೇಲೆ ಡೈರೆಕ್ಟರುಗಳಿಗೆ ಸಿಗುವ ಬೋನಸ್ಸಿನ ದುಡ್ಡಿನಲ್ಲಿ ಮೇಷ್ಟರು ಪುನಃ ಕೊಟ್ಟಷ್ಟೇ ಹಣಕ್ಕೆ ರಾಯರಿಂದ ಜಾಗ ವಾಪಾಸ್ ಪಡೆಯುವುದು ಹೀಗೆ ಪೈಗಳದ್ದೊಂದು ಭಾರೀ ಉಪಾಯ.

ಏನು ಹೇಳುವುದು? ಮೇಷ್ಟರಿಗೆ ಒಂದೂ ತಿಳಿಯಲಿಲ್ಲ. ನಿಮ್ಮ ಜಾಗದ ಕಾಗದ ಮಾತ್ರ ನನ್ನ ಬಳಿ ಒಂದೆರಡು ವರ್ಷ ಇರುತ್ತದೆ. ನಾನಗೇನೂ ನಿಮ್ಮ ಜಾಗದ ಅವಷ್ಯಕತೆ ಇಲ್ಲ. ನಿಮ್ಮ ಜಾಗ ಯಾವತ್ತೂ ನಿಮ್ಮದೇ. ಸುಮ್ಮನೆ ಕಾನೂನು-ವ್ಯವಹಾರಕ್ಕೋಸ್ಕರ ಈ ಕಾಗದ ಪತ್ರ ಎಲ್ಲಾ ಅಂತ ರಾಯರೂ, ಪೈಗಳೂ ಹೇಳುತ್ತಿದ್ದರೆ ಪಾಪ ಅವರಾದರೂ ಏನು ಮಾಡಿಯಾರು? ಒಪ್ಪಿಕೊಂಡರು. ಹಾಗೆ ಆ ಊರಿನಲ್ಲಿ ಈ ಮೂರೂ ಜನ ಡೈರೆಕ್ಟರುಗಳಾದ ಬ್ಯಾಂಕೊಂದು ಶುರುವಾಯಿತು. ನರಹರಿಯೂ ಅಲ್ಲಿ ಬಂದು ಕೂತಾಯ್ತು. ಪೈಗಳ ಮಾತು, ರಾಯರ ಗೌರವ, ಮಾಸ್ಟರರ ನಂಬಿಕೆ ಎಲ್ಲ ಸೇರಿ ಬ್ಯಾಂಕಿನ ವ್ಯವಹಾರ ಚೆನ್ನಾಗಿಯೇ ನಡೆಯಲು ಶುರುವಾಯಿತು. ಮೊದಲ ವರ್ಷ ಕೊನೆ ಆಗುವುದರೊಳಗೆ ಖರ್ಚು ಕಳೆದು ಸ್ವಲ್ಪ ಲಾಭವೂ ಬಂತು. ಅಂತೂ ಪೈಗಳನ್ನು ನಂಬಿದಕ್ಕೆ ಸಾರ್ಥಕವಾಯಿತೆಂದು ರಾಯರು ನಿಟ್ಟುಸಿರು ಬಿಟ್ಟರು.

ಈ ಮಧ್ಯೆ ಪೈಗಳಿಗೆ ತಮ್ಮ ದೊಡ್ಡ ಆಸೆಯನ್ನು ಪೂರ್ಣಗೊಳಿಸುವ ಸಮಯ ಬಂದಿದೆ ಎಂ[illegible] ನ್ನಿಸಲು ಶುರುವಾಯಿತು. ಅವರಿಗೆ ಮೊದಲಿನಿಂದಲೂ ಒಂದು ಆಸೆ. ಮಂಗಳೂರಿನಲ್ಲಿ ಒಂದು ಟ್ರಾನ್ಸ್ಪೋರ್ಟ್ ಕಂಪೆನಿ ತೆಗೆಯಬೇಕು. ತಮ್ಮ ಕಂಪೆನಿಯ ಬಸ್ಸುಗಳು ಉಡುಪಿ, ಕುಂದಾಪುರ, ಪುತ್ತೂರು - ಹೀಗೆ ಊರೂರಿಗೆ ಹೋಗಬೇಕು. ಈ ಊರಿನಲ್ಲಿ ಮಾಡಿದ ಕೆಲಸವೆಲ್ಲಾ ಬರಿಯ ಆರಂಭವಷ್ಟೇ. ಅಸಲೀ ಕೆಲಸ ಆಗಬೇಕಾಗಿದ್ದು ಘಟ್ಟದ ಕೆಳಗೆ. ಇಲ್ಲಿ ಎಷ್ಟು ಮಾಡಿದರೂ ಅಷ್ಟೇ. ದೊಡ್ಡ ಕೆಲಸಕ್ಕೆ ಮಂಗಳೂರೇ ಸರಿ. ಒಮ್ಮೆ ಅಲ್ಲಿ ಅದೃಷ್ಟ ಕುಲಾಯಿಸಿತೆಂದರೆ ಮುಂದೆ ಬೊಂಬಾಯಿ - ಪೈಗಳು ಆಗಲೇ ಎಲ್ಲಾ ಯೋಚಿಸಿದ್ದರು. ಈ ಊರಿನಲ್ಲಿ ತಾಮ ಮಾಡಿದ ಕೆಲಸ, ಮೆತ್ತೀಗ ಈ ಬ್ಯಾಂಕು ಉತ್ತಮವಾಗಿ ನಡೆಯುತ್ತಿದ್ದುದು ಅವರಿಗೆ ಸಹಜವಾಗಿ ತಮ್ಮ ಬಗ್ಗೆ ನಂಬಿಕೆ ಹುಟ್ಟುವಂತೆ ಮಾಡಿತ್ತು. ಈಗ ಬ್ಯಾಂಕಿನಲ್ಲಿ ಎಷ್ಟಾದರೂ ಬೇಕಾದಷ್ಟು ಹಣವಿದೆ. ಒಂದೆರಡು ಹೊಸಾ ಬಸ್ ತೆಗೆದು ಮಂಗಳೂರು-ಉಡುಪಿ ಲೈನಿನಲ್ಲಿ ಬಿಡುವುದು, ಒಂದೇ ವರ್ಷದಲ್ಲಿ ಹಣ ವಾಪಸ್ ಬರುವುದು ಗ್ಯಾರೆಂಟಿ. ಆಗ ಬ್ಯಾಂಕಿಗೆ ಹಣ ತುಂಬಿದರಾಯ್ತು ಅಂತ ಯೋಚಿಸಿ ರಾಯರ ಮನೆಗೆ ಹೋದರು.

ಪೈಗಳಿಗೆ ಗೊತ್ತಿತ್ತು. ತಾವೊಬ್ಬರೇ ಬ್ಯಾಂಕಿನಿಂದ ಹಣ ತೆಗೆದುಕೊಂಡರೆ ಸರಿ ಇರುವುದಿಲ್ಲ. ಅದಕ್ಕೇ ರಾಯರ ಮನೆಗೆ ಬಂದದ್ದೇ ನೋಡಿ ರಾಯರೇ ಬ್ಯಾಂಕಿನ ಹಣವನ್ನು ಹೆಚ್ಚು ಲಾಭ ಇರುವ ಕಡೆ ನಾಮ ಹೂಡಬೇಕು. ಆಗ ನಮಗೆ ಹೆಚ್ಚು ಉತ್ಪನ್ನ ಬಂದು ಜನರಿಗೆ ಹೆಚ್ಚು ಬಡ್ಡಿ ಕೊಡಬಹುದು. ಹೀಗಾದಾಗ ಇನ್ನೂ ಹೆಚ್ಚು ಜನ ನಮ್ಮಲ್ಲಿ ಹಣ ಇಡಲು ಬರುತ್ತಾರೆ. ನೀಮ ಏನಾದರೂ ಹೆಚ್ಚು ಲಾಭ ಬರುವ ದಾರಿ ಹುಡುಕಿ ಅಂತ ಹೇಳಿ ಹೋದರು. ರಾಯರು ಬಹಳ ಯೋಚಿಸಿ ಒಂದು ದೊಡ್ಡ ಅಕ್ಕಿ ಮಿಲ್ಲನ್ನು ಹಾಕಿದರೆ ಒಳ್ಳೆಯದಾಗಬಹುದೆಂದು ಯೋಚಿಸಿದರು. ಆಗ ಊರಿನಲ್ಲಿ ಒಳ್ಳೆಯ ಮಿಲ್ಲು ಇರಲಿಲ್ಲ. ಊರವರೆಲ್ಲಾ ಗಾಡಿ ಕಟ್ಟಿಕೊಂಡು ದೂರದೂರಿಗೆ ಹೋಗಿ ಅಲ್ಲಿ ಒಂದು ವಾರ ಇದ್ದು ಅಕ್ಕಿ ಮಾಡಿಸಿ ಮತ್ತಷ್ಟು ದೂರ ಹೋಗಿ ಅದನ್ನು ಮಾರಿ ಬರಬೇಕಿತ್ತು. ದೊಡ್ಡ ಮಿಲ್ಲು ಇಲ್ಲೇ ಹಾಕಿದರೆ ಪಕ್ಕದ ಊರಿನವರೂ ಇಲ್ಲೇ ಅಕ್ಕಿ ಮಾಡಿಸಲು ಬರುತ್ತಾರೆ. ಹೆಚ್ಚು ಅಕ್ಕಿ ಇಲ್ಲೇ ಸಿಗುತ್ತದೆ ಅಂತಾದರೆ ಅಕ್ಕಿ ಕೊಳ್ಳುವವರೂ ಇಲ್ಲೇ ಬಂದು ಅಕ್ಕಿ ಕೊಳ್ಳಬಹುದು. ಇದರಿಂದ ತಮ್ಮ ಊರು ಅಕ್ಕಿ ಮಾರುಕಟ್ಟೆಗೆ ಹೆಸರು ಮಾಡುವುದು ಅನುಮಾನವೇ ಇಲ್ಲ ಅಂತ ಯೋಚಿಸಿದರು.

ಮರುದಿನ ಬ್ಯಾಂಕಿನ ಕಛೇರಿಯಲ್ಲಿ ಪೈಗಳು ಮತ್ತು ಮೇಸ್ಟರ ಮುಂದೆ ರಾಯರು ತಮ್ಮ ನಿರ್ಧಾರ ತಿಳಿಸಿದರು. ಅವರಿಬ್ಬರೂ ಆಗಬಹುದೆಂದರು. ಪೈಗಳು ಮೇಸ್ಟರನ್ನು ನೀಮ ಏನಾದರೂ ಮಾಡಬೇಕೆಂದಿದ್ದರೆ ಮಾಡಿ, ಹಣ ನಾಮ ಕೊಡುತ್ತೇವೆ ಅಂದಾಗ ಅವರು ಇಲ್ಲ ನನಗೆ ಇದೆಲ್ಲಾ ತಿಳಿಯುವುದಿಲ್ಲ, ನಿಮಗೆ ಏನಾದರೂ ಉದ್ದೇಶ ಇದ್ದರೆ ಹೇಳಿ ಅಂದರೆ. ಇದಕ್ಕೆ ಕಾಯುತ್ತಿದ್ದವರಂತೆ ಪೈಗಳು ತಮ್ಮ ಟ್ರಾನ್ಸಪೋರ್ಟ್ ವಿಷಯ ಹೇಳಿದರು. ಮಂಗಳೂರಿನಿಂದ ಬಸ್ ಬಿಟ್ಟರೆ ಹಣಕ್ಕೆ ಮೋಸವಿಲ್ಲ ಎಂ[illegible] ಮ್ಮ ಅನುಭವದ ನೆಲೆಯಲ್ಲಿ ಹೇಳೀದಾಗ ಇವರಿಗೂ ಇಲ್ಲವೆನ್ನಲಾಗಲಿಲ್ಲ . ಆಯಿತೆಂದರು. ಆದರೆ ನಾವಿಬ್ಬರೂ ಹಣ ತೆಗೆದುಕೊಂಡಾಗ ಮೇಸ್ಟರೊಬ್ಬರು ಹಾಗೇ ಇದ್ದರೆ ಹೇಗೆ? ಅವರಿಗೂ ಏನಾದರೂ ಆಗಬೇಕು ಅಂತ ಪೈಗಳು ಹೇಳಿದಾಗ ರಾಯರು ಬ್ಯಾಂಕಿನ ಲೆಕ್ಕದಿಂದ ಸ್ವಲ್ಪ ಹಣವನ್ನು ಮೇಸ್ಟರಿಗೆ ಕೊಡೋಣವೆಂದರು. ಪೈಗಳಿಗೂ ಇದು ಸರಿ ಅನ್ನಿಸಿತು. ಆದರೆ ಮೇಸ್ಟರು ತಮಗೆ ಹಣ ಬೇಡವೆಂದೂ, ಆ ಹಣವನ್ನು ರಾಯರೇ ಇಟ್ಟುಕೊಂಡು ತಮ್ಮ ಜಾಗದ ಪತ್ರವನ್ನು ವಾಪಸ್ ಕೊಡುವಂತೆ ಕೇಳಿಕೊಂಡರು. ರಾಯರು ಇದಕ್ಕೆ ಒಪ್ಪಿದರೂ ಸ್ವಲ್ಪ ಹಣ ಮೇಸ್ಟರು ತೆಗೆದುಕೊಳ್ಳಲೇ ಬೇಕೆಂದು ಹೇಳಿದಾಗ ಅವರಿಗೆ ಇಲ್ಲ ಎನ್ನಲಾಗಲಿಲ್ಲ.

ಅವರೆಲ್ಲಾ ನರಹರಿಯನ್ನು ಕರೆದು ಲೆಕ್ಕ ಪುಸ್ತಕ ತರಿಸಿ ತಾಮ ಒಬ್ಬೊಬ್ಬರೂ ಎಷ್ಟು ಹಣ ತೆಗೆದುಕೊಳ್ಳಬಹುದೆಂದು ನೋಡಿದರು. ಮುಂದಿನ ಒಂದು ವರ್ಷ ಬ್ಯಾಂಕ್ ನಡೆಸಲು ಎಷ್ಟು ಹಣ ಬೇಕೋ ಅಷ್ಟನ್ನು ಬಿಟ್ಟು ಉಳಿದ್ದದ್ದನ್ನು ತಮ್ಮ ತಮ್ಮ ಉದ್ದಿಮೆಗಳಿಗೆ ಬಳಸಿಕೊಳ್ಳುವುದೆಂದು ತೀರ್ಮಾನಿಸಿದರು. ಅದರಂತೆ ನರಹರಿಗೆ ತಮಗೆ ಇಷ್ಟು ಹಣ ತಂದುಕೊಡುವಂತೆ ಹೇಳಿದರು. ನರಹರಿಗೆ ಇದರಿಂದ ಆಶ್ಚರ್ಯವಾಯಿತು. ಇಷ್ಟು ಹಣವನ್ನು ಬ್ಯಾಂಕಿನಿಂದ ತೆಗೆದುಕೊಂಡು ಹೋದರೆ ಹೇಗೆ ಅಂತ ಕೇಳಿದ. ಪೈಗಳೇ ಜೋರು ಬಾಯಿ ಮಾಡಿ ಹೇಳಿದಷ್ಟು ಮಾಡು ಅಂತ ಹೇಳಿದರು. ತೆಗೆದುಕೊಂಡ ಹಣದ ಲೆಕ್ಕವನ್ನು ಬೇರೆ ಪುಸ್ತಕದಲ್ಲಿ ಬರೆದಿಡುವಂತೆ ಅವರೇ ನರಹರಿಗೆ ಹೇಳಿದರು. ಅವನು ಮರುಮಾತಾಡದೆ ಹೊಸ ಪುಸ್ತಕದಲ್ಲಿ ಅವರು ಕೇಳಿದಷ್ಟು ಹಣ ನೀಡಿ ಸುಮ್ಮನೇ ಕುಳಿತ.

ರಾಯರ ಇರಾದೆ ಏನೋ ಒಳ್ಳೆಯದಿತ್ತು. ಆದರೆ ಅವರು ಅಂದುಕೊಂಡಂತೆ ಒಂದೂ ಆಗಲಿಲ್ಲ. ಮಿಲ್ಲನೇನೋ ಕಟ್ಟಿದರು. ಆದರೆ ಊರಲ್ಲಿ ಕರೆಂಟೇ ಇರುತ್ತಿರಲಿಲ್ಲ. ಪಕ್ಕದ ಊರಿನವರೆಲ್ಲಾ ಗಾಡಿ ಕಟ್ಟಿಸಿಕೊಂಡು ಮಿಲ್ಲಿಗೆ ಬಂದರೆ ಕರೆಂಟ್ ಕೈಕೊಡುತ್ತಿತ್ತು. ಬಂದ ಜನ ಊರನ್ನೂ, ಮಿಲ್ಲಿನ ರಾಯರನ್ನೂ ಶಪಿಸುತ್ತಾ ಕೂತಿರುತ್ತಿದ್ದರು. ಕ್ರಮೇಣ ಇಲ್ಲಿಗೆ ಜನ ಬರುವುದೇ ಕಡಿಮೆ ಆಗತೊಡಗಿತು. ರಾಯರಿಗೆ ಇದೇ ಚಿಂತೆ. ತಮ್ಮ ಹೆಸರಿಗೆ, ತಮ್ಮ ಊರಿನ ಹೆಸರಿಗೆ ಹೀಗೆ ಕಳಂಕ ಬರುವುದು ಅವರಿಗೆ ಬೇಕಿರಲಿಲ್ಲ. ಹಾಗಾಗಿ ಬೇಕಾದಾಗ ಕರೆಂಟ್ ಕೊಡಬಲ್ಲ ಜನರೇಟರ್ ಒಂದನ್ನು

ತರುವುದೇ ಉಪಾಯವೆಂದು ಯೋಚಿಸಿದಾಗ ಪೈಗಳು ಬ್ಯಾಂಕಿನಿಂದಲೇ ಹಣ ತೆಗೆದುಕೊಳ್ಳುವಂತೆ ಒತ್ತಾಯಿಸಿದರು. ಹೇಗಾದರೂ ಜನರೇಟರ್ ಬಂದರೆ ಮಿಲ್ಲು ಚನ್ನಾಗಿ ನಡೆದು ಬೇಗ ಹಣ ವಾಪಾಸ್ ಮಾಡಬಹುದೆಂದು ರಾಯರೂ ಅದಕ್ಕೆ ಸಮ್ಮತಿಸಿದರು. ಬೆಂಗಳೂರಿನಿಂದ ದೊಡ್ಡ ಜನರೇಟರೇನೂ ಬಂತು. ಆದರೆ ಅದರ ಹೊಟ್ಟೆ ಬಕಾಸುರನದ್ದು. ಆಗ ಡೀಸಿಲ್ ಸಿಗುತ್ತಿದ್ದದ್ದೇ ಕಮ್ಮಿ. ಬಂಕಿನವರ ಹತ್ತಿರ ಒಂದಕ್ಕೆರಡು ಹಣ ಕೊಟ್ಟು ವಾರಕ್ಕಾಗುವಷ್ಟು ಎಣ್ಣೆ ಕೂಡಿಟ್ಟುಕೊಳ್ಳಬೇಕಿತ್ತು. ಹಣ ಬರುವುದು ಹಾಗಿರಲಿ, ರಾಯರು ಮಿಲ್ಲನ್ನು ಜೀವಂತವಾಗಿಡಲು ತಮ್ಮ ಜೇಬಿನಿಂದಲೇ ದುಡ್ಡು ಬಿಚ್ಚುವ ಪರಿಸ್ಥಿತಿ ಬಂದು ಹೋಯಿತು. ಬರುಬರುತ್ತಾ ಬ್ಯಾಂಕಿನ ಕಡೆ ಅವರ ಓಡಾಟ ಜಾಸ್ತಿ ಆಗುತ್ತಿತ್ತು. ಬ್ಯಾಂಕಿಗೆ ಹೋಗುವುದು, ನರಹರಿಯ ಹತ್ತಿರ ಹೇಳಿ ಹಣ ತೆಗೆದುಕೊಂಡು ಬರುವುದು, ನರಹರಿ ಅದನ್ನು ಬೇರೆ ಪುಸ್ತದಲ್ಲಿ ಬರೆಯುವುದು - ನಿತ್ಯದ ಕೆಲಸವಾಯಿತು.

ಹಾಗೆಂದು ನರಹರಿಯ ಆ ಪುಸ್ತಕದಲ್ಲಿ ಕೇವಲ ರಾಯರ ಲೆಕ್ಕ ಬೆಳೆಯುತ್ತಿರಲಿಲ್ಲ. ಪೈಗಳ ಲೆಕ್ಕ ರಾಯರಿಗಿಂತ ಪುಟಗಟ್ಟಲೆ ದೊಡ್ಡದಿತ್ತು. ಆದದ್ದೇನೆಂದರೆ ಪೈಗಳು ದುಡ್ಡು ಉಳಿಸೋಣವೆಂದು ಸೆಕೆಂಡ್ ಹ್ಯಾಂಡ್ ಬಸ್ಸು ಕೊಂಡಿದ್ದರು. ಹಾಗಾಗಿ ಬಸ್ಸು ಆವಾಗಾವಾಗ ರಿಪೇರಿಗೆ ಬರುತ್ತಿತ್ತು. ಮತ್ತೆ ಪೈಗಳು ವಾರಕ್ಕೊಮ್ಮೆ ಮಾತ್ರ ಮಂಗಳೂರಿಗೆ ಹೋಗುತ್ತಿದ್ದರಿಂದ ಬಸ್ಸಿನ ಕಂಡಕ್ಟರ್ ತಪ್ಪು ಲೆಕ್ಕ ತೋರಿಸುತ್ತಿದ್ದ. ಎರಡೆರಡು ಸಲ ಜನ ಬದಲಾಯಿಸಿದರೂ ಅದೇ ಸ್ಥಿತಿ. ಬಂದವರಿಗೆ ಟಿಕೇಟ್ ಕೊಡದೆ ಅರ್ಧ ದುಡ್ಡನ್ನು ಡ್ರೈವರ್ ಮತ್ತು ಕಂಡಕ್ಟರ್ ಸೇರಿ ತಿಂದು ಬಿಡುತ್ತಿದ್ದರು. ಕಲೆಕ್ಷನ್ ಹಣ ಬಸ್ಸಿನ ಉಪಚಾರಕ್ಕೇ ಸರಿಹೋಗುತ್ತಿತ್ತು. ಮೇಲೆ ಆಗಾಗ ಬರುವ ರಿಪೇರಿಗೆ ಪೈಗಳೇ ದುಡ್ಡು ಸುರಿಯ ಬೇಕಾಗಿ ಬಂದಾಗಿನಿಂದ ಅವರೂ ನರಹರಿಯ ಪುಸ್ತಕದ ಗಿರಾಕಿಯಾಗಿ ಹೋಗಿದ್ದರು. ಇವತ್ತು ರಾಯರು ಬರುವ ಮೊದಲು ಕೂಡ ಪೈಗಳು ಬಂದು ಹಣ ತೆಗೆದುಕೊಂಡು ಹೋದರು.

ರಾಯರು ಹೋದ ಮೇಲೆ ನರಹರಿ ತನ್ನ ಪುಸ್ತದ ಲೆಕ್ಕ ನೋಡಲು ಕುಳಿತ. ಬ್ಯಾಂಕಿನ ಬೇರೆ ಲೆಕ್ಕ ಪತ್ರಗಳನ್ನೂ ಜೊತೆಯಲ್ಲಿ ಇಟ್ಟುಕೊಂಡು ಲೆಕ್ಕ ನೋಡುತ್ತಿದವನಿಗೆ ತಲೆ ಸುತ್ತಿ ಬಂದಂತಾಯ್ತು. ಬ್ಯಾಂಕಿನಲ್ಲಿರುವ ಹಣ ತೀರಾ ಕಡಿಮೆ ಇತ್ತು. ಪರಿಸ್ಥಿತಿ ಹೀಗೆ ಮುಂದುವರಿದರೆ ಬ್ಯಾಂಕ್ ದಿವಾಳಿ ಆಗುವುದು ಖಂಡಿತ ಅಂತ ಅವನಿಗೆ ಸಂಶಯವಿರಲಿಲ್ಲ. ಸರಕಾರ ಬೇರೆ ಸಣ್ಣ ಊರುಗಳಲ್ಲಿದ್ದ ಬ್ಯಾಂಕುಗಳ ಮೇಲೆ ಕಣ್ಣಿಟ್ಟಿತ್ತು. ಸ್ವಲ್ಪ ಸೂಚನೆ ಸಿಕ್ಕಿದರೂ ಸರಕಾರಿ ಅಧಿಕಾರಿಗಳು ಬ್ಯಾಂಕ್ ನ ಮೇಲೆ ದಾಳಿ ಮಾಡಿ ಕಾಗದ ಪತ್ರ ವಶ ಪಡಿಸಿಕೊಳ್ಳುತ್ತಿದ್ದರು. ಹಾಗೇನಾದರೂ ಆದರೆ ಮ್ಯಾನೇಜರ್ ಆದ ತಾನು ಜೈಲಿಗೆ ಹೋಗುವುದು ಗ್ಯಾರೆಂಟಿ ಅನ್ನುವುದು ಅವನಿಗೆ ಗಟ್ಟಿ ಆಗತೊಡಗಿತು. ವಿಷಯವನ್ನು ಕೂಡಲೇ ಪೈಗಳಿಗೆ ತಿಳಿಸಬೇಕೆಂದು ಹೊರಟಾಗ ಮೇಷ್ಟರು ಬ್ಯಾಂಕಿಗೆ ಬಂದರು. ಅವರ ಜೊತೆ ಲೋಬೋ ಕೂಡ ಇದ್ದಿದ್ದರಿಂದ ವಿಷಯವನ್ನು ಅವರಿಗೆ ತಿಳಿಸುವುದು ಬೇಡವೆಂದುಕೊಂಡ. ಹೇಗಿದ್ದರೂ ಮಾಸ್ಟರು ಪಾಪದ ಜನ. ಅವರಿಗೆ ಹೇಳಿಯೂ ಉಪಯೋಗವಿಲ್ಲ ಅನ್ನಿಸಿತು ಅವನಿಗೆ.

ಮಾಸ್ಟರು ಬಂದಿದ್ದು ಬೇರೆ ಕಾರಣಕ್ಕೆ. ಲೋಬೋ ಅವರ ಜೊತೆಗೆ ಶಾಲೆಯಲ್ಲಿ ಇದ್ದವರು. ಅವರೂ ಇತ್ತೀಚೆಗೆ ನಿವೃತ್ತನಾಗಿದ್ದರು. ಸಿಕ್ಕಿದ ಹಣವನ್ನು ಬ್ಯಾಂಕಿನಲ್ಲಿ ಇಡಿಸಲು ಮಾಸ್ಟರು ಅವನನ್ನು ಕರೆದುಕೊಂಡು ಬಂದಿದ್ದರು. "ನಮ್ಮದೇ ಬ್ಯಾಂಕು. ಏನೂ ಮೋಸವಿಲ್ಲ. ನಿನ್ನ ಜೀವನದ ಹಣವನ್ನು ಇವನು ಚೆನ್ನಾಗಿ ನೋಡಿಕೊಳ್ಳುತ್ತಾನೆ. ಅಲ್ಲವಾ ನರಹರಿ" ಅಂತ ಮೇಸ್ಟರು ಹೇಳುತ್ತಿದ್ದರೆ ನರಹರಿಗೆ ತಲೆ ಸಿಡಿಯುತ್ತಿತ್ತು. ಅವರು ಕೊಟ್ಟ ಅಷ್ಟೂ ಹಣವನ್ನು ಕಪಾಟಿನಲ್ಲಿಟ್ಟು ರಷೀದಿ ಬರೆಯಲು ನೋಡುತ್ತಾನೆ ರಷೀದಿ ಪುಸ್ತಕ ಖಾಲಿ ಆಗಿದೆ. ಹೋಗಿ ತರುತ್ತೇನೆ ಅಂದಾಗ ಮಾಸ್ಟರೇ ಬೇಡವೆಂದರು. ಸಂಜೆ ತಾವೇ ಬಂದು ತೆಗೆದುಕೊಂಡು ಹೋಗಿ ಲೋಬೋನಿಗೆ ಕೊಡುವೆನೆಂದು ಹೇಳಿದರು. "ನನ್ನ ಮೇಲೆ ನಂಬಿಕೆ ಇದೆಯಲ್ಲಾ ಲೋಬೋ? ಇಲ್ಲದಿದ್ದರೆ ಹಣ ತೆಗೆದುಕೊಂಡು ಹೋಗೋಣ. ನಾಳೆ ಬಂದರೆ ಆಯಿತು" ಅಂದಾಗ ಲೋಬೋ ರಶೀದಿ ಏನು ಮಹಾ, ನಾಳೆ ಬಂದು ತೆಗೆದುಕೊಂಡರೆ ಆಯಿತೆಂದು ಹೇಳಿ ಅವರಿಬ್ಬರೂ ಹೋದರು.

ಅವರು ಹೋದ ಕೂಡಲೇ ನರಹರಿಯೂ ಸರಸರನೆ ಪೈಗಳ ಮನೆಗೆ ಬಂದು ವಿಷಯ ಹೀಗೆ ಹೀಗೆ ಅಂದ. ಇದ್ದಕ್ಕಿದ್ದಂತೆ ಪೈಗಳಿಗೂ ರೇಗಿ ಹೋಯಿತು. ತಾವೊಬ್ಬರೇ ಹಣ ತೆಗೆದುಕೊಂಡಿಲ್ಲ, ರಾಯರೂ ಹಣತೆಗೆದುಕೊಂಡಿದ್ದಾರೆ. ಆದರೆ ನೀನು ನನ್ನ ಹತ್ತಿರವೇ ಬಂದು ಯಾಕೆ ಇದೆಲ್ಲಾ ಹೇಳುತ್ತಿದ್ದೀಯ ಅಂತ ಜೋರು ಮಾಡಿದರು. ನರಹರಿ ಏನು ಹೇಳಿಯಾನು? ಅವನನ್ನು ಅಲ್ಲಿ ಕೂರಿಸಿದವರು ಪೈಗಳೇ. ಈಗ ಹೀಗೆ ಏನೂ ಸಂಬಂಧ ಇಲ್ಲದವರ ಹಾಗೆ ಮಾತಾಡಿದರೆ? ಅದನ್ನೇ ಅವರಿಗೆ ಹೇಳಿದ. ಪೈಗಳು ಈಗ ರೌದ್ರಾವತಾರ ತಾಳಿದರು. ನಿನ್ನ ಹಣ ನಾನು ತಿಂದಿದ್ದೇನಾ? ನಾನು ಹಣ ತೆಗೆದುಕೊಂಡು ಮಜಾ ಮಾಡುತ್ತಿಲ್ಲ. ಕೆಲಸ ಮಾಡುತ್ತಿದ್ದೇನೆ. ಪ್ರತಿ ಸಲ ಲಾಭ ಬರುವುದಿಲ್ಲ. ಏನು ಮಾಡುವುದಕ್ಕೆ ಆಗುತ್ತದೆ ಅಂತೆಲ್ಲಾ ಬಾಯಿ ಬಡಿಯಲು ಆರಂಭಿಸಿದರು. ಹೆಚ್ಚು ಕಷ್ಟವಾದರೆ ಬ್ಯಾಂಕನ್ನು ಮುಚ್ಚಿಬಿಡುತ್ತೇನೆ, ನಿನ್ನದೇನು ಕಾನೂನು? ಅಂತ ಜೋರು ಮಾಡಿದಾದ ಅವನು ಅಲ್ಲಿಂದ ಹೊರಡಲೇಬೇಕಾಯ್ತು.

ಬರುವಾಗ ದಾರಿಯಲ್ಲಿ ಯೋಚಿಸುತ್ತಾ ಬಂದ. ಈ ಪೈಗಳೂ, ಆ ರಾಯರೂ ಹಣ ನುಂಗಿದ್ದಾರೆ. ಆದರೆ ನಾಳೆ ಪೋಲೀಸು, ಅದು, ಇದು ಅಂತ ನಡೆದರೆ ಅವರು ಹೇಗೋ ತಪ್ಪಿಸಿಕೊಳ್ಳುತ್ತಾರೆ. ಸಿಕ್ಕಿಬೀಳುವುದು ನಾನೊಬ್ಬನೇ. ಹೇಳಿ ಕೇಳಿ ನಾನು ಮ್ಯಾನೇಜರ್. ಹಣ ನೀನೇ ಕಟ್ಟು ಅಂತ ಹೇಳಿದರೆ ಏನು ಗತಿ? ನರಹರಿ ಬಾಯಲ್ಲಿ ನೀರಾರಿದಂತಾಯಿತು.

ಬೆಳಗ್ಗೆ ಮಾಸ್ತರು ಪೂಜೆ ಮಾಡುತ್ತಿದ್ದಾಗ ಯಾರೋ ಜೋರಾಗಿ ಬಾಗಿಲು ಬಡಿಯುವ ಶಬ್ದ. ಹೋಗಿ ನೋಡಿದರೆ ಲೋಬೋ. "ಮಾಸ್ತ್ರೇ, ನರಹರಿ ಹಗ್ಗ ಹಾಕೊಂಡಂತೆ." ವಿಷಯ ಕೇಳಿ ಮಾಸ್ತರಿಗೆ ಎದೆ ಒಡೆದಂತಾಯ್ತು. ಬಟ್ಟೆ ಹಾಕಿಕೊಂಡು ಒಂದೇ ಉಸಿರಿಗೆ ಇಬ್ಬರೂ ಬ್ಯಾಂಕಿನ ಕಡೆ ನಡೆದರು. "ನನ್ನ ಇಡೀ ಜೀವನದಲ್ಲಿ ದುಡಿದ ದುಡ್ಡು ಮಾಸ್ತರೇ. ನೆನ್ನೆ ರಶೀದಿ ತೆಕ್ಕೊಳ್ಳದೆ ಬಂದುಬಿಟ್ಟೆವು. ಈಗ ಏನು ಮಾಡಲಿ?" ಲೋಬೋ ಅಕ್ಷರಶಃ ಅಳುತ್ತಿದ್ದರೆ ಮಾಸ್ತರು ಮನಸ್ಸಿನಲ್ಲಿಯೇ ದೇವರಿಗೆ ಹರಕೆ ಹೊತ್ತುಕೊಳ್ಳುತ್ತಿದ್ದರು. ಬ್ಯಾಂಕಿನ ಎದುರು ಜನ ಆಗಲೇ ಬಂದಿದ್ದರು. ಮಾಸ್ತರು ಒಳಗಡೆ ನಡೆದಾಗ ಅಲ್ಲಿ ರಾಯರೂ, ಪೈಗಳೂ ಕಪಾಟಿನಲ್ಲಿರುವ ಎಲ್ಲಾ ಕಾಗದ ಪತ್ರಗಳನ್ನು ತೆಗೆದು ಈಚೆ ಹಾಕುತ್ತಿದ್ದರು. ಮಾಸ್ತರಿಗೆ ಗೊತ್ತಾಯ್ತು. ಇವರು ಆ ಪುಸ್ತಕವನ್ನೇ ಹುಡುಕುತ್ತಿದ್ದಾರೆ. ಆದರೆ ಅವರಿಗೆ ಆ ಕ್ಷಣಕ್ಕೆ ಲೋಬೋವಿನ ದುಡ್ಡಿನದೇ ಚಿಂತೆ.

ತನ್ನ ಮೇಲಿನ ನಂಬಿಕೆಯಿಂದ ದುಡ್ಡು ಇಡಲು ಬಂದಿದ್ದ ಲೋಬೋ. ಅವನಿಗೆ ಮೋಸ ಆಗಬಾರದು. ನರಹರಿಯ ಮೇಜಿನ ಮೇಲಿದ್ದ ಲೆಕ್ಕದ ಪುಸ್ತದ ನೋಡಿದರು. ನರಹರಿ ಲೋಬೋ ಕೊಟ್ಟ ಹಣವನ್ನು ಇನ್ನೂ ಪುಸ್ತಕದಲ್ಲಿ ಬರೆದಿರಲಿಲ್ಲ. ಮಾಸ್ತರಿಗೆ ಹೋದ ಜೀವ ಬಂದಂತಾಯ್ತು. ಕಪಾಟಿನ ಬೀಗ ತೆಗೆದು ನೋಡಿದರೆ ನೆನ್ನೆ ಲೋಬೋ ಕೊಟ್ಟ ಕಟ್ಟು ಹಾಗೆ ಇತ್ತು. ಒಮ್ಮೆಲೇ ಅದನ್ನು ಹೊರಗೆ ತೆಗೆದುಕೊಂಡು ಬಂದು ಲೋಬೋಗೆ ಕೊಟ್ಟಾಗ ಅವರಿಗೆ ಏನೋ ಸಮಾಧಾನ "ಕಷ್ಟ ಪಟ್ಟ ಹಣ ಎಲ್ಲಿಗೂ ಹೋಗೋದಿಲ್ಲ ಲೋಬೋ" ಅಂತ ಹೇಳಿ ಪುನಃ ಬ್ಯಾಂಕಿನ ಒಳಗೆ ಹೋದರು.

ಒಳಗಡೆ ಎಷ್ಟು ಹುಡುಕಿದರು ಅವರಿಗೆ ಆ ಪುಸ್ತಕ ಸಿಗಲಿಲ್ಲ. ಒಂದು ವೇಳೆ ನರಹರಿ ಅದನ್ನು ಪೋಲೀಸರಿಗೆ ಏನಾದರೂ ಕೊಟ್ಟಿರಬಹುದೇ ಅಂತ ಅವರಿಗೆ ಒಮ್ಮೆ ಅನುಮಾನವಾಯ್ತು. ಅದು ಪೋಲೀಸರಿಗೆ ಸಿಕ್ಕಿದರೆ ತಾವು ಅದನ್ನು ಸರಿ ಮಾಡುವುದಾಗಿ ರಾಯರು ಹೇಳಿದರು. ಈಗ ಮುಂದೆ ಏನು ಮಾಡುವುದೆಂದು ಅವರಿಗೆ ದೊಡ್ಡ ಚಿಂತೆ ಆಗಿತ್ತು. ಪೈಗಳೇ ಒಂದು ಉಪಾಯ ಹೇಳಿದರು. ನರಹರಿಯೇ ಬ್ಯಾಂಕಿನ ದುಡ್ಡನ್ನು ತಿಂದಿದ್ದಾನೆಂದು ಹೇಳುವುದು, ಹಿಂದಿನ ದಿನ ನಾವು ಲೆಕ್ಕಪತ್ರ ನೋಡಿ ಅವನಿಗೆ ಬಯ್ದಿದ್ದಕ್ಕೆ ಅವನು ನೇಣು ಹಾಕಿಕೊಂಡ ಅಂತ ಹೇಳುವುದೆಂದು ತೀರ್ಮಾನ ಮಾಡಿದರು. ಜನರ ದುಡ್ಡನ್ನು ಹೇಗೆ ತಿರುಗಿ ಕೊಡುವುದೆಂದು ಮಾಸ್ತರು ಕೇಳಿದಾಗ ಅದನ್ನು ಆಮೇಲೆ ಯೋಚನೆ ಮಾಡುವ ಎಂ[illegible] ಳಿದವರಿಬ್ಬರೂ ಸಮಾಧಾನ ಮಾಡಿದರು .

ಮುಂದೆ ಪೋಲೀಸರಿಗೆ ಅದೇ ರೀತಿ ದೂರು ನೀಡಿದ್ದೂ ಆಯಿತು. ಪೋಲೀಸರು ಕೋರ್ಟಿನಲ್ಲಿ ಕೇಸೂ ಹಾಕಿದರು. ಮಾಸ್ತರಿಗೆ ಇದರಿಂದೆಲ್ಲ ಬಹಳ ಬೇಸರವಾಗಿ ತಮ್ಮ ಹೆಸರಲಿದ್ದ ಸ್ವಲ್ಪ ಜಾಗವನ್ನು ಮಾರಿ, ಬಂದ ದುಡ್ಡನ್ನು ರಾಯರ ಕೈಗೆ ಕೊಟ್ಟು ಬ್ಯಾಂಕಿನಲ್ಲಿ ದುಡ್ಡು ಇಟ್ಟ ಜನರಿಗೆ ಕೊಡಬೇಕೆಂದು ಹೇಳಿದರು. ಕೋರ್ಟಿನಲ್ಲಿ ಕೇಸು ಬಹಳ ಕಾಲ ನಡೆಯಿತು. ಸತ್ತ ನರಹರಿ ದುಡ್ಡು ತಿಂದಿದ್ದರಿಂದ ತಾವು ಜನಕ್ಕೆ ಹಣ ಕೊಡುವುದು ಸಾಧ್ಯವೇ ಇಲ್ಲವೆಂದು ರಾಯರೂ, ಪೈಗಳೂ ಕೋರ್ಟಿನಲ್ಲಿ ಹೇಳಿದರು. ಕೊನೆಗೆ ಇಟ್ಟ ರುಪಾಯಿಗೆ ಎಂ[illegible]ತ್ತು ೖಸೆಯಂತೆ ಬ್ಯಾಂಕಿನವರು ಜನರಿಗೆ ದುಡ್ಡು ವಾಪಸು ಕೊಡಬೇಕೆಂದು ತೀರ್ಮಾನವಾಯಿತು. ಅದೆಲ್ಲಾ ಸಾಧ್ಯವಿಲ್ಲ, ಬೇಕಾದರೆ ಬ್ಯಾಂಕಿನ ಸ್ಥಿರಾಸ್ತಿ ಎಲ್ಲಾ ಹರಾಜು ಹಾಕಿ ಬಂದ ಹಣವನ್ನು ಜನರಿಗೆ ಕೊಡುವುದಾಗಿ ಪೈಗಳು ಕೇಳಿಕೊಂಡರು. ಬೇರೆ ಉಪಾಯವಿಲ್ಲದ್ದರಿಂದ, ಬಂದಷ್ಟು ಬರಲಿ ಅಂತ ಜನರು ನರಹರಿಯನ್ನು ಶಪಿಸುತ್ತಾ ಅದಕ್ಕೇ ಒಪ್ಪಿಕೊಂಡರು.

# <u>ಅಮ್ಮನ ಕ್ಲಬ್ಬು ಮತ್ತು ಮುಂಗಾರು ಮಳೆ</u>

ಇತ್ತೀಚೆಗೆ ಒಂದು ದಿನವೂ 'ಮುಂಗಾರು ಮಳೆ' ಚಿತ್ರದ ಬಗ್ಗೆ ಮಾತಾಡದೆ ಕಳೆಯೋದಿಲ್ಲ. ಈ ಲಿಸ್ಟಿಗೆ ಹೊಸ ಸೇರ್ಪಡೆ ಅಂದರೆ ನನ್ನ ಅಮ್ಮ ಚಿತ್ರ ನೋಡಿ ಬಂದಿದ್ದಾರೆ. ಅರೇ ಇದರಲ್ಲೇನು ಆಶ್ಚರ್ಯ ಇದೆ ಅನ್ನಬೇಡಿ. ಟೀವಿಯಲ್ಲಿ ಬರುವ ನೂರೊಂದು ಸಿನೆಮಾವನ್ನು ಎಂ□ೂ ೋಡದ ಅವರು 'ಮು ಮ' ನೋಡಿ ಬಂದಿದ್ದಾರೆ. ಅದೂ ಅವರನ್ನ ನಾವ್ಯಾರೂ ಕರೆದುಕೊಂಡು ಹೋಗಿಲ್ಲ. ಮಲ್ಲೇಶ್ವರಕ್ಕೂ, ಯಶವಂತಪುರಕ್ಕೂ ಇನ್ನೂ ವ್ಯತ್ಯಾಸ ತಿಳಿಯದ ಅಮ್ಮ ತಮ್ಮ ಲೇಡೀಸ್ ಕ್ಲಬ್ಬಿನ ಮಂದಿಯ ಜೊತೆಗೆ ಹೋಗಿ ಸಿನೆಮಾ ನೋಡಿದ್ದಾರೆ. ವಿಶೇಷವೆಂದರೆ ಅವರ ಕ್ಲಬ್ಬಿನಲ್ಲಿ ಅಮ್ಮನಿಗೇ ಹೆಚ್ಚು ಬೆಂಗಳೂರು ಗೊತ್ತಿರೋದು!
ಅರವತ್ತು ದಾಟಿದ ಭಯಂಕರ ಮಡಿಯ 'ಪಾಟಿ ಅಮ್ಮ', ತನ್ನ ಮನೆ ಎಂ□ ೂಡಲ್ಲೇ ಪರ್ಮನೆಂಟಾಗಿ ಪ್ರತಿಷ್ಠಾಪನೆಗೊಂಡವರಂತೆ ಕಾಣುವ ಕಮಲಕ್ಕ, ಟೀವಿಯಲ್ಲಿ ಬರುವ ಎಲ್ಲಾ ಧಾರವಾಹಿ ಪಾತ್ರಗಳ ಬಗ್ಗೆ ಸ್ವಂತ ಮನೆಯವರ ಹಾಗೆ ಮಾತಾಡುವ ಸುಶೀಲಮ್ಮ - ಇವರೇ ನಮ್ಮ ಅಮ್ಮನ ಕ್ಲಬ್ಬಿನ ಖಾಯಂ ಸದಸ್ಯರು. ಇನ್ನೂ ಕೆಲಮ ಹಂಗಾಮಿ ಸದಸ್ಯರು ಇವರ ಕಮಿಟಿಯಲ್ಲಿ ಇದ್ದಾರೆ. ಕ್ಲಬ್ಬಿನ ಸದಸ್ಯರು ಏನಾದರೂ ಭಯಂಕರ ಸಮಸ್ಯೆ ಎದುರಾದಾಗ ಪರಿಹಾರಕ್ಕಾಗಿ ಈ ಹಂಗಾಮಿ ಸದಸ್ಯರ ಮೊರೆ ಹೋಗುತ್ತಾರೆ.

ಉದಾಹರಣೆಗೆ ಸುಶೀಲಮ್ಮನ ಮಗನಿಗೆ ಈಚೆಗೆ ಮದುವೆ ನಿಶ್ಚಯವಾಯಿತು. ಸೊಸೆ ಮನೆಗೆ ಬಂದ ಮೇಲೆ ಅತ್ತೆಯ ಪಾತ್ರ ಹೇಗಿರಬೇಕೆಂದು ಸಭೆಯಲ್ಲಿ ವಿಸ್ತೃತ ಚರ್ಚೆ ಆಯಿತು. ಇದ್ದುದರಲ್ಲಿ ಪಾಟಿ ಅಮ್ಮನಿಗೆ ಮಾತ್ರ ಸ್ವಲ್ಪ ಅನುಭವ ಇತ್ತು. ಆದರೆ ಅವರಿಗೆ ಮಗ ಇರಲಿಲ್ಲ. ಇದ್ದದ್ದು ಎರಡು ಹೆಣ್ಣು ಮಕ್ಕಳು. ಒಬ್ಬಳು ಅಮೇರಿಕಾದಲ್ಲಿದ್ದರೆ ಇನ್ನೊಬ್ಬಳು ಇಲ್ಲೇ ಇದ್ದಳು. ಪಾಟಿ ಮಗಳ ಮನೆಯಲ್ಲಿಯೇ ಮೊಮ್ಮಕ್ಕಳನ್ನ ನೋಡಿಕೊಂಡು ಇದ್ದರು. ಆದರೆ ಅವರಿಗೂ ಅತ್ತೆಯ ಪಾರ್ಟಿನ ಬಗ್ಗೆ ಅಷ್ಟಾಗಿ ತಿಳಿದಿರಲಿಲ್ಲ.

ಹಾಗಾಗಿ ಕ್ಲಬ್ಬಿನ ಸದಸ್ಯರು ತಮ್ಮ ಸಮಸ್ಯೆಯನ್ನು ಹಂಗಾಮಿ ಸದಸ್ಯರೊಬ್ಬರು ಮುಂದಿಟ್ಟರು. ಅವರು ತಮ್ಮ ನಾಕು ಜನ ಗಂಡುಮಕ್ಕಳಿಗೆ ಮದುವೆ ಮಾಡಿ, ಎಲ್ಲರನ್ನೂ ತಮ್ಮ ಸುತ್ತಲೇ ಇಟ್ಟುಕೊಂಡು ದರ್ಬಾರು ನಡೆಸುತ್ತಿದ್ದ 'ಮಹಾ ಅತ್ತೆ'. ಸುಶೀಲಮ್ಮ ಮತ್ತು ಇತರರಿಗೆ ಅವರು ಭರ್ಜರಿಯಾಗಿಯೇ ಸಲಹೆ ನೀಡಿದರೆಂದು ಅಮ್ಮ ನನಗೆ ಆಮೇಲೆ ಹೇಳಿದ್ದರು. ಹೀಗೆ ಅಮ್ಮನ ಕ್ಲಬ್ಬಿಗೆ ಆಗಾಗ ಹಂಗಾಮಿ ಸದಸ್ಯರ ಎಂ□ ಗುತ್ತಿತ್ತು . ಅವರೆಲ್ಲಾ ಹಂಗಾಮಿ ಯಾಕೆ ಅಂದರೆ ಅವರೆಲ್ಲಾ ಕ್ಲಬ್ಬಿನ ಮುಖ್ಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಿರಲಿಲ್ಲ.

ಅಮ್ಮನ ಕ್ಲಬ್ಬಿನ ಮುಖ್ಯ ಕಾಯಕ ಸಂಜೆಯ ವಾಕಿಂಗ್. ಕ್ಲಬ್ಬಿನ ಖಾಯಂ ಸದಸ್ಯರೆಲ್ಲಾ ಒಂದು ನಾಕುವರೆ ಸುಮಾರಿಗೆ ನಮ್ಮ ಮನೆಯಲ್ಲಿ ಜಮಾಯಿಸುತ್ತಾರೆ. ದೂರದ ಪಾರ್ಕೊಂದಕ್ಕೆ ಹೋಗುವ ಈ ಮಂದಿ ಅಲ್ಲಿ ವಾಕಿಂಗ್ ಮಾಡ್ತಾರಂತೆ. ಅಮ್ಮ ಪ್ರಕಾರ ಇಡೀ ಕ್ಲಬ್ಬಿನ ಮಂದಿ 'ಹತ್ತಕ್ಕಿಂತ ಹೆಚ್ಚು' ರೌಂಡನ್ನು ಸ್ಪೀಡಾಗಿ ಹಾಕ್ತಾರಂತೆ. ಹೋಗುವಾಗ ಇಡೀ ರೋಡೇ ತಮ್ಮದೆನ್ನುವಂತೆ ಜೋರಾಗಿ ಬೊಬ್ಬೆ ಹೊಡೆದುಕೊಂಡು ಹೋಗುವ ಇವರು ಅಲ್ಲಿ ಮಾತಾಡದೆ ಮತ್ತು ಒಟ್ಟಾಗಿ ವಾಕಿಂಗ್ ಮಾಡುತ್ತಾರೆಂದು ನಾನು ಇವತ್ತಿನವರೆಗೂ ನಂಬಿಲ್ಲ.

ಇರಲಿ. ಆದರೆ ಅಮ್ಮನ ಪ್ರಕಾರ ಪಾಟಿ ಅಮ್ಮನ ಕಾಲು ನೋವು ಮತ್ತು ಸುಶೀಲಮ್ಮನ ತೂಕ ಎರಡೂ ಕಮ್ಮಿ ಆಗಿದ್ದು ಈ ವಾಕಿಂಗ್ ಮೂಲಕವೇ. ಪಾರ್ಕೇ ಅಮ್ಮನ ಕ್ಲಬ್ಬಿನ ಕಛೇರಿ. ಅಲ್ಲೇ ಚರ್ಚೆಗಳು ನಡೆಯುತ್ತವೆ, ನಿರ್ಧಾರಗಳು ಮಂಡನೆಯಾಗುತ್ತವೆ ಮತ್ತು ಹಂಗಾಮಿ ಸದಸ್ಯರ 'ಎಂ□□□□ ' ಕೂಡ ನಡೆಯುತ್ತದೆ. ಅಲ್ಲಿ ನಡೆದ ವಿದ್ಯಮಾನಗಳ ಪೂರ್ತಿ ವಿವರ ಅಮ್ಮ ನನ್ನೆದುರು ರಾತ್ರಿ ತೆರೆದಿಡುತ್ತಾರೆ; ಕೆಲವೊಮ್ಮೆ 'ಯಾರಿಗೂ ಹೇಳಬಾರದು' ಎಂ□ಲ್ಲಬ್ಬಿನ ನಿಯಮವನ್ನೂ ಮೀರಿ .

ವಾಕಿಂಗ್ ಮುಗಿಸಿ ಮೂಲೆಯ ಬೆಂಚಿನಲ್ಲಿ ಕೂತು ಇವರ ಸಭೆ ಆರಂಭವಾಗುತ್ತದೆ. ನಾನು ನಂಬಿರುವಂತೆ ಪಾರ್ಕಿಗೆ ಬರುವ ಜನರ ಮೇಲೆ ಕಮೆಂಟ್ ಮಾಡುವ ಮೂಲಕವೇ ಸಭೆ ಶುರುವಾಗುತ್ತದೆ. ಪಿಸುಪಿಸು ಮಾತಾಡುತ್ತಾ ಕೂತ 'ಸಂಸ್ಕಾರ ಇಲ್ಲದ' ಜೋಡಿಗಳು, ಮೊಮ್ಮಕ್ಕಳನ್ನ ಆಡಲು ಕರೆದುಕೊಂಡು ಬರುವ ಅಜ್ಜ-ಅಜ್ಜಿಯರು, ಖಾಯಿಲೆಯಿಂದ ಎದ್ದು ಸುಧಾರಿಸಿಕೊಳ್ಳಲು ಬರುವ ರೋಗಿಗಳು, ಬಸುರಿಯರು - ಇವರೇ ಕ್ಲಬ್ಬಿನ ಸಭೆಯಲ್ಲಿ ಚರ್ಚೆಗೊಳಗಾಗುವವರು.

ಪಾರ್ಕಿಗೆ ಬರುವ ಜನರಿಗೆ ತಮ್ಮಿಂದಾದ ಸಹಾಯ ಮಾಡಲು ಕ್ಲಬ್ಬು ಸಿದ್ಧವಿರುತ್ತದೆ ಎಂ□ ನಗೆ ತಿಳಿದದ್ದು ಇತ್ತೀಚೆಗೆ. ಒಂದು ದಿನ ಅಮ್ಮ ತಮ್ಮ ಹಳೇ ಮರದ ಪೆಟ್ಟಿಗೆಯಿಂದ ಏನೋ ಹುಡುಕುತ್ತಿದ್ದರು. ಏನು ಅಂತ ಕೇಳಿದ್ರೆ "ಪಾರ್ಕಿನಲ್ಲಿ ದಿನಾ ಸಿಕ್ತಾಳೆ ಅಂತ ಹೇಳಿಲ್ವೇನೋ ಆ ಬಸುರಿ ಹೆಂಗಸು. ಅವಳು ಹೆರಲಿಕ್ಕೆ ಊರಿಗೆ ಹೋಗ್ತಾಳಂತೆ.

ಹುಟ್ಟೋ ಮಗುವಿಗೆ ಇರಲಿ ಅಂತ ಬಜೆ ಕೊಡ್ತಿದ್ದೇನೆ. ಅಮ್ಮ ಅಂತೂ ಬೆಬ್ಬೆಬ್ಬೆ ಅಂತ ಮಾತಾಡುತ್ತೆ. ಮಗುವಾದರೂ ಬಜೆ ತಿಂದು ಸ್ಪಷ್ಟವಾಗಿ ಮಾತಾಡಲಿ ಅಂತ"

ಹಾಗೆ ಒಮ್ಮೊಮ್ಮೆ ಪಾರ್ಕಿನಲ್ಲಿ ನಡೆಯುವ ಸಂಗತಿಗಳು ಅಮ್ಮನ ಮೇಲೆ ವಿಶೇಷ ಪ್ರಭಾವ ಬೀರುತ್ತವೆ. ಮೊನ್ನೆ ಇದ್ದಕ್ಕಿದ್ದಂತೆ ಅವರು "ನನಗೆ ಎಲ್ಲಾ ಚೆಕ್ ಮಾಡಿಸಬೇಕು ಕಣೋ" ಅಂದರು. ಆಯ್ತೂಂತ ಎಲ್ಲಾ ಟೆಸ್ಟ್ ಮಾಡಿಸಿ ಆಯ್ತು. ಕೊನೆಗೆ ಅಮ್ಮ "ಕ್ಯಾನ್ಸರ್ ಟೆಸ್ಟೂ ಮಾಡ್ತಾರೇನೋ ಇಲ್ಲಿ. ಅದೂ ಮಾಡಿಸಬೇಕು ನನಗೆ" ಅಂದರು. ಅಲ್ಲಿ ಮಾತಾಡೋದು ಒಳ್ಳೇದಲ್ಲ ಅಂತ ಅದನ್ನೂ ಮಾಡಿಸಿ ಆಯಿತು. ರಿಪೋರ್ಟ್ ಎಲ್ಲಾ ಒಕೆ ಅಂತ ಬಂದ ಮೇಲೆ ಅಮ್ಮನಿಗೆ ಸಮಾಧಾನ ಆಯಿತೂಂತ ಕಾಣ್ತದೆ ಅದ್ದಕ್ಕೆ ಬಾಯಿಬಿಟ್ಟರು "ಅಲ್ಲಾ ಪಾರ್ಕಿಗೆ ಬರ್ತಾ ಇದ್ದ ನನ್ನದೇ ವಯಸ್ಸಿನ ಹೆಂಗಸು ಮೊನ್ನೆ ಕ್ಯಾನ್ಸರ್ ನಿಂದ ಸತ್ತು ಹೋದಳಂತೆ. ಅದಕ್ಕೆ ನಾನೂ ಚೆಕ್ ಮಾಡಿಸಿಕೊಂಡಿಸಿದ್ದು". ಆಮೇಲೆ ತಿಳಿದ ವಿಷಯವೆಂದರೆ ಅಮ್ಮನ ಕ್ಲಬ್ಬಿನ ಎಲ್ಲಾ ಸದಸ್ಯರೂ ಕಾಲಕಾಲಕ್ಕೆ ಟೆಸ್ಟ್ ಮಾಡಿಸಬೇಕೆಂದು ಠರಾಮ ಪಾಸಾಗಿತ್ತಂತೆ.

ಕ್ಲಬ್ಬಿನ ಸದಸ್ಯರು ವಾಕಿಂಗ್ ಮುಗಿಸಿ ಪಾರ್ಕಿನಲ್ಲಿ 'ಗರಿಕೆ ಹುಲ್ಲು' ಕುಯ್ಯಲು ಶುರು ಮಾಡುತ್ತಾರೆ. ಅಮ್ಮನ ಪ್ರಕಾರ ಇದು ಕ್ಲಬ್ಬಿನ ಅತೀ ದೊಡ್ಡ ಸಾಧನೆ. ಮೊದಮೊದಲು ಅಲ್ಲಿದ್ದ ಸೆಕ್ಯೂರಿಟಿ ಮನುಷ್ಯ ಇವರಿಗೆ ಗರಿಕೆ ಕೊಯ್ಯಲು ಅಡ್ಡಿಪಡಿಸುತ್ತಿದ್ದನಂತೆ. ಆದರೆ ಅಮ್ಮ ಮತ್ತವರ ಗುಂಪಿನವರು ಗರಿಕೆ ಹುಲ್ಲಿನ ಮಹಾತ್ಮ್ಯವನ್ನು ಅವನಿಗೆ ತಿಳಿಹೇಳಿ ಅವನಿಂದ ಬರುವ ವಿರೋಧವನ್ನು ಶಮನ ಮಾಡಿದ್ದರು. ಅಮ್ಮನ ಪ್ರಕಾರ ಈಗ ಕ್ಲಬ್ಬಿನ ಸದಸ್ಯರು ಯಾರಾದರು ಪಾರ್ಕಿಗೆ ಬರದಿದ್ದರೆ ವಿಚಾರಿಸುವಷ್ಟರ ಮಟ್ಟಿಗೆ ಸೆಕ್ಯೂರಿಟಿ ಇವರಿಗೆ ಪರಿಚಯವಾಗಿಬಿಟ್ಟಿದ್ದ.

ಪಾರ್ಕಿನ ಗರಿಕೆ ಸೇರುವುದು ಹತ್ತಿರದ ಗಣಪನಿಗೆ. ಕ್ಲಬ್ಬಿನ ಸದಸ್ಯರು ಪಾರ್ಕಿನಲ್ಲಿ 'ವಾಕಿಂಗ್' ಮುಗಿಸಿ ಈ ದೇವಸ್ಥಾನಕ್ಕೆ ಬರುತ್ತಾರೆ. ಅಲ್ಲಿ ಪ್ರಸಾದ ತಿಂದು ಮುಂದೆ ಮಾರ್ಕೆಟ್ ಗೆ ಪ್ರಯಾಣ. ಅಮ್ಮ ಒಮ್ಮೆ ಗುಟ್ಟಾಗಿ ಹೇಳಿದ ಪ್ರಕಾರ ಯಾರಿಗಾದರೂ ಹೆಚ್ಚು ಹಸಿವಾದ ದಿವಸ ಹತ್ತಿರದ ಅಂಗಡಿಯಲ್ಲಿ ಕ್ಲಬ್ಬಿನ ಸದಸ್ಯರು ಪಾನಿ-ಪುರಿ ತಿನ್ನುವುದೂ ಉಂಟು. ಮತ್ತು ನನಗೆ ಬಂದ ಮಾಹಿತಿಯ ಪ್ರಕಾರ ದಿನವೂ ಯಾರಿಗಾದರೂ ಹಸಿವು ಬಂದೇ ಬರುತ್ತದೆ. ಮಾರ್ಕೆಟ್ ನಲ್ಲಿ ಎಲ್ಲರೂ ಒಟ್ಟಾಗಿ ಪಾಪದ ತರಕಾರಿಯವರ ತಲೆ ತಿಂದು ಬ್ಯಾಗ್ ತುಂಬಿಸಿಕೊಂಡು ಮನೆಗೆ ಬರ್ತಾರೆ.

ನೋಡಿ ಅಮ್ಮ 'ಮು ಮ' ಗೆ ಹೋದ ಕತೆ ಹೇಳಲು ಹೊರಟವನು ಏನೋ ಬೇರೆ ಪ್ರವರ ಹೇಳಿಕೊಂಡು ಕೂತೆ. ಒಕೆ ವಿಷ್ಯ ಏನಂದರೆ ಅಮ್ಮನಿಗೆ 'ಮು ಮ' ನೋಡಬೇಕೆಂದು ಒಂದು ದಿನ ಅನಿಸಿಬಿಟ್ಟಿತು. ಅದು ಹೇಗೆ ಅಂದು ಒಂದೇ ಒಂದು ಉಪಕತೆ ಹೇಳಿ ಮೈನ್ ಸ್ಟೋರಿಗೆ ಬರ್ತೀನಿ, ಕ್ಷಮಿಸಿ.

ಅಮ್ಮ ಗಮನ ಇಟ್ಟು ನೋಡೋ ಒಂದೇ ಕಾರ್ಯಕ್ರಮ ಅಂದರೆ 'ಶುಭಾಷಯ'. ಅದರಲ್ಲಿ ಬರುವ ಮಕ್ಕಳ ಭಾವಚಿತ್ರ ನೋಡಿಕೊಂಡು ಅದರ ಮೇಲೆ ರನ್ನಿಂಗ್ ಕಮೆಂಟರಿ ಕೊಡುವುದು ಅವರ ಹಳೇ ಅಭ್ಯಾಸ. "ನೋಡೋ ಎಷ್ಟು ಚೆನ್ನಾಗಿದೆ ಮಗು", "ನಮ್ಮ ವಿನೋದನ ಮಗು ಇದೇ ತರ ಇದೆ ಅಲ್ವೇನೋ", "ದೊಡ್ಡದಾದ ಮೇಲೆ ಘಾಟಿ ಹುಡುಗಿ ಆಗುತ್ತೆ ಕಣೋ ಈ ಮಗು" ಅಂತ ನನಗೆ ಹೇಳುವುದು ಅವರಿಗೆ ರೂಢಿ. ನಾನು ಹಾಂ, ಹೂಂ ಅನ್ನದಿದ್ದರೆ "ಛೇ ಚಡ್ಡಿ ಇಲ್ಲದೇ ಫೋಟೋಕ್ಕೆ ನಿಂತಿದ್ದೀಯಾ ಕಳ್ಳ", "ಕೆಮರಾ ನೋಡಿ ನಗಾಡೋ ಪುಟ್ಟ" ಅಂತ ಟೀವಿಯಲ್ಲಿ ಕಾಣುವ ಮಕ್ಕಳ ಜೊತೆನೇ ಮಾತಾಡೋದು ಅವರಿಗೆ ಮಾತ್ರ ಒಲಿದ ವಿಶೇಷ ವಿದ್ಯೆ.

ಹೀಗೆ ಮಕ್ಕಳ ಮೇಲೆ ಕಮೆಂಟ್ ಮಾಡುವ ಅವರಿಗೆ ಇನ್ನೊಂದು ಅಭ್ಯಾಸವೂ ಇದೆ. ಅದೆಂದರೆ ಶುಭಾಷಯ ಹೇಳುವವರ ಪಟ್ಟಿಯನ್ನು ಗಮನ ಇಟ್ಟು ಕೇಳುವುದು. ಅದು ಬೇರೆ ಬೇರೆ ತರಹದ ಭಾವನೆಯನ್ನು ಅವರಲ್ಲಿ ಮೂಡಿಸುತ್ತದೆ. ಪಟ್ಟಿಯಲ್ಲಿ ಕುಟುಂಬದ ಎಲ್ಲರ ಹೆಸರಿದ್ದರೆ ಅಮ್ಮನಿಗೆ ಏನೋ ಖುಷಿ. "ತುಂಬು ಸಂಸಾರದ ಮಗು ಕಣೋ. ಅದೃಷ್ಟವಂತ ಮಗು" ಅನ್ನೋದು ಸ್ಟಾಂಡರ್ಡ್ ಮಾತು. ಇನ್ನು ನಮ್ಮ ಊರಿನ ಹೆಸರು ಅಪ್ಪಿ ತಪ್ಪಿ ಬಂದರಂತೂ ಮುಗೀತು. "ಯಾರೋ ಇದು. ಅವರ ಮಗನಾ....ಆ ಮೂಲೆ ಮನೆಯವರ ತಮ್ಮನಾ...." ಅಂತ ಅವರು ಭಯಂಕರ ಯೋಚನೆಗೆ ಬಿದ್ದುಬಿಡುತ್ತಾರೆ.

ಇದೆಲ್ಲಾ ಮುಗಿದು ಅದರಲ್ಲಿ ಹಾಡು ಶುರುವಾದ ಕೂಡಲೆ ಅವರು ಪರಾರಿ. ಅವರ ಮಟ್ಟಿಗೆ ಈ ಕಾರ್ಯಕ್ರಮ ಕೇವಲ ಮಕ್ಕಳ ಭಾವಚಿತ್ರ ಮತ್ತು ಶುಭಾಷಯ ಕೋರುವವರಿಗಷ್ಟೇ ಸೇರಿದ್ದು. ಮತ್ತೆ ಹಾಡು ಮುಗಿದ ತಕ್ಷಣ ಅವರು ಮತ್ತೆ ಟೀವಿಯ ಮುಂದೆ ಹಾಜರ್. ಹೀಗೆ ಪ್ರತಿನಿತ್ಯ ನಡೆಯುವ ದಿನಚರಿಯಲ್ಲಿ ಬದಲಾವಣೆ ಬಂದದ್ದು 'ಮು ಮ' ದ ಹಾಡ ದಿನವೂ ಎಡೆಬಿಡದೆ ಬರಲು ಶುರು ಆದಾಗ. ಅಷ್ಟರಲ್ಲಿ ನಾನು 'ಮು ಮ' ವನ್ನ ನೋಡಿ, ನೋಡಿ, ನೋಡಿ (!)

ಬಂದು ಸಿನೆಮಾ ಹಾಗಿದೆ, ಸಿನೆಮಾ ಹೀಗಿದೆ ಅಂತೆಲ್ಲಾ ಹೇಳ್ತಾ ಇದ್ದೆ. ಹ್ಯಾಗೋ ಅವರ ಮನಸಿನಲ್ಲಿ ಸಿನೆಮಾ ನೋಡಬೇಕೆಂದು ಬಂದಿದೆ.

ನೆನ್ನೆ ಸಂಜೆ ಮನೆಗೆ ಬರ್ತೀನಿ ಅಮ್ಮ ಭಯಂಕರ ಖುಷಿಯಲ್ಲಿದ್ದಾರೆ. ಕಾಲು ತೊಳೆದು ಮನೆ ನುಗ್ಗಿದ ತಕ್ಷಣ ಜೋರಾಗಿ "ಹೇ ನಾನು ಮುಂಗಾರು ಮಳೆ ನೋಡಿ ಬಂದೆ ಕಣೋ" ಅಂದಾಗ ನನಗೆ ಹೇಗಾಗಿರಬೇಡ. ಯಾರ ಜೊತೆ ಅಂದರೆ "ನೀನು ಹೇಳ್ತಾ ಇರ್ತೀಯಲ್ಲಪ್ಪಾ ಲೇಡೀಸ್ ಕ್ಲಬ್ ಅಂತ. ನಾವೇ ಕ್ಲಬ್ಬಿನ ಮೆಂಬರ್ಸ್ ಎಲ್ಲಾ ಸೇರಿ ಹೋಗಿದ್ದೆವು" ಅಂದಾಗ ನಾನು ಇನ್ನೂ ಸಂದೇಹದಿಂದಲೇ ಇದ್ದೆ. ಅದನ್ನು ಗಮನಿಸಿದವರಂತೆ ಅಮ್ಮ "ಪಾಪ ಆ ದೇವದಾಸ ಸಾಯಬಾರ್ದಿತ್ತು ಕಣೋ" ಅಂದಾಗ ನಾನು ವಿಷಯ ನಂಬದೇ ವಿಧಿ ಇರಲಿಲ್ಲ. ಹೇಗಾಯ್ತಪ್ಪಾ ಈ ಪವಾಡ ನಿಮ್ಮ ಕ್ಲಬ್ಬಿನಿಂದ ಅಂತ ಕೇಳಿದಾಗ ಅಮ್ಮ ತೆರೆದಿಟ್ಟ ಕತೆ ಹೀಗಿತ್ತು.

ಅಮ್ಮನ ಕ್ಲಬ್ಬಿನ ಹಂಗಾಮಿ ಸದಸ್ಯರಲ್ಲಿ ರೋಸಿ ಬೋಪಯ್ಯ ಕೂಡ ಒಬ್ಬರು. ನಮ್ಮ ಊರಿನವರೇ ಆದ ರೋಸಿಯವರಿಗೆ ಅಮ್ಮನ ಕ್ಲಬ್ಬಿನಲ್ಲಿ ವಿಶೇಷ ಮರ್ಯಾದೆ ಇತ್ತು. ಯಾಕೆಂದರೆ ಅವರು ಅಮ್ಮನ ಕ್ಲಬ್ಬಿನವರನ್ನು ಮನೆಗೆ ಕರೆದಾಗ ಅವರಿಗೆಲ್ಲಾ ಬೆಳ್ಳಿ ಲೋಟದಲ್ಲಿ ಹಾಲು ಕೊಟ್ಟಿದ್ದರಂತೆ. ಬ್ರಾಹ್ಮಣರೆಂದರೆ ಇವತ್ತಿಗೂ ಇಷ್ಟು ಗೌರವ ಕೊಡುವವರು ಇದ್ದಾರಲ್ಲಾ ಅಂತ ಅಮ್ಮನಿಗೆ ಅವರ ಮೇಲೆ ವಿಶೇಷ ಪ್ರೀತಿ. ಹೀಗೆ ಒಂದು ದಿನ ಅವರು 'ಮು ಮ' ಬಗ್ಗೆ ಕ್ಲಬ್ಬಿನವರಿಗೆ ಹೇಳಿದ್ದಾರೆ. ಅವರು ಹೇಳಿದ ವಿಷಯದಲ್ಲಿ ಅಮ್ಮನ ತಲೆಯಲ್ಲಿ ಉಳಿದದ್ದು ಒಂದೇ. 'ಮು ಮ' ಯಲ್ಲಿ ಮಳೆಯನ್ನ ಭಯಂಕರವಾಗಿ ತೋರಿಸಿದ್ದಾರೆ ಅಂತ.

ಸಾಮಾನ್ಯವಾಗಿ ಕೊಡಗಿನಿಂದ ಬಂದವರಿಗೆ ಮಳೆಯ ಬಗ್ಗೆ ವಿಶೇಷ ಪ್ರೀತಿ ಇದ್ದೇ ಇರುತ್ತದೆ. ಅಮ್ಮನಿಗೂ ಮಳೆ ಅಂದರೆ ಒಂಥರಾ ಇಷ್ಟ. ಕೊಡಗಿನಲ್ಲಿ ಇದ್ದಾಗ ನಿಲ್ಲದ ಮಳೆಗೆ ಯಾವಾಗಲೂ ಬಯ್ಯುತ್ತಿದ್ದವರು ಈಗ ಇಲ್ಲಿ ಬಂದು ಮಳೆ ನೋಡದೆ ಬೇಸರವಾಗಿದ್ದರು. ಮಳೆಗಾಲಕ್ಕೆ ಅಂತ ಹಪ್ಪಳ, ಸಂಡಿಗೆ ಹಾಕುವ ಕೆಲಸ ಅವರು ಈಗಲೂ ಇಲ್ಲೂ ಬಿಟ್ಟಿಲ್ಲ. ಈ ಬೆಂಗಳೂರಿನಲ್ಲಿ ಬರುವ ಮಳೆಗೆ ಹಪ್ಪಳ ಕಾಯಿಸಿ ತಿನ್ನೋಕ್ಕಾಗುತ್ತಾ? ಮಳೆ ಬಂತೂಂತ ಹಪ್ಪಳ ಕಾಯಿಸಲು ಕೂತರೆ ಎಣ್ಣೆ ಕಾಯುವ ಮೊದಲೇ ಮಳೆ ನಿಂತಿರುತ್ತದೆ. ಹಾಗಾಗಿ ಅಮ್ಮ ಒಳ್ಳೆ ಮಳೆ ನೋಡಲು ಕಾತರರಾಗಿದ್ದು ಸತ್ಯ.

ಮೊದಲೇ ಶುಭಾಷಯ ಕಾರ್ಯಕ್ರಮದಲ್ಲಿ 'ಮು ಮ' ಹಾಡನ್ನು ನೋಡಿ ಹೇಗೋ ಇಂಪ್ರೆಸ್ ಆಗಿದ್ದ ಅಮ್ಮನಿಗೆ ಮಳೆಯ ಮಾತು ಕೇಳಿ ಕಿವಿ ನಿಮಿರಿದೆ. ಅಮ್ಮ ಆಗಾಗ ಕ್ಲಬ್ಬಿನ ಸದಸ್ಯರಿಗೆ ಕೊಡಗಿನ ಮಳೆ ಬಗ್ಗೆ ಹೇಳಿದ್ದರಂತೆ. "ಇಲ್ಲಿ ಏನ್ರೀ ಮಳೆ. ಮಳೆ ಬರುತ್ತೆ ನಮ್ಮ ಊರಲ್ಲಿ" ಅಂತೆಲ್ಲಾ ಅಮ್ಮ ಮಳೆ ಪ್ರವರ ಹೇಳಿದ್ದಾರೆ. ಊರಿಂದ ಯಾರಾದರೂ ಫೋನ್ ಮಾಡಿ ಮಳೆ ಬರ್ತಾ ಇದೆ ಅಂದರೆ ಅಮ್ಮನ ಮುಖ ಬಾಡಿ ಹೋಗುತ್ತಿತ್ತು. ನನಗನ್ನಿಸ್ತಾ ಇದ್ದ ಹಾಗೆ ಅವರು ಮಳೆಯನ್ನ ಭಯಂಕವಾಗಿ ಮಿಸ್ ಮಾಡ್ತಾ ಇದ್ದರು.

ಅಮ್ಮನಿಗೆ ಕ್ಲಬ್ಬಿನ ಸದಸ್ಯರೆಲ್ಲರಿಗೆ ತಮ್ಮೂರಿನ ಮಳೆ ತೋರಿಸಬೇಕು ಅಂದುಕೊಂಡಿದ್ದರಂತೆ. ಆದರೆ ತಮ್ಮ ತಮ್ಮ ಕೆಲಸದಲ್ಲಿ ಮುಳುಗಿದ್ದ ಅವರೆಲ್ಲಾ ಊರಿಗೆ ಬರುವ ಮಾತು ದೂರವೇ ಉಳಿದಿತ್ತು. ಹೀಗಿದ್ದಾಗ 'ಮು ಮ' ಸಿನೆಮಾದಲ್ಲಿ ಮಳೆ ಇದೆ ಅಂದಾಗ ಅವರಿಗೆ ಎಲ್ಲರಿಗೂ ಮಳೆ ತೋರಿಸುವ ಆಸೆಯಾಗಿದೆ. ಹಾಗಾಗಿ ಕ್ಲಬ್ಬಿನ ಮೀಟಿಂಗನ್ನು ಅರ್ಜೆಂಟಾಗಿ ನೆನ್ನೆ ಬೆಳಗ್ಗೆ ೧೧.೦೦ ಗಂಟೆಗೆ ಕರೆದಿದ್ದಾರೆ. ಎಲ್ಲರೂ ನಮ್ಮ ಮನೆಗೆ ಬಂದ ಮೇಲೆ ಸಿನೆಮಾಗೆ ಹೋಗುವ ತಮ್ಮ ಐಡಿಯಾ ತಿಳಿಸಿದ್ದಾರೆ. ಅದೇನಾಯ್ತೋ ಎಲ್ಲರೂ ಒಕೆ ಅಂದಿದ್ದಾರೆ. ಆದರೆ ಹೋಗೋಕೆ ಯಾರಿಗೆ ಗೊತ್ತಿದೆ ದಾರಿ!

ಹಾಗೂ ಹೀಗೂ ಮೆಜೆಸ್ಟಿಕ್ ನ ಯಾವುದೋ ಥಿಯೇಟರ್ ನಲ್ಲಿ 'ಮು ಮ' ಇದೆ ಅಂತ ಅಮ್ಮನಿಗೆ ಗೊತ್ತಿತ್ತು. ಆದರೆ ಯಾವ ಥಿಯೇಟರ್ ಅಂತ ಅವರಿಗೆ ಗೊತ್ತಿರಲಿಲ್ಲ. ಬೇರೆಯ ಸದಸ್ಯರು ಅಮ್ಮನಿಗಿಂತ ಬುದ್ದಿವಂತರು. ಹಾಗಾಗಿ ಕೇಳಿ ನೋಡಿ ಗೊತ್ತಿರದ ಥಿಯೇಟರ್ ನಲ್ಲಿ 'ಮು ಮ' ನೋಡಲು ಈ ಕ್ಲಬ್ಬಿನ ಮೆಂಬರುಗಳು ನಿರ್ಧರಿಸಿದ್ದಾರೆ. ಕೊನೆಗೆ ಅಮ್ಮ ಪೇಪರ್ ನೋಡಿ ಇಂತಾ ಥಿಯೇಟರ್ ಅಂತ ಖಚಿತಪಡಿಸಿಕೊಂಡಿದ್ದಾರೆ. ಮೆಚ್ಚಬೇಕಲ್ವಾ ಇವರ ಧೈರ್ಯ!!

ಶಾಲೆಯಿಂದ ಬರುವ ಮೊಮ್ಮಕ್ಕಳನ್ನ ನೋಡಿಕೊಳ್ಳಲು ಪಕ್ಕದ ಮನೆಯವರಿಗೆ ಪಾಟಿ ಅಮ್ಮ ಹೇಳಿ ಬಂದರು. ಸುಶೀಲಮ್ಮನಿಗೆ ಸೊಸೆ ಇರುವುದರಿಂದ ತೊಂದರೆ ಇರಲಿಲ್ಲ. ಕಮಲಕ್ಕ ಮೊದಲು ಒಪ್ಪಲಿಲ್ಲವಂತೆ. ಆದರೆ ಗಂಡ ಬರುವ ಮೊದಲು ನಾವು ಬಂದುಬಿಡ್ತೇವೆ ಅಂತ ಪುಸಲಾಯಿಸಿ ಕರೆದುಕೊಂಡು ಹೋದರಂತೆ. ಪಾಟಿಯೇ ಹೊರಟ ಮೇಲೆ ಕಮಲಕ್ಕನೂ ಧೈರ್ಯ ಮಾಡಿ ಹೊರಟರಂತೆ. ಹೀಗೆ ಈ ನಾಕೂ ಜನ ಆಟೋ ಸ್ಟಾಂಡಿಗೆ ಬಂದು ತಮ್ಮನ್ನು 'ಮು ಮ' ನಡೆಯುವ ಮೆಜೆಸ್ಟಿಕ್ಕಿನ ಥಿಯೇಟರಿಗೆ ಕರೆದುಕೊಂಡು ಹೋಗುವಂತೆ ತಾಕೀತು ಮಾಡಿದೆ.

ಅಲ್ಲಿ ಹೋಗಿ ಭರ್ಜರಿಯಾಗಿಯೇ ಸಿನೆಮಾ ನೋಡಿದ್ದಾರೆ. ಇಂಟರ್ವೆಲ್ ನಲ್ಲಿ ಸಕತ್ತಾಗಿಯೇ ಖರ್ಚು ಮಾಡಿ ವಾಪಸ್ ಬಂದ ಅಮ್ಮನಿಗೆ ಕೊನೆವರೆಗೂ ನೆನೆಪಿನಲ್ಲಿ ಉಳಿದದ್ದು ಮಳೆ ಮತ್ತು ದೇವದಾಸ ಮಾತ್ರ. ದೇವದಾಸ ಸತ್ತಿದ್ದು ಸಾಂಕೇತಿಕ. ಅದಿಲ್ಲದೆ ಕತೆ ಮುಗಿಯುಮದಕ್ಕೆ ಸಾಧ್ಯವಿರಲಿಲ್ಲ ಅಂತ ಅವರಿಗೆ ಹೇಳೋಕೆ ಆಗ್ತಾ ಇಲ್ಲ. "ಊರಿನ ಮಳೆಯನ್ನ ನೋಡಿ ಖುಷಿ ಆಯ್ತು ಕಣೋ" ಅಂತ ಅಮ್ಮ ನನ್ನಯಿಂದ ಹೇಳುತ್ತಿದ್ದಾರೆ. ಅದು ಕೊಡಗಿನ ಮಳೆಯಲ್ಲ ಅಂತ ಅವರಿಗೆ ಹೇಳಲು ಮನಸ್ಸು ಒಪ್ತಾ ಇಲ್ಲ. ಮತ್ತೆ ಸುರಿವ ಮಳೆಗೆ ಊರಿನ ಹೆಸರು ಸೇರಿಸಬೇಕಾ? ಅಂತಾನೂ ಅನ್ನಿಸ್ತಾ ಇದೆ.

ಸುಡುವ ಬಿಸಿಲು ಶುರು ಆಗಿದೆ. ಇಂತಹ ಸಮಯದಲ್ಲಿ ತಂಪಿನ ಸಿನೆಮಾ ಕೊಟ್ಟು ಅಮ್ಮ ಮತ್ತವರ ಕ್ಲಬ್ಬಿನ ಮೆಂಬರುಗಳನ್ನು ಥಿಯೇಟರ್ ಮೆಟ್ಟಲು ಹತ್ತುವಂತೆ ಮಾಡಿ, ಅಮ್ಮನಿಗೆ ಬೆಂಗಳೂರಿನಲ್ಲೇ ಕೊಡಗು ತೋರಿಸಿಕೊಟ್ಟ ಭಟ್ಟರಿಗೊಂದು ಥ್ಯಾಂಕ್ಸ್ ಇರಲಿ.

## ರಾಜೀನಾಮೆ
Thursday, March 01, 2007

"ಹೇ! ನಿನಗೆ ಹೊಸ ವಿಷಯ ಗೊತ್ತಾಪ್ಪಾ"
"ನೀನು ಬಂದಿದ್ಯಾ ಅಂದ್ರೆ ನನಗೆ ಗೊತ್ತಿಲ್ಲದ್ದು ನಿನಗೆ ಏನೋ ಗೊತ್ತಿದೆ ಅಂತಾಯ್ತು"
"ನಿನ್ಗೆ ನಿಜವಾಗಲು ಗೊತ್ತಿಲ್ವಾಪ್ಪಾ"
"ಅಯ್ಯೋ ರಾಮ. ಏನು ವಿಷಯ ಅಂತ ನನಗೆ ಗೊತ್ತಿಲ್ಲ ಕಣೋ. ಹೇಳಿ ಒಮ್ಮೆ ತೊಲಗು. ಕೆಲಸ ಇದೆ ಇಲ್ಲಿ"
"ಯೇ, ನಂಗೊತ್ತಿಲ್ವಾ ನಿನ್ನ ಕೆಲಸ. ಆದ್ರೆ ವಿಷಯ ಸೀರಿಯಸ್ ಇದೆಯಪ್ಪಾ"
"ಪೀಠಿಕೆ ಸಾಕು. ವಿಷಯಕ್ಕೆ ಬಾ"
"ಹೇಳೇಬಿಡ್ಲಾ....ಕೇಳಿ ನೀನು ಸುಸ್ತಾಗ್ತೀಯಪ್ಪಾ.."
"ಜಜ್ಜಿ ಹಾಕ್ತೀನಿ ನೋಡು ಈಗ ಬಾಯಿಬಿಡದಿದ್ರೆ"
"ಕೋಪ ಬೇಡಪ್ಪಾ...ಕೇಳು ಹೊಸ ವಿಷಯ. ಬಾಸು....ರಾಜೀನಾಮೆ ಕೊಟ್ಟಿದ್ದಾರೆ"
"ಏನು....?"
"ಹೌದಪ್ಪಾ..ಬಾಸು ಇವತ್ತಿನಿಂದ ಕೆಲಸಕ್ಕೆ ಬರಲ್ಲ"
"ಥೆ ಹೋಗೋ. ಹುಚ್ಚುಚ್ಚು ಮಾತಾಡ್ಬೇಡ. ಬಾಸ್ ಯಾಕೆ ಕೆಲಸ ಬಿಡ್ಬೇಕು"
"ಆಯ್ತಪ್ಪಾ, ನನ್ನ ಮಾತಿನ ಮೇಲೆ ನಂಬಿಕೆ ಇಲ್ವಲ್ಲಾ ನಿಂಗೆ. ಹೋಗಿ ಅವರ ಕುರ್ಚಿ ನೋಡು"
"ಲೇಟ್ ಬರಬಹುದು. ಅದಕ್ಕೆ ಈ ಸುದ್ದಿನಾ?"
"ನೋಡಪ್ಪಾ ಅವರು ಯಾವತ್ತಾದರೂ ಲೇಟ್ ಬಂದಿದ್ದುಂಟಾ?"
"ಏನೋ ಹುಷಾರಿಲ್ಲದೆ ಇರಬಹುದು. ಮದುವೆ, ಮುಂಜಿ ಯೇನಾದ್ರೂ....."
"ಏ ನೀನು ಸುಮ್ಮನೆ ಗೊತ್ತಿಲ್ಲದವನ ಹಾಗೆ ಮಾತಾಡಬೇಡಪ್ಪಾ. ಅವರ ಮಗಳ ಮದುವೆಯನ್ನೇ ರಜಾ ದಿನದಲ್ಲಿ ಮಾಡಿದ್ದರು. ಗೊತ್ತಿಲ್ವಾ ನಿನಗೆ. ಇಲ್ಲಿಗೆ ಬರದೆ ಒಂದು ದಿನವಾದರೂ ಮನೇಲಿ ಬಾಸ್ ಯಾವತ್ತಾದರೂ ಕೂತಿದ್ದಾರಾ?"
"ನಾನು ನೋಡಿದ ಹಾಗೆ...... ಇಲ್ಲ"
"ಮತ್ತೆ ನಾನು ಏನು ಬಾಯಿ ಬಡಿತಿರೋದಪ್ಪಾ. ಬಾಸು ಪರ್ಮನೆಂಟಾಗಿ ಮನೆಗೆ ಹೋಗಿದ್ದಾರೆ"
"ಆದ್ರೂ ನಂಬಕ್ಕಾಗೊಲ್ಲ. ಬಾಸ್ ರಾಜೀನಾಮೆ ಕೊಡ್ತಾರಾ"
"ಕೊಟ್ಟಿದ್ದಾರೆ. ಅದಕ್ಕೇ ಇವತ್ತು ಈ ಕಡೆ ತಲೆ ಹಾಕಿಲ್ಲಪ್ಪಾ"
"ಏ, ನೀನು ಹೇಳೋದು ಸತ್ಯ ತಾನೇ?"
"ತೆಗೋಪ್ಪಾ. ನಾನ್ಯಾಕಪ್ಪಾ ಸುಳ್ಳು ಹೇಳ್ಲಿ. ನಂಬಿದ್ರೆ ನಂಬಪ್ಪಾ...ಇಲ್ಲದಿದ್ರೆ ನಿನ್ನಿಷ್ಟ"
"ಆಯ್ತು ಬಾಸ್ ರಾಜೀನಾಮೆ ಕೊಟ್ಟಿದ್ದು ಸತ್ಯ ಅಂತ ಇಟ್ಕೋಳೋಣ. ಮುಂದೇನು"
"ಅಂದ್ರೆ ಏನಪ್ಪಾ?"
"ಅಂದ್ರೆ ಮುಂದೆ ನಮಗೆಲ್ಲಾ ಯಾರು ದಿಕ್ಕು ಅಂತ"
"ಅಯ್ಯಾ, ನಿಂದೊಳ್ಳೆ ಆಯ್ತಲ್ಲಾ. ಹೊಸ ಬಾಸು ಬರ್ತಾರೆ ಅಷ್ಟೇ"
"ಆದ್ರೂ ಬಾಸ್ ಅಂದ್ರೆ ಅವ್ರೇ ಕಣೋ. ಏನೊಳ್ಳೆಯವ್ರಾಗಿದ್ರು. ಥೇ! ಅವರ್ಯಾಕೆ ಹೋದ್ರು"
"ನನಗೇನಪ್ಪಾ ಗೊತ್ತು. ಕಂಡುಹಿಡಿ ಮತ್ತೆ ನೋಡುವ"
"ಹೊಸ ಬಾಸ್ ಏನಾದ್ರೂ ಬರ್ತಾರೇಂತ ಸುದ್ದಿ ಇದ್ಯಾ?"
"ಹೋಗಪ್ಪಾ..ಈ ಬಾಸು ಹೋಗಿರೋದೇ ತುಂಬ ಜನಕ್ಕೆ ಗೊತ್ತಿಲ್ಲ. ಇನ್ನು ಹೊಸ ಬಾಸಿನ ಕತೆ ಯಾರಿಗೆ ತಾನೇ ಗೊತ್ತಿರುತ್ತೆ"
*******************************************************************************
"ನಮಸ್ಕಾರಪ್ಪಾ....."
"ಒಹೋ ಏನು ನಮ್ಮೆಡೆಗೆ ತಮ್ಮ ಪಾದ ಬೆಳೆದದ್ದು"
"ಬಿಡಪ್ಪಾ ಸುಮ್ಮನೇ ತಮಾಷೆ ಮಾಡಬೇಡ ಸಣ್ಣವರ ಮೇಲೆ"
"ಯಾರು..ಯಾರು ಸಣ್ಣವರು? ನೀವಾ? ಇಲ್ಲಿ ಆಗೋ ಪ್ರತಿಯೊಂದು ವಿಷಯ ಗೊತ್ತಾಗೋದೇ ನಿಮಗೆ. ನೀವು ಸಣ್ಣವರಾ? ಹಾಗಾದರೆ ನಾವೇನು?"
"ಇರಲಿ ಬಿಡಪ್ಪಾ. ಬಾಸು ವಿಷಯ ಯಾಕೆ ಹೀಗಾಯ್ತು?"
"ಏನು?...ಏನಾಯ್ತು?"
"ಹೋಗಪ್ಪಾ. ಎಲ್ಲಾ ಗೊತ್ತಿದ್ದೂ ನಾಟಕ ಮಾಡ್ತೀಯ"

"ಏನು ನಾಟಕ. ಬಾಸ್ ಹೋಗಿದ್ದಾರೆ ಅಂತ ಗೊತ್ತಲ್ವಾ ನಿಂಗೆ"
"ಹೂಂ"
"ಹಾಗಾದ್ರೆ ಅವ್ರು ಹೋಗಿದ್ದು ಯಾಕೆ ಅಂತ ಗೊತ್ತಿರಬೇಕಲ್ವಾ?"
"ಇಲ್ಲಪ್ಪಾ...ಸಣ್ಣವರಿಗೆಲ್ಲಿ ಗೊತ್ತಾಗುತ್ತೆ ದೊಡ್ಡವರ ವಿಚಾರ"
"ಬಲೇ ಕಿಲಾಡಿ ಕಣಯ್ಯಾ ನೀನು. ಎಲ್ಲಾ ನನ್ನ ಬಾಯಿಂದಲೇ ಕೇಳಬೇಕೂಂತಾನಾ?"
"ಏನೋ ಬೇಸರ ಕಣಪ್ಪಾ. ಇಲ್ಲಿ ಎಷ್ಟು ವರ್ಷದಿಂದ ಕೆಲಸ ಮಾಡಿದ್ದಾರೆ ಬಾಸು. ಈಗ ಇದ್ದಕ್ಕಿದ್ದಂತೆ ಹೋದರೆ..ನಮಗೆ ಯಾಕೇಂತಾದ್ರೂ ಗೊತ್ತಾಗಬೇಕಲ್ವಾ?"
"ನಮಗೆ ಅಂದರೆ....ಎಲ್ಲರಿಗೂ ನೀನೇನಾ ವಿಷಯ ಹಬ್ಬಿಸ್ತಾ ಇರೋದು?"
"ಹೋಗಪ್ಪಾ ಸುಮ್ಮನೆ. ನಾನು ಹೇಳೋಕೆ ಮೊದಲೇ ಎಲ್ಲರಿಗೂ ಗೊತ್ತಿತ್ತು ಬಾಸು ಬಿಟ್ಟಿದ್ದಾರೆ ಅಂತ"
"ನನ್ಗೆ ಒಂದು ವಿಷ್ಯ ಅರ್ಥ ಆಗೋದೇ ಇಲ್ಲ. ಇಲ್ಲಿ ಗುಟ್ಟಾದ ವಿಷ್ಯ ಇಲ್ಲರಿಗೂ ತಿಳಿದುಬಿಡುತ್ತೆ. ಅದೇ ಗೊತ್ತಿರಬೇಕಾದ್ದು ಯಾರಿಗೂ ಎಷ್ಟು ಹೇಳಿದ್ರೂ ನೆನಪಿರೊಲ್ಲಾ"
"ಅದು ಹಾಗೇನೇ ಬಿಡಪ್ಪಾ. ಬಾಸು ಯಾಕೆ ಬಿಟ್ಟಿದ್ದು?"
"ಅರೇ ನನನ್ನ ಯಾಕೆ ಕೇಳ್ತೀಯಾ? ಯಜಮಾನರನ್ನ ಕೇಳು"
"ನೀನೂ ಒಳ್ಳೇ ಇದ್ದೀಯ ಬಿಡಪ್ಪಾ. ನಾನು ಯಜಮಾನರ ಮುಂದೆ ನಿಂತು ಕೇಳಕಾಗುತ್ತಾ?"
"ನಿನ್ನ ಬಾಸ್ ಅಲ್ವಾ. ಕೇಳು ನೀನೇ"
"ಯಜಮಾನರನ್ನ ಕೇಳೋದು, ನಿನ್ನ ಕೇಳೋದು, ಎರಡೂ ಒಂದೇ ಅಲ್ವೇನಪ್ಪಾ"
"ಅರೆರೇ..ಏನು ನನ್ನನ್ನ ಹತ್ತಿಸ್ತಾ ಇದ್ದೀಯ"
"ನಿನ್ನನ್ನ ಏನಪ್ಪಾ ಹತ್ಸೋದು? ನೀನಿರೋದೇ ಅಲ್ಲಿ ಮೇಲೆ. ನಮ್ಮೆಲ್ಲರಿಗಿಂತ ಮೇಲೆ"
"ಓಹೋ ಈಗ ನೆನಪಿಗೆ ಬಂತಾ ನಿಮಗೆಲ್ಲಾ ನಾನು ಯಾರು ಅಂತ"
"ನನಗಂತೂ ಮೊದಲಿನಿಂದಲೂ ನೀನು ಅಲ್ಲೇ ಇದ್ದೆ ಕಣಪ್ಪಾ"
"ನಿನ್ನ ಬಾಸು ಹಾಗೇ ಯೋಚಿಸಿದ್ದರೆ ಇವತ್ತು ಅವನಿಗೆ ಈ ಪರಿಸ್ಥಿತಿ ಬರ್ತಾ ಇರ್ಲಿಲ್ಲ"
"ಅಂದ್ರೆ"
"ಅಂದ್ರೆ ನಿಮ್ಮ ಬಾಸು ತನ್ನನ್ನ ತಾನು ಏನು ಅಂದ್ಕೊಂಡಿದ್ದ ಅಂತ. ಅದಕ್ಕೇ ಯಜಮಾನರು ಅವನನ್ನ ಮನೆಗೆ ಕಳಿಸಿದರು"
"ಹಾಗಾದ್ರೆ ಬಾಸು ರಾಜೀನಾಮೆ ಕೊಟ್ಟಿಲ್ವಾಪ್ಪಾ. ಅವರನ್ನ ತೆಗೆದು ಹಾಕಿದ್ರಾ?"
"ಒಂಥರಾ ಹಾಗೇನೇ. ಆ ಮನುಷ್ಯ ತಲೆ ಗಟ್ಟಿ ಇದೆ ಅಂತ ಬಂಡೆಗೆ ಚಚ್ಚಲು ಹೋದ್ರು. ನಾವು ಬಿಡ್ತೀವಾ? ತಲೆ ಜೊತೆ ಅವನ ಪೂರ್ತಿ ದೇಹ ಚೂರು ಚೂರು ಮಾಡಿದ್ದೇವೆ"
"ಏನಪ್ಪಾ ನೀನು ಹೇಳೋದು. ಒಂದೂ ಅರ್ಥ ಆಗ್ತಾ ಇಲ್ಲ"
"ಏ! ಆ ನಿನ್ನ ಬಾಸ್ ಇದ್ದಾನಲ್ಲಾ. ಅವನಿಗೆ ಯಜಮಾನ್ರು ಹೇಳೀದ್ರು. ನೀನೇ ರಾಜೀನಾಮೆ ಕೊಡು. ಇಲ್ಲದಿದ್ದರೆ ನಾನೇ ತೆಗೆದು ಹಾಕ್ತೀನಿ ಅಂತ. ಬರೆದು ಹೋದ ನೆನ್ನೇನೇ. ಇನ್ನೇನು ಮಾಡ್ತಾನೆ? ಇನ್ನು ನಿನ್ನ ಬಾಸು ಈ ಕಡೆ ತಲೆ ಹಾಕೀನೂ ಮಲಗಲ್ಲ"
"ಮತ್ತೆ ಪೀ.ಎಫ್ಫೂ, ಅದೂ ಇದೂ ಅಂತ ಸೆಟ್ಲಮೆಂಟ್ ಇರುತ್ತಲ್ಲಪ್ಪಾ"
"ಏನು...ಪೀ.ಎಫ್ಫಾ? ಅದನ್ನೆಲ್ಲಾ ನಾವೇ ಹಿಡಿದುಕೊಂಡಿದ್ದೇವೆ. ಏನು ಮಾಡಿದ್ದಾನೆ ಗೊತ್ತಾ ನಿನ್ನ ಬಾಸು. ರಾಶಿ ರಾಶಿ ದುಡ್ಡು ನುಂಗಿದ್ದಾನೆ. ಅದಕ್ಕೇ ಅವನ ಎಕೌಂಟೂ ಹಿಡಿದಿಟ್ಟಿದ್ದೇವೆ. ಅವನೇ ಯಜಮಾನ್ರಿಗೆ ಇನ್ನೂ ದುಡ್ಡು ಕೊಡಬೇಕು. ಅದಕ್ಕೇ ಹೇಳಿದ್ದು - ಅವನ ದೇಹವನ್ನೂ ಪುಡಿ ಪುಡಿ ಮಾಡಿದ್ದೇನೆ ಅಂತ"
"ಏನು....ನಮ್ಮ ಬಾಸು ದುಡ್ಡು ತಿಂದಿದ್ದಾರಾ...ಇಲ್ಲಪ್ಪಾ...ನಾನು ನಂಬೊಲ್ಲಾ"
"ಏ ಹೋಗೋ. ನೀನು ನಂಬಿದ್ರೆಷ್ಟು, ಬಿಟ್ರೆಷ್ಟು. ನಂಬಬೇಕಾದ ಯಜಮಾನರು ನಂಬಿಯಾಗಿದೆ. ನಿಮ್ಮ ಬಾಸಿಗೆ ತಕ್ಕ ಪಾಠ ಕಲಿಸಿಯೂ ಆಗಿದೆ"
"ಛೇ! ಹೋಗ್ಲಿ ಬಿಡಪ್ಪಾ..ಈಗ ಮುಂದೇನು"
"ಮುಂದ್ರೆ ಅಂದ್ರೆ...ಅವನ ಅಪ್ಪನಂತಾ ಬಾಸ್ ಬರ್ತಾರೆ ನಿನಗೆ ನಾಳೆಯಿಂದ"
"ಅಂದ್ರೆ ಅಷ್ಟು ಬೇಗ ಹೊಸ ಬಾಸು ಸಿಕ್ಕಿದರಾ?"
"ಬಾಸ್ ಅಂದ್ರೆ ಏನು ಆಕಾಶದಲ್ಲಿರ್ತಾರೇನೋ? ಕಾಸು ಸುರಿದ್ರೆ ಲೈನಲ್ಲಿ ನಿಲ್ತಾರೆ ನಿನ್ನ ಬಾಸುಗಳು"
"ಆದ್ರೆ ಹಳೇ ಬಾಸಿನ ತರದವರು ಸಿಗಬೇಕಲ್ಲಪ್ಪಾ. ಅವರಷ್ಟು ಶ್ರದ್ಧೆ, ಅವರು ಗಳಿಸಿದ ಗೌರವ, ಅವರಿಗಿದ್ದ ವಿದ್ಯೆ..."
"ಏ ನಿಲ್ಸೋ. ಏನು ನಿನ್ನ ಬಾಸ್ ಒಬ್ಬನೇನಾ ಸಾಚಾ ಇಲ್ಲಿ. ನಾವೆಲ್ಲಾ ಗತಿ ಇಲ್ಲದೇ ಬಿದ್ದವರಾ"
"ನಾನೇನು ಹಾಗೆ ಹೇಳಿಲ್ಲಾಪ್ಪಾ...."
"ಬಿಡು ಬಿಡು. ನೀವೆಲ್ಲಾ ಎಷ್ಟಾದರೂ ಅವನ ಪಾರ್ಟೀನೇ. ಇರಲಿ ಈ ಹೊಸ ಬಾಸ್ ಬಂದ ಮೇಲೆ ಇದೆ ನಿಮಗೆ ಶನಿಕಾಟ"

"ಇರಲಿ ಬಿಡಪ್ಪಾ. ನಮಗೆ ಯಾರು ಬಾಸಾದರೇನು? ನಮ್ಮ ಕೆಲಸ ನಾಮ ಮಾಡ್ಕೊಂಡಿರೋದು ಅಷ್ಟೇ. ತಿಂಗಳ ಕೊನೆಯಲ್ಲಿ ಸಂಬಳಕ್ಕೆ ಮೋಸ ಆಗದಿದ್ದರೆ ಆಯ್ತು ಅಷ್ಟೇ."
"ಹಾಗೆ. ಹಾಗೆ ಸುಮ್ಮನಿದ್ದರೆ ನಿನ್ನ ಬಾಸ್ ಈಗ ಮನೆಯಲ್ಲಿ ಕೂರ್ತಾ ಇರ್ಲಿಲ್ಲ"
"ಆಯ್ತಪ್ಪಾ. ನಾನಿನ್ನ ಬರಲಾ"
"ಹೂಂ ಹೋಗು. ಎಲ್ಲರಿಗೂ ತಮಟೆ ಬಾರಿಸಿ ಹೇಳು. ಯಜಮಾನರ ದುಡ್ಡು ತಿಂದು ಓಡಿ ಹೋದ ನಿನ್ನ ಆ ಬಾಸ್ ಅಂತ. ಮತ್ತೆ ನಾಳೆ ಹೊಸ ಬಾಸ್ ಬರ್ತಾರೆ. ಅವರ ಜೊತೆ ಎಲ್ಲರಿಗೂ ಸರಿಯಾಗಿರಲು ಹೇಳು. ಇಲ್ಲದಿದ್ದರೆ ಎಲ್ಲರಿಗೂ ನಿನ್ನ ಬಾಸ್ ಗೆ ಆದ ಗತಿಯೇ ಆಗುತ್ತೆ. ನಿನಗೂ"
*****************************************************************************

"ಹೋಗಿ ಬಂದ್ಯಾ. ಏನು ವಿಷಯಾಂತ ಗೊತ್ತಾಯ್ತು?"
"ಹೋಗಪ್ಪಾ. ನೀವೆಲ್ಲಾ ಸೇರಿ ನನ್ನನ್ನೇ ಯಾವತ್ತು ಬಕರಾ ಮಾಡ್ತೀರಾ"
"ಇರಲಿ ಬಿಡು. ಏನು ವಿಷಯ ಅಂತ ಹೇಳು. ಎಲ್ಲರೂ ಕಾಯ್ತಿದ್ದಾರೆ"
"ಬಾಸನ್ನ ಯಜಮಾನರು ಬಯ್ದು ಮನೆಗೆ ಕಳಿಸಿದ್ರಂತೆ"
"ನಾನು ಹೇಳ್ಲಿಲ್ವಾ ನಿಮಗೆಲ್ಲಾ. ಪಕ್ಕಾ ಇದೇ ಕೇಸೂಂತ. ಯಾರೂ ನಂಬ್ಲಿಲ್ಲ. ಈಗ ಕೇಳಿ"
"ಏ ನೀನು ಸುಮ್ನಿರೋ. ಅವನು ಕತೆ ಹೇಳಿ ಮುಗಿಸಲಿ. ಆಮೇಲೆ ನಾನು ನಾಮ ಡಿಸ್ಕಸ್ ಮಾಡೋಣ"
"ನಮಗೇನು ಹಕ್ಕಿದೆ ಇಲ್ಲಿ ಅಂತ. ಡಿಸ್ಕಸ್ ಅಂತೆ ಡಿಸ್ಕಸ್"
"ಹುಶ್!ಹುಶ್! ಯಾರೂ ಮಧ್ಯೆ ಮಾತಾಡಬೇಡಿ. ಅವನ ಕತೆ ಮುಗಿಯಲಿ ಮೊದಲು. ನೀನು ಹೇಳು, ಯಜಮಾನರು ಯಾಕಂತೆ ಬಾಸ್ ನ ಬಯ್ದಿದ್ದು"
"ಏನೋಪ್ಪಾ. ನಮ್ಮ ಬಾಸು ದುಡ್ಡು ತಿಂದಿದ್ದಾರಂತೆ. ಅದು ಯಜಮಾನರಿಗೆ ಗೊತ್ತಾಯ್ತಂತೆ. ಅದಕ್ಕೇ ನೆನ್ನೆ ಬಯ್ದು ಕೆಲಸ ಬಿಡಿಸಿದರಂತೆ"
"ಹಾಗಂತ ಆ ಚೇಲಾ ನಿನಗೆ ಹೇಳಿದ್ನಾ?"
"ಹೇ ಸುಮ್ನಿರೂ. ಅವನು ಚೇಲಾ ಅಲ್ಲ. ಯಜಮಾನರ ಖಾಸಾ ಮಚ್ಚ"
"ಈಗೀಗ ಯಜಮಾನರಿಗಿಂತ ಅವನದೇ ಜೋರು ದರ್ಬಾರಿಲ್ಲಿ"
"ಅವನೇ ಒಂದು ದಿನ ಯಜಮಾನರನ್ನೂ ಓಡಿಸಿ ಅವರ ಕುರ್ಚಿಯಲ್ಲಿ ಕೂತ್ಕೋತಾನೆ"
"ಹಾಗಾದರೆ ನಾವೆಲ್ಲಾ ಮನೆಗೆ ಗ್ಯಾರೆಂಟಿ"
"ಅಂತಾ ಬಾಸ್ ನನ್ನೇ ಮನೆಗೆ ಕಳಿಸಿದ...ಪಾಪಿ...ನಮ್ಮನ್ನ ಬಿಡ್ತಾನಾ?"
"ಅಲ್ಲಾ...ನಮ್ಮ ಬಾಸ್ ದುಡ್ಡು ತಿನ್ತಾರಾ?"
"ಇಲ್ಲ"
"ಇಲ್ಲವೇ ಇಲ್ಲ"
"ಬಾಸ್ ಇಲ್ಲಿ ಸೇರಿ ಒಂದು ವರ್ಷಕ್ಕೆ ನಾನು ಇಲ್ಲಿಗೆ ಬಂದೆ. ನಾನು ಬಾಸ್ ನ ಸರಿಯಾಗಿ ಅರ್ಥ ಮಾಡಿಕೊಂಡು ಹೇಳ್ತೀನಿ - ಇದೆಲ್ಲಾ ಸುಳ್ಳು. ಆ ಚೇಲಾನೇ ಏನೋ ಮಾಡಿದ್ದಾನೆ. ಏಯ್. ಅವನು ನಮ್ಮ ಬಾಸ್ ಬಗ್ಗೆ ಇನ್ನೇನು ಹೇಳ್ದ?"
"ಇನ್ನೇನು ಇಲ್ಲಪ್ಪಾ. ಅಷ್ಟೇ. ಬಾಸು ಹಣ ತಿಂದಿದ್ದಾರಂತೆ. ಅದಕ್ಕೇ ಅವರನ್ನ ಮನೆಗೆ ಕಳಿಸಿದ್ದಾರಂತೆ. ಬಾಸಿನ ಪಿ.ಎಫ್ ಎಲ್ಲಾ ಹಿಡಿದಿಟ್ಟಿದ್ದಾರಂತೆ, ಬಾಕಿ ವಸೂಲಿಗೆ"
"ಮೈ ಗಾಡ್! ಬಾಸ್ ತಮ್ಮ ಮಗಳ ಮದುವೆ ಮುಗಿಸಿ ವರ್ಷವಾಗಿಲ್ಲ. ಭಯಂಕರ ಸಾಲ ಬೇರೆ ಮಾಡಿದ್ದಾರೆ. ಪಾಪ ಹೀಗೇನಾ ಅವರನ್ನ ನೋಡಿಕೊಳ್ಳೋದು ಇವರು"
"ಇಲ್ಲಿ ಅವರ ಜೊತೆ ಮೊದಲಿನಿಂದಲೂ ಕೆಲಸ ಮಾಡ್ತಾ ಇದ್ದೀನಿ. ಮೊದಲಿದ್ದಿದ್ದು ನಾವಿಬ್ಬರೇ. ನನ್ನನ್ನ ಮನೆಗೆ ರಾತ್ರಿ ಕಳಿಸಿ ಬಾಸ್ ಮತ್ತೂ ಬಹಳ ಹೊತ್ತು ಕೆಲಸ ಮಾಡ್ತಾ ಇದ್ರು"
"ಹೌದು. ನಾನು ಸೇರೋವಾಗ್ಲೂ ನನಗೆ ಅವರೇ ಎಲ್ಲಾ ಕೆಲಸ ಹೇಳ್ಕೊಟ್ಟಿದ್ರು"
"ನಾನು ಅವರೂ ಮೊದಲ ವರ್ಷಗಳಲ್ಲಿ ಪಟ್ಟ ಪಾಡು ದೇವರಿಗೇ ಪ್ರೀತಿ"
"ನನಗೆ ಗೊತ್ತಿರುವಂತೆ ಇಲ್ಲಿ ಲಾಭ ಜಾಸ್ತಿ ಆಗುವಂತೆ ಮಾಡಿದ್ದೇ ಬಾಸು"
"ಹೌದು ನಾಮ ಮೊದಲು ಬಂದಾಗ ಇಲ್ಲಿ ಏನಿತ್ತು. ಬಾಸ್ ತಮ್ಮ ಜೀವನವನ್ನೇ ಪಣ ಇಟ್ಟು ಲಾಭ ತಂದರು. ಈಗ...."
"ಹೌದಪ್ಪಾ. ನಾನು ರಾತ್ರಿ ಇರ್ತೇನೆ ಅಂದ್ರೆ ನನ್ನನ್ನೂ ಮನೆಗೆ ಕಳಿಸಿ ಒಬ್ಬರೇ ಕೆಲಸ ಮಾಡ್ತಾ ಕೂತಿದ್ರು"
"ಅವರು ಇಲ್ಲಿ ಮಾಡಿದ ಕೆಲಸಾನೇ ಬೇರೆ ಕಡೆ ಮಾಡಿದ್ರೆ...ರಾಜ..ರಾಜನ ತರ ಇರಬಹುದಿತ್ತು"
"ಅವರಿಗೆ ಮೊದಲಿನಿಂದಲೂ ಸೆಂಟಿಮೆಂಟ್. ಯಾರೂ ಕೆಲಸ ಕೊಡದಾಗ ಯಜಮಾನರು ಕರೆದು ಕೆಲಸ ಕೊಟ್ರು ಅಂತ"

"ಯಜಮಾನರು ದೇವರು ಬಿಡಿ"
"ಹೌದು. ಯಜಮಾನರು ಒಳ್ಳೆಯವರೇ. ಅವರು ಈ ಚಿಲ್ಲರೆ ಮನುಷ್ಯನ ಮಾತು ಯಾಕೆ ನಂಬ್ತಾರೋ ಗೊತ್ತಿಲ್ಲ"
"ನನಗೂ ಅದೇ ಸಂಶಯ. ಮೊದಲೆಲ್ಲಾ ಬಾಸ್ ಮತ್ತು ನಾನು ನೇರವಾಗಿ ಯಜಮಾನರನ್ನ ನೋಡ್ತಿದ್ದೆವು. ಈ ಮನುಷ್ಯ ಬಂದ ಮೇಲೆ ಯಜಮಾನರ ಮುಖ ನೋಡೋದೇ ಕಡಿಮೆ ಆಗಿದೆ"
"ಹೌದು ನಮಗೆಲ್ಲಾ ಯಜಮಾನರ ಮುಖ ನೋಡಿದ್ದೇ ನೆನೆಪಿಲ್ಲ"
"ಆ ಕಾಲದಲ್ಲಿ ನಾನೇ ಯಜಮಾನರಿಗೆ ಟೀ ಕೊಡ್ತಾ ಇದ್ದೆಪ್ಪಾ. ಮೊನ್ನೆ ಕಾಲು ನೋವು ಜಾಸ್ತಿಯಾಗಿ ಸ್ವಲ್ಪ ರಜಾ ಕೇಳೋಣಾಂತ ಅಂತ ಹೋದ್ರೆ ಬಿಡ್ಲಿಲ್ವಲ್ಲಪ್ಪಾ ಆ ಮನುಷ್ಯ"
"ನೀನೇನು ಬಿಡು ಅವನ ಜೊತೆಗೂ ಹಾಯಾಗಿ ಮಾತಾಡ್ತೀಯಾ"
"ನಾನೇನಪ್ಪಾ ಮಾಡಲಿ. ನಾನು ಯಾರನ್ನೂ ಬಿಡಕ್ಕಾಗೊಲ್ಲ"
"ಹುಶ್...ಹುಶ್..ಪಾಪ ಅವನನ್ನ ಯಾಕೆ ಗೋಳು ಹೊಯ್ಕೋತೀರಾ? ಅವನ ವಿಷಯ ಬಿಡಿ. ಈಗ ಬಾಸ್ ನ ಮ್ಯಾಟರ್ ಏನು ಮಾಡೋಣ"
"ಅದಕ್ಕಿಂತ ಮೊದಲು ನಮಗೆ ಸತ್ಯ ಏನೂಂತ ಗೊತ್ತಾಗ್ಬೇಕು"
"ಏನು ಮಹಾ ಸತ್ಯ? ಯಾಕೆ ನೀವಲ್ಲಾ ಇಷ್ಟು ಇನೋಸೆಂಟ್ ಗಳ ತರಾ ಆಡ್ತೀರಾ?"
"ಅಂದ್ರೆ"
"ಅಂದ್ರೆ ನಿಮಗೂ ಗೊತ್ತಿದೆ, ನನಗೂ ಗೊತ್ತಿದೆ ಬಾಸ್ ಯಾಕೆ ಹೋದ್ರೂಂತ. ಮತ್ತೆ ಯಾಕೆ ಇಷ್ಟೆಲ್ಲಾ ರಾದ್ಧಾಂತ"
"ಇವತ್ತು ಬಾಸ್. ನಾಳೇ ನಾನು, ನೀನು ಯಾರಿಗಾದರೂ ಹೀಗೆ ಆಗಬಹುದು. ಅದಕ್ಕೆ"
"ಅದಕ್ಕೆ...ಅದಕ್ಕೆ...ಏನು ಮಾಡಬೇಕೂಂತ ನಿನ್ನ ಮಾತು"
"ನ್ಯಾಯ ಕೇಳೋಣ"
"ಯಾರ ಹತ್ರ"
"ಎನ್ಯಾರ ಹತ್ರ. ಯಜಮಾನರ ಬಳಿ ಹೋಗಿ ಕೇಳೋಣ"
"ಏನೂಂತ ಕೇಳ್ತೀಯ?"
"ಅರೇ! ಇದೊಳ್ಳೆ ಕತೆ ಆಯ್ತಲ್ಲಾ. ಬಾಸ್ ನ ಯಾಕೆ ತೆಗೆದ್ರಿ ಅಂತ ಕೇಳೋದು"
"ಆಗ ಯಜಮಾನರು - ಇಲ್ಲ ಬಾಸ್ ರಾಜೀನಾಮೆ ಕೊಟ್ಟು ಹೋಗಿದ್ದಾರೆ ಅಂತ ಹೇಳ್ತಾರೆ. ಏನ್ಮಾಡ್ತೀಯ"
"ಕಮಾನ್ ನಮಗೆಲ್ಲಾ ಗೊತ್ತು. ಅವರು ಬೇಕೂಂತ ರಾಜೀನಾಮೆ ಕೊಟ್ಟಿಲ್ಲ, ಬಲವಂತದಿಂದ ತೆಕೊಂಡಿದ್ದಾರೆ ಅಂತ"
"ಹಾಗೇಂತ ನೀನು ಯಜಮಾನರ ಮುಂದೆ ಹೇಳ್ತೀಯಾ"
"ನಾನೊಬ್ಬ ಯಾಕೆ...ನಾವೆಲ್ಲಾ ಸೇರಿ ಕೇಳೋಣ"
"ಸ್ವಲ್ಪ ಸುಮ್ಮನಿರ್ತೀಯಾ. ಯಾರು ಬರ್ತಾರೆ ಸ್ವಲ್ಪ ಕೇಳು"
"ಯಾಕೆ ಸಂಶಯ. ಬಾಸ್ ಇಲ್ಲಿ ತುಂಬಾ ವರ್ಷದಿಂದ ದುಡ್ಡಿದ್ದಾರೆ. ನಮಗೆಲ್ಲಾ ಕೆಲಸ ಕಲಿಸಿಕೊಟ್ಟಿದ್ದಾರೆ. ನಮ್ಮೆಲ್ಲರಿಗೂ ಒಂದಲ್ಲಾ ಒಂದು ತರದಲ್ಲಿ ಸಹಾಯಾನೂ ಮಾಡಿದ್ದಾರೆ"
"ಹೌದು. ನಾನು ಇಲ್ಲಾ ಅಂತ ಹೇಳಲ್ಲ. ಆದರೆ ಈ ಸಮಯದಲ್ಲಿ ಅದೆಲ್ಲಾ ಮುಖ್ಯ ಅಲ್ಲ. ಅವರು ರಾಜೀನಾಮೆ ಕೊಟ್ಟು ಹೋಗಿದ್ದಾರೆ. ಅಷ್ಟೇ"
"ಹಾಗಾದರೆ ನೀನು ಹೇಳೋದು ನಾನು ಹೀಗೆ ಸುಮ್ಮನಿರಬೇಕೂಂತಲಾ?"
"ಇನ್ನೇನೂ ನಾಮ ಮಾಡಕ್ಕೇ ಆಗೊಲ್ಲಾ"
"ನಾನು ಒಪ್ಪಲ್ಲ. ನಾನು ಯಜಮಾನರನ್ನ ಹೋಗಿ ಕೇಳಲೇ ಬೇಕು"
"ಏಯ್ ನಿನಗೆ ನಾನು ಹೇಳ್ತಾ ಇರೋದು ಅರ್ಥ ಆಗ್ತಾ ಇಲ್ವಾ? ಇಲ್ಲಿ ನಮಗೆಲ್ಲಾ ಬಾಸ್ ಬಗ್ಗೆ ಗೌರವ ಇದೆ. ಆದರೆ ಈಗ ನಾವೇನೂ ಮಾಡೊಕ್ಕಾಗಲ್ಲ"
"ಇಲ್ಲ. ನಾನು ಯಜಮಾನರ ಹತ್ರ ಹೋಗ್ತೇನೆ. ನಂಗೊತ್ತು, ನನ್ನ ಜೊತೆ ಇವರೆಲ್ಲಾ ಬರ್ತಾರೆ. ನೀನೂ ಬರ್ತೀಯಾ. ನಾವೆಲ್ಲಾ ಸೇರಿ ಕೇಳೋಣ ಯಜಮಾನರನ್ನ - ಇದು ನ್ಯಾಯಾನಾ ಅಂತ"
"ನಿನಗೆ ಎಷ್ಟು ಹೇಳಿದ್ರು ಅಷ್ಟೇ. ಆಯ್ತು ಕೇಳಿ ನೋಡು. ನಿನ್ನ ಜೊತೆ ಬರೋಕೆ ಯಾರ್ಯಾರು ತಯಾರಿದ್ದಾರೆ ಅಂತ"
"ಅದನ್ನೇನು ಕೇಳೋದು. ಎಲ್ಲಾರೂ ಬರ್ತಾರೆ ಅಷ್ಟೇ"
"ಹಾಗಾದರೆ ನಾನೇ ಕೇಳ್ತೀನಿ. ನೋಡೀಪ್ಪಾ ನೀವೀಗ ಯಜಮಾನರ ಜೊತೆ ಹೋಗೋಕೆ ತಯಾರಿದ್ದೀರಾ?"
"....."
"........"
"................."
"........"
"....."

"ನೋಡೋ...ನೋಡೋ...ಇಷ್ಟೇ...ಹೋಗಲಿ ಬಿಡು ನಾನು ಬರ್ತೀನಿ. ನೀನು ಯಜಮಾನರ ಹತ್ರ ವಿಷ್ಯ ಹೀಗೆ ಹೀಗೆ ಅಂತ ಹೇಳ್ತೀಯಾ"

"ಓಹೋ. ಅದರಲ್ಲೇನಂತೆ"

"ನೋಡು ನೀನು ಅಲ್ಲಿಗೆ ಹೋದರೆ ಆ ಮನುಷ್ಯನ ಕೆಟ್ಟ ದೃಷ್ಟಿ ನಿನ್ನ ಮೇಲೂ ಬೀಳುತ್ತೆ. ಮತ್ತೆ ನೀನೂ ಮನೆಗೆ ಹೋಗ್ತೀಯ ಅಷ್ಟೇ"

"ಹೋಗೋ ಹಾಗೇನು ಆಗೊಲ್ಲ"

"ಏಯ್ ಯಾವ ಲೋಕದಲ್ಲಿ ಇದ್ದೀಯ ನೀನು. ಅಂತಾ ಬಾಸ್ ನನ್ನೇ ಮನೆಗೆ ಕಳಿಸಿದ್ರು. ನಿನಗೆ ಅವರ ಅನುಭವದಷ್ಟು ವಯಸ್ಸಾಗಿಲ್ಲ. ನೀನ್ಯಾವ ಲೆಕ್ಕ ಇಲ್ಲಿ"

"ಅಂದ್ರೆ ನಾನು ಸುಮ್ಮನೇ ಕೂತಿರ್ಬೇಕಾ. ಇಷ್ಟೆಲ್ಲಾ ಅನ್ಯಾಯ ಆಗ್ತಿದೆ ಇಲ್ಲಿ..ಆದ್ರೂ.."

"ಶ್!!ಶ್!! ಒಳ್ಳೇ ಮಗು ತರಾ ಮಾತಾಡ್ತೀಯಪ್ಪಾ ನೀನು. ಪ್ರಪಂಚದ ತಿಳುವಳಿಕೇನೇ ಇಲ್ಲ ನಿನಗೆ. ನೋಡೋ ಹಳೇ ಬಾಸ್ ಒಳ್ಳೇಯವರು. ಅವರಿಂದ ನಾಮ ಬೇಕಾದಷ್ಟು ಕಲಿತೆವು. ಅಷ್ಟೇ ಬಿಡು. ನಾಳೆ ಹೊಸ ಬಾಸ್ ಬರ್ತಾರೆ. ಅಷ್ಟೇ"

"ಹೊಸ ಬಾಸ್ ಹಳೇ ಬಾಸ್ ನ ಹಾಗೆ ಇಲ್ಲಾಂದ್ರೆ?"

"ಖಂಡಿತ ಹೇಳ್ತೀನಿ ಕೇಳು. ಹಳೇ ಬಾಸ್ ನ ಹಾಗೆ ನಮಗೆ ಇನ್ಯಾರೂ ಸಿಗೊಲ್ಲ. ಆದ್ರೆ ಹೊಸ ಬಾಸ್ ನಿಂದಾನೂ ಏನಾದ್ರೂ ಕಲಿಯೋದು ಇರುತ್ತೆ. ಅವರು ಒಳ್ಳೆಯವರಲ್ಲ ಅಂತಾ ಈಗಲೇ ಹೇಗೆ ಹೇಳ್ತೀಯಾ. ನೋಡೋಣ"

"ಏನಾದ್ರೂ...."

"ಏಯ್! ಒಳ್ಳೇವರಿಂದ ಮಾತ್ರನೇ ಕಲಿಯೋದಲ್ಲಾ ಕಣೋ. ಕೆಟ್ಟವರಿಂದನೂ ಕಲೀಬೇಕು. ಕೆಟ್ಟವರನ್ನ ನೋಡಿ ಹೀಗಿರಬಾರದು ಅಂತ ಕಲೀಬೇಕು. ಒಳ್ಳೆಯವರನ್ನ ನೋಡಿ ಹೇಗಿರಬೇಕು ಅಂತ ಕಲೀತಿವಲ್ಲಾ, ಹಾಗೆ"

"ನೀನೆನಪ್ಪಾ ಅಂದ್ರೆ......ಸುಮ್ನೆ...ಬಂದಿದೆಲ್ಲಾ ಇರ್ಲಿ ಅಂತಾ....."

"ವಿಷಾನೂ ಕುಡಿತೀನಿ ಅಂತಾನಾ. ಹಾಗಲ್ಲ ಅದು. ಇರ್ಲಿ ಬಿಡು. ನಾಳೆ ಹೊಸ ಬಾಸ್ ಬರ್ತಾರೆ. ಅದಕ್ಕೆಲ್ಲಾ ರೆಡಿ ಮಾಡೋಣಪ್ಪಾ ಮತ್ತೆ"

"ಏನಪ್ಪಾ ಯಾವ ಹಾರ ತರೋಣ ನಾಳೆ ಹೊಸ ಬಾಸಿಗೆ......"

***************************************************************
*****************

# ಗಣೇಶ ಬಂದ

Sunday, March 11, 2007

ಚಂದ್ರು ಸರಸರನೆ ಬಣ್ಣದ ಕಾಗದಗಳನ್ನು ತೆಗೆದುಕೊಂಡು ಅವನೇ ಮಾಡಿದ ತೆಂಗಿನ ಗರಿಗಳ ಚಪ್ಪರದ ಸುತ್ತಾ ಅಂಟಿಸುತ್ತಿದ್ದರೆ ಅಲ್ಲಿದ್ದವರೆಲ್ಲಾ ಆಶ್ಚರ್ಯದಿಂದ ಅವನನ್ನೇ ನೋಡುತ್ತಿದ್ದರು. "ಅರೇ ಇವನು ನಮ್ಮ ಚಂದ್ರುನಾ?" ಅಂತ ಅವರೆಲ್ಲಾ ಮಾತಾಡಿಕೊಳ್ಳುತ್ತಿದ್ದರೆ ಚಂದ್ರು ಇದೇ ತನ್ನ ಜೀವನದ ಪರಮಗುರಿಯೇನೋ ಎಂ[illegible]ಂತೆ ಾಗದ ಸುತ್ತುತ್ತಿದ್ದ. ಚಪ್ಪರ ಮದುವೆಮನೆಯಂತೆ ಸಿಂಗಾರಗೊಂಡ ಮೇಲೆ ಶರ್ಟಿನ ಜೇಬಿನಿಂದ ಬೀಡಿ, ಕಡ್ಡಿ ತೆಗೆದು ಹೊರಗೆ ಸೇದುತ್ತಾ ಕುಳಿತುಬಿಟ್ಟ. ಅಲ್ಲಿದ್ದವರು ಗಣೇಶನನ್ನ ಎಲ್ಲಿ ಕೂರಿಸುಮದಪ್ಪಾ ಅಂತಾ ತಮ್ಮತಮ್ಮಲ್ಲಿ ಚರ್ಚೆ ಆರಂಭಿಸಿದರು. "ಈ ಸಲ ಏನಾದರೂ ಬಹುಮಾನ ಇದ್ದಿದ್ದರೆ ನಾವೇ ಗೆಲ್ಲುತ್ತಿದ್ದೆವು" ಕಮಿಟಿ ಪ್ರೆಸಿಡೆಂಟ್ ಜೋರಾಗಿಯೇ ಹೇಳಿದರು - ಚಂದ್ರುವಿಗೂ ಕೇಳಿಸಲಿ ಅಂತ.

ಯಾರು ಶುರು ಮಾಡಿದರೋ ಗೊತ್ತಿಲ್ಲ ಆದರೆ ಆ ಊರಲ್ಲಿ ಗಣೇಶನ ಜಾತ್ರೆ ದೊಡ್ಡದಾಗಿ ನಡೆಯುತ್ತಿತ್ತು. ಮೊದಮೊದಲು ಬರೇ ದೇವಸ್ಥಾನದಲ್ಲಿ ನಡೆಯುತ್ತಿದ್ದ ಉತ್ಸವ ಈಗ ಬೀದಿ ಬೀದಿಗೆ ಕಾಲಿಟ್ಟಿತ್ತು. ಈ ಮಧ್ಯೆ ಯಾರೋ ಬುದ್ದಿವಂತರು ಒಳ್ಳೇ ಪೆಂಡಾಲಿಗೆ ಬಹುಮಾನ ಕೊಡೋ ವ್ಯವಸ್ಥೆ ಕೂಡ ಮಾಡಿದ್ದರಿಂದ ಉತ್ಸವಕ್ಕೆ ಮತ್ತಷ್ಟು ರಂಗು. ಆದರೇನು ಪ್ರಯೋಜನ? ಬಹುಮಾನ ಬಂದ ತಕ್ಷಣ ಜಗಳ ಶುರುವಾಗ್ತಾ ಇತ್ತು. ಗೆದ್ದವರು ಕಪ್ ಎತ್ತುವ ಮೊದಲೇ ಒಂದೆರಡು ತಲೆಬುರುಡೆ ಒಡೆಯುತ್ತಿತ್ತು. ಗಣೇಶ ಬರುವಾಗ ಏನು ತಂದನೋ ಗೊತ್ತಿಲ್ಲ, ಆದರೆ ಹೋಗುವಾಗ ಮನಸ್ಸುಗಳನ್ನು ಒಡೆದು, ರಕ್ತದ ಹೊಳೆಯನ್ನು ಹರಿಸಿಯೇ ಹೋಗುತ್ತಿದ್ದ.

ಹೀಗೆ ಒಂದು ವರ್ಷ ಜಾತ್ರೆಯ ಸಮಯದಲ್ಲಿ ಚಂದ್ರುವಿನ ಬದುಕು ಬುಡಮೇಲಾಗಿ ಹೋಗಿತ್ತು. ಆಗಿದ್ದು ಇಷ್ಟು. ಆ ವರ್ಷ ಎಂ[illegible]ಂತೆ ಂದ್ರುವೇ ಮುಂದೆ ನಿಂತು ತನ್ನ ಓಣಿಯ ಪೆಂಡಾಲಿನ ಉಸ್ತುವಾರಿ ವಹಿಸಿದ್ದ . ಒಂದು ಇಡೀ ತಿಂಗಳು ತಲೆಕೆಡಿಸಿಕೊಂಡು ಪೆಂಡಾಲಿನ ಡಿಸೈನ್ ಮಾಡಿದ ಮೇಲೆ ಸಾಮಾನು ತರಲು ಬೆಂಗಳೂರಿಗೆ ಬಂದಿಳಿದ. ಬಣ್ಣ ಬಣ್ಣದ ಕಾಗದ, ಮಿಣಿ ಮಿಣಿ ಬತ್ತಿ, ಚಿತ್ತಾರದ ಚಾದರ ಎಲ್ಲಾ ತೆಕೊಂಡು ಊರಿಗೆ ಬಂದ. ಹುಡುಗರನ್ನೆಲ್ಲಾ ಕೂಡಿಸಿಕೊಂಡು ರಾತ್ರಿ ಹಗಲು ಕಷ್ಟ ಪಟ್ಟಿದ್ದೇ ಪಟ್ಟಿದ್ದು. ಕೊನೆಗೂ ಗಣೇಶ ಬಂದ. ಆದರೆ ಇವರಲ್ಲಿಗೆ ಜನವೇ ಇಲ್ಲ. ಎಲ್ಲರ ಬಾಯಲ್ಲೂ ಆಚೆ ಬೀದಿಯವರ ಪೆಂಡಾಲಿನವರದೇ ಮಾತು.

ಅಲ್ಲಿ ಗಣೇಶನನ್ನ ಸಿಂಹದ ಮೇಲೆ ಕೂರಿಸಿದ್ದರು. ಪಕ್ಕದಲ್ಲಿಯೇ ರಾಕ್ಷಸನೂ ಇದ್ದ. ಸ್ವಿಚ್ ಹಾಕಿದರೆ ಸಾಕು, ಸಿಂಹ ಘರ್ಜಿಸುತ್ತಿತ್ತು, ಗಣೇಶ ಖಡ್ಗ ಎತ್ತಿ ಅಟ್ಟಹಾಸ ಮಾಡುವ ರಾಕ್ಷಸನ ತಲೆ ಕಡಿಯುತ್ತಿದ್ದ. ಮಕ್ಕಳು, ದೊಡ್ಡವರು ಎಲ್ಲಾ ಹೋ! ಅಂತಾ ಕಿರಿಚುತ್ತಿದ್ದರೆ ಚಂದ್ರುವಿಗೆ ತನ್ನ ಕಣ್ಣನ್ನ ತಾನೇ ನಂಬಲಾಗಲಿಲ್ಲ. ಈ ಬೀದಿಯಲ್ಲಿ ಯಾರಿದ್ದಾರಪ್ಪಾ ಇಷ್ಟೆಲ್ಲಾ ಮಾಡುವವರು ಅಂತ ತುಂಬಾ ಯೋಚಿಸಿ ನೋಡಿದ. ಅವನ ತಲೆಗೆ ಯಾರ ಹೆಸರು ಹೊಳೆಯಲಿಲ್ಲ. ಮತ್ತೆ ಎಲ್ಲ ಕಡೆ ವಿಚಾರಿಸಿ ನೋಡಿದಾಗ ತಿಳಿಯಿತು - ಇದೆಲ್ಲಾ ಬಾಂಬೆಯಿಂದ ಬಂದ ಸಾಮಾನು ಅಂತ. ಅಲ್ಲಿ ನವರಾತ್ರಿಗೆ ಇಂತಾ ಗೊಂಬೆ ಕೂರಿಸುತ್ತಾರಂತೆ. ಇಲ್ಲಿನ ಒಬ್ಬ ಬ್ಯಾರಿ ಅಲ್ಲಿಂದ ಈ ಗೊಂಬೆ ಮಾಡುವವರನ್ನ ಕರೆಸಿ ಗಣೇಶನನ್ನ ಮಾಡಿಸಿದಂತೆ.

"ಅಬ್ಬಾ ಬ್ಯಾರಿ ನಿನ್ನ ಸೊಕ್ಕೇ" ಚಂದ್ರುವಿಗೆ ಮೈಯೆಲ್ಲಾ ಹೊತ್ತಿಕೊಂಡು ಉರಿದಂತೆ ಆಗತೊಡಗಿತು. ತಾನು ಕಷ್ಟ ಪಟ್ಟು ಮಾಡಿದ ಪೆಂಡಾಲನ್ನ ಈ ಬಾಂಬೆ ಜನ ಬಂದು ಹೀಗೆ ಮೂರು ಕಾಸಿಗೆ ಗತಿ ಇಲ್ಲದ ಹಾಗೆ ಮಾಡಿದರಲ್ಲಾ, ಇವರನ್ನು ಏನಾದರೂ ಮಾಡಿ ಗೆಲ್ಲಲಿಕ್ಕೆ ಬಿಡಬಾರದು ಅಂದುಕೊಂಡ. ಹನ್ನೊಂದನೆಯ ದಿನ ಪರೀಕ್ಷೆಯ ದಿನ. ಬಹುಮಾನ ಕೊಡುವ ಕಮಿಟಿಯವರು ಎಲ್ಲಾ ಪೆಂಡಾಲಿಗೆ ಬಂದು ನೋಡಿ ಹೋದರು. ಮೊದಲ ಬಹುಮಾನ ಆಚೆ ಈಚೆ ಹೋಗುವ ಬಾಂಬೆ ಗಣೇಶನಿಗೇ ಬಂತು. ಚಂದ್ರುವಿಗೆ ಸಿಟ್ಟು ತಡೆದುಕೊಳ್ಳಲಾಗಲಿಲ್ಲ. ಇಲ್ಲಿನವರು ಮಾಡಿದರೆ ಮಾತ್ರ ಬಹುಮಾನ ಕೊಡಬೇಕು - ಅಂತ ತಗಾದೆ ತೆಗೆದ. ಸಿಂಹದ ಘರ್ಜನೆ ಕೇಳಿದವರಿಗೆ ಇವನ ಮಾತು ಕಿವಿಗೆ ಬೀಳಲೇ ಇಲ್ಲ. ಅವತ್ತು ಅಲ್ಲಿಂದ ನೇರ ಅವರ ಪೆಂಡಾಲಿಗೆ ನುಗ್ಗಿ ಸಿಂಹ, ರಾಕ್ಷಸ ಎರಡನ್ನೂ ಪುಡಿ ಪುಡಿ ಮಾಡಿಬಿಟ್ಟ. ಯಾಕೋ ಗಣೇಶನನ್ನ ಮುಟ್ಟಲು ಅವನಿಗೆ ಮನಸ್ಸಾಗಲಿಲ್ಲ.

"ಹಿಡಿಯಿರಿ, ಹೊಡೆಯಿರಿ" ಅಂತ ಜನ ಬರುಮದರೊಳಗೆ ಚಂದ್ರು ಪರಾರಿ. ಅವನ ಹುಡುಗರು ರಾತ್ರಿ ಎಲ್ಲಾ ಕುಣಿದು ಬೆಳಗ್ಗೆ ಗಣೇಶನನ್ನು ನೀರಿಗೆ ಬಿಟ್ಟು ಬಂದರೂ ಅವನ ಪತ್ತೆ ಇಲ್ಲ. ಇಲ್ಲೇ ಎಲ್ಲೋ ಹೋಗಿರಬಹುದು, ಈಗ ಬಂದಾನು ಅಂದುಕೊಂಡು ಸುಮ್ಮನಿದ್ದರು. ಆದರೆ ಎಲ್ಲಿ! ಆಸಾಮಿಯ ಪತ್ತೆಯೇ ಇಲ್ಲ. ಆಚೆ ಬೀದಿಯವರೂ ಅವನನ್ನ ಕಾಯುತ್ತಿದ್ದರು. ಬ್ಯಾರಿಗೆ ವಿಪರೀತ ನಷ್ಟವಾಗಿತ್ತು. ಹೇಳಿ ಕೇಳಿ ಅವತ್ತು ಬಾಂಬೆಯವರು ಸಿಂಹ ಮತ್ತು ರಾಕ್ಷಸನನ್ನ ವಾಪಸ್ ತೆಗೆದುಕೊಂಡು ಹೋಗಬೇಕಿತ್ತು. ಇನ್ನೇನು ಕೆಲವೇ ಸಮಯ. ದಸರಾ ಬಂತೆಂದರೆ ಸಿಂಹಕ್ಕೆ, ರಾಕ್ಷಸರಿಗೆ

ವಿಪರೀತ ಡಿಮ್ಯಾಂಡ್. ಇಂತಹ ಸಮಯದಲ್ಲಿ ಬೊಂಬೆ ಹಾಳಾದ ಕಾರಣ ಬಾಂಬೆಯವರೂ ಸಿಟ್ಟಿನಿಂದಿದ್ದರು. ಬ್ಯಾರಿ ಅವರಿಗೆ ಕೈಯಿಂದ ಹಣ ಕೊಟ್ಟು ಕಳಿಸಿದನಾದರೂ ಅವನಿಗೆ ಇದಕ್ಕೆಲ್ಲಾ ಕಾರಣನಾದ ಚಂದ್ರುವಿನ ಮೇಲೆ ವಿಶೇಷ ಕೋಪವಿತ್ತು.

ಅವನ ಕೋಪಕ್ಕೆ ಇನ್ನೊಂದು ಕಾರಣವೂ ಇತ್ತು. ಅವನು ಬಾಂಬೆಯಿಂದ ಬೊಂಬೆ ತರಿಸಿದಾಗ ಅವನ ಕಡೆಯವರೆಲ್ಲಾ ಅವನನ್ನು ಆಡಿಕೊಂಡಿದ್ದರು. "ನಾಮ ಬ್ಯಾರಿಗಳಿಗೆ ಯಾಕೋ ಗಣೇಶನ ಸಹವಾಸ" ಅಂತ ಎಷ್ಟು ಹೇಳಿದರೂ ಅವನು ಅದನ್ನ ಕಿವಿಗೆ ಹಾಕಿಕೊಂಡಿರಲಿಲ್ಲ. ಅವನು ಲೋಕ ಸುತ್ತಿದವನು. ಬಾಂಬೆಯಲ್ಲಿ ಹೇಗೆ ಜನ ಗಣಪತಿಗೆ ಖರ್ಚು ಮಾಡ್ತಾರೆ ಅಂತ ಅವನು ನೋಡಿದ್ದ. ಅದೇ ಕೆಲಸ ಊರಲ್ಲಿ ಮಾಡಬೇಕು. ನಾನು ಬ್ಯಾರಿ, ಗಣೇಶ ನಮ್ಮ ದೇವರಲ್ಲ - ಇವೆಲ್ಲಾ ಅವನಿಗೆ ಬೇಡವಾದ ವಿಷಯ. ಹಾಗಾಗಿ ಅವನು ಬಾಂಬೆಯಿಂದ ಬೊಂಬೆಗಳನ್ನ ಬಾಡಿಗೆಗೆ ತರಿಸಿಯೇ ಬಿಟ್ಟ. ಮೊದಲು ಛೀಮಾರಿ ಹಾಕಿದ ಅವನ ಕಡೆಯವರೇ ಈಗ ಹೆಂಗಸರು-ಮಕ್ಕಳನ್ನು ಕರೆದುಕೊಂಡು ಆಚೀಚೆ ಹೋಗುವ ಗಣೇಶನನ್ನು ನೋಡಲು ಬರುತ್ತಿದ್ದರು. ಇಷ್ಟೆಲ್ಲಾ ಮಾಡಿದ ತನಗೆ ಕೊನೆಯಲ್ಲಿ ಆ ಚಂದ್ರು ಮಾಡಿದ ಕೆಲಸದಿಂದ ಜನರ ಮಧ್ಯೆ ತಲೆ ಎತ್ತಿಕೊಂಡು ತಿರುಗಾಡದ ಹಾಗೆ ಆಯಿತು. "ನೋಡೋ ಎಷ್ಟು ಮಾಡಿದರು ಅಷ್ಟೆ! ಬ್ಯಾರಿ ಇಟ್ಟ ಗಣೇಶನನ್ನ ಅವರು ಕೊನೆಗೂ ಬಿಡಲಿಲ್ಲ. ಬೇಕಿತ್ತಾ ನಿನಗೆ" ಅಂತ ಅವನ ಕಡೆಯವರು ಹೇಳಿದಾಗ ಇವನು ಹೇಗೆ ಬಾಯಿ ಬಿಟ್ಟಾನು?

ಹೀಗೆ ಚಂದ್ರುವಿಗಾಗಿ ಕಾಯುವ ಒಂದು ದಂಡೇ ಆ ಊರಲ್ಲಿ ತಯಾರಾಗಿತ್ತು. ತಿಂಗಳಾಯಿತು, ಮೂರಾಯಿತು - ಅವನ ಸುಳಿವೇ ಇಲ್ಲ. ಕೊನೆಕೊನೆಗೆ ಅವನ ಹತ್ತಿರದವರನ್ನ ಬಿಟ್ಟರೆ ಅವನನ್ನ ಎಲ್ಲರೂ ಮರೆತುಹೋಗುವಷ್ಟು ಸಮಯ ಕಳೆಯಿತು. ಆದರೂ ವರ್ಷದಲ್ಲಿ ಒಂದು ಸಲ ಅವನನ್ನ ಊರಿಗೆ ಊರೇ ನೆನೆಯುವ ಹಾಗಿತ್ತು. ಯಾಕೆಂದರೆ ಅವತ್ತು ಅವನು ಗಲಾಟೆ ಮಾಡಿಹೋದಾಗಿನಿಂದ ಆ ಊರಲ್ಲಿ ಗಣೇಶನೇನೂ ಬರುತ್ತಿದ್ದ. ಆದರೆ ಹಿಂದಿನ ತರ ರಕ್ತ ಹರಿಯುತ್ತಿರಲಿಲ್ಲ, ಯಾಕೆಂದರೆ ಪೆಂಡಾಲಿಗೆ ಬಹುಮಾನ ಕೊಡುವ ವ್ಯವಸ್ಥೆಯನ್ನು ನಿಲ್ಲಿಸಿಬಿಟ್ಟಿದ್ದರು. ಹುಡುಗರೆಲ್ಲಾ ಇದಕ್ಕೆ ಕಾರಣನಾದ ಚಂದ್ರುವಿಗೆ ಹಿಡಿಶಾಪ ಹಾಕಿದರೆ, ದೊಡ್ಡವರು ಈ ಗಲಾಟೆ ನಿಲ್ಲಿಸಿದ ಚಂದ್ರುವಿಗೆ ಮನಸ್ಸಿನಲ್ಲೇ ಒಂದು ನಮಸ್ಕಾರ ಹಾಕುತ್ತಿದ್ದರು.

ಗೊತ್ತಿದ್ದಲ್ಲೆಲ್ಲಾ ಮಗನನ್ನು ಹುಡುಕಿಸಿ ಚಂದ್ರುವಿನ ಹತ್ತಿರದವರೂ ಸುಸ್ತಾಗಿದ್ದರು. ಅಂಜನ, ಜಾತಕ, ಮಲೆಯಾಳಿ ಕವಡೆ-ಊಹೂಂ ಯಾರಿಂದಲೂ ಚಂದ್ರುವಿನ ಪತ್ತೆ ಮಾಡಲು ಆಗಲಿಲ್ಲ. ಒಂದಕ್ಕಿಂತ ಒಂದು ದೇವರಿಗೆ ಹರಕೆ ಹೇಳಿಕೊಂಡರೂ ಅವನು ಬರಲಿಲ್ಲ ಅಂದ ಮೇಲೆ ಪೋಲೀಸ್ ಕಂಪ್ಲೇಂಟ್ ನಿಂದ ಬಂದಾನಾ? ಅಂತೂ ಎಲ್ಲೋ ಅವನ ಪಾಡಿಗೆ ಇರ್ತಾನೆ ಅಂತ ಎಲ್ಲರೂ ಸಮಾಧಾನ ಪಟ್ಟುಕೊಂಡಿದ್ದರು. ಇಂತಹ ಒಂದು ದಿವಸ ಇದ್ದಕ್ಕಿದ್ದಂತೆ ಚಂದ್ರು ಪ್ರತ್ಯಕ್ಷನಾದ. ಅದೂ ಗಣೇಶ ಬರಲು ಒಂದು ತಿಂಗಳು ಇದೆ ಅನ್ನೋವಾಗ. ಬಂದವನು ಮಾತ್ರ ಹಳೇ ಚಂದ್ರು ಆಗಿರಲಿಲ್ಲ. ಅದೇ ಮುಖ ಇದ್ದ ಇನ್ಯಾರೋ ಇದ್ದ ಹಾಗೆ ಇದ್ದುಬಿಟ್ಟ.

ಮೊದಲೆಲ್ಲಾ ಮಾತಾಡದೆ ಒಂದು ಕ್ಷಣವೂ ಕೂರದವನು ಈಗ ಮೂರು ಮಾತಿಗೆ ಒಂದು ಉತ್ತರ ಕೊಡುತ್ತಿದ್ದ. ಯಾರು ಏನು ಕೇಳಿದರೂ ತಾನು ಇಷ್ಟು ಸಮಯ ಎಲ್ಲಿದ್ದೆ ಅಂತ ಮಾತ್ರ ಬಾಯಿಬಿಟ್ಟಿರಲಿಲ್ಲ. ಊರಿಗೆ ಬಂದು ಅವನು ಮಾಡಿದ ಮೊದಲ ಕೆಲಸವೆಂದರೆ ತನ್ನ ಬೀದಿಯಲ್ಲಿ ಮೊದಲಿನಿಂದಲೂ ಗಣೇಶ ಕೂರಿಸುವ ಪ್ರೆಸಿಡೆಂಟರ ಮನೆಗೆ ಹೋಗಿ ಈ ವರ್ಷ ಪೆಂಡಾಲನ್ನು ತಾನೇ ಮಾಡುವುದಾಗಿ ಹೇಳಿದ್ದು. ಮೊದಲಿನಿಂದಲೂ ಚಂದ್ರುವೇ ಈ ಕೆಲಸ ಮಾಡುತ್ತಿದ್ದರಿಂದ ಅವರಿಗೆ ಅಭ್ಯಂತರ ಇರಲಿಲ್ಲ. ಆದರೆ ಓಡಿಹೋದ ವರ್ಷ ಅವನು ಮಾಡಿದ ಗಲಾಟೆ ನೆನಪಾಗಿ ಸ್ವಲ್ಪ ಹುಶಾರಾಗಿರುವಂತೆ ಹೇಳಿದರು. "ನಾಳೆ ಬಂದು ದುಡ್ಡು ತೆಕೊಂಡು ಹೋಗು" ಅಂತ ಹೇಳಿದ್ದು ಕಿವಿಗೆ ಬೀಳದಂತೆ ಚಂದ್ರು ಅಲ್ಲಿಂದ ನಡೆದುಬಿಟ್ಟ.

ಮರುದಿನ ಗಣೇಶ ಇಡುವ ಮೈದಾನದ ಹತ್ತಿರ ಒಂದು ದೊಡ್ಡ ಪ್ಲಾಸ್ಟಿಕ್ ಟೆಂಟ್ ಕಟ್ಟಿಸಿ ಅದರ ಒಳಗೆ ಸೇರಿಕೊಂಡುಬಿಟ್ಟ. ಬರುವಾಗ ತನ್ನೊಡನೆ ತಂದಿದ್ದ ದೊಡ್ಡ ದೊಡ್ಡ ಚೀಲಗಳನ್ನು ಹೊತ್ತುಕೊಂಡು ಟೆಂಟಿನ ಒಳಗೆ ಹೋದ ಚಂದ್ರು ಯಾವಾಗಾದರೊಮ್ಮೆ ಮನೆಗೆ ಬರುತ್ತಿದ್ದ. ಯಾರನ್ನು ಒಳಗೆ ಬಿಡದ ಅವನು ಇನ್ನೇನು ಗಣೇಶ ಬರಲು ಒಂದು ವಾರ ಇದೆ ಅನ್ನೋವಾಗ ಟೆಂಟ್ ಮುಚ್ಚಿ ಪೆಂಡಾಲ್ ಹಾಕಲು ಶುರುಮಾಡಿದ. ಮದುವೆಮನೆಯ ತರಹ ಪೆಂಡಾಲ್ ಶೋಭಿಸುತ್ತಿತ್ತು. ಒಬ್ಬನೇ ಕಲಸ ಮಾಡುತ್ತಿದ್ದ ಚಂದ್ರು ಬೇಕಾದಾಗ ಕೆಲಸದವರನ್ನು ತಾನೇ ಕರೆದು ತರುತ್ತಿದ್ದ. "ಈ ಸಲ ಏನಾದರೂ ಬಹುಮಾನ ಇದ್ದಿದ್ದರೆ ನಾವೇ ಗೆಲ್ಲುತ್ತಿದ್ದೆವು" ಅಂತ ಕಮಿಟಿ ಪ್ರೆಸಿಡೆಂಟರು ಜೋರಾಗಿ ಹೇಳಿದ್ದು ಈ ಕಾರಣಕ್ಕಾಗಿಯೇ.

ಚಂದ್ರು ಈ ಮಾತಿಗೆಲ್ಲ ತಲೆ ಕೆಡಿಕೊಳ್ಳುವವನ ಹಾಗೆ ಕಾಣಿಸಲಿಲ್ಲ. ಯಾಮದೋ ಜಿದ್ದಿಗೆ ಬಿದ್ದವನಂತೆ ಪೆಂಡಾಲನ್ನು ಸಿಂಗಾರಗೊಳಿಸಿದ. ಕೊನೆಗೂ ಗಣೇಶ ಬರುವ ಹಿಂದಿನ ದಿನ ರಾತ್ರಿ ಪ್ರೆಸಿಡೆಂಟರು ಮತ್ತೆ ಕೆಲಮ ಹುಡುಗರನ್ನು ತಾನು ಕಟ್ಟಿಕೊಂಡಿದ್ದ ಟೆಂಟಿನೊಳಕ್ಕೆ ಕರೆದುಕೊಂಡು ಹೋದ. ಅಲ್ಲಿ ಅವರಿಗೆ ಮಹಾ ಆಶ್ಚರ್ಯ ಕಾದಿತ್ತು. ಅವರು ಎಂದೂ ನೋಡದಷ್ಟು ಸುಂದರ ಗಣೇಶನ ಮೂರ್ತಿ ಅಲ್ಲಿತ್ತು . ಅಲ್ಲಿದ್ದವರೆಲ್ಲಾ ಬಿಟ್ಟ ಬಾಯಿ ಬಿಟ್ಟಂತೇ ಇರುವಾಗ ತಾನು ಕರೆದುಕೊಂಡು ಬಂದ ಹುಡುಗರಿಗೆ ಗಣೇಶನನ್ನು ಪೆಂಡಾಲಿಗೆ ಸಾಗಿಸುವಂತೆ ಹೇಳಿದ. ಅಲ್ಲಿ ಕೆಲಮ ಹೊತ್ತು ಕೆಲಸ ಮಾಡಿದ ಮೇಲೆ ಸ್ವಿಚ್ ಹಾಕಿದರೆ ಮೇಲಿಂದ ಹೂಮಳೆ ಆಗುತ್ತಿತ್ತು. ಬಿದ್ದ ಹೂವಿನ ರಾಶಿಯ ಮಧ್ಯದಿಂದ ಬಿಳಿ ಮೋಡದಂತೆ ಹೊಗೆ ಬರುತ್ತಿತ್ತು. ಇದರ ಅಡಿಯಿಂದ ಗಣೇಶ ಮೆಲ್ಲನೆ ಮೇಲೆ ಬರುತ್ತಿದ್ದರೆ ಇದ್ದವರೆಲ್ಲಾ ಪವಾಡ ನೋಡುತ್ತಿರುವವರಂತೆ ನಿಂತುಬಿಟ್ಟರು.

"ಈ ಸಲ ಎಲ್ಲರೂ ನಮ್ಮಲ್ಲಿಗೇ ಬರಬೇಕು" ಅಂತ ಚಂದ್ರು ಬಾಯಿಬಿಟ್ಟಾಗ ಅಲ್ಲಿದ್ದವರಿಗೆಲ್ಲಾ ಇಲ್ಲವೆನ್ನಲಾಗಲಿಲ್ಲ. ರಾತ್ರಿ ಎಲ್ಲರೂ ಮನೆಗೆ ಹೋದ ಮೇಲೆ ಚಂದ್ರು ತನ್ನ ನಂಬಿಕೆಯ ಹುಡುಗರ ಜೊತೆಯಲ್ಲಿ ಅಲ್ಲೇ ಇದ್ದುಬಿಟ್ಟ. ಬೆಳಗ್ಗೆ ಎದ್ದು ಎಲ್ಲರೂ ಪೆಂಡಾಲಿಗೆ ಬರ್ತಾರೆ, ಗಣೇಶ ಆವಾಗಲೇ ಅಲ್ಲಿ ಶೋಭಿಸುತ್ತಾ ಕೂತಿದ್ದ. ಬಂದವರೆಲ್ಲಾ ಗಣೇಶನನ್ನು ನೋಡಿ ಮಾಡಿದ್ದು ನಮ್ಮ ಚಂದ್ರುನಾ ಅಂತ ಮಾತಾಡಿಕೊಂಡರು. ಆದರೆ ಸುತ್ತ ಎಲ್ಲೂ ಚಂದ್ರು ಮಾತ್ರ ಇರಲಿಲ್ಲ.

"ಅಮ್ಮಾ ಗಣೇಶ ಬಂದ ದಿನ ಯಾಕೆ ಯಾರೂ ಚಂದ್ರನನ್ನ ನೋಡಬಾರದು?" ಚಿಕ್ಕ ಹುಡುಗಿಯೊಬ್ಬಳು ಅಮ್ಮನನ್ನು ಕೇಳುತ್ತಿದ್ದರೆ ಪೆಂಡಾಲಿನಲ್ಲಿದ್ದವರೆಲ್ಲಾ ಚಂದ್ರುವನ್ನು ಹುಡುಕುಮದರಲ್ಲೇ ತೊಡಗಿದ್ದರು.

**ಭಾಷೆ**

Wednesday, March 28, 2007

University of Lordshire

Dr. James Adams, Professor Emeritus, School of Comparative Linguistics ಎಂಬ ಹೆಸರಿದ್ದ ಕೊಠಡಿಯೊಳಗಡೆ ಒಂದು ವಯಸ್ಸಾದ ದೇಹ ಕುಳಿತಿತ್ತು. ಸುತ್ತೆಲ್ಲಾ ಪುಸ್ತಕದ ರಾಶಿ. ಯಾವುಯಾವುದೋ ಭಾಷೆಯ ಪುಸ್ತಕಗಳು. ಪ್ರೊಫೆಸರಿಗೆ ರಿಟೈರಾಗಿ ಐದು ವರ್ಷವಾಗಿದ್ದರೂ ಅವರನ್ನು ಯೂನಿವರ್ಸಿಟಿ ಮನೆಗೆ ಕಳಿಸಿರಲಿಲ್ಲ. ಈ ಕೋಣೆಯಲ್ಲಿ ಅವರು ತಮ್ಮ ಜೀವನದ ಅರ್ಧ ಆಯಸ್ಸನ್ನು ಕಳೆದಿದ್ದರು. ಆದರೆ ಈಗ ಅವರಿಗೆ ದೊಡ್ಡ ಆಘಾತ ಒಂದು ಬಂದಿತ್ತು. ಈ ವರ್ಷದ ಯೂನಿವರ್ಸಿಟಿ ಬಜೆಟ್ಟಿನಲ್ಲಿ ಇವರ ವಿಭಾಗಕ್ಕೆ ಕೇಳಿದಕ್ಕಿಂತ ಬಹಳ ಕಡಿಮೆ ಹಣ ಮಂಜೂರಾಗಿತ್ತು. ಅದರ ಜೊತೆಗೆ ಛಾನ್ಸಲರ್ ಒಂದು ಮೆಮೊ ಕೂಡ ಇವರ ವಿಭಾಗಕ್ಕೆ ಕೊಟ್ಟಿದ್ದರು. ಅದರ ಸಾರಾಂಶವೆಂದರೆ "ಮುಂದಿನ ವರ್ಷದಿಂದ ಯೂನಿವರ್ಸಿಟಿ ಈ ವಿಭಾಗಕ್ಕೆ ಸಹಾಯ ಕೊಡುವುದನ್ನು ನಿಲ್ಲಿಸುತ್ತದೆ. ಯಾಕೆಂದರೆ ವರ್ಷದಿಂದ ವರ್ಷಕ್ಕೆ ನಿಮ್ಮ ವಿಭಾಗಕ್ಕೆ ಸೇರುತ್ತಿರುವ ವಿಧ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕಮ್ಮಿಯಾಗುತ್ತಿದೆ. ನಿಮ್ಮ ವಿಭಾಗದಲ್ಲಿ ಕೆಲಸ ಮಾಡುವ ಸಂಶೋಧಕರು ಈ ಕೂಡಲೇ ಸರಕಾರದಿಂದ ಅನುದಾನ ಬರುವಂತಹ ಸಂಶೋಧನೆ ಮಾಡತಕ್ಕದ್ದು. ಇಲ್ಲವಾದರೆ ಬರುವ ವರ್ಷದಿಂದ ಈ ವಿಭಾಗವನ್ನು ಮುಚ್ಚಬೇಕಾಗುತ್ತದೆ".

ಇಂತಹ ಒಂದು ಸುದ್ದಿಯನ್ನು ಪ್ರೊ. ಆಡಮ್ಸ್ ಅವರಿಗೆ ಕೊಟ್ಟ ವ್ಯಕ್ತಿ ಆ ವಿಭಾಗದ ಮುಖ್ಯರಾದ ಡಾ|| ಸ್ಕಾಟ್ ವೇಲ್ಸ್ ಅವರು ಮೂಲತಃ ಪ್ರೊಫೆಸರರ ಶಿಷ್ಯರೇ. ತಮ್ಮ ಪ್ರಿಯ ಶಿಷ್ಯ ಮತ್ತು ಅದಕ್ಕಿಂತ ಹೆಚ್ಚಾಗಿ ತಮ್ಮ ಆತ್ಮೀಯ ಗೆಳೆಯನಾದ ವೇಲ್ಸ್ ಅವರನ್ನೇ ತಮ್ಮ ನಂತರ ವಿಭಾಗದ ಮುಖ್ಯರನ್ನಾಗಿ ಮಾಡಬೇಕೆಂದು ಪ್ರೊಫೆಸರ್ ಕೇಳಿಕೊಂಡಾಗ ಯೂನಿವರ್ಸಿಟಿ ಒಪ್ಪಿಕೊಂಡಿತ್ತು. ಡಾ|| ವೇಲ್ಸ್ ಏನೂ ಕಡಿಮೆ ಸಾಧನೆ ಮಾಡಿದವರಲ್ಲ. ಮೊದಲಿಗೆ ತಮ್ಮ ಗುರು ಡಾ|| ಆಡಮ್ಸ್ ಅವರ ಜೊತೆಗೂಡಿ ಬರೆದ ಉತ್ಕೃಷ್ಟ ಬರಹ ಇವತ್ತು "ಜೇಮ್ಸ್-ವೇಲ್ಸ್ ಥಿಯರಿ" ಎಂದೇ ಪ್ರಸಿದ್ಧವಾಗಿತ್ತು . ಇದರಲ್ಲಿ ಗುರು ಶಿಷ್ಯರು ಭಾಷೆಯ ಭಾಷ್ಯವನ್ನೇ ಹೊಸದಾಗಿ ಬರೆದಿದ್ದರು. ಅವರ ಪ್ರಕಾರ ಯಾವ ಭಾಷೆಯೂ ಹುಟ್ಟುವುದೂ ಇಲ್ಲ ಹಾಗಾಗಿ ಸಾಯುವುದೂ ಇಲ್ಲ; ಅದು ಬೆಳೆಯುತ್ತದೆ ಮತ್ತು ರೂಪಾಂತರ ಹೊಂದುತ್ತದೆ. ಹಾಗಾಗಿ ನೂರಾರು ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದ ಭಾಷೆ ಮತ್ತೆ ನೂರು ವರ್ಷಗಳ ನಂತರ ಬೇರೆ ರೂಪ ಪಡೆಯುತ್ತದೆ. ನಾವು ಭಾಷೆಯ ನಿಜ ಸ್ವರೂಪವನ್ನು ತಿಳಿಯಬೇಕಾದರೆ ಭಾಷೆಯನ್ನು ಏಕಾಂತದಲ್ಲಿ ಅಭ್ಯಾಸ ಮಾಡಬಾರದು, ಬದಲಿಗೆ, ಆ ಭಾಷೆಯನ್ನು ಸಮಕಾಲೀನ ಮತ್ತು ಸುತ್ತಮುತ್ತಲಿನ ಈಚಿನ ಭಾಷೆಗಳಿಗೆ ಹೋಲಿಸಿ ತೌಲನಿಕ ಅಧ್ಯಯನ ಮಾಡಬೇಕೆಂಬುದೇ ಅವರ ವಾದ.

ಈ ಥಿಯರಿ ಹೊರಬಂದಾದ ಮೇಲೆ ಭಾಷೆಗಳ ತೌಲನಿಕ ಅಧ್ಯಯನಕ್ಕೆ ವಿಶೇಷ ಮಹತ್ವ ದೊರಕಿತ್ತು. ಆಗ ಈ ಯೂನಿವರ್ಸಿಟಿಯಲ್ಲಿ ಈ ಹೊಸ ವಿಭಾವನ್ನು ತೆರೆದು ಅದಕ್ಕೆ ಡಾ|| ಆಡಮ್ಸ್ ಅವರನ್ನು ಮುಖ್ಯಸ್ಥರನ್ನಾಗಿ ಮಾಡಲಾಗಿತ್ತು. ವಿಶ್ವದ ಅನೇಕ ದೇಶಗಳ ಭಾಷಾ ಶಾಸ್ತ್ರಜ್ಞರನ್ನು ಕಲೆಹಾಕಿ ಅವರ ನಡುವೆ ಸಂವಾದ ನಡೆಸುವ ಕೆಲಸವನ್ನು ಈ ವಿಭಾಗ ಮೊದಲಿನಿಂದಲೂ ಮಾಡಿಕೊಂಡು ಬಂದಿತ್ತು. ವಿಚಾರ ವಿನಿಮಯ ವಿಭಾಗದ ಮುಖ್ಯ ಕೆಲಸ. ಅದಕ್ಕೆ ಬೇರೆ ಬೇರೆ ದೇಶದಿಂದ ಭಾಷಾ ಪಂಡಿತರನ್ನು ಕರೆಸಬೇಕಿತ್ತು. ಸಂಗ್ರಹಿಸಿದ ವಿಷಯವನ್ನೆಲ್ಲಾ ಪುಸ್ತಕದ ಮೂಲಕ ಪ್ರಕಟಿಸಬೇಕಿತ್ತು. ಇದಕ್ಕೆಲ್ಲಾ ಹಣದ ಅವಶ್ಯಕತೆ ಇತ್ತು. ಮೊದಮೊದಲು ಸರಕಾರವೇ ಈ ವಿಭಾಗಕ್ಕೆ ಹಣ ಬಿಡುಗಡೆ ಮಾಡುತ್ತಿತ್ತು. ಮುಕ್ತ ಮಾರುಕಟ್ಟೆ ಪ್ರತಿಪಾದಿಸುವ ಸರಕಾರ ಬಂದೊಡನೆ ಯೂನಿವರ್ಸಿಟಿಗಳು ತಮಗೆ ಬೇಕಾದ ಹಣವನ್ನು ತಾವೇ ದುಡಿದುಕೊಳ್ಳಬೇಕಾಗಿ ಬಂತು. ಹುಡುಗರು ಹೆಚ್ಚಾಗಿ ಸೇರುವ ವಿಭಾಗದವರು ಫೀಸ್ ಹೆಚ್ಚಿಸಿ ಬದುಕುವ ದಾರಿ ನೋಡಿಕೊಂಡವು. ಆದರೆ ಭಾಷೆಯಂತಹ ವಿಷಯ ಕಲಿಯಲು ಹೆಚ್ಚು ಮಂದಿ ಬರುತ್ತಿರಲಿಲ್ಲ. ಬರುತ್ತಿದ್ದವರೂ ಯಾವುದೋ ಕೆಲಸ ನಿಮಿತ್ತ ಬೇರೆ ದೇಶಕ್ಕೆ ಹೋಗಬೇಕಿದ್ದರಿಂದ ಆ ದೇಶದ ಭಾಷೆಯನ್ನು ಕಲಿಯಲಷ್ಟೇ ಬರುತ್ತಿದ್ದರು.

ಇಂತಹ ಸಮಯದಲ್ಲಿ ಡಾ|| ಆಡಮ್ಸ್ ತಮಗಿರುವ ವೈಯಕ್ತಿಕ ಪರಿಚಯದಿಂದ ಬೇರೆ ಬೇರೆ ದೇಶಗಳ ಸರಕಾರಗಳನ್ನು ಸಂಪರ್ಕಿಸಿ ಆ ದೇಶದ ಭಾಷೆಗಳ ಮೇಲೆ ಅಧ್ಯಯನ ನಡೆಸಲು ಹಣ ಕೊಡುವಂತೆ ಕೇಳಿಕೊಂಡಿದ್ದರು. ಕೆಲವರು ಪ್ರತಿಕ್ರಿಯಿಸಿದರೂ ಪರಿಸ್ಥಿತಿ ಉತ್ತವಾಗಿ ಏನೂ ಇರಲಿಲ್ಲ. ಡಾ|| ಆಡಮ್ಸ್ ಪದೇ ಪದೇ ಸೆನೆಟ್ ಮೀಟಿಂಗಳಲ್ಲಿ ಯೂನಿವರ್ಸಿಟಿಯನ್ನು ಲಾಭದಾಯಕ ಉದ್ಯಮವನ್ನಾಗಿ ನೋಡದಂತೆ ಪ್ರಾರ್ಥಿಸಿದರೂ ಅವರ ಮಾತನ್ನು ಯಾರೂ ಕೇಳುತ್ತಿರಲಿಲ್ಲ. ಯೂನಿವರ್ಸಿಟಿಗಳು ಹಣ ಮಾಡುವ ಸಂಸ್ಥೆಗಳಾಗದೆ ಪ್ರಥಮ ದರ್ಜೆಯ ಸಂಶೋಧನಾ ಮತ್ತು ಕಲಿಕಾ ಕೇಂದ್ರ ಆಗಬೇಂಬ ಅವರ ಮಾತು ಜಾಗತೀಕರಣದ ಈ ಹೊಸ ವ್ಯವಸ್ಥೆಯಲ್ಲಿ ಅರ್ಥ ಕಳೆದುಕೊಂಡಿತ್ತು. ಇಲ್ಲಿ ಲಾಭ ಬರುವ ಉದ್ದಿಮೆಗೇ ಮಣೆ; ಅದು ವಿದ್ಯೆಯಾದರೂ ಸರಿ, ಕೈಗಾರಿಕೆಯಾದರೂ ಸರಿ.

ತಮ್ಮ ಜೀವನವಿಡೀ ಮಾಡಿದ ಸಂಶೋಧನೆ ಈಗ ಲೆಕ್ಕಕ್ಕಿಲ್ಲ ಅಂದರೆ ಪ್ರೊಫೆಸರರಿಗೆ ಹೇಗಾಗಿರಬೇಡ. ತಮ್ಮ ಶಿಷ್ಯ ವೇಲ್ಸ್ ಈ ಕುರಿತು ಆಗಿಂದ್ದಾಗೆ ಸುಳಿಮ ನೀಡುತ್ತಿದ್ದರೂ ಪರಿಸ್ಥಿತಿ ಈ ಮಟ್ಟಕ್ಕೆ ಇಳಿಯುತ್ತದೆ ಎಂಬ ವರು ಅಂದುಕೊಂಡಿರಲಿಲ್ಲ. ತಾಮ ಕಷ್ಟಪಟ್ಟು ಕಟ್ಟಿದ ವಿಭಾಗದ ಜೀವ ಈಗ ಅಪಾಯದಲ್ಲಿದೆ. ಅದನ್ನು ಹೇಗಾದರೂ ಮಾಡಿ ಉಳಿಸಬೇಕು ಅಂತ ಡಾ|| ಆಡಮ್ಸ್ ಕಳೆದ ಮೂರು ದಿವಸದಿಂದ ಮನೆಗೂ ಹೋಗದೆ ಯೋಚಿಸುತ್ತಾ ಕುಳಿತ್ತಿದ್ದಾರೆ. ತಮ್ಮ ಜೀವನ ಇಡೀ ವ್ಯಯಿಸಿ ಕೂಡಿಟ್ಟ ಪುಸ್ತಕಗಳು, ದೇಶ ದೇಶ ಸುತ್ತಿ ಸಂಶೋಧನೆ ಮಾಡುತ್ತಿದ್ದಾಗ ಬರೆದಿಟ್ಟುಕೊಂಡಿದ್ದ ರಿಸರ್ಚ್ ಡೈರಿಗಳು ಅವರ ಮುಂದಿದೆ.

ಅವರಿಗೆ ಒಂದು ಹೊಸ ಸಮಸ್ಯೆ ಬೇಕಿತ್ತು. ಯಾರೂ ಈವರಗೆ ಉತ್ತರಿಸದ ಪ್ರಶ್ನೆಯೊಂದನ್ನು ಅವರು ಮೊದಲು ಕಂಡುಹುಡುಕಬೇಕಿತ್ತು. ಮತ್ತು ಆ ಪ್ರಶ್ನೆ ಈ ಹೊತ್ತಿನಲ್ಲಿ ಬಹಳ ಮಹತ್ವ ಉಳ್ಳದ್ದೂ ಆಗಿರಬೇಕಿತ್ತು. ಅಂತಹ ಪ್ರಶ್ನೆಯನ್ನು ಹುಡುಕಿ, ಮತ್ತೆ ಅದಕ್ಕೆ ತಮ್ಮ ಸಂಶೋಧನೆಯಿಂದ ಉತ್ತರ ಕೊಟ್ಟರೆ ಸಾಕು - ತಮ್ಮ ವಿಭಾಗ ಉಳಿಯುತ್ತದೆ. ಆ ನಂಬಿಕೆ ಅವರಲ್ಲಿತ್ತು. ಅವರು ಅಂತಹ ಪ್ರಶ್ನೆಯನ್ನು ಹುಡುಕುತ್ತಿದ್ದರು. ಪುಸ್ತಕಗಳ ರಾಶಿಯಲ್ಲಿ ಮೈಮರೆತ್ತಿದ್ದವರ ಗಮನ ಸೆಳೆದದ್ದು ಕೆಂಪು ಬಣ್ಣದ ಡೈರಿ. ಅದರ ಮೇಲಿನ ಧೂಳನ್ನು ಕೊಡವಿ ನೋಡಿದರೆ ಪುಸ್ತಕ ಮೇಲೆ ದಪ್ಪ ಅಕ್ಷರದಲ್ಲಿ ಬರೆದಿತ್ತು - Field Notes from research trip to Mysore - 1955 ಪ್ರೊಫೆಸರರಿಗೆ ತಿಳಿದುಹೋಯ್ತು "ನನ್ನ ವಿಭಾಗ ಇನ್ನು ಮುಚ್ಚದು. ನನಗೆ ಬೇಕಾದ ವಸ್ತು ಇಲ್ಲಿದೆ, ಈ ಪುಸ್ತಕದಲ್ಲಿ"

****************************************************************
*******************************************

1950

ಡಾ|| ಆಡಮ್ಸ್ ಅವರ ಹೊಸ ಥಿಯರಿ ಆಗ ತಾನೇ ಪ್ರಪಂಚದ ವಿದ್ವಾಂಸರ ಗಮನ ಸೆಳೆಯುತ್ತಿತ್ತು. ತಮ್ಮ ಸಿದ್ಧಾಂತದ ಪ್ರಚಾರಕ್ಕಾಗಿ ಪ್ರೊಫೆಸರರು ಬೇರೆ ಬೇರೆ ಯೂನಿವರ್ಸಿಟಿಗಳಿಗೆ ಭೇಟಿ ನೀಡಿ ಅಲ್ಲಿನ ಸಂಶೋಧಕರೊಂದಿಗೆ ಸಂವಾದ ನಡೆಸುತ್ತಿದ್ದರು. ಇಂತಹ ಒಂದು ಸಂದರ್ಭದಲ್ಲಿ ಅವರಿಗೆ ಡಾ|| ಕಮ್ಮಕೋಳಿ ವಿಶ್ವನಾಥನ್ ಅವರ ಪರಿಚಯವಾಗಿತ್ತು. ಮೂಲತಃ ತಮಿಳುನಾಡಿನವರಾದ ಅವರು ಪ್ರಕಾಂಡ ಪಂಡಿತರು. ವೈದ್ಯಕೀಯ ಓದಲು ವಿದೇಶಕ್ಕೆ ಬಂದವರು ಇಲ್ಲಿ ಸಂಸ್ಕೃತ ಅಧ್ಯಯನ ಮತ್ತು ಸಂಶೋಧನೆಯ ಬಗ್ಗೆ ವಿದೇಶಿಯರಲ್ಲಿದ್ದ ಆಸಕ್ತಿ ಕಂಡು ತಾವೂ ಭಾಷಾ ವಿಜ್ಞಾನ ಕಲಿಯಲು ಪ್ರಾರಂಭಿಸಿದರು. ವೈದಿಕ ಕುಟುಂಬದಿಂದ ಬಂದ ಅವರಿಗೆ ಸಹಜವಾಗಿಯೇ ಪ್ರಸ್ಥಾನತ್ರಯಗಳ ಬಗ್ಗೆ ಆಳವಾಗಿ ತಿಳಿದಿತ್ತು. ಜೊತೆಗೆ ಸಂಗಂ ಸಾಹಿತ್ಯವನ್ನು ತಂದೆಯಿಂದ ತಿಳಿದುಕೊಂಡಿದ್ದರು. ಸ್ವಾತಂತ್ರಪೂರ್ವ ಭಾರತದಲ್ಲಿ ಸಾಮಾನ್ಯವಾಗಿ ಸ್ಥಿತಿವಂತ ಬ್ರಾಹ್ಮಣ ಮನೆಗಳಲ್ಲಿ ಇಂಗ್ಲಿಷ್ ಸಾಹಿತ್ಯದ ಓದು ನಡೆಯುತ್ತಿತ್ತು. ಅದರಂತೆ ವಿಶ್ವನಾಥನ್ ಕೂಡ ಸಾಕಷ್ಟು ಓದಿಕೊಂಡಿದ್ದರು. ಇದರಿಂದ ಅವರಿಗೆ ಭಾಷಾ ಸಂಶೋಧನೆಯಲ್ಲಿ ವಿಶೇಷ ಅನುಕೂಲವಿತ್ತು.

ದೇವನಾಗರೀ ಲಿಪಿ ಉತ್ತರ ಭಾರತದ ಬೇರೆ ಬೇರೆ ಭಾಷೆಗಳ ಲಿಪಿಯಾಗಿ ಪರಿವರ್ತನೆಗೊಂಡ ಪ್ರಕ್ರಿಯೆಯ ಬಗ್ಗೆ ವಿಶ್ವನಾಥನ್ ಆಗ ಸಂಶೋಧನೆ ನಡೆಸುತ್ತಿದ್ದರು. ಡಾ|| ಆಡಮ್ಸ್ ಅವರ ಸೂತ್ರದ ಅನ್ವಯವೇ ಅವರೂ ಕೆಲಸ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಡಾ|| ಆಡಮ್ಸ್ ಅವರು ತಮ್ಮ ಯೂನಿವರ್ಸಿಟಿಗೆ ಬಂದದ್ದು ವಿಶ್ವನಾಥನ್ ಅವರಿಗೆ ಅಪಾರ ಸಂತೋಷವಾಗಿತ್ತು. ಡಾ|| ಆಡಮ್ಸ್ ಕೂಡ ಭಾರತದ ಭಾಷೆಗಳ ಮೇಲೆ ವಿಶೇಷ ಅಧ್ಯಯನ ನಡೆಸಲು ಅನುವಾಗುತ್ತಿದ್ದರು. ಇವರಿಬ್ಬರ ಅಂದಿನ ಮಾತುಕತೆ ಮುಂದಿನ ಮಹತ್ವದ ಯೋಜನೆಗೆ ಬುನಾದಿಯಾಗುತ್ತದೆ ಎಂಬ ವರಿಬ್ಬರೂ ಅಂದು ತಿಳಿದುಕೊಂಡಿರಲಿಲ್ಲ .

ಮಾತುಕತೆಯ ನಡುವೆ ಡಾ|| ಆಡಮ್ಸ್ ಅವರು ವಿಶ್ವನಾಥನ್ ಅವರಿಗೆ ಒಂದು ಸಲಹೆ ನೀಡಿದರು. ಉತ್ತರ ಭಾರತದ ಭಾಷೆಗಳ ಲಿಪಿಗಳು ಒಂದೇ ದೇವನಾಗರಿಯಿಂದ ಬಂದವೆಂಬುದು ಬಹಳ ಸುಲಭದ ವಿಷಯ. ಅದಕ್ಕೆ ಬದಲಾಗಿ ದಕ್ಷಿಣಾದಿ ಭಾಷೆಗಳ ಮೂಲವನ್ನು ಏಕೆ ಹುಡುಕಬಾರದು? ಎಂಬ ಡಮ್ಸ ಪ್ರಶ್ನೆಗೆ ವಿಶ್ವನಾಥನ್ ಬಳಿ ಉತ್ತರವಿರಲಿಲ್ಲ. ದಕ್ಷಿಣದಲ್ಲಿ ಪ್ರಚಲಿತವಿರುವ ಭಾಷೆಗಳಲ್ಲಿ ಕನ್ನಡ, ತೆಲುಗು ಲಿಪಿಗಳು ಮಾತ್ರ ಒಂದನ್ನೊಂದು ಹೋಲುತ್ತವೆ. ಆದರೆ ತಮಿಳು ಮತ್ತು ಮಲೆಯಾಳಿ ಲಿಪಿಗಳು ತಮ್ಮದೇ ಸ್ವಂತಿಕೆಯಿಂದ ಕನ್ನಡ ಲಿಪಿಗಿಂತ ಬೇರೆಯಾಗಿ ನಿಲ್ಲುತ್ತದೆ. ಭೌಗೋಳಿಕವಾಗಿ ಸಮೀಪವಿರುವ ಜನಾಂಗಗಳ ಸಂಸ್ಕೃತಿ, ಆಹಾರ, ಭಾಷೆ - ಎಲ್ಲಾ ಸುಮಾರಿಗೆ ಒಂದೇ ತರಹ ಇರುಮದು ಸಾಮಾನ್ಯ ವಿಷಯ. ಆದರೆ ಇಲ್ಲಿ ಕೆಲಮ ಭಾಷೆಗಳು ಸಂಸ್ಕೃತದಿಂದ ಬಹಳವಾಗಿ ಪ್ರಭಾವಹೊಂದಿದ ಭಾಷೆಗಳಿವೆ, ಕೆಲಮ ಸಂಪೂರ್ಣವಾಗಿ ಇದರಿಂದ ತಪ್ಪಿಸಿಕೊಂಡಿವೆ. ಆದರೂ ಇಮಗಳ ಲಿಪಿ ಸಂಪೂರ್ಣ ಬೇರೆ ಬೇರೆ ಇದೆ. ಇದು ಹೇಗೆ ಸಾಧ್ಯ ಎಂಬ ॰ || ಆಡಮ್ಸ್ ಅವರ ಪ್ರಶ್ನೆ ವಿಶ್ವನಾಥನ್ ನನ್ನು ಯೋಚಿಸುವಂತೆ ಮಾಡಿತು.

ಮುಂದೆ ಬಹಳ ವರ್ಷಗಳ ಕಾಲ ವಿಶ್ವನಾಥನ್ ನಿಂದ ಯಾಮದೇ ಉತ್ತರ ಬರದ ಕಾರಣ ಡಾ|| ಆಡಮ್ಸ್ ಈ ವಿಷಯವನ್ನೇ ಮರೆತೇ ಬಿಟ್ಟಿದ್ದರು. ಆದರೆ1954 ನಲ್ಲಿ ಒಂದು ದಿನ ಡಾ|| ಆಡಮ್ಸ್ ಅವರಿಗೆ ಟಪಾಲೊಂದು ಬಂದಿತ್ತು. ಅದು ವಿಶ್ವನಾಥನ್ ನ ಪತ್ರ, ಅದನ್ನು ಅವರು ಮೈಸೂರಿನಿಂದ ಬರೆದಿದ್ದರು. ಪತ್ರವನ್ನು ಓದಿ ಡಾ|| ಆಡಮ್ಸ್ ಮೂರ್ಛೆ ಹೋಗುಮದೊಂದೇ ಬಾಕಿ. ಆ ಪತ್ರದಲ್ಲಿ ಅಂತಹ ವಿಸ್ಫೋಟಕ ಮಾಹಿತಿ ಒಂದಿತ್ತು.

****************************************************************
*****************************************

India 1954

ವಿಶ್ವನಾಥನ್ ಡಾ||ಆಡಮ್ಸ್ ಅವರ ಪ್ರಶ್ನೆಗೆ ಉತ್ತರ ಹುಡುಕಲು ನೇರವಾಗಿ ಭಾರತಕ್ಕೆ ಬಂದಿದ್ದರು. ತಮಿಳು ಚನ್ನಾಗಿ ಬರುತ್ತಿದ್ದ ಅವರು ಮೊದಲು ತಮಿಳು ಲಿಪಿಯ ಮೂಲದ ಬಗ್ಗೆ ಅಧ್ಯಯನ ನಡೆಸಿದರು. ನಂತರ ಮದರಾಸಿನ Indian Language Institute ನಲ್ಲಿ ಸಂಶೋಧನೆ ಮಾಡಲು ಹೋದಾಗ ಅಲ್ಲಿ ಅವರಿಗೆ ಹೊಸ ವಿಷಯವೊಂದು ತಿಳಿದುಬಂತು. ಮೈಸೂರಿನಲ್ಲಿ ಆಗ ತಾನೇ Indian Language Institute ನ ಮತ್ತೊಂದು ಶಾಖೆ ಪ್ರಾರಂಭವಾಗಿತ್ತು. ಅಲ್ಲಿ ದ್ರಾವಿಡ ಭಾಷೆಗಳ ಉಗಮದ ಬಗ್ಗೆ ಗಂಭೀರ ಸಂಶೋಧನೆ ನಡೆಯುತ್ತಿತ್ತು. ಅದಕ್ಕೆ ವಿಶ್ವನಾಥನ್ ಕೂಡ ಮೈಸೂರಿಗೇ ಬಂದಿಳಿದರು.

ಮೈಸೂರು ಆಗಿನ್ನೂ ಕರ್ನಾಟಕವಾಗಿರಲಿಲ್ಲ. ಭಾಷಾವಾರು ಪ್ರಾಂತ್ಯಗಳ ರಚನೆಯ ಬಗ್ಗೆ ಜನರಲ್ಲಿ ಬಿನ್ನಾಭಿಪ್ರಾಯಗಳಿದ್ದಮ. ಭಾಷೆಯೇ ಜನರನ್ನು ವಿಭಜಿಸುವ ಕೆಲಸ ಮಾಡುತ್ತಿತ್ತು. ಜನರು ತಮ್ಮ ಭಾಷೆಯ ಮೇಲೆಯೇ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವ ಪ್ರಯತ್ನ ಮಾಡುತ್ತಿದ್ದರು. ಧರ್ಮದ ತಳಹದಿಯಲ್ಲಿ ತುಂಡಾದ ದೇಶ ಈಗ ಭಾಷೆಯ ಆಧಾರದಲ್ಲಿ ಮತ್ತೊಂದು ವಿಭಜನೆಗೆ ಸಿದ್ದವಾಗುತ್ತಿತ್ತು. ಭಾಷೆ ಈಗ ಸೂಕ್ಷ್ಮ ವಿಚಾರವಾಗಿತ್ತು. ಇಂತಹ ಸಂದಿಗ್ಧ ಸಮಯದಲ್ಲಿ ಮೈಸೂರಿನ Indian Language Institute ನವರು ದ್ರಾವಿಡ ಭಾಷೆಗಳ ಮೂಲದ ಬಗ್ಗೆ ಅಧ್ಯಯನ ಕೈಗೊಂಡಿದ್ದರು.

ಆಗ ಆ ಸಂಸ್ಥೆಯ ಮುಖ್ಯಸ್ಥರಾಗಿದ್ದವರು ಡಾ|| ಆಳಸಿಂಗಾಚಾರ್ಯರು. ಅವರಿಗೆ ಭಾಷೆ ಜನರನ್ನು ಜಗಳಕ್ಕಿಳಿಯುವಂತೆ ಮಾಡಿದುದರ ಬಗ್ಗೆ ಅಪಾರ ಬೇಸರವಿತ್ತು. ದ್ರಾವಿಡ ಭಾಷೆಗಳೆಲ್ಲಾ ಮೂಲತಃ ಒಂದೇ ನೆಲೆಯಿಂದ ಬಂದು ಕಾಲಾಂತರದಲ್ಲಿ ಬೇರೆ ಬೇರೆಯಾದುಮಗಳು ಎಂಬುದು ವರ ಅಚಲ ನಂಬಿಕೆ . ಈ ಸಿದ್ಧಾಂತವನ್ನು ಪ್ರಾಯೋಗಿಕವಾಗಿ ಸಮರ್ಥಿಸಿಕೊಳ್ಳಲು ಅವರು ಸಂಶೋಧಕರ ಪಡೆಯನ್ನೇ ಕಟ್ಟಿದ್ದರು. ವಿಶ್ವನಾಥನ್ ಈ ವಿಚಾರದ ಕುರಿತು ಆಸಕ್ತಿ ತೋರಿಸಿದಾಗ ಆಳಸಿಂಗಾಚಾರ್ಯರು ಅವರನ್ನು ಆದರದಿಂದ ಮೈಸೂರಿಗೆ ಬರುವಂತೆ ಕೇಳಿಕೊಂಡಿದ್ದರು. ಹೀಗೆ ಒಂದು ಮಹತ್ವದ ಕೆಲಸಕ್ಕೆ ಜನ ತಮಗೆ ಗೊತ್ತಿಲ್ಲದಂತೇ ಒಂದಾಗುತ್ತಿದ್ದರು.

ಆಳಸಿಂಗಾಚಾರ್ಯರು ವಿಶ್ವನಾಥನ್ ಅವರನ್ನು ವೆಂಕಟಸುಬ್ಬಯ್ಯನವರಿಗೆ ಪರಿಚಯಿಸಿದರು. ವೆಂಕಟಸುಬ್ಬಯ್ಯನವರು ಆಗ ಸುಮಾರು ಎಂಭತ್ತು ರ್ಷದವರಾಗಿದ್ದರೂ ಉತ್ಸಾಹದ ಚಿಲುಮೆಯಾಗಿದ್ದರು . ಹಿಂದೆ ಶ್ರೀಮಹಾರಾಜರ ಆಸ್ಥಾನದಲ್ಲಿದ್ದ ಅವರಿಗೆ ಬಹುಭಾಷಾ ಪಾಂಡಿತ್ಯದ ಜೊತೆಗೆ ಜನಜೀವನ ಅರಿವೂ ಇತ್ತು. ಹಾಗಾಗಿ ಅವರು ಈ ಸಂಶೋಧನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ವೆಂಕಟಸುಬ್ಬಯ್ಯನವರು ವಿಶ್ವನಾಥನ್ ರಿಗೆ ಒಂದು ತಾಳೆಗರಿಯನ್ನು ಕೊಟ್ಟು ಅದನ್ನು ಓದಲು ಹೇಳಿದರು. ವಿಶ್ವನಾಥನ್ ರಿಗೆ ಸುಮಾರಾಗಿ ಎಲ್ಲಾ ಪೂರ್ವ ದ್ರಾವಿಡೀಯ ಭಾಷೆಗಳ ಪರಿಚಯ ಇದ್ದರೂ ಅವರಿಗೆ ಅದರಲ್ಲಿದ್ದ ಬರಹವನ್ನು ಓದಲಾಗಲಿಲ್ಲ. ಅದು ಒಂದು ಕಡೆ ತಮಿಳಿನಂತೆ ಕಂಡರೆ ಮತ್ತೆ ಕೆಲವೆಡೆ ಮಲೆಯಾಳಿಯನ್ನು ಹೋಲುತ್ತಿತ್ತು. ಆಶ್ಚರ್ಯಪಟ್ಟುಕೊಂಡ ವಿಶ್ವನಾಥನ್ ರಿಗೆ ವೆಂಕಟಸುಬ್ಬಯ್ಯನವರು ಇದು "ಕೊರಮೆ" ಭಾಷೆಯೆಂದು ತಿಳಿಸಿದರು.

ಇದುವರೆಗೂ ನಾನು ಈ ಭಾಷೆಯ ಬಗ್ಗೆ ಕೇಳಿಲ್ಲವಲ್ಲ? ವಿಶ್ವನಾಥನ್ ರಿಗೆ ಸಂದೇಹವಾಯಿತು. ಮುಂದೆ ಕೊರಮೆ ಭಾಷೆಯ ಬಗ್ಗೆ ವೆಂಕಟಸುಬ್ಬಯ್ಯನವರೂ, ಆಳಸಿಂಗಾಚಾರ್ಯರೂ ತಮಗೆ ಗೊತ್ತಿದ್ದಷ್ಟು ಹೇಳಿದರು. ವಿಶ್ವನಾಥನ್ ರಿಗೆ ಇದನ್ನು ಕೇಳುತ್ತಿದ್ದಂತೆ ತಕ್ಷಣ ಜ್ಞಾಪಕಕ್ಕೆ ಬಂದವರು ಡಾ|| ಆಡಮ್ಸ್. ಕೂಡಲೇ ಆಡಮ್ಸ್ ಅವರಿಗೆ ಕೊರಮೆ ಭಾಷೆಯ ಬಗ್ಗೆ ತಮಗೆ ಸಿಕ್ಕಿದ ಮಾಹಿತಿಯೆಲ್ಲವನ್ನು ಪತ್ರದ ಮೂಲಕ ಬರೆದು ಕಳುಹಿಸಿದರು.

ಕೊರಮೆ ಭಾಷೆ........ಅದು ವಿಚಿತ್ರ ಸಂದರ್ಭದಲ್ಲಿ ಜನರನ್ನು ತನ್ನೆಡೆಗೆ ಸೆಳೆಯುತ್ತಿತ್ತು.

************************************************************
********************************

Mysore 1955

ವಿಶ್ವನಾಥನ್ ಅವರ ಪತ್ರ ಬಂದಾಗಿನಿಂದ ಡಾ|| ಆಡಮ್ಸ್ ಮೈಸೂರಿಗೆ ಬರಲು ಕಾತರರಾಗಿದ್ದರು. ಅವರಿಗೆ ಗೊತ್ತಾಗಿಹೋಗಿತ್ತು - ದ್ರಾವಿಡೀಯ ಭಾಷೆಗಳ ಮೂಲಕ್ಕೆ ತಾಮ ಹತ್ತಿರವಾಗುತ್ತೇವೆಂದು. ಅವಸರದಿಂದ ಮೈಸೂರಿಗೆ ಬರಲು ಅವರಿಗೆ ಮನಸ್ಸಿದ್ದರೂ ಕೆಲಸ ಒತ್ತಡದ ಕಾರಣ ಒಂದು ವರ್ಷ ಕಾಯಬೇಕಾಯಿತು. ಈಗ ಡಾ|| ಆಡಮ್ಸ್ ಮೈಸೂರಿಗೆ ಬಂದಿದ್ದಾರೆ. ಬಂದಿಳಿದ ಆಡಮ್ಸ್ ವಿಶ್ವನಾಥನ್ ಜೊತೆಯಲ್ಲಿ ನೇರವಾಗಿ ಹೋಗಿದ್ದು ವೆಂಕಟಸುಬ್ಬಯ್ಯನವರ ಬಳಿ. ವೆಂಕಟಸುಬ್ಬಯ್ಯನವರಿಗೆ ಆಗ ಅನಾರೋಗ್ಯ ಕಾಡುತ್ತಿತ್ತು. ಆದರೂ ತಮಗೆ ಗೊತ್ತಿದ್ದ ವಿಚಾರಗಳನ್ನು ಆಡಮ್ಸ್ ರೊಂದಿಗೆ ಹಂಚಿಕೊಂಡರು. ಅವರಿಗೂ ಕೊರಮೆ ಭಾಷೆಯೊಂದು ಇದೆ ಎಂ[illegible] ಗೊತ್ತಿತ್ತಷ್ಟೇ ವಿನಃ ಅದನ್ನು ಓದಲು ಬರುತ್ತಿರಲಿಲ್ಲ. ಆ ಹಸ್ತಪ್ರತಿ ಸುಮಾರು ಒಂದನೇ ಶತಮಾನದಿಂದ ಮೂರನೇ ಶತಮಾನದ ಒಳಗೆ ಬರೆದ್ದೆಂದು ಮಾತ್ರ ಅವರು ಖಡಾಖಂಡಿತವಾಗಿ ಹೇಳಿದರು. ಇದು ಮೂಲ ಪ್ರತಿ ಅಲ್ಲವೆಂದೂ, ಇದು ತೀರಾ ಇನ್ನೂರು ಮುನ್ನೂರು ವರ್ಷದ ಕೆಳಗಡೆ ಮಾಡಿದ ನಕಲು ಪ್ರತಿಯೆಂಬ ತೀರ್ಮಾನಕ್ಕೆ ಅವರೆಲ್ಲಾ ಬಂದಿದ್ದರು. ಆದರೆ ಅದನ್ನು ಓದುವ ಪರಿ ಮಾತ್ರ ಅವರಲ್ಲಿ ಯಾರಿಗೂ ಹೊಳೆಯಲಿಲ್ಲ.

ಆಗ ಅವರ ಸಹಾಯಕ್ಕೆ ಬಂದವನೇ ಮಹಾದೇವ. ಇತ್ತೀಚೆಗೆ ಮೈಸೂರು ಯೂನಿವರ್ಸಿಟಿಯಿಂದ ಇಲ್ಲಿಗೆ ಡೆಪ್ಯುಟೇಶನ್ ಮೇಲೆ ಬಂದಿದ್ದ ಮಹಾದೇವನಿಗೆ ಸಂಶೋಧನೆಗಿಂತ ಬೇರೆ ಕೆಲಸದಲ್ಲೇ ಗಮನ ಹೆಚ್ಚು. "ಕೊರಮೆ" ಎಂ[illegible]ಬ್ದ ಕೇಳಿದ ಕೂಡಲೇ ಅವನಿಗೆ ಆಶ್ಚರ್ಯವಾಗಿಹೋಯಿತು . "ಸಾರ್ ಕೊರಮರು ನನಗೆ ಗೊತ್ತು" ಅಂತ ಸ್ವಲ್ಪ ಜೋರಾಗಿಯೇ ಕಿರುಚಿದ. ಅವರಿಗೆಲ್ಲಾ ಆಶ್ಚರ್ಯ. ಇಲ್ಲಿಯವರೆಗೆ ಅವರು ಕೊರಮೆ ಒಂದು ಭಾಷೆ ಮಾತ್ರವೆಂದೇ ತಿಳಿದಿದ್ದರು. ಆದರೆ ಈಗ ಇದೇ ಹೆಸರಿನ ಜನರೂ ಇದ್ದಾರೆ ಅಂದರೆ? ಬಹುಶಃ ಅವರಲ್ಲಿ ಕೆಲವರಿಗಾದರೂ ಈ ಭಾಷೆಯ ಪರಿಚಯವಿರಲೇಬೇಕು. ಹಾಗೆಂದು ಅವರೆಲ್ಲಾ ನಿಶ್ಚಯಿಸಿ ಕುರುಮರು ಯಾರು, ಎಲ್ಲಿದ್ದಾರೆಂದು ತಿಳಿದುಕೊಳ್ಳಲು ಮುಂದಾದರು.

ಮಹದೇವ ಕೊಟ್ಟ ಮಾಹಿತಿ ಪ್ರಕಾರ ಕುರುಮರು ಉತ್ತರ ಕರ್ನಾಟಕದ ಕೆಲಮ ಹಳ್ಳಿಗಳಲ್ಲಿ ಕಂಡುಬರುವ ಜನ. ಅವರಲ್ಲಿ ಯಾರೂ ಹೆಚ್ಚಿಗೆ ಓದಿದವರಲ್ಲ. ಹೆಚ್ಚಿನವರು ಗುಂಪಿನಲ್ಲಿ ವಾಸ ಮಾಡಿಕೊಂಡು ಹತ್ತಿರದ ಕಾಡಿನಿಂದಲೇ ತಮ್ಮ ಬದುಕನ್ನು ನಡೆಸಿಕೊಂಡು ಬಂದವರು. ಕೊರಮರು ಅವರದೇ ಭಾಷೆ ಮಾತಾಡುತ್ತಾರಾದರೂ ಅದು ಯಾವ ಭಾಷೆಯೆಂದು ಮಹದೇವನಿಗೆ ತಿಳಿದಿರಲಿಲ್ಲ. ಆಡಮ್ಸ್ ಮತ್ತು ವಿಶ್ವನಾಥನ್ ಅವರನ್ನು ಕುರುಮರ ಬಳಿ ಕರೆದೊಯ್ಯಲು ಮಹದೇವ ಸಿದ್ಧನಿದ್ದ. ಮೊದಮೊದಲು ಆಡಮ್ಸ್ ಅವರಿಗೆ ಈ ಥಿಯರಿಯ ಮೇಲೆ ನಂಬಿಕೆ ಬರಲಿಲ್ಲ. ಮಹದೇವ ಕೊಟ್ಟ ಮಾಹಿತಿ ಪ್ರಕಾರ ಕೊರಮರು ಗುಡ್ಡಗಾಡು ಪ್ರದೇಶದವರಂತೆ ತೋರುತ್ತಿದ್ದರು. ಅವರ ಪೂರ್ವಿಕರು ತಮ್ಮದೇ ಭಾಷೆ ಬೆಳೆಸಿ ಅದಕ್ಕೆ ಲಿಪಿಯನ್ನೂ ಮಾಡಿ ಗ್ರಂಥಗಳನ್ನೂ ಬರೆದಿದ್ದರೆ ಕೆಲವಾದರೂ ಗ್ರಂಥಗಳು ಈಗ ಚಾಲ್ತಿಯಲ್ಲಿ ಇರಬೇಕಿತ್ತು. ಆದರೆ ಕೊರಮೆ ಭಾಷೆಯದ್ದು ಎನ್ನಲಾದ ಯಾವ ಕೃತಿಯೂ ಈವರೆಗೆ ಲಭ್ಯವಿರಲಿಲ್ಲ. ಹಾಗಾದರೆ ಕೊರಮೆ ಭಾಷೆಯೆಂಬುದು ಒಂದಿತ್ತೇ? ಇದ್ದರೆ ಅದು ಈವರೆಗೆ ಯಾಕೆ ಯಾರಿಗೂ ತಿಳಿದಿಲ್ಲ? - ಈ ಎಲ್ಲಾ ಪ್ರಶ್ನೆಗಳಿದ್ದರೂ ಡಾ||ಆಡಮ್ಸ್ ಮಹದೇವನೊಂದಿಗೆ ತೆರಳಲು ಸಿದ್ಧವಾದರು.

ಸಿರ್ಸಿ, ಯಲ್ಲಾಪುರ ಸುತ್ತಮುತ್ತ ಸುತ್ತಿದರೂ ಡಾ|| ಆಡಮ್ಸ್ ಅವರಿಗೆ ಏನೂ ವಿಶೇಷ ಮಾಹಿತಿ ಸಿಗಲಿಲ್ಲ. ವಿಷಯ ಸಂಗ್ರಹಣೆಗೆ ಮುಖ್ಯ ತೊಡಕೆಂದರೆ ಭಾಷೆ, ಮತ್ತೊಂದು ಮಹದೇವ. ಕುರುಮರು ಮಾತಾಡುತ್ತಿದ್ದ ಭಾಷೆ ಇವರಿಗೆ ಅರ್ಥವೇ ಆಗುತ್ತಿರಲಿಲ್ಲ. ಈ ಮಧ್ಯದಲ್ಲಿ ಮಹದೇವ ಆಡಮ್ಸ್ ಅವರಿಂದ ಆದಷ್ಟು ಹಣ ಪೀಕಿಸುಮದರಲ್ಲೇ ಹೆಚ್ಚು ಆಸಕ್ತಿ ಹೊಂದಿದ್ದ. ಆದರೂ ಡಾ||ಆಡಮ್ಸ್ ಇದೆಲ್ಲವನ್ನೂ ಸಹಿಸಿಕೊಂಡು ಹೇಗೋ ಆದಷ್ಟು ಮಾಹಿತಿ ಕಲೆಹಾಕಿದರು. ಅವರಿಗೆ ದೊರೆತ ಮುಖ್ಯ ಮಾಹಿತಿಯೆಂದರೆ ಅವರ ಜನಾಂಗದ ಒಬ್ಬ ವ್ಯಕ್ತಿ ಮೆಟ್ರಿಕ್ ಓದಿ ಧಾರವಾಡದಲ್ಲಿ ಕೆಲಸದಲ್ಲಿ ಇದ್ದಾನೆ ಎಂ[illegible] . ಮಹಾದೇವನ ಅವ್ಯವಸ್ಥೆಯಿಂದ ರೇಗಿಹೋಗಿದ್ದ ಆಡಮ್ಸ್ ಅವರು ವಿಶ್ವನಾಥನ್ ನನ್ನು ಧಾರವಾಡಕ್ಕೆ ಕಳಿಸಿ ಆ ವ್ಯಕ್ತಿಯನ್ನು ಕರೆದುಕೊಂಡು ಬರುವಂತೆ ಹೇಳಿದರು. ಮಾಲಿಂಗ ಎಂ[illegible]ಸರಿನ ಆ ಕೊರಮ ಬಂದ ಮೇಲೆ ಆಡಮ್ಸ್ ಅವರ ಸಂಶೋಧನೆಗೆ ಬಹಳ ಸಹಾಯವಾಯಿತು . ಕನ್ನಡದ ಜೊತೆಗೆ ಸ್ವಲ್ಪ ಇಂಗ್ಲೀಷ್ ಕೂಡ ಬರುತ್ತಿದ್ದ ಮಾಲಿಂಗ ಬಂದೊಡನೆ ಅವರು ಮಹಾದೇವನನ್ನು ಮೈಸೂರಿಗೆ ಕಳಿಸಿಬಿಟ್ಟರು.

ಮಾಲಿಂಗನ ಮೂಲಕ ಕೊರಮರ ಜೊತೆ ಸಂಪರ್ಕ ಆಡಮ್ಸ್ ಅವರಿಗೆ ಸಲೀಸಾಗಿ ಹೋಯಿತು. ಅವರ ಮಾತಿನ ಮೂಲಕ ಅವರಿಗೆ ತಿಳಿದದ್ದೇನೆಂದರೆ ಅವರು ತಮ್ಮನ್ನು ದೇವಿಯ ಮಕ್ಕಳೆಂದು ನಂಬಿದ್ದರು. ತಮ್ಮ ಜನಾಂಗ ಜನರನ್ನು ಬಿಟ್ಟು ಬೇರೆಯವರ ಸಹವಾಸ ಹೆಚ್ಚಾಗಿ ಮಾಡದ ಅವರ ಮಾತಿನಲ್ಲಿ ದಕ್ಷಿಣದ ಅಷ್ಟೂ ಭಾಷೆಗಳ ಕೆಲಮ ಪದಗಳನ್ನು ಅವರು ಗಮನಿಸಿದ್ದರು. ಆದರೆ ಅವರಿಗೆ ತಮ್ಮ ಭಾಷೆಗೆ ಲಿಪಿ ಇದೆಯೇ ಎಂ[illegible] ಳಿದಿರಲಿಲ್ಲ . ಅವರಿಗೆ ಬರಹದ ವಿಷಯ ತೀರಾ ಪರಕೀಯವಾಗಿತ್ತು. ಆದರೆ ಮಾಲಿಂಗನ ಮೂಲಕ ತಿಳಿದ ವಿಷಯವೆಂದರೆ ಅವರ ಮುಖ್ಯನ ಮನೆಯಲ್ಲಿ ಒಂದು ಪೆಟ್ಟಿಗೆ ಇತ್ತು. ಅದರಲ್ಲಿ ಕೆಲಮ ಪುಸ್ತಕಗಳನ್ನು ನೋಡಿದ ನೆನಪು ಅವನಿಗಿತ್ತು. ಎಷ್ಟು ಒತ್ತಾಯ ಮಾಡಿದರೂ ಮುಖ್ಯ ಆ ಪೆಟ್ಟಿಗೆಯನ್ನು ಇವರಿಗೆ ಕೊಡಲು ಒಪ್ಪಲಿಲ್ಲ. ತನ್ನ ಅಜ್ಜನ ಕಾಲದಿಂದ ಯಾರೂ ಬಿಚ್ಚದಿದ್ದ ಪೆಟ್ಟಿಗೆಯನ್ನು ಅವನೂ ಕೂಡ ಬಿಚ್ಚಲು ತಯಾರಿರಲಿಲ್ಲ. ಕೊನೆಗೆ ಪೋಲೀಸು, ಅದೂ ಇದೂ ಅಂತ ಹೆದರಿಸಿ ಅವನಿಂದ ಬಲವಂತವಾಗಿಯೇ ಇವರು ಪೆಟ್ಟಿಗೆಯನ್ನು ತೆಗೆದುಕೊಂಡದ್ದಾಯ್ತು. ಆಡಮ್ಸ್ ಅವರಿಗೆ ಇದರಿಂದ ಬೇಸರವಾದರೂ, ತಾಮ ಸಮಾಜದ ಒಟ್ಟು ಸಹಾಯಕ್ಕೆ ಈ ಸಂಶೋಧನೆ ಮಾಡುತ್ತಿರುಮದರಿಂದ ಇಂತಹ ಕೃತ್ಯದಿಂದ ತಪ್ಪೇನೂ ಆಗುಮದಿಲ್ಲವೆಂದು ತಮಗೆ ತಾವೇ ಸಮಾಧಾನ ಪಟ್ಟುಕೊಂಡರು.

ಪೆಟ್ಟಿಗೆಯನ್ನು ತೆಗೆದು ನೋಡಿದರೆ ಅದರಲ್ಲಿ ಹತ್ತೊಂಬತ್ತನೇ ಶತಮಾನದು ಅನ್ನಬಹುದಾದಂತಹ ಪುಸ್ತಕ ಮತ್ತು ಲೇಖನಿ ಸಾಮಗ್ರಿಗಳಿದ್ದಮ. ಡಾ||ಆಡಮ್ಸ್ ಅವರಿಗೆ ಇದು ಯಾಮದೋ ಬ್ರಿಟಿಶನ ವಸ್ತುಗಳೆಂದು ಕೂಡಲೇ ಖಚಿತವಾಗಿಹೋಯಿತು. ಅದರಲ್ಲಿ ಸಿಕ್ಕಿದ ಪುಸ್ತಕ ಅವರು ಅಂದುಕೊಂಡಂತೆ ಒಬ್ಬ ಕ್ರೈಸ್ತ ಪಾದ್ರಿಯ ದಿನಚರಿಯಾಗಿತ್ತು. ಹತ್ತೊಂಬತ್ತನೇ ಶತಮಾನದ ಆದಿಯಲ್ಲಿ ಇಲ್ಲಿಗೆ ಕಾಲಿಟ್ಟಿದ್ದ ಆ ಪಾದ್ರಿ ಕೊರಮರನ್ನು ಕ್ರೈಸ್ತ ಮತಕ್ಕೆ ಮತಾಂತರಿಸಲು ಬಂದಿದ್ದ. ಇಲ್ಲಿನ ಕೊರಮರನ್ನು ಅರ್ಥಮಾಡಿಕೊಳ್ಳಲು ಇವರ ನಡುವೆಯೇ ಬಹಳ ಸಮಯವನ್ನು ಕಳೆದ ಅವನು ಕೊನೆಗೆ ಕೊರಮೆ ಭಾಷೆಯನ್ನು ಕೂಡ ಕಲಿತುಕೊಂಡುಬಿಟ್ಟಿದ್ದ. ಅವರ ವಿಶ್ವಾಸ ಗಳಿಸಲು ಅವರ ಹುಡುಗಿಯೊಬ್ಬಳನ್ನು ಮದುವೆ ಆಗಿಯೂ ಇದ್ದ. ಆದರೆ ಇದಕ್ಕಿಂತೆಲ್ಲಾ ಮಹತ್ವದ ವಿಚಾರವನ್ನು ಅವನು ಬರೆದಿದ್ದ.

ಪಾದ್ರಿಗೆ ಬೈಬಲನ್ನು ಕೊರಮರಿಗೆ ತಲುಪಿಸಬೇಕೆಂದು ಬಹಳ ಆಸೆ ಇತ್ತು. ಆದರೆ ಆಗಲೂ ಕೊರಮರರಿಗೆ ಲಿಪಿ ಜ್ಞಾನ ಇರಲಿಲ್ಲ. ಹಾಗಾಗಿ ಕೊರಮಿ ಭಾಷೆಗೆ ಹೊಸ ಲಿಪಿಯೊಂದನ್ನು ಸಿದ್ಧಪಡಿಸಲು ಸಹಾಯ ಕೋರಿ ಕಂಪೆನಿ ಸರಕಾರಕ್ಕೆ ಅರ್ಜಿ ಹಾಕಿದ್ದ. ಕಂಪೆನಿ ಸರಕಾರ ಪಾದ್ರಿಯ ಸಹಾಯಕ್ಕೆ ಇಂಗ್ಲೆಂಡಿನಿಂದ ಕೆಲಮ ವಿದ್ವಾಂಸರನ್ನು ಕರೆಸಿ ಕೊಟ್ಟಿತ್ತು. ಅವರು ಕೊರಮೆ ಭಾಷೆಯನ್ನು ಕೇಳಿ ಅದನ್ನು ಅಭ್ಯಾಸ ಮಾಡಿದರು. ನಂತರ ಒಕ್ಕೊರಲಿನಿಂದ ಹೇಳಿದ ಮಾತೆಂದರೆ - ಕೊರಮೆ ಒಂದು ಶಾಸ್ತ್ರೀಯ ಭಾಷೆ. ಬಹಳ ಶಿಸ್ತುಬದ್ಧವಾದ ಲಕ್ಷಣಗಳುಳ್ಳ ಈ ಭಾಷೆಗೆ ಲಿಪಿ ಇಲ್ಲದೇ ಇರಲು ಸಾಧ್ಯವಿಲ್ಲ. ಈ ಭಾಷೆಗೆ ಒಂದು ಲಕ್ಷಣ ಗ್ರಂಥ ಇದ್ದೇ ಇದೆ. ಮತ್ತು ಅದನ್ನು ಈಗ ಪತ್ತೆ ಹಚ್ಚಬೇಕಿದೆ. ಪಾದ್ರಿಯ ಪ್ರಕಾರ ಅಂತಹ ಪ್ರಯತ್ನ ಆಗ ನಡೆಯಿತಾದರೂ ಅಂತಹಾ ಯಾಮದೇ ಗ್ರಂಥ ಅವರಿಗೆ ಸಿಗಲಿಲ್ಲ. ಕೊನೆಗೆ ಪಾದ್ರಿ ಕನ್ನಡ ಲಿಪಿಯನ್ನೇ ಬಳಸಿ ಬೈಬಲನ್ನು ಕೊರಮೆ ಭಾಷೆಗೆ ಅನುವಾದಿಸಲು ನೋಡಿದ. ಅವನೇ ಹೇಳಿದ ಪ್ರಕಾರ ಅವನಿಗೆ ಈ ಕೆಲಸ ಪೂರ್ತಿ ಮಾಡಲು ಆಗಲಿಲ್ಲ. ಪದೇ ಪದೇ ಕಾಡುತ್ತಿದ್ದ ಜ್ವರ ಅವನನ್ನು ಕೊರಮರ ಹಳ್ಳಿಯಿಂದ ದೂರ ಹೋಗುವಂತೆ ಮಾಡಿತ್ತು.

ದಿನಚರಿ ಓದಿ ಮುಗಿಸಿದ ಮೇಲೆ ಆಡಮ್ಸ್ ಅವರಿಗೆ ಬಂದ ಮೊದಲ ಪ್ರಶ್ನೆ ಅಂದರೆ ಈ ಪುಸ್ತಕ ಕೊರಮರ ಕೈ ಸೇರಿದ್ದು ಹೇಗೆ. ವಿಶ್ವನಾಥನ್ ಇದಕ್ಕೆ ಬಹುಶಃ ಪಾದ್ರಿ ಹೋಗುವಾಗ ಇವರಿಗೇ ಅದನ್ನು ಕೊಟ್ಟು ಹೋಗಿರಬೇಕು ಅಂತ ಹೇಳಿದ. ಆದರೆ ಆಡಮ್ಸ್ ಅವರಿಗೆ ಇದನ್ನು ನಂಬಲಾಗಲಿಲ್ಲ. ಇಂಗ್ಲಿಷ್ ಜನ ದಿನಚರಿಯನ್ನು ಯಾರಿಗೂ ಕೊಡುಮದಿಲ್ಲ. ಕೆಲವರು ತಮ್ಮ ದಿನಚರಿಯನ್ನು ತಾಮ ಸತ್ತ ಮೇಲೆ ಕೂಡ ಇಂತವರು ಮಾತ್ರ ಓದಬೇಕೆನ್ನುವ ಮಾತು ಬರೆದಿರುತ್ತಾರೆ. ಹಾಗಿರುವಾಗ ಇಂಗ್ಲಿಷ್ ಗೊತ್ತಿಲ್ಲದ ಕೊರಮರ ಬಳಿ ದಿನಚರಿ ಬಿಟ್ಟುಹೋಗಲು ಕಾರಣವೇ ಇಲ್ಲ ಎಂ[illegible] ೀದಿಸಿದರು . ಹಾಗಾದರೆ ಇದು ಹೇಗೆ ಇಲ್ಲಿಗೆ ಬಂತು. ಇದಕ್ಕೆ ಆಡಮ್ಸ್ ಅವರು - ಇದು ಮುಖ್ಯ ವಿಷಯವಲ್ಲ, ಈಗ ತುರ್ತಾಗಿ ಆ ಲಕ್ಷಣ ಗ್ರಂಥವನ್ನೂ ಮತ್ತು ಸಾಧ್ಯವಾದರೆ ಪಾದ್ರಿ ಅರ್ಧದಲ್ಲಿಯೇ ನಿಲ್ಲಿಸಿದ ಬೈಬಲ್ಲಿನ ಪ್ರತಿಯನ್ನು ಸಂಪಾದಿಸಬೇಕು ಅಂದರು. ಹಾಗಾಗಿ ಅವರೆಲ್ಲಾ ಮತ್ತೆ ಮೈಸೂರಿಗೇ ವಾಪಸ್ ಬಂದರು.

ಮೈಸೂರಿಗೆ ಬಂದ ಆಡಮ್ಸ್ ಅವರಿಗೆ ಆಳಸಿಂಗಾಚಾರ್ಯರು ಇನ್ನೊಂದು ಸಂತೋಷದ ವಿಷಯ ಹೇಳುವವರಿದ್ದರು. ಅದೇನೆಂದರೆ ಅವರ ಕೈಕೆಳಗೆ ಹಳೆಗನ್ನಡ ಕಾವ್ಯದಲ್ಲಿನ ಭಾಷಾ ಪ್ರಯೋಗದ ಮೇಲೆ ಸಂಶೋಧನೆ ಮಾಡುವ ವಿದ್ಯಾರ್ಥಿಯೊಬ್ಬ ಹೊಸ ವಿಷಯವೊಂದನ್ನು ಹೊರಗೆಡವಿದ್ದ. ರಾಘವಾಂಕನ ಸಮಕಾಲಿಕನಾದ ವಿಜಯಧ್ವಜನೆಂಬುವವನು ತನನ್ನು ತಾನು ಚಿರೂರವನ ಮಗನೆಂದು ಹೇಳಿಕೊಂಡಿದ್ದ. ಯಾರೀ ಚಿರೂರವ? ಅಂತ ಹಳೇ ಕೃತಿಗಳನ್ನೆಲ್ಲಾ ಹುಡುಕುತ್ತಿದ್ದಾಗ ಅವನಿಗೆ ಚಿರೂರವ ಎಂ[illegible] ್ಯಕ್ತಿಯ ವಿರಾಟ್ ಸ್ವರೂಪದ ದರ್ಶನವಾಗತೊಡಗಿತು. ಅದನ್ನು ಬಂದು ಆಳಸಿಂಗಾಚಾರ್ಯರ ಬಳಿ ಅವನು ಹೇಳಿದಾಗ ನಿಶ್ಚಯವಾಗಿ ಇವನೇ

ಕೊರಮೆ ಭಾಷೆಯ ಕಾರಣೀಪುರುಷ ಎಂಬು ವರಿಗೆ ಅರಿವಾಯಿತು . ಈಗ ಅವರು ತಮ್ಮ ಶಿಷ್ಯ ಹೊರತೆಗೆದ ಕತೆಯನ್ನು ಆಡಮ್ಸ್ ಅವರಿಗೆ ಹೇಳಲು ಶುರುಮಾಡಿದರು.

****************************************************************
************************************

ಬಿಂಬಾಪುರ 2 BC

ಶಾತವಾಹನರು ತಮ್ಮ ಆಳ್ವಿಕೆಯಲ್ಲಿ ಕಲೆ, ಸಂಸ್ಕೃತಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿದ್ದ ಕಾಲ. ಸಂಸ್ಕೃತ ದ ಪ್ರಭಾವದಿಂದ ಹೊರಬಂದು ಪ್ರಾಕೃತಿ ತನ್ನದೇ ಛಾಪನ್ನು ಜನರ ಮೇಲೆ ಒತ್ತಿತ್ತು. ಅಶೋಕನ ಕಾಲದಿಂದ ಅದಕ್ಕೆ ರಾಜಾಶ್ರಯವೂ ಸಿಕ್ಕಿ ಸಂಸ್ಕೃತದ ಪ್ರಭಾವ ದಕ್ಷಿಣದಲ್ಲಿ ಕಡಿಮೆಯಾಗತೊಡಗಿತು. ಸಂಸ್ಕೃತವನ್ನು ಉಪಯೋಗಿಸುತ್ತಿದ್ದವರೂ ಅದನ್ನು ಬೇರೆ ಬೇರೆ ಪ್ರಕಾರದಲ್ಲಿ ತಮತಮಗೆ ಬೇಕಾದ ಹಾಗೆ ಬದಲಿಸಿ ಉಪಯೋಗಿಸುತ್ತಿದ್ದರು. ಆಗ ಪ್ರಾಕೃತ ಭಾಷೆಯ ಪ್ರಮಾಣಕರ್ತನೆಂದೇ ಪ್ರಸಿದ್ಧನಾಗಿದ್ದವನು ಚಿರೂರವ. ಜನಸಾಮಾನ್ಯರಿಗೆ ಸಂಸ್ಕೃತದ ಕಟ್ಟುಪಾಡುಗಳು ಬಹಳ ಕಷ್ಟವೆಂದು ಬಲವಾಗಿ ನಂಬಿದ್ದ ಅವನಿಗೆ ನೇರವಾಗಿ, ಸರಳವಾಗಿ ವಿಷಯವನ್ನು ತಿಳಿಸಲು ನೆರವಾಗುವ ಪಾಕೃತಿ ಭಾಷೆಯ ಮೇಲೆ ಅಪಾರ ಒಲವು. ತನ್ನ ಅಪಾರ ಶಿಷ್ಯವೃಂದದ ನೆರವಿನಿಂದ ಪ್ರಾಕೃತಿಯನ್ನು ರಾಜ್ಯದ ಮೂಲೆಮೂಲೆಯಲ್ಲೂ ಜನರು ಬಳಸುವಂತೆ ಮಾಡಿದ.

ಅವನ ಶಿಷ್ಯವರ್ಗದಲ್ಲಿ ನಾಣಿಪನೆಂಬ ಬ್ರಾಹ್ಮಣನೊಬ್ಬನಿದ್ದ. ಎಷ್ಟು ಹೇಳಿದರೂ ವಿದ್ಯೆ ತಲೆಗೆ ಹತ್ತದ ಅವನನ್ನು ಚಿರೂರವ ಕೊನೆಗೆ ಆಶ್ರಮ ಬಿಟ್ಟು ಓಡಿಸಿಬಿಟ್ಟ. ನಾಣಿಪ ದಡ್ಡನಾದರೂ ಛಲಗಾರ. ತನ್ನ ಇಷ್ಟದೇವನಾದ ಶಿವನನ್ನು ಕುರಿತು ತಪಸ್ಸು ಮಾಡಿ ಅವನನ್ನು ಸಾಕ್ಷಾತ್ಕರಿಸಿಕೊಂಡ. ಶಿವನು ಅವನಿಗೆ ಸಂಪೂರ್ಣ ಭಾಷಾ ಭಂಡಾರವನ್ನು ವರವಾಗಿ ನೀಡಿದ. ತಪಸ್ಸಿನ ಫಲದೊಂದಿಗೆ ಊರಿಗೆ ಮರಳಿದ ನಾಣಿಪ ಮಾಡಿದ ಮೊದಲ ಕೆಲಸವೆಂದರೆ ಬೇರೆ ಬೇರೆ ರೀತಿಯಲ್ಲಿ ಉಪಯೋಗಿಸುತ್ತಿದ್ದ ಸಂಸ್ಕೃತವನ್ನು ಒಂದೇ ಸೂತ್ರದಲ್ಲಿ ಬಂಧಿಸಿದ್ದು. ಅವನು ಬರೆದ ವ್ಯಾಕರಣ ಸೂತ್ರಗಳು, ಭಾಷಾ ನಿಯಮಾವಳಿಗಳೂ, ಶಬ್ದಾರ್ಥ ಕೋಶಗಳೂ ಹಿಂದೆಂದೂ ಯಾರೂ ಯಾವ ಭಾಷೆಗೂ ಬರೆದಿರಲಿಲ್ಲ. ಅವನೊಬ್ಬನ ಕೆಲಸದಿಂದ ಸಂಸ್ಕೃತಕ್ಕೆ ಹೊಸಜೀವ ಬಂದಂತಾಯ್ತು. ಜನ ಮತ್ತೆ ಸಂಸ್ಕೃತದೆಡೆಗೆ ಆಕರ್ಷಿತರಾಗತೊಡಗಿದ್ದರು.

ಇದರಿಂದ ಬಹಳ ವಿಚಲಿತನಾದವನೆಂದರೆ ಚಿರೂರವ. ತಾನೇ ಅಪ್ರಯೋಜಕನೆಂದು ಬಯ್ದು ಕಳಿಸಿದ ತನ್ನ ಶಿಷ್ಯನೊಬ್ಬ ಹೀಗೆ ತನಗೆ ಎದುರಾಳಿಯಾಗಿ ನಿಂತರೆ ಗುರುವಾದ ಅವನು ಏನು ತಾನೇ ಮಾಡಬೇಕು? ಉಟ್ಟಬಟ್ಟೆಯಲ್ಲಿಯೇ ದೇಶಬಿಟ್ಟು ಹೊರಟ ಚಿರೂರವ ಕಾಡಿನಲ್ಲಿ ಕುಳಿತು ದೀರ್ಘಕಾಲ ನಾಣಿಪನ ಗ್ರಂಥಗಳನ್ನು ಅಧ್ಯಯನ ಮಾಡಿದ. ಅದೊಂದು ನಿರಂತರ ಧ್ಯಾನವೆಂಬಂತೆ ಕಾಲದ ಪರಿವೇ ಇಲ್ಲದೆ ಗ್ರಂಥದ ಪದ-ಪದವನ್ನೂ ತನ್ನ ಚಿಕಿತ್ಸಕ ಬುದ್ಧಿಯಿಂದ ತೂಗಿ ಅದರಲ್ಲಿನ ತಪ್ಪುಗಳನ್ನು ಕಂಡುಹುಡುಕುತ್ತಿದ್ದ. ಬಹಳ ವರ್ಷಗಳ ನಂತರ ಅವನು ನಾಣಿಪನ ಗ್ರಂಥದಲ್ಲಿನ ಮೂಲ ಸತ್ವವನ್ನೇ ಪ್ರಶ್ನಿಸುವಷ್ಟರ ಮಟ್ಟಿಗೆ ಅದನ್ನು ಅರ್ಥಮಾಡಿಕೊಂಡು ಬಿಟ್ಟಿದ್ದ. ಇನ್ನು ತಾನು ಊರಿಗೆ ಹೋಗಿ ನಾಣಿಪನ್ನು ಚರ್ಚೆಗೆ ಆಹ್ವಾನಿಸುವುದೆಂದು ನಿರ್ಧರಿಸಿದ ಅವನಿಗೆ ಇದ್ದಕ್ಕಿದ್ದಂತೆ ಬೇರೆ ಆಲೋಚನೆಯೊಂದು ಹೊಳೆಯಿತು.

ಈಗ ತಾನು ನಾಣಿಪನನ್ನು ಚರ್ಚೆಗೆ ಕರೆದರೆ ಅವನೂ ಪ್ರಾಕೃತಿಯ ದೋಷಗಳನ್ನು ಎತ್ತಿಹಿಡಿಯುತ್ತಾನೆ. ಪ್ರಾಕೃತಿ ಸರಳತೆಗೆ ಹೆಚ್ಚು ಒತ್ತುಕೊಟ್ಟ ಭಾಷೆಯಾದ್ದರಿಂದ ಅದರಲ್ಲಿ ಸಹಜವಾಗಿ ಕೆಲವೊಂದು ಭಾಷಾ ನಿಯಮಾವಳಿಗಳನ್ನು ಸಡಿಸಲಾಗಿತ್ತು. ಹಾಗಾಗಿ ಪ್ರಾಕೃತಿಗೆ ಸಂಸ್ಕೃತದಷ್ಟು ಗಟ್ಟಿಯಾದ ನಿಯಮಗಳ ಬುನಾದಿಯಿರಲಿಲ್ಲ. ಈಗ ಚಿರೂರವನ ಮುಂದೆ ಎರಡು ದಾರಿಗಳಿದ್ದವು. ಒಂದು - ಪ್ರಾಕೃತಿಗೇ ಪ್ರತ್ಯೇಕವಾಗಿ ಭಾಷಾಸೂತ್ರಗಳನ್ನು ಬರೆಯಬೇಕು. ಆದರೆ ಹಾಗೆ ಮಾಡಲು ಹೋದರೆ ಪ್ರಾಕೃತಿಯ ಸರಳತೆ ಮತ್ತು ಮೂಲಸ್ವರೂಪಕ್ಕೇ ದಕ್ಕೆ ಬರುವ ಸಾಧ್ಯತೆ ಇತ್ತು. ಹಾಗಾಗಿ ಚಿರೂರವ ಎರಡನೆಯ ದಾರಿ ಕಂಡುಕೊಂಡ. ಅದೆಂದರೆ ಪ್ರಾಕೃತಿಯ ಸರಳತೆಯನ್ನು ಉಳಿಸಿಕೊಂಡು ಆದರೆ ಸಂಸ್ಕೃತದ ಶಿಷ್ಟತೆಯನ್ನೂ ಜೊತೆಗೂಡಿಸಿ ಹೊಸದೊಂದು ಭಾಷೆಯನ್ನು ಅದಕ್ಕೆ ತಕ್ಕನಾದ ಹೊಸ ಲಿಪಿಯೊಂದನ್ನು ಸಿದ್ಧಪಡಿಸುವುದು.

ಇಂತಹ ಒಂದು ಭಾಷೆ ಸಂಸ್ಕೃತದ ಪ್ರಭಾವವನ್ನು ಸಮರ್ಥವಾಗಿ ಎದುರಿಸಬಲ್ಲದು ಮತ್ತು ಜನರಿಗೂ ಪ್ರಿಯವಾಗಬಲ್ಲದು ಎಂಬುದರಲ್ಲಿ ಾವ ಸಂಶಯವೂ ಇರಲಿಲ್ಲ . ತನ್ನ ಜೀವನದ ಎಲ್ಲಾ ಅನುಭವವನ್ನು ಧಾರೆಯೆರೆದು ಚಿರೂರವ ಹೊಸ ಭಾಷೆಯೊಂದರ ಹುಟ್ಟಿನಲ್ಲಿ ತೊಡಗಿದ. ಅವನ ಜೀವನದ ಅಂತಿಮಕಾಲದಲ್ಲಿ ಅವನು ಸಿದ್ಧಪಡಿಸಿದ ಹೊಸ ಭಾಷೆ ಬಿಂಬಾಪುರ ಮತ್ತು ಸುತ್ತಮುತ್ತ ಚಾಲನೆಯಲ್ಲಿತ್ತು. ವಿದ್ವಜ್ಜನರು ಆ ಭಾಷೆಯನ್ನು

ಬಹಳವಾಗಿ ಕೊಂಡಾಡುತ್ತಿದ್ದರು. ನಾಣಿಪನೇ ಸ್ವತಃ ತನ್ನ ಮಹಾಕಾವ್ಯವನ್ನು ಈ ಭಾಷೆಯಲ್ಲಿ ಬರೆದ್ದಾನೆಂದು ನಂತರದ ದಿನಗಳಲ್ಲಿ ದಂತಕತೆಯಾಗಿ ಬೆಳೆಯಿತು.

****************************************************************
****************************

Mysore 1955

ಆಳಸಿಂಗಾಚಾರ್ಯರ ಪ್ರಕಾರ ಈ ಚಿರೂರವ ರಚಿಸಿದ ಹೊಸ ಭಾಷೆಯೇ ಈಗ ಇವರು ಹುಡುಕುತ್ತಿರುವ ಕೊರಮೆ ಭಾಷೆ. ಕಾಲಘಟ್ಟದ ಲೆಕ್ಕದಲ್ಲೂ ಇದು ತಾಳೆ ಆಗುತ್ತಿತ್ತು. ಅವರ ಪ್ರಕಾರ ಆಗಿನ ಬಿಂಬಾಪುರವೇ ನಂತರ ಕದಂಬರ ಬನವಾಸಿಯಾಯಿತು. ಕ್ರಿ.ಪೂ. ೩ನೇ ಶತಮಾನದ್ದು ಎಂ ೀಳಲಾದ ಪ್ರಾಕೃತಿ ಭಾಷೆಯ ಶಾಸನವೊಂದು ಅಲ್ಲಿ ಸಿಕ್ಕಿತ್ತು. ಮತ್ತೆ ಕ್ರಿ.. ೩೨೫ ರ ಸುಮಾರಿಗೆ ಕದಂಬರು ಅಲ್ಲಿ ರಾಜ್ಯಸ್ಥಾಪನೆ ಮಾಡಿದ ಮೇಲೆ ಕನ್ನಡ ಸ್ವತಂತ್ರವಾಗಿ ಬೆಳೆಯಿತು. ಅಂದರೆ ಕ್ರಿ.ಪೂ ೪ನೇ ಶತಮಾನದಿಂದ ಆ ಪ್ರದೇಶದಲ್ಲಿ ಆಳಿದ ಶಾತವಾಹನರ ಕಾಲದಲ್ಲಿ ಜೀವ ತಳೆದ ಈ ಭಾಷೆ ನಂತರದ ೪ ಶತಮಾನಗಳ ಬಳಿಕ ಚೂರುಚೂರಾಗಿ ಹೋಗಿದೆ.

ಡಾ||ಆಡಮ್ಸ್ ಅವರಿಗೆ ಈಗ ಎಲ್ಲಾ ವಿಷಯ ಸ್ಪಷ್ಟವಾಗತೊಡಗಿತು. ಬ್ರಿಟಿಷ್ ಪಾದ್ರಿಯ ಆ ಹೊತ್ತಿನಲ್ಲಿ ಊಹಿಸಿದಂತೆ ಕೊರಮೆ ಭಾಷೆಗೆ ಶಾಸ್ತ್ರೀಯ ಬುನಾದಿಯಿತ್ತು, ಮತ್ತು ಅದಕ್ಕೆ ಕಾರಣವೂ ಸ್ಪಷ್ಟವಾಗಿತ್ತು. ವಿಶ್ವನಾಥನ್ ಆಗ ಒಂದು ಮಹತ್ವದ ಪ್ರಶ್ನೆ ಮುಂದಿಟ್ಟರು. ಕೊರಮೆ ಭಾಷೆ ಅಷ್ಟೊಂದು ವೈಭವದಿಂದ ಮೆರೆದಿದ್ದರೆ ಈ ಭಾಷೆಯ ಒಂದು ಕೃತಿಯೂ ಈಗ ಯಾಕೆ ಲಭ್ಯವಿಲ್ಲ? ಅದಕ್ಕೆ ಆಡಮ್ಸ್ ಅವರೇ ಸಮಾಧಾನ ಹೇಳಿದರು - ಹಿಂದೆಲ್ಲಾ ಒಂದು ಭಾಷೆಯ ಹುಟ್ಟು ಮತ್ತು ಸಾಮ ರಾಜಾಶ್ರಯದ ಮೇಲೆ ಅವಲಂಬಿತವಾಗಿತ್ತು. ಒಂದು ರಾಜ್ಯದವರು ಇನ್ನೊಂದು ರಾಜ್ಯದ ಮೇಲೆ ದಂಡೆತ್ತಿ ಹೋಗಿ ಅದನ್ನು ಗೆದ್ದರೆ, ಆ ರಾಜ್ಯದ ಸಂಪತ್ತನ್ನು ಲೂಟಿ ಮಾಡುಮದರ ಜೊತೆಗೆ ಅಲ್ಲಿನ ಜನರ ಭಾಷೆ, ಧರ್ಮ, ಸಂಸ್ಕೃತಿಯನ್ನು ನಾಶಮಾಡುಮದು ಇತಿಹಾಸದಲ್ಲಿ ಯಾವತ್ತೂ ಕಂಡುಬರುವ ವಿಚಾರ. ಇಲ್ಲೂ ಹಾಗೇ ಆಗಿದೆ. ಇಲ್ಲಿ ಕದಂಬರು ಪ್ರಾಬಲ್ಯಕ್ಕೆ ಬರುವ ಹೊತ್ತಿನಲ್ಲಿ ಆಚೆ ಪಲ್ಲವರು ತಮ್ಮದೇ ಭಾಷೆಯ ಮೂಲಕ ಮೈಯಶ್ರೀಕತೆಯನ್ನು ಪ್ರತಿಪಾದಿಸುತ್ತಿದ್ದರು. ಇಬ್ಬರಿಗೂ ಆಗ ಕೊರಮೆ ಬೇಡವಾಗಿತ್ತು ಮತ್ತು ಸಮಾನ ಶತ್ರುವೂ ಆಗಿತ್ತು. ಹಾಗಾಗಿ ಆ ಕಾಲದಲ್ಲಿ ಕೊರಮೆ ಭಾಷೆ ಹೇಳಹೆಸರಿಲ್ಲದಂತೆ ಕಣ್ಮರೆಯಾಗಿ ಹೋಯಿತು. ಈಗಿನ ಕೊರಮರು ಕೂಡ ಉತ್ತರ ಕರ್ನಾಟಕದಲ್ಲಿಯೇ ಇರುಮದರಿಂದ ಆಳಸಿಂಗಾಚಾರ್ಯರು ಹೇಳಿದಂತೆ ಆಗಿನ ಬಿಂಬಾಪುರವನ್ನೇ ಈಗಿನ ಬನವಾಸಿ ಎಂ ಂಬಲು ಕಾರಣಗಳಿವೆ .

ಹೀಗೆ ಒಂದಕ್ಕೊಂದು ಕೂಡಿಕೊಂಡ ಮೇಲೆ ಎಲ್ಲರಿಗೂ ವಿಷಯ ಸ್ಪಷ್ಟವಾಯಿತು. ತಾಮ ಇದ್ದಕ್ಕಿದ್ದಂತೆ ಒಂದು ಮಹತ್ವದ ವಿಷಯವನ್ನು ಹೊರಗೆಡವಲು ಸಿದ್ಧರಾಗುತ್ತಿದ್ದೇವೆ ಎಂ ೆನದೇ ಅವರಿಗೆ ರೋಮಾಂಚನವಾಗುತ್ತಿತ್ತು. ಆಳಸಿಂಗಾಚಾರ್ಯರಂತೂ ತಮ್ಮ ಜೀವನದ ದೊಡ್ಡ ನಂಬಿಕೆಯಾದ ದ್ರಾವಿಡ ಏಕಭಾಷಾ ವಾದಕ್ಕೆ ಈ ರೀತಿಯ ಹೊಸ ಪುರಾವೆ ಸಿಕ್ಕಿದ್ದನ್ನು ನೋಡಿ ಬಹಳ ಸಂತೋಷದಿಂದಿದ್ದರು. ಇನ್ನು ಅವರ ಮುಂದಿದ್ದದ್ದು ಒಂದೇ ಗುರಿ. ತಮ್ಮ ಬಳಿ ಇದ್ದ, ಕೊರಮೆ ಭಾಷೆಯದ್ದು ಅಂತ ಹೇಳಲಾದ ಗ್ರಂಥವನ್ನು ಓದುಮದು. ಅದೊಂದು ಮಾಡಿದರೆ ಈ ಸಂಶೋಧನೆಯನ್ನು ಸರಕಾರಕ್ಕೆ ತಿಳಿಸಬಹುದಿತ್ತು.

ಆದರೆ ಅವರಿಗೆ ಈ ಕೆಲಸದಲ್ಲಿ ಬಹಳ ತೊಡಕುಗಳು ಎದುರಾಗಿದ್ದಮ. ಮೊದಲಿಗೆ ಈ ಸಂಶೋಧನೆಯಲ್ಲಿ ಮಹತ್ತ್ವವಾದ ಪಾತ್ರವಹಿಸಬೇಕಾಗಿದ್ದ ವೆಂಕಟಸುಬ್ಬಯ್ಯನವರು ತೀರಿಹೋದರು. ಇಂತಹ ವಿಷಯದಲ್ಲಿ ಅವರಿಗಿದ್ದಷ್ಟು ಪರಿಶ್ರಮ ಸ್ವತಃ ಆಳಸಿಂಗಾಚಾರ್ಯರಿಗೂ ಇರಲಿಲ್ಲ. ಮತ್ತೆ ಸರಕಾರದಿಂದಲೂ ಬೇಕಾದಷ್ಟು ಹಣ ಬರುತ್ತಿರಲಿಲ್ಲ. ಜೊತೆಗೆ ಪ್ರಭಾವೀ ವ್ಯಕ್ತಿಗಳಿಂದ ಈ ಸಂಶೋಧನೆಯನ್ನು ನಿಲ್ಲಿಸಲು ಒತ್ತಡಗಳೂ ಬರತೊಡಗಿದಮ. ತಮ್ಮನ್ನು ತಾಮ ಭಾಷೆಯ ಹೋರಾಟಗಾರರೆಂದು ಹೇಳಿಕೊಂಡ ಕೆಲಮ ಮಂದಿ ಸಂಸ್ಥೆಗೆ ಕಲ್ಲುಗಳನ್ನು ಹೊಡೆದು ತಮ್ಮ ಕೋಪವನ್ನೂ ವ್ಯಕ್ತಪಡಿಸಿದರು. ಭಾಷೆ, ಭಾಷೆಯ ಮಧ್ಯ ಸೌಹಾರ್ದಯುತ ವಾತಾವರಣ ಕಲ್ಪಿಸುವಂತಹ ಇಂತಹ ಸಂಶೋಧನೆ ಆಗಿನ ಪರಿಸ್ಥಿತಿಗೆ ಸರಿಹೊಂದುತ್ತಿರಲಿಲ್ಲ. ಇದರಿಂದ ಬಹಳ ನೊಂದುಕೊಂಡ ಆಳಸಿಂಗಾಚಾರ್ಯರು ರಾಜೀನಾಮೆ ನೀಡಿ ಹೊರಟು ಹೋದರು. ಸರಕಾರ ಅವರ ಬದಲಿಗೆ ನೇಮಿಸಿದ ವ್ಯಕ್ತಿ ಸಂಸ್ಥೆಗೆ ಬಂದಕೂಡಲೇ ಈ ಸಂಶೋಧನೆಯನ್ನು ನಿಲ್ಲಿಸಲು ಆದೇಶ ಹೊರಡಿಸಿಬಿಟ್ಟರು.

ಡಾ|| ಆಡಮ್ಸ್ ಅವರು ತಮ್ಮ ಕೈಯಿಂದಾಗುವಷ್ಟು ಪ್ರಯತ್ನ ಪಟ್ಟರೂ ಇದನ್ನೆಲ್ಲಾ ನಿಲ್ಲಿಸಲಾಗಲಿಲ್ಲ. ವಿಶ್ವನಾಥನ್ ಅವರ ರಜೆ ಬೇರೆ ಮುಗಿಯುತ್ತಾ ಬಂದಿದ್ದರಿಂದ ಅವರು ತಮ್ಮ ಮಾತೃಸಂಸ್ಥೆಗೆ ಮರಳಬೇಕಿತ್ತು. ಆಡಮ್ಸ್ ಅವರಿಗೂ ಅವರ ಯೂನಿವರ್ಸಿಟಿಯಿಂದ ಕಾಗದಗಳು ಬರುತ್ತಿದ್ದಮ. ಭಾಷಾ ಆಧಾರದ ಮೇಲೆ ರಾಜ್ಯಗಳ ಪುನರ್ವಿಂಗಡನೆಯ

ವಿಷಯ ಕಾವೇರಿದ್ದ ಕಾಲ ಅದು. ದಿನವೂ ಒಂದಲ್ಲಾ ಒಂದು ಗಲಾಟೆ ಆಗುತ್ತಿದ್ದರಿಂದ ಇನ್ನು ಇಲ್ಲಿರುವುದು ಬೇಡವೆಂದು ಅವರು ತಮ್ಮ ಯೂನಿವರ್ಸಿಟಿಗೆ ಮರಳಿದರು.

****************************************************************
******

University of Lordshire

Field Notes from research trip to Mysore - 1955 ಎಂ[illegible]ಂಪು ಬಣ್ಣದ ಡೈರಿ ಓದುತ್ತಿದ್ದ ಆಡಮ್ಸ್ ಅವರಿಗೆ ಮುಂದೆ ಏನು ಮಾಡಬೇಕೆಂದು ಸ್ಪಷ್ಟವಾಗಿಹೋಯಿತು. ತಾವು ಈಗ ಕೊರಮೆ ಭಾಷೆಯ ಲಕ್ಷಣ ಮತ್ತು ಅದರ ಲಿಪಿಯನ್ನು ಜಗತ್ತಿಗೆ ಪರಿಚಯಿಸಬೇಕಿತ್ತು. ಹಾಗೆಂದು ಅವರು ೧೯೫೫ ರ ಬಳಿಕ ಈ ಬಗ್ಗೆ ಪ್ರಯತ್ನ ಪಡಲೇ ಇಲ್ಲ ಅಂತೇನೂ ಅಲ್ಲ. ಆದರೆ ಅವರಿಗೆ ಆ ಕಾಲದಲ್ಲಿ ಸರಿಯಾದ ಸೌಕರ್ಯಗಳು ಸಿಕ್ಕಿರಲಿಲ್ಲ. ವಿಶ್ವನಾಥನ್ ಮತ್ತು ಇವರು ಹಲವಾರು ಸಲ ಸರಕಾರಕ್ಕೆ ಪತ್ರ ಬರೆದರೂ ಇವರ ಸಂಶೋಧನೆಗೆ ಹಣಕಾಸಿನ ನೆರವು ಸಿಕ್ಕಿರಲಿಲ್ಲ. ಮತ್ತು ಬೇರೆ ರೀತಿಯ ಕೆಲಸಗಳು ಸರಕಾರದ ಕಡೆಯಿಂದ ಬರುತ್ತಿದ್ದರಿಂದ ಕೊರಮೆ ಭಾಷೆಯ ಕಡೆಗೆ ಹೆಚ್ಚು ಗಮನ ಕೊಡಲಾಗಲಿಲ್ಲ. ಈಗ ಕೊರಮೆ ಭಾಷೆಯನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಬೇಕಿತ್ತು. ಈ ಕೆಲಸ ಮಾಡಲು ತನ್ನೊಂದಿದೆ ವಿಶ್ವನಾಥನ್ ಇದ್ದರೆ ಒಳ್ಳೆಯದೆಂದು ಯೋಚಿಸಿ ಅವನಿಗೊಂದು ಇ-ಮೈಲ್ ಕಳಿಸಿದರು.

ವಿಶ್ವನಾಥನ್ ಒಂದು ವಾರದಲ್ಲಿ ಆಡಮ್ಸ್ ಅವರನ್ನು ಕೂಡಿಕೊಂಡರು. ಮುಂದಿನ ಏಳು ತಿಂಗಳು ಅವರಿಬ್ಬರ ಪಾಲಿಗೆ ಸಂತೋಷದ ಕಾಲವಾಗಿತ್ತು.Computational Linguistics ನಲ್ಲಿ ವಿಶ್ವನಾಥನ್ ತುಂಬಾ ಕೆಲಸ ಮಾಡಿದ್ದರು. ಆದ್ದರಿಂದ ಅವರು ಮಾಡಿದ ಮೊದಲ ಕೆಲಸವೆಂದರೆ ಎಲ್ಲಾ ದ್ರಾವಿಡೀಯ ಭಾಷೆಗಳ database ಒಂದನ್ನು ಸಿದ್ಧಪಡಿಸಿದ್ದು. ನಂತರ ಒಂದು analytical software ಬರೆದು ಈ ಎಲ್ಲಾ ಭಾಷೆಗಳ ಲಿಪಿಗಳಲ್ಲಿನ ಸಮಾನತೆಗಳನ್ನು ಕಂಡುಹಿಡಿದರು. ಹಿಂದೆ ಮೈಸೂರಿನಿಂದ ಬರುವಾಗ ಅಲ್ಲಿದ್ದ ಕೊರಮೆ ಭಾಷೆಯದ್ದು ಎಂ[illegible]ೇಳಲಾದ ಕೃತಿಯ ಪ್ರತಿಯೊಂದು ಆಡಮ್ಸ್ ಅವರ ಬಳಿ ಇತ್ತು. ವಿಶ್ವನಾಥನ್ ಅವರ manuscript conversion software ನ ನೆರವಿನಿಂದ ಆ ಪುಸ್ತಕವನ್ನು scan ಮಾಡಿ ಅದರ digital copy ಒಂದನ್ನು ಸಿದ್ಧಪಡಿಸಿಕೊಂಡರು.

ಆಮೇಲೆ ಅದನ್ನು ಈ ಮೊದಲೇ ಸಿದ್ಧಪಡಿಸಿಕೊಂಡ database ನೊಂದಿಗೆ ಹೋಲಿಸಿ ನೋಡಿದಾಗ ವಿಷಯ ಸ್ಪಷ್ಟವಾಗತೊಡಗಿತು. ಕೊರಮೆ ಭಾಷೆಯನ್ನು ಚಿರೂರವ ವಿಶೇಷವಾಗಿ ಸಿದ್ಧಪಡಿಸಿದ್ದ. ಇದರಲ್ಲಿ ದ್ರಾವಿಡೀಯ ಭಾಷೆಯಲ್ಲಿರುವಂತೆ ಒತ್ತಕ್ಷರಗಳಿರಲಿಲ್ಲ. ಯಾವುದೇ ಕೊಂಬುಗಳು ಆ ಭಾಷೆಯ ಲಿಪಿಯಲ್ಲಿ ಕಾಣುತ್ತಿರಲಿಲ್ಲ. ಇದೊಂದು ಮಹತ್ವದ ವಿಷಯವಾಗಿತ್ತು. ಯಾಕೆಂದರೆ ಎರಡು ಸಮಾನಾಂತರ ರೇಖೆಗಳ ನಡುವೆ ಬರೆಯಬಹುದಾದ ಲಿಪಿಯನ್ನುcomputer ನಲ್ಲಿ ಅಳವಡಿಸುವುದು ಸುಲಭವಾಗಿತ್ತು. ಭಾರತೀಯ ಭಾಷೆಗಳಲ್ಲಿ ಕೊಂಬು ಮತ್ತು ಒತ್ತಕ್ಷರದ ಬಳಕೆ ಬಹಳವಾದ್ದರಿಂದ ಅವುಗಳನ್ನು ಎರಡು ಗೆರೆಗಳ ಮಧ್ಯೆ ಕೂರಿಸುವುದು ಕಷ್ಟವಾಗಿತ್ತು. ಇಂಗ್ಲಿಷ್ ಭಾಷೆಯಲ್ಲೂ j, p, g, y ಎಂ[illegible]ಕ್ಷರ ಎರಡು ಗೆರೆಗಳ ಕೆಳಗೆ ತಮ್ಮ ಬಾಲ ಚಾಚಿದ್ದರೂ ಸುಮಾರಾಗಿ ಅದನ್ನು computer screen ನಲ್ಲಿ ಮೂಡಿಸುವುದು ಸುಲಭದ ಕೆಲಸವಾಗಿತ್ತು. ಆದರೆ ಭಾರತೀಯ ಲಿಪಿಗಳಲ್ಲಿ ಈ ವಿಷಯ ಒಂದು ದೊಡ್ಡ ತೊಡಕಾಗಿ ಪರಿಣಮಿಸಿತ್ತು.

ಆದರೆ ಕೊರಮೆ ಭಾಷೆಯಲ್ಲಿ ಇಂತಹ ಸಮಸ್ಯೆಗಳು ಇರಲೇ ಇಲ್ಲ. ಇದರಲ್ಲಿ ಅಕ್ಷರಗಳು ಎಷ್ಟು ಸರಳವಾಗಿತ್ತೆಂದರೆ camputer ನಲ್ಲಿ ಅದನ್ನು ಮೂಡಿಸಲು ವಿಶ್ವನಾಥನ್ ಅವರಿಗೆ ಹೆಚ್ಚು ಸಮಯ ಹಿಡಿಯಲೇ ಇಲ್ಲ. ಬರುಬರುತ್ತಾ ಕೊರಮೆ ಭಾಷೆಯ ಅಂಶಗಳು ಇವರಿಬ್ಬರನ್ನೂ ಬೆರಗುಗೊಳಿಸುತ್ತಾ ಹೋಯಿತು. ಅಕ್ಷರಗಳು ಸ್ಪಷ್ಟವಾದೊಡನೆ ಭಾಷೆಯ ವ್ಯಾಕರಣದ ಬಗ್ಗೆ ತಿಳಿಯಲು grammer identifier ಉಪಯೋಗಿಸಿದರು. ಅದರಲ್ಲಿ ವಿಶ್ವದ ಎಲ್ಲಾ ಶಾಸ್ತ್ರೀಯ ಭಾಷೆಗಳ ಗುಣಲಕ್ಷಣಗಳನ್ನು feed ಮಾಡಲಾಗಿತ್ತು. ಅದರೊಂದಿಗೆ ಹೋಲಿಸಿ ನೋಡಿದಾದ ಕೊರಮೆ ಭಾಷೆ ಎಲ್ಲಾ ತರಹದ ಭಾಷಾನಿಯಮಗಳನ್ನು ಅಳವಡಿಸಿಕೊಂಡಿದೆ ಎಂ[illegible] result ಬಂತು. ಮುಂದೆ ಆ software ತಯಾರಿಸಿದ ಕೊರಮೆ ಭಾಷೆಯ ವ್ಯಾಕರಣ ನೋಡಿ ಅವರು ದಿಗ್ಭ್ರಾಂತರಾಗಿ ಹೋದರು. ಎಲ್ಲಾ ದ್ರಾವಿಡೀಯ ಭಾಷೆಗಳ ಸಮಾನತೆಯ report ನೋಡಿದ್ದ ಅವರಿಗೆ ಇದು ಅದರದೇ ತದ್ರೂಪ ಅನಿಸುತ್ತಿತ್ತು. ನಿಸ್ಸಂಶಯವಾಗಿ ಎಲ್ಲಾ ದ್ರಾವಿಡೀಯ ಭಾಷೆಗಳೂ ಕೊರಮೆಯಿಂದಲೇ ಹುಟ್ಟಿದವೆಂದು ನಿರ್ವಿವಾದವಾಗಿ ಸಾಬೀತಾಗಿತ್ತು. Report ಓದಿ ಮುಗಿಸಿದ ಮೇಲೆ ಆಡಮ್ಸ್ ವಿಶ್ವನಾಥನ್ ಅವರನ್ನು ಗಟ್ಟಿಯಾಗಿ ತಬ್ಬಿಕೊಂಡು ಅತ್ತುಬಿಟ್ಟರು. ಅವರಿಗೆ ಗೊತ್ತಿತ್ತು - ತನ್ನ ವಿಭಾಗ ಇನ್ನು ಮುಚ್ಚದು.

# ಮಾತು-ಕತೆ

Monday, April 16, 2007

ಸ ರಿ ಗ ಮ ಪ ದ ನಿ ಸ

"...ನಾನೇ"
"........"
"ಹೀಗೆ ಸುಮ್ನೆ"
"........"
"ವಿಷ್ಯ ಇದ್ರೇ ಫೋನ್ ಮಾಡ್ಬೇಕಾ"
"..........."
"ಜೇಬಲ್ಲಿ ನೋಡ್ತೀನಿ ಇರು. ಏನೊಂದು ಸಾವಿರ ರುಪಾಯಿ ಇದೆಯಪ್ಪಾ"
"......."
"ಏನು ಇಷ್ಟು ಸಾಕಾಗಲ್ವಾ ನಿಂಗೆ"
"..............."
"ಇವತ್ತಿನ ನಮ್ಮ ಸಂಜೆ ಕಾಫಿ, ಪಿಜ್ಜಾ□ಗೆ ಾಹು  ಬಿಡು"
"............."
"ನೆನ್ನೆ ಹೋದಲ್ಲಿಗೆ ಬೇಡ. ಇವತ್ತು ನಿನ್ನ ಚಾಯ್ಸ್"
"................."
"□□□□. ಆಮೇಲೆ ಅಲ್ಲಿ ಕಾಫಿ ಚೆನ್ನಾಗಿಲ್ಲಾಂತ ನನ್ನೇ ಬಯ್ತೀಯ. ನೀನೇ ಹೇಳು"
"........."
"ಓಕೆ"
".........."
"ಹೇಯ್! ನನ್ ಶರ್ಟ್ ಕಲರ್ ನಿನಿಗ್ ಹೇಗ್ ಗೊತ್ತಾಯ್ತು"
"........"
"ಪರ್ವಾಗಿಲ್ಲ. ನಮ್ಮನ್ನ ಯಾರೂ ಗುರುತು ಹಿಡಿಯೋದಿಲ್ಲ"
"...."
"ಅಯ್ಯಯ್ಯೋ. ಹಾಗಲ್ಲ ನಾನು ಹೇಳಿದ್ದು. ಈಗ ಅಲ್ಲಿ ಹಿಂದೆ ಯಾರ್ ಜೊತೆನೋ ಹೋಗಿದ್ದೆ, ಆವಾಗ ನಾನ್ ಸಿಕ್ಕಾಕೊಳಿಲ್ಲಾ ಅಂತ ನೀನು ಯೋಚನೆ ಮಾಡಿದ್ರೆ...ಅದು ನಿನ್ ತಪ್ಪು. ನಾನು ಹೇಳಿದ್ದು ಸಿಂಪಲ್. ನಮ್ಮನ್ನ್ ಅಲ್ಲಿ ಯಾರೂ ಗುರ್ತು ಹಿಡಿಯೋಲ್ಲಾಂತ."
"......................................................................................................."
"ನನ್ನ ಮೇಲೆ ನಂಬಿಕೆ ಇಲ್ವಾ ನಿಂಗೆ"
".........."
"ಇಷ್ಟೇನಾ ನೀನು ನನ್ನ ಅರ್ಥ ಮಾಡ್ಕೊಂಡಿರೋದು. ಹಳೇದೆಲ್ಲಾ ಇಷ್ಟು ಬೇಗ ಮರೆತು ಹೋಯ್ತಾ ನಿಂಗೆ"
"...................................."
"ಆಯ್ತು. ನೀನು ಹೇಳಿದ ಹಾಗೇ ಆಗಲಿ. ನಾನು ಸಂಜೆ ಬರ್ತೀನಿ ಅಲ್ಲಿಗೆ. ನಿನ್ನದೇ ಈಗ ನಂಗೆ ಡೌಟು"
"...................."
"ಆಯ್ತು. ಇನ್ನೇನು ನಿನ್ನ ಫ್ಯಾನ್ ಬಂದನಾ"
"..............................."
"ನಂಗೆ ಒಮ್ಮೊಮ್ಮೆ ಅನ್ನಿಸ್ತದೆ, ನಿಂಗೆ ನನಗಿಂತ ಅವನ ಚಿಂತೆಯೇ ಜಾಸ್ತಿ ಅಂತ"
"............................................................................................................"
"ಹೌದೌದು. ದಿನಾ ನಿನ್ನ ಮೇಲೆ ಅಷ್ಟಷ್ಟು ಖರ್ಚು ಮಾಡುವ ನನ್ನ ಬಗ್ಗೆ ನಿನಗೆ ಕಾಳಜಿ ಇರಬೇಕಾದ್ದೇ"
"............................................"
"ಅಯ್ಯಯ್ಯೋ. ನೀನು ಹೀಗೆ ಮಾತು ಮಾತಿಗೆ ಕೋಪ ಮಾಡ್ಕೊಂಡ್ರೆ ಹೇಗೆ. ಕಾಮಿಡೀನೂ ಮಾಡ್ಬಾರ್ದಾ"
"......................."
"ಓಕೆ. ತಪ್ಪಾಯ್ತು, ತಪ್ಪಾಯ್ತು, ತಪ್ಪಾಯ್ತು. ಸರೀನಾ"
"..............."

"ಆಯ್ತು ಅಂತ ಹೇಳಿದ್ನಲ್ಲಾ. ನಿನಗಿಂತ ಮೊದಲೇ ಕಾಯ್ತಿರ್ತೀನಿ"
"................."
"ಅಯ್ಯೋ. ಕಳೆದ ಸಲ ಲೇಟಾಯ್ತು ನಿಜ. ಅದಕ್ಕೇಂತಾ ಈ ಸಲಾನೂ ಲೇಟ್ ಬರ್ತೀನಿ ಅಂತ ಯಾಕೆ ಯೋಚನೆ ಮಾಡ್ತೀಯಾ"
"........."
"ಆಯ್ತು.. ಅದೇ ನಿನ್ನ ಫೇವರೇಟ್ ಚಾಕಲೇಟ್ ಇದ್ಯಲ್ಲಾ, ಅದನ್ನ ತೆಕೊಂಡೇ ಬರ್ತೀನಿ"
************************************************************
****************************************

ಸ ನಿ ದ ಪ ಮ ಗ ರಿ ಸ

"..........."
"ಏನು ಇಷ್ಟು ಬೇಗ"
"............."
"ಏನ್ವಿಷ್ಯ"
"........"
"ದುಡ್ಡು ಜಾಸ್ತಿ ಇದ್ಯಾ"
"........."
"ಅಷ್ಟೇನಾ"
".............."
"ಯಾಕೆ ಅಷ್ಟು ಕಮ್ಮಿ"
"....."
"ಸರಿ. ಎಲ್ಲಿ ಸಿಗೋಣ"
"...."
"ಆಗೊಲ್ಲ. ಸ್ಪಾಟ್ ನೀನೇ ಹೇಳು"
"............."
"ಹಳೇ ಬಸ್ ಸ್ಟಾಪ್ ಹತ್ರ ಬರ್ತೀನಿ"
"......"
"ಗ್ರೀನ್ ಶರ್ಟ್ ಹಾಕೊಂಡಿದ್ದೀಯಾ"
"........................"
"ತುಂಬಾ ಎದ್ದು ಕಾಣುವ ಶರ್ಟ್ ಹಾಕೋಬೇಡ"
"..............."
"ನಿನಿಗೆ ಗ್ಯಾರಂಟಿ ಇದ್ಯಾ. ಹಿಂದೆಲ್ಲಾದ್ರೂ ಬೇರೆಯವ್ರ ಜೊತೆ ಹೋಗಿದ್ಯಾ ಅಲ್ಲಿಗೆ"
".........."
"ನೋಡು ನಾನು ಬೇರೆಯವರ ತರಹ ಅಲ್ಲ. ನೀನೆಲ್ಲಾದ್ರೂ ನನಗೆ ಮೋಸ ಮಾಡೋಕೆ ನೋಡಿದ್ರೆ ಚೆನ್ನಾಗಿರೊಲ್ಲಾ. ನಾನು ಬೇಡ ಬೇಡ ಅಂದರೂ ನೀನೇ ನನ್ನನ್ನ ಬಲವಂತ ಮಾಡಿದ್ದು ಈ ವಿಷಯಕ್ಕೆ. ಈಗ ನೀನು ಮೋಸ ಮಾಡಿದರೆ ನಾನು ಸುಮ್ಮನಿರೊಲ್ಲ"
"...................."
"ಈ ವಿಷ್ಯದಲ್ಲಿ ಯಾರು ಯಾರನ್ನೂ ನಂಬುವ ಹಾಗಿಲ್ಲ"
"............"
"ಹಳೇ ಕತೆ ಎಲ್ಲಾ ಈಗ ಬೇಡ. ಈವತ್ತಿನ ಕತೆ ಹೇಳು. ನಾನು ಬರೋದು ಗ್ಯಾರಂಟಿ. ನೀನು ಬರ್ಲೇಬೇಕು"
"..................."
"ಛೇ! ನನ್ನ ಬಗ್ಗೆ ಸಂಶಯ ಬೇಡ. ನಾನೀಗಲೇ ಹೊರಟೆ"
"..................................."
"ಹೌದು ಬೆಳಗ್ಗೇ ಬಂದು ಗರಮ್ಮಾಗಿ ಕೂತಿದ್ದಾರೆ"
"........................................"
"ಹಾಗೇನಿಲ್ಲ. ನಿನ್ನ ಮೇಲೆ ಕಡಿಮೆ ಗಮನ ಅಂತೇನೂ ಅಲ್ಲ. ನೀನು ಸರಿಯಾಗಿ ನಮ್ಮನ್ನ ನೋಡಿಕೊಂಡರೆ ನಾವೂ ನಿನ್ನನ್ನ ಚೆನ್ನಾಗಿಯೇ ಕಾಪಾಡ್ತೇವೆ"

"............................................................"

"ನಾನು ಹೇಳಿದ್ನಾ ಅಷ್ಟೆಲ್ಲಾ ಮಾಡ್ಲಿಕ್ಕೆ. ನಿನ್ನ ಕೆಲಸ ಆಗ್ಬೇಕಿತ್ತು ಅದಕ್ಕೇ ಈಗಲೂ ನನ್ನ ಹಿಂದೆ ಬಿದ್ದಿದ್ದೀಯ. ಬೇಡಾಂದ್ರೆ ಹೇಳು. ನನಗೇನು"

"........................................."

"ನಮ್ಮ ಹತ್ರ ಅವೆಲ್ಲಾ ಬೇಡ. ಏನಿದ್ರೂ ಬಿಸ್ನೆಸ್ ಮಾತಾಡು"

".........."

"ಸರಿ ಸರಿ. ಹಾಗಾದ್ರೆ ಅಲ್ಲೇ ಸಿಗೋಣ"

"................................"

"ಅದು ಹೇಳ್ಬೇಡ ನೀನು. ಕಳೆದ ಸಲ ನಾನು ಕಾದೂ ಕಾದೂ ಸುಸ್ತಾಗಿ ಹೋಗಿದ್ದೆ. ಆಮೇಲೆ ಕಾನ್ಸಲ್ ಅಂತ ಮೆಸೇಜ್ ಬಂದಿತ್ತು"

"..................."

"ಆಯ್ತು. ಇದೇ ಲಾಸ್ಟ್ ಚಾನ್ಸ್. ಹತ್ತತ್ತು ಲಕ್ಷ ಬೇರೆ ಬೇರೆಯಾಗಿ ಪ್ಯಾಕ್ ಮಾಡಿ ತಂದ್ಬಿಡು"

## <u>ಹೀಗೊಂದು ಪ್ರೇಮಕಥೆ</u>

Tuesday, May 01, 2007

ಎಕ್ಸಾಮ್ ಡ್ಯೂಟಿಗೆ ಯಾರನ್ನು ಎಲ್ಲಿಗೆ ಕಳಿಸುವುದೆಂದು ಯೋಚಿಸುತ್ತಿದ್ದೆ. ಅವತ್ತು ಸಂಜೆಯ ಹೊತ್ತಿಗೆ ಪಟ್ಟಿ ಸಿದ್ಧವಾಗಬೇಕಿದ್ದರಿಂದ ತಲೆಕೆಡಿಸಿಕೊಂಡು ಕುಳಿತ್ತಿದ್ದೆ. ಬೆಳಗ್ಗಿನಿಂದ ಎಲ್ಲರೂ ಬಂದು ಅವರವರ ಕಷ್ಟ ಹೇಳಿಕೊಂಡು ತಮಗೆ ಆದಷ್ಟು ಕಮ್ಮಿ ಡ್ಯೂಟಿ ಹಾಕುವಂತೆ ಕೇಳಿಕೊಂಡಿದ್ದರು. ತಾವು ಹೋಗಲೇಬೇಕಾದ ಮದುವೆ, ಮುಂಜಿಗಳ ದಿನ ತಮಗೆ ಡ್ಯೂಟಿ ಹಚ್ಚಲೇಬಾರದೆಂದು ಮತ್ತೆ ಕೆಲವರ ಗೋಳು. ಈ ಮಧ್ಯೆ ಸೀನಿಯರ್ ಮೇಸ್ಟ್ರುಗಳಿಗೆ ಜಾಸ್ತಿ ಡ್ಯೂಟಿ ಬೇಡವೆಂದು ಪ್ರಿನ್ಸಿಪಾಲರಿಂದಲೇ ಆದೇಶವಾಗಿತ್ತು. ಹೀಗಾದರೆ ಮುಕ್ಕಾಲು ಡ್ಯೂಟಿಗಳನ್ನು ನಾನೇ ಮಾಡುವ ಪರಿಸ್ಥಿತಿ ಬರಬಹುದೆಂದು ನನಗೆ ಭಯವಾಯ್ತು. ಆಗ ನನಗೆ ನೆನಪಾದವನೇ ಶಿವಕಿರಣ.

ಶಿವ ನಮ್ಮ ಕಾಲೇಜು ಸೇರಿ ಮೂರು ತಿಂಗಳಾಗಿದ್ದರೂ ಅಷ್ಟು ಕಡಿಮೆ ಸಮಯದಲ್ಲೇ ಹುಡುಗರಿಗೆ ಇಷ್ಟವಾಗಿಬಿಟ್ಟಿದ್ದ. ಈ ಕಾಲದಲ್ಲಿ ಮೇಸ್ಟ್ರು ಕೆಲಸಕ್ಕೆ ಬರುವವರೇ ಕಮ್ಮಿ. ಕಂಪೆನಿಗಳಲ್ಲಿ ಕೈತುಂಬ ಸಂಬಳ ಸಿಗುವಾಗ ಹುಡುಗರ ಮುಂದೆ ಬಾಯಿಬಡಿಯುವ ಕೆಲಸ ಯಾರಿಗೆ ತಾನೇ ಬೇಕು. ನಮ್ಮ ಕಾಲೇಜಿನಲ್ಲೂ ಹೇಳದೇ ಕೇಳದೇ ಕಂಪೆನಿಗಳಿಗೆ ಓಡಿಹೋಗುವವರ ಸಂಖ್ಯೆ ಜಾಸ್ತಿ ಇತ್ತು. ವರ್ಷದ ಮಧ್ಯದಲ್ಲಿ ಅರ್ಧ ಪಾಠ ಮಾಡಿ ಕೆಲಸ ಬಿಡುವವರ ಜಾಗಕ್ಕೆ ಹೊಸಬರನ್ನು ತರುವುದು ಬಹಳ ಕಷ್ಟದ ಕೆಲಸ. ಹೀಗೇ ಈ ವರ್ಷ ಬಹಳ ಮುಖ್ಯ ವಿಷಯ ಕಲಿಸುತ್ತಿದ್ದ ಮೇಡಂ ಇದ್ದಕ್ಕಿದ್ದಂತೆ ಹೊರಟುನಿಂತಾಗ ನಮಗೆ ಸಿಕ್ಕಿದ್ದೇ ಈ ಶಿವ.

ನಮ್ಮ ಪರಿಚಯದವರೊಬ್ಬರು ಶಿವನನ್ನು ಕಾಲೇಜಿಗೆ ಕರೆದುಕೊಂಡು ಬಂದರು. ಪೀಚುಪೀಚಾಗಿದ್ದ ಹುಡುಗನನ್ನು ನೋಡಿ ಇವ ಹೇಗಪ್ಪಾ ಹುಡುಗರ ಮುಂದೆ ನಿಂತಾನು ಅಂತ ನಾನು ಯೋಚಿಸುತ್ತಿದ್ದೆ. ಆದರೆ ಪ್ರಿನ್ಸಿಪಾಲರು ಒಂದು ಕ್ಲಾಸ್ ತೆಕ್ಕೊಳಲಿ, ನಾವೂ ನೋಡೋಣ ಅಂದದ್ದಕ್ಕೆ ನಾನೂ ಒಪ್ಪಿಕೊಂಡೆ. ಹೇಗಿದ್ದರೂ ನಮಗೂ ಒಬ್ಬ ಮೇಸ್ಟ್ರ ಅಗತ್ಯ ಇತ್ತು. ನೋಡೋಣ, ಹುಡುಗ ಏನು ಮಾಡಬಹುದು ಅಂತ ಕ್ಲಾಸಿಗೆ ಕರೆದುಕೊಂಡು ಹೋದೆವು. ಹುಡುಗನಂತಿದ್ದ ಶಿವನನ್ನು ನೋಡಿ ಹುಡುಗರು ಗುಸುಗುಸು ಮಾಡಿದರೂ ನಾವೆಲ್ಲಾ ಇದ್ದಿದ್ದರಿಂದ ಬೇಗ ತಣ್ಣಗಾದರು. ಹುಡುಗ ಕೈಯಲ್ಲಿ ಚಾಕ್ ಹಿಡಿದು ಸ್ಟೇಜಿಗೆ ಹತ್ತಿದ.

ಮುಂದಿನ ನಲವತ್ತು ನಿಮಿಷ ಆ ಕೋಣೆಯಲ್ಲಿ ಕೇಳಿಸುತ್ತಿದ್ದದ್ದು ಬರೇ ಆ ಹುಡುಗನ ಕಂಚಿನ ಧ್ವನಿ. ಆ ಚಿಕ್ಕ, ಸಣಕಲು ದೇಹದಲ್ಲಿ ಈ ತರಹದ ಧ್ವನಿ ಹೇಗೆ ಕೂತಿತ್ತೋ ನನಗಂತೂ ಗೊತ್ತಾಗಲಿಲ್ಲ. ಆ ಧ್ವನಿಗೆ ತಕ್ಕಂತಹ ಭಾಷಾಶುದ್ಧಿ, ಹೇಳುತ್ತಿದ್ದ ವಿಷಯದ ಬಗೆಗಿನ ಖಚಿತತೆ ಎಲ್ಲವೂ ಹುಡುಗರನ್ನು ಮುಟ್ಟಿತ್ತು. ಸಾಮಾನ್ಯವಾಗಿ ಗಲಾಟೆ ಮಾಡುವ ಹುಡುಗರು ಪಾಠ ವನ್ನು ಕೇಳುತ್ತಿರುವುದನ್ನು ಪ್ರಿನ್ಸಿಪಾಲರು ನನಗೆ ತೋರಿಸಿದರು. ನನಗೂ ಶಿವನ ಮೇಲೆ ನಂಬಿಕೆ ಹುಟ್ಟಿತು. ಪರವಾಗಿಲ್ಲ ಹುಡುಗ, ನಮ್ಮ ಹುಡುಗರಿಗೆ ಒಳ್ಳೇ ಪಾಠ ಮಾಡಿಯಾನು ಅಂತ ನನಗೆ ಅನ್ನಿಸಿದ್ದನ್ನು ಪ್ರಿನ್ಸಿಪಾಲರಿಗೆ ಹೇಳಿದೆ. ಅವರೂ ಒಪ್ಪಿದರು.

ಹೀಗೆ ನಮ್ಮಲ್ಲಿ ಸೇರಿಕೊಂಡ ಶಿವಕಿರಣ ಬರುಬರುತ್ತಾ ನಮ್ಮವನೇ ಆಗಿಹೋದ. ಅವನ ಬಹುಮುಖ ಪ್ರತಿಭೆ ಮೆಲ್ಲಮೆಲ್ಲನೆ ಅನಾವರಣಗೊಳ್ಳುತ್ತಾ ಹೋಯಿತು. ಹುಡುಗರನ್ನು ಕಟ್ಟಿಕೊಂಡು ಅವರಿಗೆ ಸಂಜೆ ನಾಟಕ ಕಲಿಸುತ್ತಿದ್ದ. ಪಾಠವನ್ನು ಮಾಡುವಾಗ ಹುಡುಗರಿಗೆ ಬೋರ್ ಹೊಡೆಯದಂತೆ ಮಾತಾಡುವ ಕಲೆ ಕರಗತ ಮಾಡಿಕೊಂಡಿದ್ದ ಅವನು ಹುಡುಗರಿಗೂ ಭಾಷಣ ಕಲೆಯನ್ನು ಕಲಿಸುತ್ತಿದ್ದ. ಹೀಗೆ ನಮ್ಮ ಕಾಲೇಜಿಗೇ ಒಂದು ಹೊಸ ಚೈತನ್ಯವನ್ನು ತಂದು ಹುಡುಗರ ಪ್ರೀತಿ ಮಾತ್ರವಲ್ಲ ನಮ್ಮೆಲ್ಲರ ವಿಶ್ವಾಸವನ್ನೂ ಗಳಿಸಿದ್ದ.

ಕಾಲೇಜಿನಲ್ಲಿ ವಹಿಸಿದ ಕೆಲಸವನ್ನು ಬೇಸರವಿಲ್ಲದೇ ಮಾಡುತ್ತಿದ್ದ ಅವನನ್ನು ಕರೆದು ಈ ಎಕ್ಸಾಮ್ ಡ್ಯೂಟಿಯ ತಲೆನೋವಿನ ಬಗ್ಗೆ ಹೇಳಿದೆ. ಅದಕ್ಕೆ ಅವನು ಯಥಾಪ್ರಕಾಯ ಎಷ್ಟು ಡ್ಯೂಟಿಯಾದರೂ ತಾನು ಮಾಡ್ತೇನೆಂತ ಹೇಳಿದ. ಆದರೆ ಅವನದ್ದೊಂದು ಕಂಡೀಶನ್ ಇತ್ತು. ಏನಪ್ಪಾ ಅಂದರೆ ಅವನನ್ನು ಸೆಕೆಂಡ್ ಇಯರ್ ನ ಡ್ಯೂಟಿಗೆ ಮಾತ್ರ ಹಾಕಬೇಕಂತೆ. "ಸಾರ್ ಸೆಕೆಂಡ್ ಇಯರ್ ನ ಬಿಎ ಬ್ಯಾಚಿನ ಎಲ್ಲಾ ಡ್ಯೂಟಿಗೆ ನನ್ನನ್ನೇ ಹಾಕಿಬಿಡಿ ಸಾರ್. ದಿನಾ ನಾನೇ ಮಾಡ್ತೇನೆ. ನೋ ಫ್ರೋಬ್ಲೆಂ" ಅಂದು ಹೋದ ಮೇಲೆ ನನಗೆ ಎಲ್ಲೋ ಅನುಮಾನದ ವಾಸನೆ ಹತ್ತತೊಡಗಿತು. ಯಾಕಪ್ಪಾ ಬಿಎ ಬ್ಯಾಚ್ ಮೇಲೆ ಅಷ್ಟೊಂದು ಆಸಕ್ತಿ ಇವನಿಗೆ ಅಂತ ಅಟೆಂಡರ್ ನನ್ನು ಕರೆಯಿಸಿ ಆ ಕ್ಲಾಸಿನ ಅಟೆಂಡೆನ್ಸ್ ತರಿಸಿದೆ.

ಕಳೆದ ವಾರ ನಮ್ಮ ಸ್ಟಾಫ್ ರೂಮಿನಲ್ಲಿ ಯಾರೋ ನನಗೆ ಹೇಳಿದ್ದರು - ಈ ಶಿವ ಮತ್ತು ಸೆಕೆಂಡ್ ಇಯರ್ ನ ಸುಮ ಒಟ್ಟಿಗೇ ಓಡಾಡ್ತಾ ಇರ್ತಾರೆ ಅಂತ. ನಾನು ಆ ವಿಷಯವನ್ನು ಅಲ್ಲಿಗೇ ಬಿಟ್ಟಿದ್ದೆ. ಈಗ ರಿಜಿಸ್ಟರ್ ನಲ್ಲಿ ಬಿಎ ಬ್ಯಾಚಿನಲ್ಲಿ

ಸುಮಳ ಹೆಸರು ನೋಡಿ ಯಾಕೋ ಸಂಶಯ ಬರತೊಡಗಿತು. ಕರೆದು ಕೇಳೋಣ ಅಂತ ಅನ್ನಿಸಿದರೂ ಯಾಕೋ ಬೇಡ ಅಂದುಕೊಂಡು ಎಕ್ಸಾಮ್ ಡ್ಯೂಟಿ ಬರೆಯಲು ಕೂತುಕೊಂಡೆ. ಬೇಕೂಂತಲೇ ಶಿವನನ್ನು ಬಿ ಬ್ಯಾಚಿಗೆ ಹಾಕಲೇ ಇಲ್ಲ. ಇರಲಿ ನೋಡೋಣ, ಬಂದು ಕೇಳಿದರೆ ಮಾತಾಡೋಣ ಅಂತ ಸುಮ್ಮನಾದೆ.

ಆದರೆ ಶಿವ ನನ್ನ ಬಳಿ ಬರಲೇ ಇಲ್ಲ. ಅವನು ಬೇಕೂಂತ ನನ್ನಿಂದ ತಪ್ಪಿಸಿಕೊಳ್ಳುತ್ತಿದ್ದಾನೆ ಅಂತ ನನಗೆ ಸಂಶಯ. ಎಕ್ಸಾಮ್ ಮುಗಿದ ಮೇಲೆ, ರಜೆಗೆ ಹೋಗುವುದಕ್ಕೆ ಮೊದಲು, ಬರುವ ವರ್ಷಕ್ಕೆ ಯಾರು ಯಾವ ಸಬ್ಜೆಕ್ಟ್ ಮಾಡಬೇಕೆಂದು ತೀರ್ಮಾನಿಸುವುದು ನಮ್ಮ ಕಾಲೇಜಿನ ಕ್ರಮ. ಅದರಂತೆ ಪ್ರಿನ್ಸಿಪಾಲರು ಮೀಟಿಂಗ್ ಕರೆದರು. ಶಿವ ನನ್ನ ಮುಂದೆಯೇ ಕೂತಿದ್ದ. ನಮ್ಮಲ್ಲಿ ಜೂನಿಯರ್ ಗಳು ತಮಗೆ ಬೇಕಾದ ಸಬ್ಜೆಕ್ಟ್ ಗಳನ್ನು ಮೊದಲು ಆರಿಸಿಕೊಳ್ಳುತ್ತಾರೆ. ನಂತರದ ಸರದಿ ಸೀನಿಯರ್ ಗಳದು. ಈಗ ಶಿವನೇ ಜೂನಿಯರ್ ಮೋಸ್ಟ್ ಆದ್ದರಿಂದ ಪ್ರಿನ್ಸಿಪಾಲರು ಮೊದಲು ಅವನ ಛಾಯ್ಸ್ ಅನ್ನು ಕೇಳಿದರು.

ನನ್ನ ಆಶ್ಚರ್ಯಕ್ಕೆ ಶಿವ ಥರ್ಡ್ ಇಯರ್ ನ ಸಬ್ಜೆಕ್ಟನ್ನು ಆಯ್ಕೆಮಾಡಿಕೊಂಡ. "ಸಾರ್ ನಾನು ಬಿ ಸೆಕ್ಷನ್ ಗೆ ಹೋಗ್ತೇನೆ" ಅಂತ ಶಿವ ಹೇಳಿದಾಗ ಮೀಟಿಂಗ್ ನಲ್ಲಿದ್ದವರೆಲ್ಲಾ ತಮ್ಮತಮ್ಮಲ್ಲೇ ಮಾತಾಡಲು ಶುರುಮಾಡಿದರು. ನನ್ನ ಪಕ್ಕ ಕುಳಿತ್ತಿದ್ದವರು "ನಾನು ಹೇಳಿಲ್ವಾ ನಿಮ್ಗೆ" ಅನ್ನೋ ರೀತಿಯಲ್ಲಿ ನನ್ನನ್ನು ನೋಡಿದರು. "ಬೇರೆ ಯಾರಾದರೂ ಈ ಸಬ್ಜೆಕ್ಟ್ ಮಾಡಲು ತಯಾರಿದ್ದೀರಾ" ಪ್ರಿನ್ಸಿಪಾಲರು ಕೇಳಿದಾಗ ಸುಮ್ಮನೇ ಕೈ ಎತ್ತಿಬಿಡೋಣ ಅನ್ನಿಸಿತು. ಯಾಕೋ ನನ್ನ ಕೈ ನನ್ನ ಮಾತನ್ನೇ ಕೇಳಲಿಲ್ಲ. ಆ ಸಬ್ಜೆಕ್ಟ್ ಶಿವನ ಪಾಲಾಯಿತು. ಆಗ ಶಿವನ ಮುಖದಲ್ಲಿ ಸಂತೃಪ್ತಿಯ ಭಾವನೆ ಇತ್ತೂಂತ ಬಹುಶಃ ನನಗೆ ಮಾತ್ರ ಅನ್ನಿಸಿತೋ ಅಥವಾ ಅದು ನಿಜವೋ ಹೇಳೋದು ಕಷ್ಟ.

ರಜೆಯಲ್ಲೂ ಆಗಾಗ ಕಾಲೇಜಿಗೆ ಹೋಗಿಬರುತ್ತಿದ್ದ ನನಗೆ ಶಿವನ ಕತೆಗಳು ಕಿವಿಗೆ ಬೀಳುತ್ತಿತ್ತು. ಸುಮಳ ಊರಿನ ತನಕ ಇವ ಬಸ್ಸಿನಲ್ಲಿ ಅವಳ ಜೊತೆ ಹೋಗಿದ್ದನಂತೆ, ಎಕ್ಸಾಮ್ ನ ಮಧ್ಯೆ ಸಿಕ್ಕಿದ್ದ ಬ್ರೇಕಿನಲ್ಲೂ ಇವರಿಬ್ಬರೂ ಒಟ್ಟಿಗೇ ಸುತ್ತುತ್ತಿದ್ದರಂತೆ - ಕ್ಯಾಂಪಸ್ ತುಂಬಾ ಇವರದೇ ಕತೆಗಳು. ಅರೇ ಇದೇನು ವಿಷ್ಯ ಈ ಮಟ್ಟ ತಲುಪಿದೆಯಾ ಅಂತ ಯೋಚಿಸುತ್ತಿರುವಾಗ ಒಂದು ದಿನ ಪ್ರಿನ್ಸಿಪಾಲರೇ ಕರೆದು ನನಗೆ ಹೇಳಿದರು "ನೀವ ಒಮ್ಮೆ ಶಿವಕಿರಣನ ಜೊತೆ ಮಾತಾಡಿ. ನಾನು ಈ ವಿಷ್ಯವನ್ನು ಕೇಳೋದು ಸರಿ ಇರಲ್ಲ. ಒಳ್ಳೇ ಹುಡುಗ, ಈ ವಿಚಾರದಲ್ಲಿ ಹೆಸರು ಹಾಳಾಗೋದು □□□□□"

ಕಾಲೇಜು ತೆರೆಯುವ ಒಂದು ವಾರ ಮೊದಲೇ ಶಿವ ಬಂದದ್ದು ನನಗೆ ಒಂದು ಲೆಕ್ಕದಲ್ಲಿ ಒಳ್ಳೆಯದೇ ಆಯಿತು. ನೇರವಾಗಿ ವಿಷಯ ಪ್ರಸ್ತಾಪಿಸುವುದು ಬೇಡವೆಂದು ಒಂದು ದಿನ ಅವನನ್ನು ನನ್ನ ಛೇಂಬರಿಗೆ ಕರೆಸಿಕೊಂಡೆ. "ನಿನ್ನ ಜಾತಕ ಕೊಡೋ ಶಿವ. ನಮ್ಮ ಪೈಕಿ ಒಳ್ಳೊಳ್ಳೇ ಹುಡುಗಿಯರಿದ್ದಾರೆ. ನಿನಗೊಂದು ಮದುವೆ ಮಾಡಿಬಿಡುವ ಬೇಗ" ಅಂದೆ. ಅದಕ್ಕವನ ಮುಖ ಯಾಕೋ ಸಣ್ಣದಾಯಿತು. "ಬಿಡಿ ಮೇಸ್ಟ್ರೇ, ನನಗ್ಯಾಕೆ ಇಷ್ಟು ಬೇಗ ಮದುವೆ ಎಲ್ಲಾ, ಆಮೇಲೆ ನೋಡೋಣ" ಅಂದ. ನಾನೂ ಸುಮ್ಮನಿರದೆ "ಆಯ್ತಪ್ಪಾ ಮದುವೆ ನಿಧಾನವಾಗಿ ಆಗು, ಆದರೆ ಒಂದೆರೆಡು ಹುಡುಗಿಯಾದರೂ ನೋಡು. ಮದುವೆ ಅಂದ್ರೆ ಸುಮ್ಮನೆಯಾ? ಈಗ ಹೊರಟರೆ ಮುಂದಿನ ವರ್ಷ ನಿನಗೆ ಸರಿಹೊಂದುವ ಹುಡುಗಿ ಸಿಗಬಹುದಪ್ಪಾ. ಹೇಳು ಏನು ನಿನ್ನ ಡಿಮಾಂಡು? ಯಾವ ತರಹದ ಹುಡುಗಿ ಬೇಕು ನಿಂಗೆ?" ಅಂದಾಗ ಅವನು ತಡವರಿಸುತ್ತಾ "ಅಯ್ಯೋ ನೀವ ನೋಡಿದ್ರೆ ನಾಳೀನೇ ನನಗೆ ಮದುವೆ ಮಾಡಿಸುವ ಹಾಗಿದ್ದೀರಿ. ನಾನು ಇನ್ನೆರಡು ವರ್ಷ ಮದುವೆ ಆಗೊಲ್ಲ" ಅಂದ.

"ಅದೇನು ಎರಡು ವರ್ಷಾಂತ ಕರೆಕ್ಟಾಗಿ ಹೇಳ್ತಾ ಇದ್ದೀಯ. ಯಾರಾದರೂ ಇನ್ನು ಎರಡು ವರ್ಷ ಆದ ಮೇಲೆ ನಿನ್ನನ್ನ ಮದುವೆ ಆಗ್ತೀನೀಂತ ಮಾತು ಕೊಟ್ಟಿದ್ದಾರೆನೋ" ಅಂತ ಕೇಳಿದ ತಕ್ಷಣ ಅವನು "ಹಾಗೇನಿಲ್ಲ ಮೇಸ್ಟ್ರೇ, ಸುಮ್ಮನೇ ಮಾತಿಗೆ ಅಂದೆ" ಅಂತ ಹೇಳಿದ ಮೇಲೆ ನಾನು ಅವನಿಗೆ ಇನ್ನು ವಿಷಯವನ್ನು ಸೂಕ್ಷ್ಮವಾಗಿ ಹೇಳೋಣವೆಂದುಕೊಂಡು "ನೋಡು ಶಿವ, ನಮ್ಮ ಉದ್ಯೋಗದಲ್ಲಿ ನಮ್ಮ ನಡವಳಿಕೆಗೆ ಬಹಳ ಮಹತ್ವ ಇದೆ. ಮೇಸ್ಟ್ರ ಕೆಲಸ ಅಂದರೆ ಬೆಳಗ್ಗೆ ಒಂಬತ್ತರಿಂದ ಸಂಜೆ ಐದರ ತನಕದ ಕೆಲಸವಲ್ಲ. ಇಪ್ಪತ್ತನಾಕು ಗಂಟೆಯೂ ನಾವ ಮಾಡುವ ಕೆಲಸ ಹುಡುಗರಿಗೆ ಪಾಠವಾಗಿರಬೇಕು. ಇಲ್ಲಿ ಒಂದು ಸಲ ಹುಡುಗರ ಮುಂದೆ ಸಣ್ಣವರಾದರೆ ಮತ್ತೆ ಅವರ ಮುಂದೆ ನಿಂತು ನಾವ ಪಾಠ ಮಾಡಲು ಆಗೋದಿಲ್ಲ. ಬಾಯಿ, ಕೈ - ಎರಡೂ ಶುದ್ಧ ಇದ್ದರೇನೇ ಮೇಸ್ಟ್ರಿಗೆ ಮರ್ಯಾದೆ. ಹುಡುಗರು ನಮ್ಮ ಕಾಲಿಗೆ ಬಿದ್ದು ನಮಸ್ಕಾರ ಮಾಡ್ತಾರೆ. ಅವರ ಆ ಗೌರವ ಉಳಿಸಿಕೊಳ್ಳೋದು ನಮ್ಮ ಮೊದಲ ಕೆಲಸ. ಉಳಿದದ್ದೆಲ್ಲಾ ಆಮೇಲೆ"

ಶಿವನಿಗೆ ನಾನು ಹೇಳಿದ್ದು ಅರ್ಥ ಆಯ್ತೋ, ಬಿಡ್ತೋ ಅಂತ ನನಗೆ ಅವನ ಮುಖದಿಂದ ಆಗ ನನಗೆ ಗೊತ್ತಾಗಲಿಲ್ಲ. ಆದರೆ ಅವನು ಬದಲಾಗಲಿಲ್ಲ ಅಂತ ಆಮೇಲೆ ಸ್ವಲ್ಪ ದಿನಕ್ಕೇ ನನಗೆ ಸರಿಯಾಗಿ ಗೊತ್ತಾಯ್ತು. ಒಂದು ದಿನ ಸಂಜೆ

ಪೇಪರ್ ಕರೆಕ್ಷನ್ ಮಾಡಿ ಲೇಟಾಗಿ ಕ್ಯಾಂಪಸ್ ನಿಂದ ಹೊರಟಾಗ ಈ ಶಿವ ಅದೇ ಸುಮಳ ಜೊತೆ ಹೋಗುತ್ತಿದ್ದದ್ದು ನನ್ನ ಕಣ್ಣಿಗೆ ಬಿತ್ತು. "ಛೇ! ಇದೊಳ್ಳೆ ಕತೆಯಾಯ್ತಲ್ಲಾ ಈ ಹುಡುಗನದ್ದು" ಅಂದುಕೊಂಡು ವಿಷಯವನ್ನು ನೇರವಾಗಿಯೇ ಪರಿಹರಿಸಬೇಕೆಂದು ಯೋಚಿಸುತ್ತಾ ಮನೆಗೆ ಹೋದೆ. ಮರುದಿನ ಬೆಳಗ್ಗೆ ಸುಮಳನ್ನು ನನ್ನ ರೂಮಿಗೆ ಕರೆಸಿದ್ದೆ. ಅವಳು ಬಂದ ಸ್ವಲ್ಪ ಹೊತ್ತಿಗೇ ಶಿವನನ್ನೂ ಕರೆದುಕೊಂಡು ಬರಲು ಅಟೆಂಡರ್ ನನ್ನು ಕಳಿಸಿದೆ.

ನನ್ನ ಛೇಂಬರ್ ನಲ್ಲಿ ಸುಮ ಇದ್ದುದ್ದನ್ನು ನೋಡಿ ಶಿವನಿಗೆ ಗಾಭರಿ ಆದಂತೇನೂ ಕಾಣಲಿಲ್ಲ. ನನ್ನ ಆಶ್ಚರ್ಯಕ್ಕೆ ಸುಮಳೂ ಏನೂ ಆಗದವಳಂತೆ ನಿಂತಿದ್ದಳು. ಇರಲಿ ಅಂದುಕೊಂಡು ನಾನು "ಏನಪ್ಪಾ ಶಿವ, ಏನು ನಿಮ್ಮ ಕತೆ" ಅಂತ ಮಾತಾಡಲು ಕೂತೆ. "ಮೇಸ್ಟ್ರೇ, ನಾನೂ ಸುಮ ಒಬ್ಬರನ್ನೊಬ್ಬರು ಪ್ರೀತಿಸ್ತಾ ಇದ್ದೇವೆ. ಅವಳದ್ದು ಇನ್ನೆರಡು ವರ್ಷ ಕಲಿತಾದ ಮೇಲೆ ಮದುವೆ ಆಗ್ತೇವೆ" ಅಂತ ಖಂಡಿತವಾಗಿ ಹೇಳಿದ. ಹೌದೇನಮ್ಮಾ ಅಂತ ಕೇಳಿದ್ದಕ್ಕೆ ಹುಡುಗಿ ಮಾತಾಡದೆ ತಲೆಯಾಡಿಸಿತು. ಇನ್ನೇನು ಹೇಳುವುದು? ನನಗೇ ಬಾಯಿಕಟ್ಟಿದಂತೆ ಆಯಿತು. "ಆದ್ರೂ ಶಿವ, ಹೀಗೆ ಕ್ಯಾಂಪಸ್ ನಲ್ಲಿ ಮೇಸ್ಟ್ರು ಹುಡುಗಿಯರ ಜೊತೆ ಸುತ್ತೋದು ಸರಿ ಕಾಣೋಲ್ಲ. ನೀವು ಮದುವೆ ಆಗ್ತೀವಿ ಅಂತ ಇರೋದು ಸಂತೋಷ. ಆದರೆ ನೀವು ಮನೆಯಲ್ಲಿ ಹೇಳಿದ್ದೀರಾ ಈ ವಿಷಯ" ಅಂತ ಕೇಳಿದೆ.

"ನನ್ನ ಮನೆಯಲ್ಲಿ ಏನೂ ಪ್ರಾಬ್ಲೆಮ್ ಇಲ್ಲ. ಅವಳ ಅಪ್ಪ ಒಪ್ಪದಿರಬಹುದು. ಹಾಗೇನಾದರೂ ಆದರೆ ನೀವು ಇದ್ದೀರಲ್ಲ ಮೇಸ್ಟ್ರೇ" ಶಿವ ನನ್ನನ್ನೂ ಮೆಲ್ಲಗೆ ತನ್ನ ಪಾರ್ಟಿಗೆ ಸೆಳೆದುಕೊಳ್ಳಲು ನೋಡುತ್ತಿದ್ದ. "ಅದಲ್ಲಾ ಆಮೇಲಿನ ಮಾತು. ನೋಡು ಶಿವ, ಇನ್ನು ಒಂದೂವರೆ ವರ್ಷ ಸುಮ ಕ್ಯಾಂಪಸ್ಸಿನಲ್ಲಿ ಇರ್ತಾಳೆ. ಆಮೇಲೆ ಪ್ರಾಜೆಕ್ಟ್ ಮಾಡಲು ಹೋದ ಮೇಲೆ ನಿಮ್ಮ ಮದುವೆ ಮಾತೆಲ್ಲ. ಅಲ್ಲಿಯವರೆಗೆ ನೀವು ಕ್ಯಾಂಪಸ್ಸಿನಲ್ಲಿ ಜೊತೆಯಾಗಿ ಓಡಾಡೋದು ಎಲ್ಲಾ ನಿಲ್ಲಿಸಬೇಕು. ಇಲ್ಲದಿದ್ದರೆ ನಾನೇ ನಿನ್ನ ಮೇಲೆ ಕ್ರಮ ತೆಕ್ಕೊಳ್ತೇನೆ" ಅಂತ ಸ್ವಲ್ಪ ಜೋರಾಗಿಯೇ ಹೇಳಿದೆ. "ಆಯ್ತು ಮೇಸ್ಟ್ರೇ, ನಾವಿಬ್ಬರೂ ಒಟ್ಟಿಗೇ ಓಡಾಡೊಲ್ಲ. ಆದರೆ ಒಂದೂವರೆ ವರ್ಷದ ಮೇಲೆ ನಮ್ಮಿಬ್ಬರನ್ನು ಒಂದು ಮಾಡೋದು ನಿಮ್ಮ ಜವಾಬ್ದಾರಿ. ಅಲ್ಲಿಯವರೆಗೆ ನಾವು ಫೋನಿನಲ್ಲಾದರೂ ಮಾತಾಡಬಹುದಲ್ಲಾ"

ಶಿವ ನನ್ನ ಬಾಯಿಮುಚ್ಚಿಸುವ ಮಾತಾಡುತ್ತಿದ್ದ. "ಆಯ್ತು ಆದರೆ ಅದರಿಂದ ಈ ಹುಡುಗಿಯ ಓದಿಗೆ ಯಾವುದೇ ತೊಂದರೆ ಆಗಬಾರದು. ಮುಂದಿನ ವಿಷಯ ಆಮೇಲೆ ನೋಡೋಣ" ಅಂದೆ. "ನಿಮ್ಮ ಮಾತಿಗೆ ಬೆಲೆ ಕೊಟ್ಟು ನಾವು ಓಡಾಡೋದನ್ನ ನಿಲ್ಲಿಸ್ತೇವೆ" ಅಂತ ಶಿವ ಹೇಳಿ ಹೋದ ಮೇಲೆ ಸುಮಳಿಗೂ ಬುದ್ದಿ ಮಾತು ಹೇಳಿದೆ. ಅದೇ ಮಾಮೂಲು ಕತೆ. ಆದರೆ ಅವಳು ಮಾತ್ರ ತುಟಿ ಬಿಚ್ಚಿ ಒಂದು ಮಾತೂ ಆಡಲಿಲ್ಲ. ಹೇಗೂ ವಿಷಯ ಇಲ್ಲಿಗೇ ಮುಗಿಯಿತಲ್ಲಾ ಅಂದುಕೊಂಡು ನಡೆದ್ದದ್ದನ್ನೆಲ್ಲಾ ಪ್ರಿನ್ಸಿಪಾಲರಿಗೆ ಸಂಕ್ಷಿಪ್ತವಾಗಿ ಹೇಳಿದೆ. ಅವರಿಗೂ ಸಮಾಧಾನವಾಯಿತು.

ಅವತ್ತು ಹೇಳಿದಂತೆ ಶಿವ ಮುಂದಿನ ಒಂದು ವರ್ಷ ನಡೆದುಕೊಂಡ. ಕ್ಯಾಂಪಸ್ಸಿನಲ್ಲಿ ಅವರಿಬ್ಬರೂ ಬೇರೆಯಾದರೆಂದು ಸುದ್ದಿಯಾಯಿತು. ನಾನೂ ಈ ವಿಷಯದ ಬಗ್ಗೆ ತಲೆಕೆಡಿಸಿಕೊಳ್ಳುವುದನ್ನು ಬಿಟ್ಟುಬಿಟ್ಟೆ. ಶಿವ ಸುಮಳನ್ನು ಮದುವೆ ಆಗುವುದಿದ್ದರೆ ಅದು ಒಳ್ಳೆಯದೇ ಅಂತ ನನಗೆ ಆಗಾಗ ಅನ್ನಿಸುತ್ತಿತ್ತು. ಶಿವನಂತಹ ಒಳ್ಳೇ ಹುಡುಗನಿಗೆ ತಮ್ಮ ಹುಡುಗಿಯನ್ನು ಕೊಡಲು ಸುಮಳ ಮನೆಯವರು ಒಪ್ಪಬಹುದೆಂದು ನನಗೆ ನಂಬಿಕೆ ಇತ್ತು. ಸುಮ ಪ್ರಾಜೆಕ್ಟಿಗೆಂದು ಹೋದ ಮೇಲೆ ಶಿವ ಒಮ್ಮೆ ನನ್ನ ಬಳಿ ಹಳೇ ವಿಷಯ ಪ್ರಸ್ತಾಪಿಸಿದ. "ಆಯ್ತು ಬಿಡೋ. ಅವಳು ಪ್ರಾಜೆಕ್ಟ್ ಮುಗಿಸಿಕೊಂಡು ಬರಲಿ, ಮಾತಾಡೋಣ" ಅಂತ ಅವನನ್ನ ಸಮಾಧಾನ ಮಾಡಿ ಕಳಿಸಿದೆ.

ಕೊನೆಗೂ ಸುಮ ಕಾಲೇಜು ಬಿಡುವ ದಿನ ಬಂತು. ಅವತ್ತು ಬೆಳಗ್ಗೆ ಪ್ರಿನ್ಸಿಪಾಲ್ ಫೋನ್ ಮಾಡಿದರು "ಬೇಗ ಬನ್ನಿ, ಶಿವಕಿರಣ್ ವಿಷ ತೆಗೊಂಡಿದ್ದಾನೆ". ಇದೇನಪ್ಪಾ ಆಯ್ತು ಅಂತ ನಾನೂ ಗಾಭರಿಯಿಂದ ಆಸ್ಪತ್ರೆಗೆ ಹೋದೆ. ಪುಣ್ಯಕ್ಕೆ ಶಿವನಿಗೆ ಏನೂ ಆಗಿರಲಿಲ್ಲ. ನನ್ನನ್ನು ನೋಡಿದ್ದೇ ಅಳಲು ಶುರುಮಾಡಿಬಿಟ್ಟ. ನನಗೆ ಈ ಗಂಡುಮಕ್ಕಳು ಅತ್ತರೆ ವಿಪರೀತ ಸಿಟ್ಟು. ಆದರೆ ಅವನನ್ನು ಬಯ್ಯುವ ಪರಿಸ್ಥಿತಿ ಅಲ್ಲಿ ಇರಲಿಲ್ಲ. ಅದಕ್ಕೇ ಸುಮ್ಮನೇ ಇದ್ದೆ. "ಮೇಸ್ಟ್ರೇ, ನಿಮ್ಮ ಮಾತು ಕೇಳಿ ಅವಳಿಗಾಗಿ ಎರಡು ವರ್ಷ ಕಾದೆ. ಆದರೆ ಈಗ ಅವಳಿಗೆ ನಾನು ಬೇಡವಂತೆ. ನಾನ್ಯಾಕೆ ಬದುಕಲಿ? ಮೇಸ್ಟ್ರೇ, ನೀವು ನನಗೆ ಮೋಸ ಮಾಡಿದ್ರಿ" ಶಿವ ಗೋಳಿಡುತ್ತಿದ್ದ. ನನಗೆ ಅವನ ಮಾತು ಕೇಳಿ ನಂಬಲೇ ಆಗಲಿಲ್ಲ. ಅವಳು ನನ್ನ ಮುಂದೆಯೇ ನಿಂತು ಶಿವನನ್ನು ಪ್ರೀತಿಸುತ್ತಿದ್ದೇನೆ ಅಂದಿದ್ದಳಲ್ಲಾ. ಇದೇನಪ್ಪಾ ಹುಚ್ಚು ಈ ಹುಡುಗಿಗೆ ಅಂತ ಕಾಲೇಜಿಗೆ ದೌಡಾಯಿಸಿದೆ.

ಸುಮಳನ್ನು ಕರೆಸಿ ಸರಿಯಾಗಿ ಬಯ್ಯಬೇಕೆಂದು ಅಂದುಕೊಂಡು ಅವಳನ್ನು ಛೇಂಬರಿಗೆ ಕರೆಸಿದೆ. ಅತ್ತು ಅವಳ ಮುಖ ಊದಿಕೊಂಡಿತ್ತು. ಏನಮ್ಮಾ ಸಮಾಚಾರ, ಯಾಕೆ ಹೀಗೆ ಮಾಡಿದೆ? ಅಂತ ಕೇಳಿದಾಗ ಪುನಃ ಅಳು. ಅಳುವವಳನ್ನ ಕೂತುಕೊಳ್ಳಲು ಹೇಳಿ ವಿಷ್ಯ ಕೇಳಿದರೆ ಹುಡುಗಿ ಮಾತಾಡಲು ಶುರುಮಾಡಿದಳು "ಸಾರ್, ನಾನೇನೂ ಅವರನ್ನ ಪ್ರೀತಿ

ಮಾಡ್ತೀನಿ ಅಂತ ಹೇಳ್ಲಿಲ್ಲ. ಅವರೇ ನನಗೆ ಕಾಗದ, ಕಾರ್ಡು ಅಂತ ಕೊಟ್ಟಿದ್ದರು. ನಾನಗೇನೂ ಅವರನ್ನ ಮದುವೆ ಆಗ್ಬೇಕೂಂತ ಇಷ್ಟ ಇಲ್ಲ ಸಾರ್" ಹುಡುಗಿ ಹೇಳಿದಾಗ ನನಗೆ ಆಶ್ಚರ್ಯ. "ಅಲ್ಲಮ್ಮಾ, ಹಾಗಾದರೆ ಅವತ್ತೂ ಇಲ್ಲೇ ನಿಂತು ನಾನು ಕೇಳಿದಾಗ ಯಾಕೆ ಹೇಳಲಿಲ್ಲ ಈ ವಿಷಯ. ನಾನೇ ಅವನಿಗೆ ಹೇಳ್ತಾ ಇದ್ನಲ್ಲಾ" ಅಂತ ಕೇಳಿದೆ. "ಹೇಗೆ ಹೇಳ್ಲಿ ಸಾರ್. ಅವರು ನನ್ನ ಹಿಂದೆ ಬಿದ್ದು ಪ್ರೀತಿ ಮಾಡು ಅಂತ ಪೀಡಿಸ್ತಿದ್ರು ಅಂದ್ರೆ ನೀಮ ನಂಬ್ತಿದ್ರಾ? ಒಂದು ವೇಳೆ ನಂಬಿದ್ರೆ ಅವತ್ತು ನೀಮ ಅವರಿಗೆ ಬಯ್ತಾ ಇದ್ರಿ. ಆಗ ಅವರು ಆ ದ್ವೇಷವನ್ನು ನನ್ನ ಮೇಲೆ ತೀರಿಸಿಕೊಳ್ತಾ ಇದ್ರು. ನಾನಿನ್ನೂ ಎರಡು ವರ್ಷ ಈ ಕಾಲೇಜಿನಲ್ಲಿ ಇರಬೇಕಿತ್ತು ಸಾರ್. ನೀಮ ಅವತ್ತು ಅವರಿಗೆ ನನ್ನನ್ನು ಮಾತಾಡಿಸ್ಬೇಡ ಅಂದ್ರಿ. ನನಗೆ ಅಷ್ಟು ಸಾಕಿತ್ತು. ಅವತ್ತು ನೀಮ ನನ್ನನ್ನು ಬದುಕಿಸಿದ್ರಿ ಸಾರ್. ಅವರಿಂದ ತಪ್ಪಿಸಿಕೊಂಡೆನಲ್ಲಾ ಅನ್ನೋ ಸಂತೋಷಕ್ಕೆ ಅವತ್ತು ಸುಮ್ಮನಿದ್ದೆ ಸಾರ್"

ಸುಮ ಮಾತಾಡುತ್ತಿದ್ದರೆ ನನಗೆ ಏನೇನೋ ಆಗುತ್ತಿತ್ತು. ಇನ್ನೂ ಅಳುತ್ತಿದ್ದ ಅವಳನ್ನು ಹೋಗಲು ಹೇಳಿದೆ. ಯಾಕೋ ನನಗೆ ನನ್ನ ಬಗ್ಗೆಯೇ ಬೇಸರವಾಯಿತು. ಬಹುಶಃ ನಾನು ಅವತ್ತು ಇಬ್ಬರನ್ನೂ ಕರೆದು ಮಾತಾಡದಿದ್ದರೆ ಈ ಸಮಸ್ಯೆಯೇ ಬರುತ್ತಿರಲಿಲ್ಲವೇನೋ ಅಂತ ಅನ್ನಿಸ್ತಾ ಇತ್ತು. "ಅವತ್ತು ನೀಮ ನನ್ನನ್ನು ಬದುಕಿಸಿದ್ರಿ ಸಾರ್" ಅಂದ ಸುಮಳ ಮಾತು ಸರಿಯೋ, "ಮೇಸ್ಟ್ರೇ, ನೀಮ ನನಗೆ ಮೋಸ ಮಾಡಿದ್ರಿ" ಅನ್ನೋ ಶಿವನ ಮಾತು ಸರಿಯೋ - ನನಗೊಂದೂ ತಿಳಿಯಲಿಲ್ಲ.